ಪ್ರಬುದ್ಧ ಕರ್ಣಾಟಕ

ಸಂಪುಟ ೯೩ ಸಂಚಿಕೆ ೩೫೭

೨೦೧೩

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಪ್ರಬುದ್ಧ ಕರ್ಣಾಟಕ

ಸಂಪುಟ ೯೩

ಸಂಚಿಕೆ ೩೫೭

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೨೦೧೮

Prabuddha Karnataka : A Kannada Quarterly of the University of Mysore, Volume 93, Nos. 357; Edited by Prof. Priti Shrimandhar Kumar, Prof. K.N. Ganganaik and Prof. G.R. Thippeswamy; Published by the Director, Prasaranga, Manasagangotri, University of Mysore, MYSORE - 570 006; Pages : x+118=128

ಪ್ರಧಾನ ಸಂಪಾದಕರು

ಪ್ರೊ. ಎಂ.ಜಿ. ಮಂಜುನಾಥ

ಸಂಪಾದಕರು

ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್
ಪ್ರೊ. ಕೆ.ಎನ್. ಗಂಗಾನಾಯಕ್
ಪ್ರೊ. ಜಿ.ಆರ್. ತಿಪ್ಪೇಸ್ವಾಮಿ

ಪ್ರಕಾಶಕರು

ಪ್ರೊ. ಎಂ.ಜಿ. ಮಂಜುನಾಥ
ನಿರ್ದೇಶಕರು
ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬

ಮುದ್ರಕರು

ಶ್ರೀ ಎಸ್. ಸತೀಶ್
ನಿರ್ದೇಶಕರು
ವಿಶ್ವವಿದ್ಯಾನಿಲಯ ಮುದ್ರಣಾಲಯ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

•

ಮುನ್ನುಡಿ

ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ– ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ. ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕಕ್ಕೆ** ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

ಪ್ರೊ. ಕೆ.ಎಸ್. ರಂಗಪ್ಪ
ಕುಲಪತಿ

ಪ್ರಕಾಶಕರ ನುಡಿ

ಮೈಸೂರು ವಿಶ್ವವಿದ್ಯಾನಿಲಯವು ಜ್ಞಾನಪ್ರಸಾರದ ಮಹೋನ್ನತ ಉದ್ದೇಶದೊಂದಿಗೆ ಸ್ಥಾಪಿಸಿದ ಪ್ರಸಾರಾಂಗವು ಹೊರತರುತ್ತಿರುವ ಪ್ರಬುದ್ಧ ಕರ್ಣಾಟಕ ನಿಯತಕಾಲಿಕೆಯು ಕನ್ನಡ ನಾಡಿನ ವಿದ್ವತ್ಪತ್ರಿಕೆಗಳಲ್ಲಿ ಬಹು ಪ್ರತಿಷ್ಠಿತ ಸ್ಥಾನವನ್ನು ಪಡೆದಿದೆ. ಕನ್ನಡ ಸಾಹಿತ್ಯ, ಭಾಷಾ ವಿಜ್ಞಾನ, ಜಾನಪದ, ಶಾಸನಶಾಸ್ತ್ರ, ಗ್ರಂಥ ಸಂಪಾದನಾ ಶಾಸ್ತ್ರ, ಸ್ಥಳನಾಮ ವ್ಯಾಸಂಗ, ನಾಣ್ಯಶಾಸ್ತ್ರ, ಇತಿಹಾಸ, ಪುರಾತತ್ವ, ಸಂಸ್ಕೃತಿ ಹೀಗೆ ಹಲವು ಜ್ಞಾನ ಶಿಸ್ತುಗಳಿಗೆ ಸೇರಿದ ಸಂಶೋಧನಾ ಲೇಖನಗಳ ಪ್ರಕಟಣೆಗೆಂದೇ ಮೀಸಲಾಗಿದ್ದು ಕನ್ನಡ ಸಾಹಿತ್ಯಾಭಿಮಾನಿಗಳ, ಸಂಶೋಧಕರ, ವಿದ್ವಾಂಸರ ಮನ್ನಣೆ ಗಳಿಸಿದೆ.

ಕನ್ನಡದಕಣ್ವ ಬಿ.ಎಂ.ಶ್ರೀ, ರಾಷ್ಟ್ರಕವಿ ಕುವೆಂಪು, ಹಿರಿಯ ವಿದ್ವಾಂಸರಾದ ತೀನಂಶ್ರೀ, ಟಿ.ಎಸ್. ವೆಂಕಣ್ಣಯ್ಯ, ತ.ಸು. ಶಾಮರಾಯ, ಡಿ.ಎಲ್. ನರಸಿಂಹಾಚಾರ್, ನಾಡೋಜ ದೇಜಗೌ ಮುಂತಾದ ಹಿರಿಯರ ಪರಿಶ್ರಮ ಪ್ರೋತ್ಸಾಹಗಳಿಂದ ಪ್ರಬುದ್ಧ ಕರ್ಣಾಟಕವು ಪ್ರಬುದ್ಧವಾದ ಸ್ಥಾನವನ್ನು ಪಡೆದಿದೆ. ಪ್ರಸ್ತುತ ಪ್ರಬುದ್ಧ ಕರ್ಣಾಟಕದ ೯೩ನೇ ಸಂಪುಟ ೩೫೭ನೇ ಸಂಚಿಕೆ ಹೊರಬರುತ್ತಿದೆ.

ಪ್ರಸಾರಾಂಗದ ಪ್ರಗತಿಗೆ ಸದಾ ಬೆಂಬಲ ನೀಡುತ್ತಿರುವ ನೆಚ್ಚಿನ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರಿಗೆ, ಕುಲಸಚಿವರಾದ ಪ್ರೊ. ಆರ್. ರಾಜಣ್ಣ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರೂ, ಪ್ರಬುದ್ಧ ಕರ್ಣಾಟಕದ ಸಂಪಾದಕರೂ ಆದ ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್ ಅವರಿಗೆ, ಸಂಪಾದಕರಾದ ಪ್ರೊ. ಕೆ.ಎನ್. ಗಂಗಾನಾಯಕ್ ಅವರಿಗೆ, ಪ್ರೊ. ಜಿ.ಆರ್. ತಿಪ್ಪೇಸ್ವಾಮಿ ಅವರಿಗೆ, ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ.ಎಸ್. ಅನಿಲಕುಮಾರ ಅವರಿಗೆ, ಡಿ.ಟಿ.ಪಿ. ವಿಭಾಗದವರಿಗೆ, ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಸ್. ಸತೀಶ್ ಅವರಿಗೆ ಹಾಗೂ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೆ ನಾನು ಆಭಾರಿಯಾಗಿದ್ದೇನೆ.

ಪ್ರೊ. ಎಂ.ಜಿ. ಮಂಜುನಾಥ
ನಿರ್ದೇಶಕ, ಪ್ರಸಾರಾಂಗ

ಸಂಪಾದಕರ ನುಡಿ

ಪ್ರಬುದ್ಧ ಕರ್ಣಾಟಕದ ೯೩ನೇ ಸಂಪುಟದ ೩೫೭ನೇ ಸಂಚಿಕೆಯನ್ನು ಓದುಗರ ಕೈಗೊಪ್ಪಿಸಲು ಸಂತೋಷವಾಗುತ್ತಿದೆ. ಈ ಸಂಚಿಕೆಯಲ್ಲಿನ ಎಲ್ಲಾ ಲೇಖನಗಳು ಗುಣಮಟ್ಟದಲ್ಲಿ ಅತ್ಯುತ್ತಮವಾದುವುಗಳಾಗಿವೆ. ಹಾಗಾಗಿ ಇವು ಸಹೃದಯರ ಮನ ಗೆಲ್ಲುತ್ತವೆ ಎಂಬ ಭರವಸೆಯಿಂದ ಅವುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಜೊತೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಇವು ಓದುಗರಿಗೆ ಉಪಯುಕ್ತವಾಗಿ, ಲೇಖಕರ ಹಾಗೂ ನಮ್ಮ ಶ್ರಮ ಸಾರ್ಥಕವಾಗುತ್ತದೆ ಎಂಬ ವಿಶ್ವಾಸವೂ ನಮ್ಮದಾಗಿವೆ.

ಪ್ರಬುದ್ಧ ಕರ್ಣಾಟಕಕ್ಕೆ ಸ್ವತಂತ್ರವೂ, ಸಂಶೋಧನಾತ್ಮಕವೂ ಆದ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಮಾತ್ರ ಕಳುಹಿಸಬೇಕು. ಜೊತೆಗೆ ಲೇಖನಗಳು ಗುಣಮಟ್ಟದಿಂದ ಕೂಡಿದ್ದು, ಅಕ್ಷರದೋಷಗಳಿರಬಾರದು. ಇಂತಹ ಉತ್ತಮ ಮುದ್ರಿತ ಲೇಖನಗಳ ಜೊತೆಗೆ ಸಿ.ಡಿ.ಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಮುದ್ರಿತ ಲೇಖನದ ಜೊತೆಗೆ ಸಿ.ಡಿ.ಯನ್ನು ಕಡ್ಡಾಯವಾಗಿ ಕಳುಹಿಸದಿದ್ದಲ್ಲಿ ಲೇಖನವನ್ನು ಪ್ರಕಟಿಸಲಾಗುವುದಿಲ್ಲ. ಲೇಖನವನ್ನು ಕಳುಹಿಸುವ ಲೇಖಕರು, ಲೇಖನದಲ್ಲಿರುವ ಉದ್ಧರಣಗಳಿಗೆ ಆಕರ ಸಂಖ್ಯೆಯನ್ನು ನೀಡಬೇಕೆಂದು ಕೋರುತ್ತೇವೆ. ಇಲ್ಲಿ ನಾವು ಬೇರೆ ಕಡೆ ಪ್ರಕಟವಾದ ಲೇಖನಗಳನ್ನು ಪ್ರಕಟಿಸುವುದಿಲ್ಲ. ಲೇಖನಗಳು ಕನಿಷ್ಟಪಕ್ಷ ಆರು ಫುಲ್‌ಸ್ಕೇಪ್ ಪುಟಗಳಷ್ಟು ಇರಲಿ.

ಲೇಖನಗಳನ್ನು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರುತ್ತೇವೆ.

ಪ್ರೊ. ಪ್ರೀತಿ ಶ್ರೀಮಂಧರ್ ಕುಮಾರ್
ಪ್ರೊ. ಕೆ.ಎಸ್. ಗಂಗಾನಾಯಕ್
ಪ್ರೊ. ಜಿ.ಆರ್. ತಿಪ್ಪೇಸ್ವಾಮಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೫೭೦೦೦೬

[illegible]

ಪರಿವಿಡಿ

ಈ ಸಂಚಿಕೆಯ ಲೇಖಕರು

೧. **ಡಾ. ಟಿ.ಎಸ್. ಕೃಷ್ಣಮೂರ್ತಿ**
೨೮೧, ಸುಧರ್ಮ
೩ನೇ ಮುಖ್ಯರಸ್ತೆ, ಇಸ್ರೋ ಲೇಔಟ್
ಬೆಂಗಳೂರು – ೫೬೦ ೧೧೧

೨. **ಡಾ. ಕೆ.ಎನ್. ಗಂಗಾನಾಯಕ್**
ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಮಸ್ಥೆ
ಮಾನಸಗಂಗೋತ್ರಿ, ಮೈಸೂರು – ೦೬

೩. **ರಮೇಶ. ಡಿ**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೦೬

೪. **ಎಸ್.ಪಿ. ಮಂಜುಶ್ರೀ**
ಟಿ–೫೧, ೩ನೇ ಕ್ರಾಸ್
ವಿಶ್ವವಿದ್ಯಾನಿಲಯ ನೌಕರರ ವಸತಿ ಗೃಹಗಳು
ಮಾನಸಗಂಗೋತ್ರಿ, ಮೈಸೂರು – ೦೬

೫. **ಡಾ. ಬಸವರಾಜ ಕೋಡಗುಂಟಿ**
ಕರ್ನಾಟಕ ಕೇಂದ್ರೀಯ ವಿದ್ಯಾಲಯ
ಕಡಗಂಚಿ, ಕಲಬುರಗಿ

೬. **ಡಾ. ಜಿ.ಆರ್. ತಿಪ್ಪೇಸ್ವಾಮಿ**
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೦೬

೭. **ಸಿ. ಮಹೇಂದ್ರ**
ನಂ ೮೦, ಅವ್ವ ನಿಲಯ
ಕಲ್ಕುಣಿಕೆ, ಹುಣಸೂರು ತಾಲ್ಲೂಕು
ಮೈಸೂರು

೮. **ರಾಘವೇಂದ್ರ ಪಿ.ಕೆ.**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೦೬

೯. **ಶಿವಕುಮಾರ ಡಿ.ಬಿ.**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೦೬

೧೦. **ಸತೀಶ್ ಕುಮಾರ್ ಬಿ.ವಿ.**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೦೬

೧. ಮಹರ್ಷಿ ವಾಲ್ಮೀಕಿ

(ಅವರ ಬಗ್ಗೆ ಬೆಳೆದು ಬಂದಿರುವ ನಾನಾ ಕಥೆಗಳು)

– ಪ್ರೊ. ಟಿ.ಎಸ್. ಕೃಷ್ಣಮೂರ್ತಿ

ವಾಲ್ಮೀಕಿ ಮಹರ್ಷಿಗಳ ತಪಃಶಕ್ತಿಯಿಂದಲೂ, ಯೋಗಶಕ್ತಿಯಿಂದಲೂ ಇವೆರಡಕ್ಕೂ ಬೆಲೆ ತಂದ ಅನ್ಯಾದೃಶಪ್ರತಿಭೆಯಿಂದಲೂ ಹೊರಹೊಮ್ಮಿರುವ ಶ್ರೀಮದ್ ರಾಮಾಯಣವು ಭಾರತೀಯ ಸಂಸ್ಕೃತಿ – ಸಭ್ಯತೆಗಳ ಜೀವನದಿಯಾಗಿದೆ. ಇಡೀ ವಿಶ್ವದ ಸಾಹಿತ್ಯ ನಿರ್ಮಾಪಕರಲ್ಲಿ ತನ್ನ ಕೃತಿಗೆ ಅಮರತ್ವವನ್ನು ಸಂಪಾದಿಸಿಕೊಂಡಿರುವ ವಾಲ್ಮೀಕಿಯಂತಹ ಮಹಾಕವಿ ಇನ್ನೊಬ್ಬನಿರಲಾರನು. ವಾಲ್ಮೀಕಿ ಮಹರ್ಷಿಗಳಿಂದ ರಚಿಸಲ್ಪಟ್ಟಿರುವ ಶ್ರೀಮದ್ ರಾಮಾಯಣವು ಭರತ ವರ್ಷದ ಸಾಹಿತ್ಯ ರಚನೆಯ ಮೂಲ ಸೂತ್ರಗಳನ್ನು ರೂಪಿಸಿಕೊಟ್ಟಿದೆ. ಆದ್ದರಿಂದಲೇ ಅದನ್ನು 'ಆದಿಕಾವ್ಯ'ವೆಂದು ಗೌರವಿಸಲಾಗಿದೆ. ಈ ಭವ್ಯಕೃತಿ ತನ್ನ ಸ್ವರೂಪ – ಲಕ್ಷಣಗಳಿಂದಲೂ ಭಾರತೀಯರ ಹಾಗೂ ಭಾರತದ ಸಾಮೀಪ್ಯ ರಾಷ್ಟ್ರಗಳ ಜನಗಳ ಆಚಾರ – ವಿಚಾರ – ಉಚ್ಚಾರಗಳ ಮೇಲೆ ಸಹಸ್ರಾರು ವರ್ಷಗಳಿಂದ ಬೀರುತ್ತಿರುವ ಪ್ರಭಾವದಿಂದಲೂ ಅನ್ಯಾದೃಶ ಮಹತ್ವವನ್ನು ಗಳಿಸಿಕೊಂಡಿದೆ. ಶ್ರೀಮದ್ ರಾಮಾಯಣದಲ್ಲಿ ಪ್ರಾರಂಭದಲ್ಲಿ ಘೋಷಿತವಾಗಿರುವ ಸಾಕ್ಷಾತ್ ಬ್ರಹ್ಮದೇವನ ಭವಿಷ್ಯವಿದು:

ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ।
ರಾಮಾಯಣಮಿದಂ ತಾವತ್ ಲೋಕೇಷು ಪ್ರಚರಿಷ್ಯತಿ ॥

ಅಂದರೆ "ಎಲ್ಲಿಯವರೆಗೆ ಭೂಮಿಯ ಮೇಲೆ ಗಿರಿಗಳು ನಿಂತಿರುವುವೋ ಮತ್ತು ಎಲ್ಲಿಯವರೆಗೆ ನದಿಗಳು ಹರಿಯುತ್ತಿರುವುವೋ ಅಲ್ಲಿನವರೆಗೆ ಶ್ರೀಮದ್ ರಾಮಾಯಣವು ನಾನಾ ಲೋಕಗಳಲ್ಲಿ ಪ್ರಚಾರಗೊಂಡಿರುತ್ತದೆ." ಬ್ರಹ್ಮದೇವರ ಈ ಭವಿಷ್ಯನುಡಿ ಸತ್ಯಾಸತ್ಯವಾಗಿದೆ.

ಪವಿತ್ರವಾದ ಶ್ರೀಮದ್ ರಾಮಾಯಣ ವಾಹಿನಿಯು ಇಂದು ಸಾಗರಗಳನ್ನು ದಾಟಿ ಹರಿದು, ಕಾಂಬೋಡಿಯಾದಿಂದ ಜಾವ – ಬಾಲಿ ವರೆಗಿನ ಸಮಗ್ರ ಆಗ್ನೇಯ – ಏಷ್ಯಾ ರಾಷ್ಟ್ರಗಳ ಸಾಹಿತ್ಯದ ಮೇಲೆ ಮಾತ್ರವಲ್ಲದೆ, ಅಲ್ಲಿನ ಧಾರ್ಮಿಕ ಹಾಗೂ ನೈತಿಕ ಜೀವನದ ಮೇಲೆಯೂ ಮಹತ್ವದ ಪ್ರಭಾವವನ್ನು ಬೀರಿದೆ. ಆ ರಾಷ್ಟ್ರಗಳಲ್ಲಿಯೂ ರಾಮಾಯಣವನ್ನು ಆಧರಿಸಿದ ಗಾನ, ನೃತ್ಯ ಮತ್ತು ಶಿಲ್ಪ ಇತ್ಯಾದಿಗಳು ಮೂಡಿಬಂದಿವೆ. ಜಗತ್ತಿನಲ್ಲಿಯೇ ಅದ್ಭುತವೆನಿಸುವ ರಾಮಾಯಣ ಕಥೆಯನ್ನಾಧರಿಸಿದ ೪೪ ಶಿಲಾಶಿಲ್ಪಗಳು ಜಾವಾದಲ್ಲಿರುವ "ಪ್ರಂತನಾನ್ ಪಂತರ್" ಎಂಬಲ್ಲಿ ಕಂಡುಬರುತ್ತದೆ. ಜೊತೆಗೆ ಶ್ರೀಮದ್ ರಾಮಾಯಣದ ಕರ್ತೃವಾದ ಮಹರ್ಷಿ ವಾಲ್ಮೀಕಿಗಳಿಗಾಗಿಯೇ ರಚಿತವಾಗಿರುವ ಒಂದು ದಿವ್ಯ ಪೂಜಾ ಮಂದಿರವೂ (ಚಂಪ) ವಿಯಟ್‌ನಾಮ್‌ನಲ್ಲಿನ 'ತ್ರಕೀಯನ್' ಎಂಬ ನಗರದಲ್ಲಿ ಶೋಭಿಸುತ್ತಿದೆ. ಆ ಪೂಜಾ ಮಂದಿರದ ಕಲ್ಲಿನ ಮೇಲೆ ಮಹರ್ಷಿ ವಾಲ್ಮೀಕಿಗಳ ಬಗ್ಗೆ ಈ ಶ್ಲೋಕವನ್ನು ಕೆತ್ತಲಾಗಿದೆ:

ಯಸ್ಯ ಶೋಕಾತ್ ಸಮುತ್ಪನ್ನಂ ಶ್ಲೋಕಂ ಬ್ರಹ್ಮಾಭಿಪೂಜತಿ ।
ವಿಷ್ಣೋಃ ಪುಂಸಃ ಪುರಾಣಸ್ಯ ಮಾನುಷಸ್ಯಾತ್ಮರೂಪಿಣಃ ॥

ಇದರಲ್ಲಿನ ವಿಶೇಷವೆಂದರೆ ವಾಲ್ಮೀಕಿ ಮಹರ್ಷಿಗಳನ್ನು 'ವಿಷ್ಣುವಿನ ಮಾನುಷರೂಪ' ಎಂದು ಗೌರವಿಸಲಾಗಿರುವುದು.

ಶ್ರೀಮದ್ರಾಮಾಯಣದ ವಿಜಯಯಾತ್ರೆ ಮುಂದುವರೆದು ಚೈನಾ, ಜಪಾನ್ ಮತ್ತು ರಷ್ಯಾ ದೇಶಗಳಲ್ಲಿ ಪ್ರಚಾರಗೊಂಡಿತು. ಬೌದ್ಧಮತ ಹಾಗೂ ಜೈನಮತಗಳು ರಾಮಾಯಣದ ಜನಪ್ರಿಯತೆಯನ್ನು ಗಮನಿಸಿ ತಮ್ಮದೇ ಆದ ರಾಮಕಥೆಗಳನ್ನು ಜನಪ್ರಿಯಗೊಳಿಸಿಕೊಂಡವು.

ಭಾರತದಲ್ಲಂತೂ ರಾಮಾಯಣದ ಕಥೆ ಸರ್ವವ್ಯಾಪಿಯಾಗಿ ಜನಮನದಲ್ಲಿ ದಟ್ಟವಾಗಿ ನೆಲೆಸಿದೆ. ರಾಮಾಯಣದ ಕಥೆಯಿಲ್ಲದ ಪ್ರಾಂತೀಯ ಭಾಷೆ ಒಂದೂ ಇಲ್ಲ. ಸಂಸ್ಕೃತ ಮತ್ತು ಪ್ರಾಂತ ಭಾಷೆಗಳಲ್ಲಿ ಗದ್ಯ, ಪದ್ಯ, ಚಂಪೂ ಮತ್ತು ನಾಟಕ ಇತ್ಯಾದಿ ಎಲ್ಲ ಪ್ರಕಾರಗಳಲ್ಲಿಯೂ ರಾಮಾಯಣದ ಕಥೆ ಶತಶತಮಾನಗಳಿಂದ ಖ್ಯಾತಿ ಪಡೆದಿದೆ. ಉತ್ತರ ಭಾರತದಲ್ಲಂತೂ ಕಬೀರ್‌ನಂತಹ ಮುಸಲ್ಮಾನರೂ ಶ್ರೀಮದ್ ರಾಮಾಯಣದ ನಾಯಕ ಶ್ರೀರಾಮನನ್ನು ಆರಾಧಿಸಿರುತ್ತಾರೆ. ಒಟ್ಟಿನಲ್ಲಿ, ಕಾವ್ಯರಚನಾಕಲೆಯಲ್ಲಿ, ಭಾಷಾ ಮಾಧುರ್ಯದಲ್ಲಿ, ಭಾವನಾತರಂಗಗಳ ಸೂಕ್ಷ್ಮ ವರ್ಣನೆಗಳಲ್ಲಿ, ಎಲ್ಲಕ್ಕಿಂತಲೂ ಮಿಗಿಲಾಗಿ ನೀತಿ – ಧರ್ಮಗಳ ಆದರ್ಶನಿರೂಪಣೆಯಲ್ಲಿ ಶ್ರೀಮದ್ ವಾಲ್ಮೀಕಿ ರಾಮಾಯಣವು

ಇಡೀ ಸಾಹಿತ್ಯ ಕ್ಷೇತ್ರದಲ್ಲಿಯೇ ಅದ್ಭುತ ಹಾಗೂ ಅಪೂರ್ವ ಕೃತಿಯಾಗಿದೆ. ವಸ್ತು ಪ್ರತಿಪಾದನಾ ತಂತ್ರ, ಶಬ್ದ ಪ್ರಯೋಗ, ಅಲಂಕಾರಗಳ ಔಚಿತ್ಯ, ಬಾಂಧವ್ಯದ ಸೌಂದರ್ಯದ ಪ್ರತಿಪಾದನೆ, ಪ್ರಕೃತಿವರ್ಣನೆ, ನವರಸ ರುಚಿರತ್ – ಹೀಗೆ ಎಲ್ಲಕ್ಕೂ ಮಾರ್ಗದರ್ಶಿಯಾಗಿ ದಾರಿದೀಪದಂತೆ ಸಹಸ್ರಾರು ವರ್ಷಗಳಿಂದ ಶೋಭಿಸುತ್ತಿರುವುದು ವಾಲ್ಮೀಕಿ ರಾಮಾಯಣದ ಹಿರಿಮೆ. ಇಂತಹ ಶ್ರೇಷ್ಠ ಕೃತಿಯನ್ನು ರಚಿಸಿರುವ ವಾಲ್ಮೀಕಿಗಳ ಜೀವನ ಚರಿತ್ರೆ ಏನೂ ಸ್ಪಷ್ಟವಾಗಿ ತಿಳಿಯದು.

ಯುದ್ಧಕಾಂಡದ 'ಫಲಶ್ರುತಿ' (ನೋಡಿ : VI - 128-105)ಯನ್ನು ಬಿಟ್ಟರೆ ಪ್ರಾಮಾಣಿಕ ವಾಲ್ಮೀಕಿಕೃತ ರಾಮಾಯಣದಲ್ಲೆಲ್ಲೂ ಸಹ ವಾಲ್ಮೀಕಿಗಳ ಬಗ್ಗೆ ಯಾವ ಸಂಕೇತವೂ ಸಿಕ್ಕುವುದಿಲ್ಲ. ಈ ಫಲಶ್ರುತಿಯಲ್ಲಿಯೂ ಬಾಲಕಾಂಡ, ಉತ್ತರಕಾಂಡದಲ್ಲಿಯೂ ಮತ್ತು ಮಹಾಭಾರತದಲ್ಲಿಯೂ ವಾಲ್ಮೀಕಿಗಳನ್ನು ರಾಮಾಯಣದ ಕರ್ತೃವೆಂದು ತಿಳಿಸಲಾಗಿದೆ. ಆದರೆ ಈ ಮಹಾಕವಿಯ ಜೀವನ ವೃತ್ತಕ್ಕೆ ಸಂಬಂಧಿಸಿದಂತೆ ಪ್ರಾಮಾಣಿಕ ಸಾಮಗ್ರಿ ನಿತಾಂತ ಅಭಾವವಾಗಿದೆ. ರಾಮಾಯಣದ ದಾಕ್ಷಿಣಾತ್ಯ ಪಾಠದ ಒಂದು ಪ್ರಕ್ಷೇಪ ಶ್ಲೋಕದ ಪ್ರಕಾರ ರಾಮ – ಲಕ್ಷ್ಮಣ – ಸೀತಾದೇವಿಯರು ಚಿತ್ರಕೂಟದ ಸಮೀಪದಲ್ಲೇ ಇದ್ದ ವಾಲ್ಮೀಕಿಗಳ ಆಶ್ರಮವನ್ನು ಪ್ರವೇಶಿಸುತ್ತಾರೆ. ಈ ಸಂಗತಿ ರಾಮಾಯಣದ ಬೇರೆ ಎರಡು ಪಾಠಗಳಲ್ಲಿಯೂ ಇಲ್ಲ. ಈ ಬಗ್ಗೆಯೂ ನಿರ್ವಿವಾದವಾದ ತೀರ್ಮಾನವಿಲ್ಲ.

ಇತಿ ಸೀತಾ ಚ ರಾಮಶ್ಚ ಲಕ್ಷ್ಮಣಶ್ಚ ಕೃತಾಂಜಲಿಃ ।
ಅಭಿಗಮ್ಯಾಶ್ರಮಂ ಸರ್ವೇ ವಾಲ್ಮೀಕಿಮಭಿವಾದಯನ್ ।

(ಅಯೋಧ್ಯಾ – ಸರ್ಗ – ೫೬, ಶ್ಲೋಕ – ೧೬)

ಇದಕ್ಕೆ ಅನುಸಾರವಾಗಿ ವಾಲ್ಮೀಕಿಗಳ ಆಶ್ರಮವು ಅಧ್ಯಾತ್ಮರಾಮಾಯಣ, ಆನಂದರಾಮಾಯಣಗಳಲ್ಲಿಯೂ ಮತ್ತು ಬೇರೆ ರಾಮಾಯಣಗಳಲ್ಲಿಯೂ ಯಮುನಾ ನದಿಯ ತಟದಾಚೆ, ಚಿತ್ರಕೂಟದ ಸಮೀಪದಲ್ಲಿ ಇತ್ತೆಂದು ತಿಳಿದು ಬರುತ್ತದೆ.

'ವಾಲ್ಮೀಕಿ' ಎಂಬ ಹೆಸರು ಆದಿಕವಿಗಿಂತ ಭಿನ್ನರಾದ ಮೂರು ಜನಗಳಿಗೆ ಇದ್ದಿತು. ಇವರ್‍ಯಾರೂ 'ವಲ್ಮೀಕ' ಅಂದರೆ ಹುತ್ತದಿಂದ ಬಂದವರಲ್ಲ. ಇವರಲ್ಲಿ ಒಬ್ಬರು ವೈಯಾಕರಣಿರು. ಇವರ ಹೆಸರು ತೈತ್ತಿರೀಯ ಪ್ರಾತಿಶಾಖ್ಯದಲ್ಲಿ ಬಂದಿದೆ. ಎರಡನೆಯದು ಮಹಾಭಾರತದ ಉದ್ಯೋಗ ಪರ್ವದಲ್ಲಿ ಬಂದಿದೆ. ಇದು ಗರುಡವಂಶೀವಿಷ್ಣುಭಕ್ತ ಸುಪರ್ಣ ಪಕ್ಷಿಗಳಲ್ಲೊಂದು. ಸುಪರ್ಣ ವಾಲ್ಮೀಕಿ (ಸಪ್ತಸಿಂಧುವಿನಂತೂ ಯಾವುದೆ ಒಂದು ಆರ್ಯಜಾತಿ) ಮಹಾಭಾರತದಲ್ಲಿ

ಇವರು 'ಕರ್ಮಣಾ ಕ್ಷತ್ರಿಯಾಃ" ಎಂದು ಹೇಳಿದೆ. ಸುಪರ್ಣ ವಾಲ್ಮೀಕಿಗೂ ಆದಿಕವಿ ವಾಲ್ಮೀಕಿಗೂ ಯಾವ ರೀತಿಯ ಸಂಬಂಧವೂ ಇಲ್ಲ. ಇದರಿಂದ ಒಂದು ಸತ್ಯ ಹೊರ ಬೀಳುತ್ತದೆ. 'ವಾಲ್ಮೀಕಿ' ಎಂಬ ಹೆಸರು ಬಹು ಪ್ರಾಚೀನ ಕಾಲದಿಂದಲೂ ಪ್ರಚಲವಾಗಿತ್ತು.

ಮಹಾಭಾರತದ ದ್ರೋಣಪರ್ವ (೧೧೮–೪೮) ಹಾಗೆಯೇ ಶಾಂತಿಪರ್ವ (೨೦೦–೪)ಗಳಲ್ಲಿ ವಾಲ್ಮೀಕಿಯನ್ನು ಸ್ಪಷ್ಟ ಶಬ್ದಗಳಲ್ಲಿ ಒಬ್ಬ ಕವಿಯೆಂದು ಗುರುತಿಸಲಾಗಿದೆ. ಇದು ಹೊರತಾಗಿ ಶಾಂತಿಪರ್ವ (೫೭–೪೦)ದಲ್ಲಿ ಒಬ್ಬ ಭಾರ್ಗವ ವಾಲ್ಮೀಕಿಯ ಪ್ರಸ್ತಾಪವಿದೆ. ಇವಲ್ಲದೆ ಅನುಶಾಸನಪರ್ವದಲ್ಲಿ ಒಬ್ಬ ವಾಲ್ಮೀಕಿಯ ಉಲ್ಲೇಖವಿದೆ. ಮಹಾಭಾರತದ ಅನ್ಯಸ್ಥಳಗಳಲ್ಲಿಯೂ ಮಹರ್ಷಿ ವಾಲ್ಮೀಕಿಯ ಉಲ್ಲೇಖಗಳಿವೆ. ಉದಾಹರಣೆಗೆ – ಆದಿಪರ್ವ (೫೦–೧೪), ಸಭಾಪರ್ವ (೭–೧೪), ವನಪರ್ವ (೭೫–೧೦೨), ಉದ್ಯೋಗಪರ್ವ (೮೧–೨೭). ಇದರಿಂದ ಮಹಾಭಾರತ ಕರ್ತೃ ವ್ಯಾಸಮಹರ್ಷಿಗಳಿಗೆ ವಾಲ್ಮೀಕಿ ಮಹರ್ಷಿಗಳ ಬಗ್ಗೆ ತಿಳಿದಿತ್ತು – ಎಂಬುದು ಗೊತ್ತಾಗುತ್ತದೆ. ಈ ವಾಲ್ಮೀಕಿಗಳಲ್ಲಿ ಬಹುಸಂಖ್ಯಾತವಾಗಿ ಈ ಎಲ್ಲ ವಾಲ್ಮೀಕಿಗಳು ಆದಿಕವಿಗಿಂತ ಭಿನ್ನರಾದವರು ಎಂಬ ಸತ್ಯ ದೃಢವಾಗುತ್ತದೆ. ಆದಿಕವಿಗೆ ಅನ್ವಯಗೊಳ್ಳುವ ಸ್ಥಳಗಳಲ್ಲೂ ಅವರ ಬಗ್ಗೆ ಅಲ್ಪಾಲ್ಪವಾದ ಚಾರಿತ್ರಿಕ ವಿಷಯವೂ ತಿಳಿಯುವುದಿಲ್ಲ.

ಬಾಲಕಾಂಡ ಮತ್ತು ಉತ್ತರಕಾಂಡ : ಬಾಲಕಾಂಡದ ಪ್ರಾರಂಭದಲ್ಲಿ ರಾಮಾಯಣದ ಉತ್ಪತ್ತಿಯ ಕಥೆ ಸಿಕ್ಕುತ್ತದೆ. ತಪಸ್ವೀ (ಸರ್ಗ ೧. ಶ್ಲೋಕ ೧), ಮುನಿ (೨–೪), ಮಹರ್ಷಿಗಳೆಂದು ಗೌರವಿಸಲ್ಪಟ್ಟ (೪–೪) ವಾಲ್ಮೀಕಿಗಳು ನಾರದ ಮಹರ್ಷಿಗಳಿಂದ ರಾಮಕಥೆಯ ಸಂಗ್ರಹವನ್ನು ಕೇಳಿ ತಿಳಿದುಕೊಂಡರು. ಅನಂತರ ಅವರು 'ಶ್ಲೋಕ'ದ ಆವಿಷ್ಕರಣ ಮಾಡಿದ ಮೇಲೆ ಬ್ರಹ್ಮದೇವರ ಆದೇಶದಂತೆ ರಾಮಕಥೆಯನ್ನು ಶ್ಲೋಕ ಬದ್ಧಗೊಳಿಸಿದರು ಮತ್ತು ತಮ್ಮ ರಚನೆಯನ್ನು ಕುಶ–ಲವರೆಂಬ ಇಬ್ಬರು ಶಿಷ್ಯರಿಗೆ ಉಪದೇಶಿಸಿದರು. ಈ ಇಬ್ಬರೂ ಸರ್ವತ್ರ ರಾಮಾಯಣವನ್ನು ಮಧುರವಾಗಿ ಹಾಡುತ್ತಾರೆ. ಹಾಗೆಯೇ ಒಂದು ಸಲ ಅಯೋಧ್ಯೆಯ ಅರಮನೆಯಲ್ಲಿಯೂ ರಾಮ ಮತ್ತು ಅವನ ಸಹೋದರರ ಮುಂದೆ ಹಾಡುತ್ತಾರೆ. (ನೋಡಿ : ಬಾಲಕಾಂಡ – ಸರ್ಗ : ೧–೪). ಈ ಕಥೆ ಸಹಜವಾಗಿದೆ.

ಉತ್ತರಕಾಂಡದ ಪ್ರಕಾರ, ಲಕ್ಷ್ಮಣನು ರಾಮನಿಂದ ಪರಿತ್ಯಕ್ತಳಾದ ಸೀತಾ ದೇವಿಯನ್ನು ವಾಲ್ಮೀಕಿಗಳ ಆಶ್ರಮದ ಸಮೀಪದಲ್ಲಿ ಬಿಡುತ್ತಾ ಅವಳಿಗೆ

ಸಾಂತ್ವನವನ್ನು ಹೇಳುವ ಸಂದರ್ಭದಲ್ಲಿ ಹೀಗೆ ಹೇಳುತ್ತಾನೆ : "ಬ್ರಾಹ್ಮಣನೂ, ನಮ್ಮ ತಂದೆ ದಶರಥ ಮಹಾರಾಜನ ಮಿತ್ರನೂ, ಆದ ವಾಲ್ಮೀಕಿ ಮಹರ್ಷಿಗಳ ಆಶ್ರಮ ಇಲ್ಲಿಯೇ ಇದೆ. ಇದರಲ್ಲಿ ಆಶ್ರಯ ಪಡೆಯಬಹುದು :

> **ರಾಜ್ಞೋದಶರಥಸ್ಯೈವ ಪಿತುರ್ಮೇ ಮುನಿಪುಂಗವಃ ।**
> **ಸಖಾಪರಮಕೋ ವಿಪ್ರೋ ವಾಲ್ಮೀಕಿಃ ಸುಮಹಾಯಶಾಃ ॥**

(ಸರ್ಗ – ೪೭, ಶ್ಲೋಕ ೧೬)

ನಂತರ ಸೀತಾದೇವಿಯು ವಾಲ್ಮೀಕಿಗಳ ಆಶ್ರಮದಲ್ಲಿ ಲವ ಮತ್ತು ಕುಶರಿಗೆ ಜನ್ಮ ಕೊಡುತ್ತಾಳೆ. ಆ ಮಕ್ಕಳು ವಾಲ್ಮೀಕಿಗಳಿಂದ ರಾಮಾಯಣವನ್ನು ಕಲಿಯುತ್ತಾರೆ. (ಸರ್ಗ – ೬೬), ಮತ್ತು ಅವರ ಆದೇಶದಂತೆ ರಾಮನು ಪ್ರಾರಂಭಿಸಿದ್ದ ಯಜ್ಞಶಾಲೆಯಲ್ಲಿ ಹಾಡುತ್ತಾರೆ (ಸರ್ಗ ೭೩–೭೪). ರಾಮಾಯಣವನ್ನು ಕೇಳಿದ ನಂತರ ರಾಮನು ಸೀತೆಯನ್ನು ಮಾರನೇ ದಿನ ಕರೆದುಕೊಂಡು ಬರಲು ವಾಲ್ಮೀಕಿಗಳಿಗೆ ತಿಳಿಸುತ್ತಾನೆ. ವಾಲ್ಮೀಕಿಗಳು ಸೀತಾದೇವಿಯೊಡನೆ ಯಜ್ಞಶಾಲೆಗೆ ಆಗಮಿಸುತ್ತಾರೆ. ಸಭೆಯ ಸಮ್ಮುಖದಲ್ಲಿ ಸೀತಾದೇವಿಯ ಪರಿಶುದ್ಧ ಸತೀತ್ವದ ಬಗ್ಗೆ ಸಾಕ್ಷ್ಯ ಹೇಳುತ್ತಾರೆ. ಈ ಸಂದರ್ಭದಲ್ಲಿ ವಾಲ್ಮೀಕಿಗಳು ತಮ್ಮ ಬಗ್ಗೆ ಹೇಳುತ್ತಾ – "ನಾನು ಪ್ರಚೇತನ ಹತ್ತನೇ ಮಗ. ನಾನು ಸಹಸ್ರಾರು ವರ್ಷಗಳ ಕಾಲ ತಪಸ್ಸನ್ನು ಆಚರಿಸಿದ್ದೇನೆ.

> **ಪ್ರಚೇತಸೋಽಹಂ ದಶಮಃ ಪುತ್ರೇಶೀರಾಘವನಂದನ ।**
> **ನ ಸ್ಮರಾಮ್ಯನೃತಂ ವಾಕ್ಯಂ ಇಮೌ ತು ತವ ಪುತ್ರಕೌ ॥ (೧೭)**
> **ಬಹುವರ್ಷಸಹಸ್ರಾಣಿ ತಪಶ್ಚರ್ಯಾ ಮಯಾ ಕೃತಾ । (ಸರ್ಗ – ೧೬)**

ಇದಾದ ನಂತರ ತಮ್ಮ ಬಗ್ಗೆ ಮುಂದುವರಿದು ಘೋಷಿಸುತ್ತಾ ನಾನು ಎಂದೂ ಯಾವ ಪಾಪವನ್ನೂ ಮಾಡಿಲ್ಲ :

> **"ಮನಸಾ ಕರ್ಮಣಾ ವಾಚಾ ಭೂತಪೂರ್ವಂ ನ ಕಿಲ್ಬಿಷಮ್ ।"**

(ಅದೇ ಸರ್ಗ – ಶ್ಲೋಕ – ೨೦)

ಇದರಿಂದ ಒಂದು ವಿಷಯ ಸುಸ್ಪಷ್ಟವಾಗುತ್ತದೆ. ವಾಲ್ಮೀಕಿಗಳ ಬಗ್ಗೆ ಅವರು ದಾರಿ ಚೋರರಾಗಿದ್ದರು ಎಂಬ ಕಥೆ ಉತ್ತರಕಾಂಡದ ಲೇಖಕನಿಗೆ ಮಾನ್ಯವಾಗಿರಲಿಲ್ಲ .. 'ನಾನೃಷಿಃ ಕುರುತೇ ಕಾವ್ಯಮ್"

ಬಾಲಕಾಂಡ (೨–೩) ದ ಪ್ರಕಾರ ವಾಲ್ಮೀಕಿಗಳ ಆಶ್ರಮವು ತಮಸಾ ಹಾಗೂ ಗಂಗಾನದಿಗಳು ಸಮೀಪದಲ್ಲಿದ್ದಿತು. ತಮಸಾ ನದಿಯಲ್ಲಿ ಸ್ನಾನ ಮಾಡಲು ಶಿಷ್ಯ ಭಾರದ್ವಾಜನ ಜೊತೆಯಲ್ಲಿ ಹೋದಾಗ ಕ್ರೌಂಚಮಿಥುನದ ಪ್ರಸಂಗ ನಡೆಯಿತು.

ದಾರಿಗಳ್ಳ ವಾಲ್ಮೀಕಿ : ಒಂದು ಪರಂಪರೆಯ ಪ್ರಕಾರ ವಾಲ್ಮೀಕಿ ಒಬ್ಬ ದಾರಿಗಳ್ಳನಾಗಿದ್ದನು. ದೀರ್ಘಕಾಲದ ತಪಸ್ಸಿನ ಫಲವಾಗಿ, ನಂತರ ರಾಮಾಯಣದ ರಚನೆಯನ್ನು ಮಾಡಿದರು. ಈ ಕಥೆಯ ಪ್ರಾಚೀನತೆ ಬಗ್ಗೆ ತುಂಬ ಸಂದೇಹವಿದೆ. ಸ್ಕಂದ ಪುರಾಣದಲ್ಲಿ ಈ ಕಥೆಯ ವಿಕಸಿತ ರೂಪ ದೊರೆಯುತ್ತದೆ. ಆದರೆ ಈ ಪುರಾಣದಲ್ಲಿ ಕಂಡುಬರುವ ಬಹಳಷ್ಟು ಸಾಮಗ್ರಿಗಳು ಕ್ರಿ.ಶ. ಎಂಟನೆಯ ಶತಮಾನದ ನಂತರದವುಗಳಾಗಿದ್ದು ಈ ಪುರಾಣದಲ್ಲಿನ ಅಧಿಕ ಭಾಗ ಪ್ರಕ್ಷೇಪಗಳಿಂದ ತುಂಬಿದೆ. ಇವು ಯಾವಾಗ ಪ್ರಕ್ಷೇಪಗೊಂಡವು ತಿಳಿಯದು. ಆದರೆ ಮಹಾಭಾರತದ ಅನುಶಾಸನ ಪರ್ವದಲ್ಲಿ ಈ ಕಥೆಯ ಒಂದು ಆಭಾಸ ತಿಳಿಯುತ್ತದೆ. ವಾಲ್ಮೀಕಿಗಳು ಯುಧಿಷ್ಠಿರನಿಗೆ ಹೇಳುತ್ತಾರೆ : ಯಾವುದೋ ಒಂದು ವಿವಾದದ ಸಂದರ್ಭದಲ್ಲಿ ಮುನಿಗಳು ನನ್ನನ್ನು 'ಬ್ರಹ್ಮಘ್ನ'ನೆಂದು ಕರೆದರು. ಈ ಕರೆಯಿಂದಲೇ ನಾನೊಬ್ಬ ಪಾಪಿಯಾಗಿ ಬಿಟ್ಟೆ. ಆಗ ನಾನು ಪರಶಿವನನ್ನು ಪ್ರಾರ್ಥಿಸಿದೆ. ಆಗ ಆ ಪರಶಿವನು ಪಾಪದಿಂದ ಮುಕ್ತಗೊಳಿಸಿದನಲ್ಲದೆ,

"ನಿನ್ನ ಕೀರ್ತಿ ಶ್ರೇಷ್ಠವಾಗುವುದು" – ಎಂದು ನನ್ನನ್ನು ಅನುಗ್ರಹಿಸಿದನು. (ಅಧ್ಯಾಯ : ೧೮)

'ನಿನ್ನ ಯಶಸ್ಸು ಶ್ಲಾಘ್ಯವಾಗುವುದು' – ಎಂಬ ಅನುಗ್ರಹ ವಚನದ ಫಲವಾಗಿ ವಾಲ್ಮೀಕಿಗಳು 'ಆದಿಕವಿ' ಪದವಿಯನ್ನು ಗಳಿಸಿದರು – ಎಂಬ ಧ್ವನಿತಾರ್ಥ ಇದರಲ್ಲಿದೆ. ಈ ಕಥೆಯೂ ನಂಬಲರ್ಹವಲ್ಲ.

ಸ್ಕಂದ ಪುರಾಣದಲ್ಲಿ ವಾಲ್ಮೀಕಿಗಳಿಗೆ ಸಂಬಂಧಿಸಿದಂತೆ ನಾಲ್ಕು ಕಥೆಗಳು ಇವೆ. ವೈಷ್ಣವ ಖಂಡದ ವೈಶಾಖಮಾಸ ಮಾಹಾತ್ಮೆಯಲ್ಲಿ ಒಂದು ಕಥೆ ಹೀಗಿದೆ : ಒಬ್ಬ ವ್ಯಾಧನಿದ್ದನು. (ಅವನ ಹೆಸರನ್ನು ಹೇಳಿಲ್ಲ). ಅವನು ರಾಮನಾಮ ಜಪದ ಫಲ ಸ್ವರೂಪವಾಗಿ ಮುಂದಿನ ಅವನ ಜನ್ಮದಲ್ಲಿ ವಲ್ಮೀಕನೆಂಬ ಹೆಸರಿನ ಋಷಿಯ ಪುತ್ರನಾಗಿ ಜನಿಸಿ, ವಾಲ್ಮೀಕಿ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯುತ್ತಾನೆ. ಕೃಣು ಎಂಬ ಹೆಸರಿನ ತಪಸ್ವಿಯು ತಪಸ್ಸನ್ನು ಆಚರಿಸುತ್ತಿರಲು ಅವನ ನಾಲ್ಕೂ ಕಡೆಯೂ ಹುತ್ತ ಬೆಳೆಯುತ್ತದೆ. ಅದರಿಂದ ಅವನಿಗೆ ವಾಲ್ಮೀಕಿಯೆಂಬ ಹೆಸರಾಯಿತು. ವ್ಯಾಧನು ಆ ಕೃಣು ತಪಸ್ವಿಯ ಪುತ್ರನಾಗಿ ಜನಿಸಿದ ಮತ್ತು ವಾಲ್ಮೀಕಿಯೆಂಬ ಹೆಸರಿನಿಂದ ಪ್ರಖ್ಯಾತಿ ಪಡೆದ. ಅವನು ದಿವ್ಯರಾಮಕಥೆಯನ್ನು ರಚಿಸುವಲ್ಲಿ ಸಮರ್ಥನಾದ. (ನೋಡಿ : ಅಧ್ಯಾಯ – ೨೧). ಈ ಕಥೆಯ ಪ್ರಕಾರ ವಾಲ್ಮೀಕಿ ತನ್ನ ಪೂರ್ವಜನ್ಮದಲ್ಲಿ ವ್ಯಾಧನಾಗಿದ್ದ ಮತ್ತು ಅವನ ತಂದೆಯ ಸುತ್ತಲೂ ಹುತ್ತ (ವಲ್ಮೀಕ) ಬೆಳೆದಿತ್ತು.

ಸ್ಕಂದ ಪುರಾಣದ ಇನ್ನೊಂದು ಕಥೆ. ಇದು ಅವಂತೀ ಖಂಡದ ಆವಂತ್ಯಕ್ಷೇತ್ರ ಮಹಾತ್ಮ್ಯ (೨೪)ದಲ್ಲಿ ಬಂದಿದೆ. ಇದು ಅಗ್ನಿಶರ್ಮಾ ಎಂಬುವನ ಕಥೆ. ಅಗ್ನಿಶರ್ಮಾ ಒಬ್ಬ ದಾರಿಗಳ್ಳನಾಗಿದ್ದ. ಒಂದು ದಿನ ಅವನು ಸಪ್ತರ್ಷಿಗಳನ್ನು ಸಂಧಿಸಿದ. ಅಷ್ಟೇ ಅಲ್ಲ; ಅವನು ಅವರನ್ನು ಕೊಂದು ಬಿಡಲು ಇಚ್ಛಿಸಿದ. ಆಗ ಆ ಋಷಿಗಳು ಅವನನ್ನು ಮನೆಗೆ ಕಳಿಸಿ, ಈ ಪ್ರಶ್ನೆಯನ್ನು ನಿಮ್ಮ ಪರಿವಾರದವರನ್ನು ಕೇಳು. "ನೀವು ನನ್ನ ಪಾಪಫಲದಲ್ಲಿ ಭಾಗಿಯಾಗಲು ಸಿದ್ಧರಿದ್ದೀರಾ?" ಪರಿವಾರದವರು "ನಾವು ಸಿದ್ಧರಿಲ್ಲ" ಎಂದು ಕಡ್ಡಿ ತುಂಡು ಮಾಡುವಂತೆ ಹೇಳಿದರು. ಅವರ ಉತ್ತರದಿಂದ ತಿಳಿವಳಿಕೆ ಪಡೆದ ಅವನು ಸಪ್ತರ್ಷಿಗಳನ್ನು ಸಂಧಿಸಿ, ಅವನ ಪರಿವಾರದ ಉತ್ತರವನ್ನು ತಿಳಿಸಿದ. ಅವರ ಇಚ್ಛೆ ಮತ್ತು ಸಲಹೆ ಮೇರೆಗೆ ತಪಸ್ಸನ್ನು ಆಚರಿಸಲು ಕುಳಿತ. ೧೩ ವರ್ಷಗಳು ಕಳೆಯಿತು. ಅವನ ಸುತ್ತಲೂ ಹುತ್ತ ಬೆಳೆದಿತ್ತು. ಆಗ ಸಪ್ತರ್ಷಿಗಳು ಅವನನ್ನು ಹುತ್ತದಿಂದ ಹೊರಕ್ಕೆ ಬರುವಂತೆ ಸಹಾಯ ಮಾಡಿ ಅವನಿಗೆ 'ವಾಲ್ಮೀಕಿ' – ಎಂಬ ಹೆಸರನ್ನು ಕೊಟ್ಟು, ರಾಮಾಯಣವನ್ನು ಬರೆಯಲು ಪ್ರೇರೇಪಿಸಿದರು.

ಇದೇ ಪುರಾಣದ ನಾಗರಖಂಡದಲ್ಲಿ ಲೋಹಜಂಘ ಎಂಬ ಬ್ರಾಹ್ಮಣನ ಕಥೆ ಇದೆ : (ನೋಡಿ : ಅಧ್ಯಾಯ – ೧೨೪) ಅವನು ಮಾತಾ – ಪಿತೃ ಪರಾಯಣನಾಗಿದ್ದು, ಸಂಸಾರ ನಿರ್ವಹಣೆಗಾಗಿ ಕಳ್ಳನಾಗಿ ಬಿಟ್ಟಿದ್ದ. ಸಪ್ತರ್ಷಿಗಳನ್ನು ಸಂಧಿಸುತ್ತಾನೆ. ಹಿಂದಿನ ಕಥೆಯಂತೆಯೇ ಅವರು ತನ್ನ ಪರಿವಾರದವರನ್ನು ಅವನ ಪಾಪಗಳಲ್ಲಿ ಭಾಗಿಯಾಗಲು ಸಿದ್ಧರೆ? ಎಂದು ವಿಚಾರಿಸಿ ಉತ್ತರ ತರಲು ಹೇಳಿದರು. ಅವನು ತನ್ನ ಪರಿವಾರದವರ್ಯಾರೂ ಒಪ್ಪಲಿಲ್ಲವೆಂಬ ವಿಷಯ ತಿಳಿಸಿದ. ಸಪ್ತರ್ಷಿಗಳು ಅವನಿಗೆ ಒಂದು 'ಜಾಟ್‌ಘೋಟ್' ಮಂತ್ರ ಉಪದೇಶಿಸಿದರು. ಅವನು ತಪಸ್ಸಿಗೆ ಕುಳಿತ. ಸುತ್ತಲೂ ಹುತ್ತ ಬೆಳೆಯಿತು. ಅದನ್ನು ಕಾಲಾನಂತರ ಕಂಡ ಸಪ್ತರ್ಷಿಗಳು ಅವನಿಗೆ "ವಾಲ್ಮೀಕಿ" ಎಂಬ ಅಭಿದಾನವನ್ನು ನೀಡಿದರು. ಇವೆಲ್ಲ ಕಥೆಗಳೂ 'ವಾಲ್ಮೀಕಿ' ಪದದಿಂದ ಹುಟ್ಟಿದವು. ನಂಬಲನರ್ಹವಾದವು.

ಪ್ರಭಾಸ ಖಂಡದ ಪ್ರಭಾಸ ಕ್ಷೇತ್ರ ಮಾಹಾತ್ಮ್ಯ (ಅಧ್ಯಾಯ – ೨೯೮)ದಲ್ಲಿ ಈ ಮುಂದಿನ ನಾಲ್ಕನೆಯ ಕಥೆ ಬಂದಿದೆ. 'ಶಮೀಮುಖ' ಎಂಬ ಬ್ರಾಹ್ಮಣನ ಪುತ್ರ ವೈಶಾಖನು ಕಳ್ಳತನದ ವೃತ್ತಿಯಿಂದ ಸಂಸಾರಪಾಲನೆಯನ್ನು ನಡೆಸುತ್ತಿದ್ದ. 'ಸಪ್ತರ್ಷಿಯವರೊಂದಿಗೆ ಹಿಂದಿನ ಕತೆಯಂತೆಯೇ ಸಮಾಗಮವಾಯಿತು. ಅವರು ಅವನ ಪರಿವಾರವನ್ನು ತನ್ನ ಪಾಪದಲ್ಲಿ ಭಾಗಿಗಳಾಗುವರೇ ಎಂದು ಕೇಳಿ ಬರಲು ಹೇಳಿದರು. ಅವರು 'ಇಲ್ಲ' ಎಂದರು. ಅದನ್ನು ಕೇಳಿ ಅವನು

ವಿರಾಗಿಯಾದನು. ಸಾವಿರಾರು ವರ್ಷ ತಪಸ್ಸಿನಲ್ಲಿ ಮಗ್ನನಾದನು. ಅವನ ಶರೀರ ಹುತ್ತದಿಂದ ಮುಚ್ಚಿ ಹೋಗುತ್ತದೆ. ಸಪ್ತರ್ಷಿಗಳು ಅನೇಕ ವರ್ಷಗಳ ನಂತರ ಅವನನ್ನು ನೋಡಬಯಸುತ್ತಾರೆ. ಅವನ ಶರೀರ ಹುತ್ತದಲ್ಲಿ ಅಡಗಿ ಹೋಗಿರುತ್ತದೆ. ಸಪ್ತರ್ಷಿಗಳು ಅವನನ್ನು ಹೊರಕ್ಕೆ ಕರೆದುತರುತ್ತಾರೆ. ಅವನಿಗೆ ವಾಲ್ಮೀಕಿ ಎಂದು ಹೆಸರುಕೊಟ್ಟು ಅವನನ್ನು ರಾಮಾಯಣದ ರಚನೆ ಮಾಡಲು ಹೇಳುತ್ತಾರೆ. ಅವರು ಅವನಿಗೆ ಆಶೀರ್ವದಿಸಿದ ಮಾತಿದು :

"ಸ್ವಚ್ಛಂದಾ ಭಾರತೀದೇವೀ ಜಿಹ್ವಾಗ್ರೇ ತೇ ಭವಿಷ್ಯತಿ ।
ಕೃತ್ವಾ ರಾಮಾಯಣಂ ಕಾವ್ಯಂ ತತೋ ಮೋಕ್ಷಂ ಗಮಿಷ್ಯಸಿ ॥"

ಈ ಮೇಲೆ ಹೇಳಿದ ಕಥೆಗಳ ಅತ್ಯಂತ ಪ್ರಚಲಿತ ಕಥೆಯ ರೂಪ ಅಧ್ಯಾತ್ಮ ರಾಮಾಯಣದ ಅಯೋಧ್ಯಾಕಾಂಡ (ಸರ್ಗ – ೬, ಶ್ಲೋಕ ೪೩–೭೭)ರಲ್ಲಿ ದೊರೆಯುತ್ತದೆ ; ರಾಮ, ಲಕ್ಷ್ಮಣ ಮತ್ತು ಸೀತೆಯರು ನಿರ್ವಾಸಿತರಾಗಿ ಚಿತ್ರಕೂಟದ ಬಳಿಗೆ ಬರುತ್ತಾರೆ. ಅವರು ತಮಗೆ ಸೂಕ್ತವಾದ ನಿವಾಸ ಸ್ಥಳವನ್ನು ವಾಲ್ಮೀಕಿಗಳನ್ನು ಕೇಳಿದರು. ವಾಲ್ಮೀಕಿಗಳು ರಾಮನಾಮ ಮಹಾತ್ಮೆಯನ್ನು ವಿವರಿಸುತ್ತಾ ತಮ್ಮ ಪೂರ್ವ ಕಥೆಯನ್ನು ಹೇಳಿದರು.

ಅಹಂ ಪುರಾ ಕಿರಾತೇಷು ಕಿರಾತೈಃ ಸಹವರ್ಧಿತಃ ।
ಜನ್ಮಮಾತ್ರದ್ವಿಜತ್ವಂ ಮೇ ಶೂದ್ರಾಚಾರರತಃ ಸದಾ ॥ ೬೫ ॥

ತಮಾಷೆಯೆಂದರೆ ಶ್ರೀರಾಮನಿಗೇ ರಾಮನಾಮದ ಮಾಹಾತ್ಮೆಯನ್ನು ಹೇಳಿದುದು. ಅದೂ ಅವನ ವನವಾಸದ ಪ್ರಾರಂಭದಲ್ಲಿ ಮತ್ತು ವಾಲ್ಮೀಕಿಗಳಿಂದಲೇ;

ಈ ಕಥೆಯ ಮುಂದಿನ ಭಾಗವು ಇನ್ನೂ ಹಾಸ್ಯಾಸ್ಪದವಾಗಿದೆ. ತನಗೆ 'ರಾಮ' ಎಂದು ಹೇಳಲು ಕಷ್ಟವಾಯಿತು. ಆಗ ಋಷಿಗಳು ಎದುರುಗಿದ್ದ ಒಂದು ವೃಕ್ಷವನ್ನು ತೋರಿಸಿ ಇದೇನು? ಎಂದು ಕೇಳಿದರು. ನಾನು 'ಮರ' ಎಂದೆ. ಆಗ ಋಷಿಗಳು ಅದನ್ನೇ ಜಪಿಸುತ್ತಾ ಇರು ಎಂದರು. "ಮರಾ ಮರಾ ಮರಾ' – ರಾಮ ರಾಮವೆಂದಾಯಿತು. ಅವರ ಆಶೀರ್ವಾದ ಬಲದಿಂದ, ನಾನು ವಾಲ್ಮೀಕಿಯಾದೆ. ರಾಮಾಯಣವನ್ನು ರಚಿಸಿದೆ. ವೃಕ್ಷಕ್ಕೆ 'ಮರಾ' ಎಂಬ ಪದ ಸಪ್ತರ್ಷಿಗಳಿಗೆ ತಿಳಿದಿದ್ದಿತು. ಅದು ಕನ್ನಡ ಪದ – ಸಪ್ತರ್ಷಿಗಳು ರಾಮಾಯಣ ರಚನೆಯ ಮುಂಚೆಯೇ ಕನ್ನಡಪದವನ್ನು ತಿಳಿದಿದ್ದರು – ಎಂದಾಯಿತು.

ಇದೊಂದು ಹರಿಕಥೆದಾಸರ ಸೃಷ್ಟಿ. ಇದು ಮುಂದುವರೆದುದು ಒಂದು ಮಹಾನ್ ಆಭಾಸ.

●

"ತತ್ವಸಂಗ್ರಹರಾಮಾಯಣ"ದಲ್ಲಿ ಕಂಡುಬರುವ ದಾರಿಗಳ್ಳ ವಾಲ್ಮೀಕಿ ಕಥೆಯಲ್ಲಿ ಕೆಲವು ಅಲೌಕಿಕ ಘಟನೆಗಳಿವೆ. ಹಿಂದಿನಂತೆ ಸಪ್ತರ್ಷಿಗಳ ಮತ್ತು ವ್ಯಾಧನ ಕಥೆ ಇದೆ. ನಿರಾಶನಾಗಿ ಬಂದ ವ್ಯಾಧನಿಗೆ ಸಪ್ತರ್ಷಿಗಳು ರಾಮನ ಮಹಿಮೆಯನ್ನು ವರ್ಣಿಸಿದರು. ಆ ಸಮಯದಲ್ಲಿ ಒಂದು ಆಕಾಶವಾಣಿ ಕೇಳಿಸಿತು. ಅದರಲ್ಲಿ ಸಪ್ತರ್ಷಿಗಳಿಗೆ ಒಂದು ಆದೇಶ ಕೇಳಿ ಬಂದಿತು. ವ್ಯಾಧನಿಗೆ "ಮ–ರಾ ಮಂತ್ರೋಪದೇಶ ಮಾಡತಕ್ಕದ್ದು". ಇದರಂತೆ ಮಾಡಲಾಯಿತು. ವ್ಯಾಧನು ತಪಸ್ಸನ್ನು ಮಾಡಲು 'ಮ–ರಾ' ಜಪವನ್ನು ಮಾಡಲೂ ಆರಂಭಿಸಿದನು. ಅವನ ನಾಲ್ಕೂ ಕಡೆಯೂ ಹುತ್ತ ಬೆಳೆಯಿತು. ಇದನ್ನು ಕಂಡ ಇಂದ್ರನಿಗೆ ಗಾಬರಿಯಾಯಿತು. ಆದರೆ ಬೃಹಸ್ಪತಿಯು ಇಂದ್ರನಿಗೆ ಸಮಾಧಾನ ಮಾಡುತ್ತಾ – ಈ ತಪಸ್ವಿಯು ಮುಂದೆ ರಾಮಾಯಣವನ್ನು ರಚಿಸುವನು ಎಂದು ಹೇಳಿದನು. ಅನೇಕ ವರ್ಷಗಳು ಕಳೆದ ಮೇಲೆ ಸಪ್ತರ್ಷಿಗಳು ಅಲ್ಲಿಗೆ ಬಂದರು. ವಿಷ್ಣುವು ವಾಲ್ಮೀಕಿಗೆ ಆಶೀರ್ವದಿಸಿ 'ನೀನು ರಾಮಾಯಣ ರಚಿಯಿತೃವಾಗು' ಎಂದು ವರವನ್ನಿತ್ತನು. ಇದಾದ ನಂತರ ವಾಲ್ಮೀಕಿಯು ಶ್ರೀಮನ್ನಾರಾಯಣನ ಸ್ತುತಿ ಮಾಡಿ, ತಮಸಾ ನದಿಯ ಸಮೀಪದಲ್ಲಿ ಆಶ್ರಮವನ್ನು ಮಾಡಿಕೊಂಡರು. ಅಲ್ಲಿದ್ದಾಗ ಅವರು ನಾರದರಿಂದ ರಾಮಕಥೆಯನ್ನು ಕೇಳಿ ತಿಳಿದು ರಾಮಾಯಣವನ್ನು ರಚಿಸಿದರು.

"ಆನಂದರಾಮಾಯಣ", ರಾಜ್ಯಕಾಂಡದ ಅಧ್ಯಾಯ ೧೪ ರಲ್ಲಿ ದೊರೆಯುವ ವಿಸ್ತಾರವಾದ ವಾಲ್ಮೀಕಿಕಥೆಯಲ್ಲಿ ವಾಲ್ಮೀಕಿಗಳ ಮೂರು ಹಿಂದಿನ ಜನ್ಮಗಳ ವರ್ಣನೆ ಇದೆ. ಮೊದಲ ಜನ್ಮದಲ್ಲಿ ಅವರು ಸ್ತಂಭ ಹೆಸರಿನ ಬ್ರಾಹ್ಮಣರಾಗಿದ್ದರು. ಎರಡನೆ ಜನ್ಮದಲ್ಲಿ ಅವರೊಬ್ಬ ವ್ಯಾಧನಾಗಿದ್ದರು. ಮೂರನೇ ಜನ್ಮದಲ್ಲಿ ಅವರು ಕೃಣು ಎಂಬುವರ ಪುತ್ರರಾದರು ಮತ್ತು ತಪಸ್ಸನ್ನು ಆಚರಿಸಿದ ನಂತರ ವಾಲ್ಮೀಕಿಗಳಾದರು. ಇಲ್ಲಿಂದ ಅವರ ಕಥೆಯೆಲ್ಲವೂ ಬಹ್ವಂಶ ಅಧ್ಯಾತ್ಮ ರಾಮಾಯಣ ಮತ್ತು ಸ್ಕಂದಪುರಾಣದ ವೈಷ್ಣವ ಖಂಡದ ಕಥೆಯಂತೆಯೇ ಇದೆ; ಅದನ್ನೇ ತೆಗೆದುಕೊಂಡಿದೆ. ಆನಂದರಾಮಾಯಣದಲ್ಲಿನ ವಾಲ್ಮೀಕಿ ವೃತ್ತಾಂತ ಈ ರೀತಿ ಇದೆ; ಶಾಕಲ ಎಂಬ ನಗರದ ನಿವಾಸಿ, ಶ್ರೀವತ್ಸ ಗೋತ್ರದ 'ಸ್ತಂಭ' ಎನ್ನುವ ಬ್ರಾಹ್ಮಣನು ಮಹಾಪಾಪಿಯಾಗಿದ್ದನು. ಒಬ್ಬ ವೇಶ್ಯೆಯಲ್ಲಿ ಆಸಕ್ತನಾಗಿದ್ದು ನಿತ್ಯಕರ್ಮಗಳ ಅನುಷ್ಠಾನವನ್ನು ಮರೆತಿದ್ದನು. ಶೂದ್ರನಂತೆ ಜೀವನ ನಡೆಸುತ್ತಿದ್ದನು. ಆದರೆ ಒಂದು ದಿನ ಅವನು ಒಬ್ಬ ಬ್ರಾಹ್ಮಣನ ಸತ್ಕಾರ ಮಾಡಿದನು. ಆ ಪುಣ್ಯ ವಿಶೇಷದ ಫಲವಾಗಿ ಅವನ ಉದ್ಧಾರವಾಯಿತು. ಅವನು ಮರಣ ಸಮಯದಲ್ಲಿ ಆ ವೇಶ್ಯೆಯನ್ನೇ ನೆನೆಯುತ್ತಾ ಪ್ರಾಣ ಬಿಟ್ಟನು. ಅದರ ಫಲವಾಗಿ ಮುಂದಿನ ಜನ್ಮದಲ್ಲಿ ವ್ಯಾಧನಾಗಿ ಹುಟ್ಟಿದ. ಆ ವೇಶ್ಯೆಯು ಮುಂದಿನ ಜನ್ಮದಲ್ಲಿ 'ಭಿಲ್ಲಿನೀ' ರೂಪ ತಳೆದು ಅವನ ಪತ್ನಿಯಾದಳು.

ಒಂದು ದಿನ ಈ ವ್ಯಾಧನು ಪಂಪಾತೀರದಲ್ಲಿ 'ಶಂಖ' ಎಂಬ ಹೆಸರಿನ ಬ್ರಾಹ್ಮಣನನ್ನು ಅಡ್ಡಗಟ್ಟಿ ಅವನ ಸರ್ವಸ್ವವನ್ನೂ ಲೂಟಿ ಮಾಡಿದನು. ಆದರೆ ಆ ಬ್ರಾಹ್ಮಣನು ಕಲ್ಲು-ಮಣ್ಣಿನ ಕಾದ ನೆಲದಲ್ಲಿ ನಡೆಯುತ್ತಿದ್ದುದನ್ನು ಕಂಡು, ಅವನಲ್ಲಿ ದಯೆಮೂಡಿ ಅವನ ಪಾದರಕ್ಷೆಯನ್ನು ಹಿಂದಕ್ಕೆ ಕೊಟ್ಟನು. ಆ ಬ್ರಾಹ್ಮಣನು ಹೇಳಿದ : ಹಿಂದಿನ ಜನ್ಮದಲ್ಲಿ ಬ್ರಾಹ್ಮಣನಿಗೆ ಭೋಜನದಿಂದ ಸತ್ಕರಿಸಿದ ಫಲವಾಗಿ ಈ ಒಳ್ಳೆ ಬುದ್ಧಿ ಬಂದಿತು. ಇದಾದ ಮೇಲೆ ಬ್ರಾಹ್ಮಣನು ಭವಿಷ್ಯದ ಬಗ್ಗೆ ನುಡಿದನು, "ಕೃಣುವೆಂಬ ಹೆಸರಿನ ಮುನಿಯು ಘೋರ ತಪಶ್ಚರಣೆ ಮಾಡುವರು. ಅವರ ನೇತ್ರಗಳಿಂದ ವೀರ್ಯ ಹರಿದು ಬರುವುದು. ಅದನ್ನು ಒಂದು ಹೆಣ್ಣು ಹಾವು ಕುಡಿದು ಗರ್ಭವತಿಯಾಗುವುದು. ಆ ಸರ್ಪಿಣಿಯಲ್ಲಿ ನಿನ್ನ ಜನ್ಮವಾಗುವುದು. ಕಿರಾತವಂಶದವರು ನಿನ್ನ ರಕ್ಷಣೆ ಪಾಲನೆ ಮಾಡುವರು. ನೀನೂ ಸಹ ಕಿರಾತನೇ ಆಗುವೆ. ನೀನು ಈ ದಿನ ನನ್ನ ಪಾದರಕ್ಷೆಯನ್ನು ಹಿಂದಕ್ಕೆ ಕೊಟ್ಟಿದ್ದರಿಂದ, ನಿನಗೆ ಸಪ್ತರ್ಷಿಗಳ ಭೇಟಿಯಾಗುವುದು. ಅವರ ಅನುಗ್ರಹದಿಂದ ನೀನು 'ವಾಲ್ಮೀಕಿ'ಯಾಗಿ ರಾಮಾಯಣವನ್ನು ರಚಿಸುವೆ." ಅದರಂತೆಯೇ ಎಲ್ಲವೂ ಆಯಿತು. ಕೊನೆಯದಾಗಿ ಶಂಭುವು ಬ್ರಹ್ಮದೇವರಿಗೆ ರಾಮಚರಿತೆಯನ್ನು ಹೇಳಿದನು. ನಾರದರು ಅದನ್ನು ಬ್ರಹ್ಮನಿಂದ ಕೇಳಿ ಪಡೆದರು. ನಂತರ ಅವರಿಂದ ವಾಲ್ಮೀಕಿಗಳು ಕೇಳಿ ತಿಳಿದರು. ಆಗ ಕ್ರೌಂಚವಧೆಯ ಕಾಲದಲ್ಲಿ 'ಶ್ಲೋಕ'ದ ಉತ್ಪತ್ತಿಯಾದ ಮೇಲೆ ವಾಲ್ಮೀಕಿಗಳು 'ಶತಕೋಟಿ ವಿಸ್ತರಂ' ಆದ ರಾಮಾಯಣವನ್ನು ರಚಿಸಿದರು.

ಕೃತ್ತಿವಾಸೀಯ ರಾಮಾಯಣದಲ್ಲಿ ಮೇಲಿನ ಅಧ್ಯಾತ್ಮ ರಾಮಾಯಣದ ಕಥೆ ಸ್ವಲ್ಪ ಬದಲಾಗಿದೆ. ವ್ಯಾಧನ ಹೆಸರು 'ರತ್ನಾಕರ' ಎಂದಾಗಿದೆ ಮತ್ತು ಅವನು ಚ್ಯವನನ ಪುತ್ರನಾಗುತ್ತಾನೆ. ಸಪ್ತರ್ಷಿಗಳ ಬದಲಿಗೆ ಬ್ರಹ್ಮ ಮತ್ತು ನಾರದರ ಹೆಸರುಗಳಿವೆ. ವೈರಾಗ್ಯ ಪ್ರಾಪ್ತಿಯಾದ ಮೇಲೆ, ಅವನು ಬ್ರಹ್ಮನ ಮಾತಿನ ಮೇಲೆ ನದಿಗೆ ಸ್ನಾನಕ್ಕಾಗಿ ಹೋಗುತ್ತಾನೆ. ನದಿಯ ಮೇಲೆ ಅವನ ದೃಷ್ಟಿ ಬೀಳುತ್ತಿದ್ದಂತೆಯೇ ನದಿ ಒಣಗಿ ಹೋಗುತ್ತದೆ. ಆಗ ಬ್ರಹ್ಮನು ರತ್ನಾಕರನಿಗೆ ರಾಮನಾಮ ಜಪ ಮಾಡುವಂತೆ ನಿರ್ದೇಶಿಸುತ್ತಾನೆ. ಅವನ ಪಾಪಿಯಾದ ಮುಖ ರಾಮ ಎಂದು ಹೇಳಲು ಸಾಧ್ಯವಾಗಲಿಲ್ಲ. ಇದರಿಂದ ರತ್ನಾಕರನಿಗೆ 'ಮ-ರಾ' ಎಂದು ಜಪಿಸಲು ತಿಳಿಸುತ್ತಾನೆ. ಆಗ ನದಿಯಲ್ಲಿ ನೀರು ಹರಿಯಲಾರಂಭಿಸುತ್ತದೆ.

"ತೊರವೆ ರಾಮಾಯಣ"ದ ಪ್ರಕಾರ ಭಾರದ್ವಾಜನು ಕ್ರೌಂಚವೆಂಬ ಹೆಸರಿನ ವನದಲ್ಲಿ ವಾಸಿಸುತ್ತಿದ್ದ ವ್ಯಾಧನಿಗೆ ಅನುಗ್ರಹ ಮಾಡುತ್ತಾನೆ. ನಂತರ ಆ ವ್ಯಾಧನು ಬಹು ವರ್ಷಗಳ ಕಾಲ ತಪಸ್ಸನ್ನು ಆಚರಿಸುತ್ತಿರಲು ಅವನ ನಾಲ್ಕೂ ಪಕ್ಕಗಳಲ್ಲಿ

ಹುತ್ತ ಬೆಳೆದುಬಿಡುತ್ತದೆ. ಬ್ರಹ್ಮನು ಪ್ರತ್ಯಕ್ಷನಾಗಿ ಅವನಿಗೆ ಪರಮರ್ಷಿತ್ವವನ್ನು ಅನುಗ್ರಹಿಸುತ್ತಾನೆ. ಅವನು ವಲ್ಮೀಕದಿಂದ ಹೊರಬರುತ್ತಾನೆ. ಅದರಿಂದ ಅವನಿಗೆ 'ವಾಲ್ಮೀಕಿ' ಎಂಬ ಹೆಸರಾಗುತ್ತದೆ.

ಇನ್ನೊಂದು ಕಥೆಯ ಪ್ರಕಾರ ಶಿವ ಮತ್ತು ನಾರದರಿಗೆ ವ್ಯಾಧನ ಭೇಟಿ ಆಗುತ್ತದೆ. ಅವರು ಅವನಿಗೆ ತಪಸ್ಸು ಮಾಡಲು ಸೂಚಿಸುತ್ತಾರೆ. ಅದರಂತೆ ಅವನು ಹನ್ನೆರಡು ವರ್ಷಗಳ ಕಾಲ ತಪಸ್ಸು ಮಾಡುತ್ತಾನೆ ಮತ್ತು ಭಾವೀ ರಾಮಾಯಣ ರಚನೆಯಲ್ಲಿ ಸಮರ್ಥನಾಗುತ್ತಾನೆ. ಇನ್ನೊಂದು ಕಥೆಯ ಪ್ರಕಾರ ಪರಮೇಶ್ವರನು ಗುರುನಾನಕ್‌ನನ್ನು ವಾಲ್ಮೀಕಿ ಬಳಿಗೆ ಕಳುಹಿಸಿದನು. ಗುರುನಾನಕನು ವಾಲ್ಮೀಕಿಯನ್ನು 'ನಿನ್ನ ಪತ್ನಿಯನ್ನು ನಿನ್ನ ಪಾಪವನ್ನು ಹಂಚಿಕೊಳ್ಳಲು ಒಪ್ಪುವಳೇ ಕೇಳಿ ಬಾ' ಎಂದು ಕಳುಹಿಸಿದನು. ಅವಳಿಂದ ನಕಾರಾತ್ಮಕ ಉತ್ತರ ಬಂದಿತು. ಅದನ್ನು ಕೇಳಿ, ವಾಲ್ಮೀಕಿ ವ್ಯಾಧನು ತಪಶ್ಚರ್ಯೆಗಾಗಿ ಉತ್ತರ ಪ್ರದೇಶದ ಚಂಡಾಲ್‌ಗಡ್‌ನಲ್ಲಿ ತಪಸ್ಸು ಮಾಡಿದನು. ಆಗಿನಿಂದ ಅಲ್ಲಿನ ಭಂಗಿಗಳಿಗೆ ಅದು ತೀರ್ಥಕ್ಷೇತ್ರವಾಯಿತು. ಬಲರಾಮದಾಸನ ಉತ್ತರಕಾಂಡದ ಪ್ರಕಾರ ವಾಲ್ಮೀಕಿಯ ಪತ್ನಿಯ ಹೆಸರು 'ಧರ್ಮವತೀ'.

ವಾಲ್ಮೀಕಿಗೆ ಸಂಬಂಧಿಸಿದ ಮುಖ್ಯ ಆಕರಗಳನ್ನೆಲ್ಲ ವಿವರಿಸಿದ್ದೇವೆ. ಇದರಿಂದ ಗೊತ್ತಾಗುವ ಮುಖ್ಯ ವಿಷಯವೆಂದರೆ ವಾಲ್ಮೀಕಿ ಶಬ್ದದ ಉತ್ಪತ್ತಿ : 'ವಲ್ಮೀಕಿ' ಅಂದರೆ 'ಹುತ್ತದಿಂದ ಹೊರಬಂದವನು' – ಎಂಬ ಅರ್ಥವನ್ನು ಆಧರಿಸಿದ್ದು – ಆದರೆ ಮೇಲೆ ತಿಳಿಸಿರುವಂತೆ 'ವಾಲ್ಮೀಕಿ' ಪದ ವೇದಗಳಲ್ಲಿಯೂ ಮಹಾಭಾರತದಲ್ಲಿಯೂ ಬಂದಿದೆ. ಅಲ್ಲೆಲ್ಲ 'ಹುತ್ತ' ಅಂದರೆ 'ವಲ್ಮೀಕ'ದಿಂದ ಹೊರಬಂದವನು ಎಂಬ ಅರ್ಥ ಬಂದಿಲ್ಲ. ಕೇವಲ ಶಬ್ದದ ವ್ಯುತ್ಪತ್ತಿಯಿಂದ ಈ ರೀತಿಯಾದ ನಾನಾ ರೀತಿಯ ಕಥೆಗಳನ್ನು ಕಟ್ಟಲಾಗಿದ್ದು, ಆ ಮೂಲಕ್ಕೆ ಊಹೆಯೊಂದೇ ಕಾರಣ. ಈ ಕಥೆಗಳು ಏಕರೂಪವಾಗಿಲ್ಲ. ನಾನಾ ವಿಧವಾಗಿವೆ. ನಂಬಲರ್ಹವಾಗಿಲ್ಲ. ನಂಬಲರ್ಹವಾದ ಆಕರವೊಂದೇ ಒಂದು ಇದೆ; ಅದು ಉತ್ತರಕಾಂಡದಲ್ಲಿ ವಾಲ್ಮೀಕಿಗಳೇ ಪ್ರತಿಜ್ಞೆ ಮಾಡಿರುವ ಅಂಶ – ಉಳಿದೆಲ್ಲಾ ಕಥೆಗಳೂ ಕಪೋಲಕಲ್ಪಿತ. ಸತ್ಯಾಧಾರ ರಹಿತ. ವಾಲ್ಮೀಕಿಗಳು ಒಬ್ಬ ಋಷಿಗಳು, ಮಹರ್ಷಿಗಳು, ಬ್ರಹ್ಮಜ್ಞಾನಿಗಳು, ಇಕ್ಷ್ವಾಕುವಂಶಕ್ಕೆ ಚಿರಪರಿಚಿತರು. ದಶರಥ ಚಕ್ರವರ್ತಿಗೆ ಆತ್ಮೀಯರು – ಇಷ್ಟು ಸತ್ಯ. ಪಂಜಾಬಿನ ಹಿಂದೂ ಭಂಗಿಗಳು ತಾವು ವಾಲ್ಮೀಕಿ ಜಾತಿಗೆ ಸೇರಿದವರೆಂದು ಕರೆದುಕೊಳ್ಳುತ್ತಾರೆ. ವಾಲ್ಮೀಕಿ ಮಹರ್ಷಿಗಳ ಬಗ್ಗೆ ನಾನಾ ಪುರಾಣಗಳಲ್ಲಿ ನಾನಾ ರಾಮಾಯಣಗಳಲ್ಲಿ ಬೇರೆ

ಬೇರೆ ಕೃತಿಗಳಲ್ಲಿ ಬಂದಿರುವ ಎಲ್ಲ ವಿಷಯಗಳನ್ನೂ ಕ್ರೋಡೀಕರಿಸಲಾಗಿದೆ. ಈ ಮೇಲಿನ ಅನೇಕ ಕಥೆಗಳಲ್ಲಿ ತ್ರಿಮೂರ್ತಿಗಳಾದ ಬ್ರಹ್ಮಾ, ವಿಷ್ಣು, ಮಹೇಶ್ವರರೂ, ಇಂದ್ರ, ಬೃಹಸ್ಪತಿ ಮುಂತಾದವರೂ, ಸಪ್ತರ್ಷಿಗಳೂ ಲೆಕ್ಕಾಚಾರವಿಲ್ಲದೆ ಓಡಾಡುತ್ತಾರೆ. ಅವರ ಅನುಗ್ರಹಕ್ಕೆ ಪಾತ್ರನಾಗಿ ಕಳ್ಳನೊಬ್ಬ ತಪಸ್ಸನ್ನಾಚರಿಸಿ ದಿವ್ಯಕವಿಯಾಗುತ್ತಾನೆ. ಇದೆಲ್ಲವು ಮೇಲ್ನೋಟಕ್ಕೆ ಆಭಾಸ – ಆ ದಾರಿಚೋರನ ಹೆಸರು ಬೇರೆ ಬೇರೆಯಾಗಿದ್ದು ನಂಬಿಕೆಗೆ ಅನರ್ಹವಾಗಿದೆ. ಈ ಮಧ್ಯೆ ನಾನಕ್‌ನನ್ನು ಬೇರೆ ತಂದು ನಗೆಪಾಟಲು ಮಾಡಲಾಗಿದೆ.

□□□

೨. ಬಿ.ಎಂ. ಶ್ರೀಕಂಠಯ್ಯ : (೧೮೮೪-೧೯೪೬)

– *ಡಾ. ಕೆ.ವಿನ್. ಗಂಗಾನಾಯಕ್*

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳೆವಣಿಗೆಗೆ ಭದ್ರಬುನಾದಿ ಹಾಕಿರುವ ಗಣ್ಯಾತಿಗಣ್ಯರಲ್ಲಿ ಬಿ.ಎಂ.ಶ್ರೀ ಒಬ್ಬರು. ಇವರು ಇಂಗ್ಲಿಷ್ ಮತ್ತು ಸಂಸ್ಕೃತದ ಪ್ರಭಾವಕ್ಕೆ ಸಿಕ್ಕಿ ನಲುಗಿಹೋಗಿದ್ದ ಕನ್ನಡ ಸಾಹಿತ್ಯ ಪರಂಪರೆಗೆ ನವ ಚೈತನ್ಯ ನೀಡಿ ಅದು ಚಿಗುರಿ ಬೆಳೆಯುವಂತೆ ಮಾಡಿದ್ದಾರೆ. ಬ್ರಿಟಿಷ್ ಮತ್ತು ಯುರೋಪಿನ ಪ್ರಭಾವವನ್ನು ಸರಿಯಾಗಿ ಬಳಸಿಕೊಂಡು ಆಧುನಿಕ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿದರು. ಇದಕ್ಕೆ ತನ್ನ ಸಮಕಾಲೀನ ಸಾಹಿತ್ಯ ದಿಗ್ಗಜರನ್ನೆಲ್ಲ ಬಳಸಿಕೊಂಡು ಹೊಸತನಕ್ಕೆ ನಾಂದಿ ಹಾಡಿದ್ದಾರೆ; ಆ ಮೂಲಕ ವಿದ್ವಾಂಸರ ಪಡೆಯನ್ನೇ ಸೃಷ್ಟಿಸಿದ್ದಾರೆ. ಹೀಗೆ ಇವರು ಸೃಜನಶೀಲ ಲೇಖಕರನ್ನು ಪಂಡಿತರ ದಂಡನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಇವರೆಲ್ಲ ಶ್ರೀ ಯವರ ಕನಸನ್ನು ಸಾಕಾರಗೊಳಿಸುತ್ತಿದ್ದಾರೆ. ಇಂತಹ ಮೇರು ವ್ಯಕ್ತಿತ್ವವನ್ನುಳ್ಳ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು ೧೮೮೪ ರಂದು ತಾಯಿ ಭಾಗೀರಥಮ್ಮನವರ ತವರೂರಾದ ತುಮಕೂರು ಜಿಲ್ಲೆಯ ಸಂಪಿಗೆ ಗ್ರಾಮದಲ್ಲಿ ಜನಿಸಿದರು. ತಂದೆ ಮೈಲಾರಯ್ಯನವರು ಶ್ರೀರಂಗಪಟ್ಟಣದಲ್ಲಿ ನ್ಯಾಯವಾದಿಗಳಾಗಿದ್ದರು. ಅಕ್ಷರಾಭ್ಯಾಸ ಸಂಪಿಗೆಯಲ್ಲಾದರೂ ಶ್ರೀರಂಗಪಟ್ಟಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಪ್ರೌಢವ್ಯಾಸಂಗಕ್ಕಾಗಿ ಮೈಸೂರಿಗೆ ತೆರಳಿದರು. ಆಗಿನಕಾಲದಲ್ಲಿ ಕಷ್ಟವಾಗಿದ್ದ ಎಫ್.ಎ ಪರೀಕ್ಷೆಯಲ್ಲಿ ೧೯೦೩ರಂದು ಉತ್ತೀರ್ಣರಾದರು. ೧೯೦೬ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಸೇರಿ ಬಿ.ಎ ಪದವಿಯನ್ನು ಪಾಸುಮಾಡಿಕೊಂಡರು. ಶ್ರೀಕಂಠಯ್ಯನವರು ಮದರಾಸಿಗೆ ಹೋಗಿ ೧೯೦೭ರಲ್ಲಿ ಬಿ.ಎಲ್ ಪದವಿಯನ್ನು ತಮ್ಮದಾಗಿಸಿಕೊಳ್ಳುತ್ತಾರೆ. ೧೯೦೯ರಲ್ಲಿ ಮದರಾಸ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಎಂ.ಎ ಪದವಿಯಲ್ಲಿ ಉತ್ತೀರ್ಣರಾದರು.

ಎಂ.ಎ ಶಿಕ್ಷಣದಲ್ಲಿ ಉತ್ತೀರ್ಣರಾದ ವರ್ಷವೇ ಮೈಸೂರು ಸರ್ಕಾರ ಶ್ರೀಕಂಠಯ್ಯ ಅವರನ್ನು ಮಹಾರಾಜ ಕಾಲೇಜಿನಲ್ಲಿ ಪ್ರೊಬೇಷನರಿ ಅಧ್ಯಾಪಕರೆಂದು ನೇಮಕ ಮಾಡಿತು. ಹೀಗೆ ಚಿಕ್ಕ ವಯಸ್ಸಿನಲ್ಲಿಯೇ ಅಧ್ಯಾಪಕ ವೃತ್ತಿಯನ್ನು ಸ್ವೀಕರಿಸಿದುದಲ್ಲದೆ ಉತ್ತಮ ದರ್ಜೆಯ ಉಪನ್ಯಾಸಕರೂ, ಶ್ರೇಷ್ಠ ಸಾಹಿತ್ಯ ಬೋಧಕರೆಂದು ಹೆಸರುವಾಸಿಯಾದರು. ಇಂಗ್ಲಿಷ್ ಅಧ್ಯಾಪಕರಾದರೂ ಕನ್ನಡದ ಏಳ್ಗೆಗಾಗಿ, ಕನ್ನಡದ ಪುನರುಜ್ಜೀವನಕ್ಕಾಗಿ ಹಗಲಿರುಳು ದುಡಿದಿರುವುದನ್ನು ಕಾಣುತ್ತೇವೆ. ಉಪನ್ಯಾಸಕರಾಗಿ ನೇಮಕಗೊಂಡ ಮೇಲೆ ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಬಡ್ತಿಪಡೆದು ಶಿಷ್ಯ ವರ್ಗದಲ್ಲಿ ನುಡಿದು, ದುಡಿದು ಮತ್ತು ನುಡಿದಂತೆಯೆ ಕಲಿಸಿದ ಗುರುಗಳೆನಿಸಿ ಅಚ್ಚು ಮೆಚ್ಚಿನವರಾದರು. ಪಾಶ್ಚಾತ್ಯ ಅಥವಾ ಪಾಶ್ಚಾತ್ಯ ವಿಶ್ವವಿದ್ಯಾಲಯಗಳಿಂದ ಪದವಿ ಪಡೆದು ಬಂದ ಯಾವ ಅಧ್ಯಾಪಕರಿಗಿಂತಲೂ ನಾನೇನು ಕಡಿಮೆಯಲ್ಲ ಎಂಬುದನ್ನು ಈ ಮೂಲಕ ಸಾಬೀತು ಪಡಿಸಿದ್ದಾರೆ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಪೂರಕವಾಗಬಲ್ಲ ಕೆಲಸವನ್ನು ಮಾಡಬಹುದೆಂಬ ಮುಂದಾಲೋಚನೆಯಿಂದ ೧೯೨೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಹುದ್ದೆಯನ್ನು ಒಪ್ಪಿಕೊಂಡು ೧೯೩೦ರ ವರೆಗೆ ಆ ಹುದ್ದೆಯಲ್ಲಿದ್ದು ಅದನ್ನು ಯಶಸ್ವಿಯಾಗಿ ನಿಭಾಯಿಸಿದರು. ಹೀಗೆ ನೇಮಕಗೊಂಡ ಹೊಸದರಲ್ಲೇ ಕನ್ನಡ ಎಂ.ಎ ಪದವಿಯನ್ನು ಪ್ರಾರಂಭಿಸಿದ್ದುದರ ಜೊತೆಗೆ ಇಲಾಖೆಯ ಮುಖ್ಯಸ್ಥರ ಹುದ್ದೆಯನ್ನು ರಿಜಿಸ್ಟ್ರಾರ್ ಕೆಲಸದ ಜೊತೆಗೆ ಒಪ್ಪಿಕೊಂಡು ನಿಭಾಯಿಸಿದರು. ಹೆಂಡತಿ ತೀರಿದ ಮರುದಿನವೂ, ಕೈಮೂಳೆಗೆ ಪ್ಲಾಸ್ಟರ್ ಹಾಕಿದಾಗಲೂ ತಮ್ಮ ಪಾಠವನ್ನು ಬಿಡಲಿಲ್ಲ. ಹೀಗಿತ್ತು ಅವರ ಅಧ್ಯಾಪಕತನದ ವೈಖರಿ. ಶ್ರೀಯುತರು ೧೯೩೮ರಿಂದ ೧೯೪೨ರ ವರೆಗೆ ಕನ್ನಡ ಸಾಹಿತ್ಯಪರಿಷತ್ತಿನ ಉಪಾಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ೧೯೪೪ರಲ್ಲಿ ಧಾರವಾಡದ ಕಲಾ ಕಾಲೇಜಿನ ಪ್ರಾಂಶುಪಾಲರಾಗಿ ಅವರ ಅಕಾಲಿಕ ಮರಣದವರೆಗೆ ಆ ಹುದ್ದೆಯಲ್ಲಿದ್ದರು. ಉಪನ್ಯಾಸಕರಾಗಿದ್ದಾಗಲೇ ಶ್ರೀಯವರು ಇಂಗ್ಲಿಷ್ ಪದ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಅವುಗಳಲ್ಲಿದ್ದ ಭಾವ ವೈವಿಧ್ಯವನ್ನು ಭಾಷೆಯ ಬೆಡಗನ್ನೂ ದೇಶೀಯ ಭಾಷೆಯಲ್ಲಿ ಕನ್ನಡಿಗರಿಗೆ ಕೊಡಬೇಕೆಂಬ ಯೋಜನೆ ಆಗಲೆ ರೂಪುಗೊಳ್ಳುತ್ತಿದ್ದುದನ್ನು ಅವರ ಶಿಷ್ಯವರ್ಗ ಹೇಳಿಕೊಂಡಿದೆ. ೧೯ನೇ ಶತಮಾನದ ಕೊನೆಯಲ್ಲಿ ಇಂಗ್ಲಿಷಿನಿಂದ ನಾಟಕಗಳು ಹಾಗೂ ಗದ್ಯ ಕೃತಿಗಳು ಕನ್ನಡದಲ್ಲಿ ಅನುವಾದವಾಗಿ ಬರತೊಡಗಿದವು. ಆದರೆ ಕಾವ್ಯದ ಅನುವಾದ ಬಂದಂತೆ ತೋರುವುದಿಲ್ಲ. ಎಸ್.ಜಿ. ನರಸಿಂಹಾಚಾರ್, ಹಟ್ಟಿಯಂಗಡಿ ನಾರಾಯಣರಾಯರು, ಪಂಜೆಮಂಗೇಶರಾಯರು, ಗೋವಿಂದಪ್ಪ, ಮೊದಲಾದವರು ಈ ದಿಸೆಯಲ್ಲಿ

ಕೆಲಸಮಾಡುತ್ತಿದ್ದುದನ್ನು ಗಮನಿಸುತ್ತೇವೆ. ಈ ಹಿನ್ನೆಲೆಯಲ್ಲಿ ಬಿ.ಎಂ.ಶ್ರೀಯವರು ಕೂಡ ಅನುವಾದ ಕ್ಷೇತ್ರವನ್ನು ಪ್ರವೇಶಿಸಿ ಯಶಸ್ವಿಯಾಗಿದ್ದಾರೆ. ಗ್ರೀಕ್ ರುದ್ರ ನಾಟಕಗಳನ್ನು, ಷೇಕ್ಸ್‌ಪಿಯರನ ನಾಟಕಗಳನ್ನೂ, ಪ್ಲೇಟೋವಿನ ಸಂವಾದಗಳನ್ನೂ, ಕಾರ್ಲೈಲನ ಧೀರೋಪದೇಶಗಳನ್ನೂ, ವರ್ಡ್ಸ್‌ವರ್ತ್, ಬ್ರೌನಿಂಗ್, ಟೆನಿಸನ್, ಕೋಲರಿಜ್, ಬೈರನ್, ಥಾಮಸ್‌ನ್ಯಾಸ್ ಮುಂತಾದ ಪ್ರಸಿದ್ಧ ಕವಿಗಳ ಕವನಗಳನ್ನು ಕನ್ನಡಕ್ಕೆ ತರಬೇಕೆಂದು ವಿದ್ಯಾರ್ಥಿ ದಿಸೆಯಲ್ಲೆ ಅಂದುಕೊಂಡಿದ್ದರು. ಆದರೆ ಇಂತಹ ಅವರ ಬಯಕೆ ಸಂಪೂರ್ಣವಾಗಿ ಈಡೇರಲಿಲ್ಲ. ಒಟ್ಟಿನಲ್ಲಿ ಶ್ರೀಯವರು ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡದಲ್ಲಿ ಪ್ರಬುದ್ಧರಾದಂತೆ 'ಇಂಗ್ಲಿಷ್ ಮತ್ತು ಗ್ರೀಕ್ ಭಾಷೆಯಲ್ಲೂ ಸಿದ್ಧಿಹೊಂದಿದ್ದರು.

ಬಿ.ಎಂ. ಶ್ರೀಕಂಠಯ್ಯನವರು

೧. ಇಂಗ್ಲಿಷ್ ಗೀತಗಳು – ಪ್ರಸಿದ್ಧ ಆಂಗ್ಲ ಕವಿಗಳ ಕವಿತೆಗಳ ಅನುವಾದ ಸಂಗ್ರಹ

೨. ಗದಾಯುದ್ಧ ನಾಟಕಂ – ರನ್ನನ ಗದಾಯುದ್ಧ ಕೃತಿಯ ರೂಪಾಂತರ

೩. ಅಶ್ವತ್ಥಾಮನ್ – ಸೋಪೊಕ್ಲೀಸನ ಏಜಾಕ್ಸ್ ನಾಟಕದ ರೂಪಾಂತರ

೪. ಪಾರಸಿಕರು – ಈಸ್ಕಿಲಸ್ಸನ ಪರ್ಸೆ ನಾಟಕದ ಅನುವಾದ

೫. ಇಸ್ಲಾಂ ಸಂಸ್ಕೃತಿ –ಮೂಲ ದೊರಕಿಲ್ಲ

– ಇವುಗಳ ಅನುವಾದ, ರೂಪಾಂತರಗೊಳಿಸಿದ್ದಾರೆ.

ಹೊಸದನ್ನು ಹೇಗೆ, ಯಾವ ಸ್ವರೂಪದಲ್ಲಿ ಕಟ್ಟಿಕೊಡಬೇಕೆಂಬ ಹುಮ್ಮಸ್ಸಿನಲ್ಲಿದ್ದ ಶ್ರೀಯವರು ಕನ್ನಡದಲ್ಲಿ ಹೊಸ ಕಾವ್ಯ ಸಂಪ್ರದಾಯಕ್ಕೆ ಭದ್ರ ಬುನಾದಿಯನ್ನು ಹಾಕಿದ್ದಾರೆ. ಇವರ ಇಂಗ್ಲಿಷ್ ಗೀತಗಳು ಹೊಸ ವಸ್ತು, ಹೊಸ ಛಂದೋರೂಪ ಮತ್ತು ಹೊಸ ಭಾಷಾರೂಪಗಳನ್ನು ಹೊಂದಿದೆ. ಇದರಲ್ಲಿ ಬೆಂಗಳೂರು ಮತ್ತು ಮೈಸೂರಿನ ನಾಗರಿಕರು ಆಡುತ್ತಿದ್ದ ಶಿಷ್ಟ ಕನ್ನಡ ಬಳಕೆಯಾಗಿದೆ. ಅಲ್ಲಲ್ಲಿ ಆಡುನುಡಿಯ ಗತ್ತು ಪಸರಿಸಿರುವುದನ್ನೂ ಕಾಣಬಹುದು. ಹೀಗೆ ಹೊಸಗನ್ನಡ ಭಾಷೆ ಮತ್ತು ಛಂದೋರೂಪಗಳನ್ನು ಪ್ರಾಯೋಗಿಕವಾಗಿ ಬಳಸಿ ಯಶಸ್ವಿಯಾಗಿದೆ. ಹಾಗಾಗಿ **'ಇಂಗ್ಲಿಷ್ ಗೀತಗಳು'** ಕನ್ನಡ ನವೋದಯ ಸಾಹಿತ್ಯದ ಇತಿಹಾಸದಲ್ಲಿ ಮಾತ್ರವೇ ಅಲ್ಲದೆ ಕನ್ನಡ ಅನುವಾದ ಸಾಹಿತ್ಯದ ಇತಿಹಾಸದಲ್ಲಿಯೂ ಅಜರಾಮರವಾದುದಾಗಿದೆ. ಇವು "ಪಾಲ್ ಗ್ರೇವ್‌ನ 'Golden Treasury' ಸಂಗ್ರಹದಿಂದ ಆಯ್ದು ಕವನಗಳಾಗಿವೆ. ಹಲವಾರು ಸಂದರ್ಭಗಳಲ್ಲಿ ಮೂಲ ಕವನಗಳಿಗಿಂತ ಶ್ರೀಯವರ ಅನುವಾದಗಳೇ

ಶ್ರೇಷ್ಠವಾಗಿವೆ ಎಂದು ರಾಜೇಂದ್ರ ಚೆನ್ನಿಯವರು ಅಭಿಪ್ರಾಯಪಟ್ಟಿದ್ದಾರೆ. ಇಂಥ ಮಹತ್ವದ ಕೃತಿಯು ೧೯೨೬ ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಮೂಲಕ ಸಮಗ್ರರೂಪದಲ್ಲಿ ಹೊರಬಂದಿತು. ಆದರೆ ಇದಕ್ಕೂ ಮುಂಚೆ ಅದು ಎರಡು ಕಂತುಗಳಲ್ಲಿ ಸ್ವಲ್ಪ ಸ್ವಲ್ಪ ಪ್ರಕಟವಾಗಿತ್ತೆಂದು ವಿ. ಸೀತಾರಾಮಯ್ಯನವರು ಅಭಿಪ್ರಾಯಪಡುತ್ತಾರೆ. ಬಾಪು ಸುಬ್ಬರಾಯರು ಮೂರು ಕವನಗಳನ್ನು ತೆಗೆದುಕೊಂಡು ತಮ್ಮ 'ವಿದ್ಯಾದಾಯಿನಿ' ಪತ್ರಿಕೆಯಲ್ಲಿ ೧೯೧೯ನೆಯ ಇಸವಿಯಲ್ಲಿ ಹೊರತಂದರು. ೧೯೨೧ರಲ್ಲಿ ತಮ್ಮ 'ಗ್ರಂಥಮಾಲೆ'ಯಲ್ಲಿ ಇನ್ನೂ ಹನ್ನೆರಡು ಗೀತೆಗಳನ್ನು ಅಚ್ಚುಹಾಕಿಸಿದರು..... ಡಿ.ವಿ. ಗುಂಡಪ್ಪನವರು.... ಮತ್ತೆ ಇಪ್ಪತ್ತನಾಲ್ಕು ಕವನಗಳನ್ನು ೧೯೨೪ರಲ್ಲಿ ತಮ್ಮ 'ಕರ್ನಾಟಕ ಜನಜೀವನ ಪತ್ರಿಕೆಯಲ್ಲಿ ಮುದ್ರಿಸಿಕೊಟ್ಟರು' ಎಂದು ಬಿ.ಎಂ.ಶ್ರೀಯವರು 'ಅರಿಕೆ' ಪತ್ರಿಕೆಯಲ್ಲಿ ಹೇಳಿಕೊಂಡಿದ್ದಾರೆ.

ಶ್ರೀಯವರು ಕನ್ನಡದ ಜಾಯಮಾನಕ್ಕೆ ವಿಶೇಷ ಗಮನ ನೀಡಿ ಅನುವಾದ ಕಾರ್ಯವನ್ನು ನಡೆಸಿದ್ದಾರೆ. ಉದಾ: ಷೇಕ್ಸ್‌ಪಿಯರ್‌ನ 'under the green wood tree'ಯ ಅನುವಾದವನ್ನು ನೋಡಬಹುದು. ಶ್ರೀಯವರು ಮೂಲದ ತಿರುಳನ್ನು ಗ್ರಹಿಸಲು ಹೇಗೆ ಶಕ್ತಿಮೀರಿ ಶ್ರಮಿಸುತ್ತಾರೆ ಎಂಬುದಕ್ಕೆ ಅವರು ಆಯುವ ಪರ್ಯಾಯಗಳೇ ಸಾಕ್ಷಿಯಾಗಿವೆ. 'green-wood' ಇಲ್ಲಿ 'ಅಡವಿ ಮರ'ವಾಗಿ 'winter' ಶಬ್ದವು ಕನ್ನಡದಲ್ಲಿ ಕೊರೆವ ಚಳಿಯಾಗಿ, 'rough-weather' ಬಿರುಗಾಳಿಯಾಗಿ, 'ambition' 'ಆಸೆ ಬಲೆ'ಯಾಗಿ, 'to live in the sun' 'ಬಿಸಿಲ ಕಾಯುತ ಮಲಗು'ವುದಾಗಿ ಕನ್ನಡದಲ್ಲಿ ಪಡಿಮೂಡುತ್ತವೆ. ಬಿಡಿ ಬಿಡಿಯಾದ ಇಂತಹ ಮಾತುಗಳ ವಿಷಯದಲ್ಲಿಯೂ ಭಾವ ಬೆಸುಗೆ ಕನ್ನಡದಲ್ಲಿ ಅತ್ಯಂತ ಸಹಜವಾಗಿ ಹಾಗೂ ಅರ್ಥಪೂರ್ಣವಾಗಿ ಮೈದಳೆಯುವಂತೆ ಅವರು ಮುತುವರ್ಜಿವಹಿಸಿದ್ದಾರೆ.

ಉದಾಹರಣೆಗೆ :

"And turn his merry note
Unto the sweet birds throat

– ಎಂಬುದನ್ನು

"ಇನಿಯ ಹಕ್ಕಿಯ ಕೊರಲ
ತನ್ನ ಕೊರಲಲಿ ತಂದು ನಲಿವನಾರೈ

– ಎಂದು ಅನುವಾದಿಸಿದ್ದಾರೆ. ಅಂತೆಯೇ

"Seeking the good he eats
And pleased with what he gets"

– ಎಂಬುದು

ಉಣ್ಣುವೂಟವ ಕಂಡು
ತಣ್ಣನೆಯ ತಣಿಯೆ ತಣಿದುಂಡು ನಲಿವನಾರೈ

– ಎಂದೂ

Here shall he see
No enemy
But winter and rough wether

– ಎಂಬುದು

"ಎತ್ತ ನೋಡಿಲ್ಲೆಲ್ಲ,
ಮತ್ತೆ ಹಗೆಯೊಂದಿಲ್ಲ,
ಕೊರೆವ ಚಳಿ ಬಿರುಗಾಳಿಯಲ್ಲದಿಲ್ಲೈ"

ವರ್ಡ್ಸ್‌ವರ್ತ್ ನ 'Rain bow' ಕವನದ

"my heart leaps up when I be hold
A rainbow in the sky"

ಎಂಬ ಪಂಕ್ತಿಗಳನ್ನು ಓದಿದಾಗ ಮೂಲದಲ್ಲಿ ನಮಗೆ ದೊರೆಯುವ ಅನುಭವವೇ

ಮುಗಿಲಿನಲಿ ಮಳೆಯ ಬಿಲ್ಲು ಕಾಣುತಲೆ ನಾನು
ನೆಗೆದು ಕುಣಿದಾಡುವುದು ಹೃದಯ ತಾನು !

ಎಂದು ಅನುವಾದಗೊಂಡಿರುವ ಈ ಪಂಕ್ತಿಗಳಲ್ಲಿ ವಾಸ್ತವಿಕತೆಯ ಸೊಗಡು ಮರುಕಳಿಸುತ್ತದೆ.

Lead Kindly light ಕಾರ್ಡಿನಲ್ ನ್ಯೂಮನ್ ತಾನು ಪ್ರಯಾಣಿಸುತ್ತಿದ್ದ ಹಡಗು ನಡು ಸಮುದ್ರದಲ್ಲಿ ಚಂಡಮಾರುತಕ್ಕೆ ಸಿಕ್ಕಿದಾಗ ರಚಿಸಿದ ಕವನ Lead kindly light, amid the encircling gloom lead thou me an! ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ ಕೈಹಿಡಿದು ನಡೆಸೆನ್ನನು, "ಕಾವ್ಯಾನುಭವದಲ್ಲಿ ಚಿಂತನೆಗೆ ಅರ್ಥ ಹಾಗೂ ರೂಪ ಇವೆರಡು ಪ್ರತ್ಯೇಕವಾಗಿರದೆ ಒಟ್ಟಿಗೆ ಕ್ರಿಯಾಶೀಲವಾಗುತ್ತವೆ. ಹೀಗಿರುವಲ್ಲಿ ಕವಿಯ ಭಾವನೆಗಳನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಿಲ್ಲ. ಭಾಷಾಂತರಕಾರ ಕಾವ್ಯದ ಒಂದು ಶಬ್ದವನ್ನು

ಬದಲಾಯಿಸಲು ಹೋದರು ಅದರ ಅರ್ಥವನ್ನು ಬದಲಾಯಿಸಿದಂತಾಗುತ್ತದೆ. ಪದಕ್ಕೆ ಪ್ರತಿಯಾಗಿ ಮತ್ತೊಂದು ಪದವನ್ನು ಉಪಯೋಗಿಸಲು ಅವನಿಗೆ ಸಾಧ್ಯವಿಲ್ಲ. ಮೂಲ ಪದ್ಯದ ಭಾವನೆಗಳನ್ನು ಪ್ರತಿಬಿಂಬಿಸುವ ಶಬ್ದಗಳನ್ನು ಬದಲಾಯಿಸದೆ ಕಾವ್ಯ ಭಾಷಾಂತರ ಮಾಡಿರುವುದಕ್ಕೆ ಬಿ.ಎಂ.ಶ್ರೀ ಅವರು ಹೆಸರುವಾಸಿ".

ಇಂಗ್ಲಿಷ್ ಗೀತಗಳು ಹೊರಬಂದ ಮೇಲೆ ಕನ್ನಡ ಕಾವ್ಯಕ್ಷೇತ್ರಕ್ಕಾದ ಪ್ರಯೋಜನವನ್ನು ಕುರಿತು ... ಆಧುನಿಕ ಕನ್ನಡಕಾವ್ಯವು ಆದಿ ಪ್ರಾಸ, ಛಂದಸ್ಸಿನ ಅನಾವಶ್ಯಕ ಸೂತ್ರಗಳು ಇವುಗಳಿಂದ ಬಿಡುಗಡೆಗೊಳ್ಳಲು ಸಹಾಯ ಮಾಡಿತು. ಅತ್ಯಂತ ಕೃತ್ರಿಮವೂ, ಜೀವಸ್ಪರ್ಶವಿಲ್ಲದ್ದು ಆಗಿದ್ದ ಕಾವ್ಯ ಭಾಷೆಯನ್ನು ನಿರ್ಮಿಸಲು ಸಹಾಯವಾಯಿತು. ಕನ್ನಡ ಕಾವ್ಯಪರಂಪರೆಯ ಭಾಗವಾಗಿದ್ದರೂ ವಿಸ್ಮೃತಿಯಿಂದಾಗಿ ಕಳೆದುಹೋಗಿದ್ದ ಭಾವಗೀತೆ ಪ್ರಕಾರವನ್ನು ಮತ್ತು ಅದಕ್ಕೆ ಪೂರಕವಾದ ವೈಯಕ್ತಿಕತೆಯನ್ನು ಬಿ.ಎಂ.ಶ್ರೀ ಮುನ್ನೆಲೆಗೆ ತಂದರು.

ಹೀಗೆ ಶ್ರೀಯುವರ ಭಾಷಾಂತರದ ನಾನಾ ಮುಖಗಳು ಇಲ್ಲಿ ಅನಾವರಣಗೊಂಡಿವೆ. ಇಂಗ್ಲಿಷ್ ಕವನಗಳಲ್ಲಿನ ನಡೆಗೆ ಸಮಾನವಾಗಬಹುದಾದ್ದನ್ನು ಶ್ರೀಯವರು ಕನ್ನಡದಲ್ಲೂ ಗುರುತಿಸಿದ್ದಾರೆ. ಕೆಲವು ಕಡೆ ಹೆಸರು, ಭಾವ... ಮುಂತಾದವು ಕನ್ನಡ ಜನಕ್ಕೆ ಹೊಂದಿಕೆಯಾಗುವಂತೆ ಮಾರ್ಪಾಡಾಗಿರುವುದನ್ನೂ ಕಾಣಬಹುದು. ಇಂಗ್ಲಿಷ್ ಗೀತಗಳಲ್ಲಿ ಬೇರೆ ಯಾವುದರ ಬೆರಕೆಯಿಲ್ಲದೆ ಹೊಸಗನ್ನಡ ಬಳಕೆಯಾಗಿದೆ. ಇಲ್ಲಿ ಬಳಕೆಯಾಗಿರುವ ಹಳಗನ್ನಡ ಇಂಪಿನಲ್ಲಾಗಲಿ, ಬಿಗಿಯಲ್ಲಾಗಲಿ ಕಡಿಮೆಯಿಲ್ಲ. ಒಟ್ಟಿನಲ್ಲಿ ಹೊಸಭಾವ, ಹೊಸವಸ್ತು, ಹೊಸಭಾಷೆ, ರೀತಿ ಹಾಗೂ ಹೊಸ ಛಂದೋರೂಪಗಳನ್ನುಳ್ಳ, ಹೊಸತನವನ್ನು ಪರಿಪೂರ್ಣವಾಗಿ ಮೈಗೂಡಿಸಿಕೊಂಡಿರುವ ಕೃತಿಯಾಗಿ ಇಂಗ್ಲಿಷ್ ಗೀತಗಳು ಹೊರಹೊಮ್ಮಿದೆ. ಇಲ್ಲಿ ಅನುವಾದದ ಮೂಲಕ "ಅವಳ ತೊಡಿಗೆ ಇವಳಿಗಿಟ್ಟು" ಕನ್ನಡದಲ್ಲಿ ಮನೆ ತುಂಬಿಸಿಕೊಂಡಿದ್ದಾರೆ.

ಅಶ್ವತ್ಥಾಮನ್ : ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕನ್ನಡಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ಇಂಗ್ಲಿಷ್ ವಶಪಡಿಸಿಕೊಂಡಿತ್ತು. ಹೀಗೆ ತನ್ನ ಸ್ಥಾನವನ್ನು ಕಳೆದುಕೊಂಡು ಅನಾಗತವಾಗಿದ್ದ ಕನ್ನಡ ಭಾಷೆಗೆ ಮತ್ತೆ ಅದನ್ನು ಒದಗಿಸಬೇಕೆಂದು ಪಣತೊಟ್ಟ ಶ್ರೀಯವರು ಕನ್ನಡ ಸಾಹಿತ್ಯವು ಮರುಹುಟ್ಟು ಪಡೆಯಲು ಶ್ರಮಿಸಿದರು. ಇಂಗ್ಲಿಷ್ ಸಾಹಿತ್ಯದ ಆಳವಾದ ಅಧ್ಯಯನಕ್ಕೆ, ಯೂರೋಪಿಯನ್ ಸಾಹಿತ್ಯದ ಪರಿಚಯಕ್ಕೆ ಭಾಷಾಂತರವನ್ನು ಆಶ್ರಯಿಸಿದರು. ಆದರೆ ಗ್ರೀಕ್ ಸಾಹಿತ್ಯದ ಅಧ್ಯಯನಕ್ಕೆ ಶ್ರೀಯವರು ಗ್ರೀಕ್ ಭಾಷೆಯನ್ನು ಕಲಿತುಕೊಂಡು ಮೂಲದಲ್ಲಿಯೇ ಅನುವಾದವನ್ನು

ಮಾಡಿಕೊಂಡರು. ಸೋಪೋಕ್ಲೀಸನ, ಈಸ್ಕಿಲಸ್ಸರ ನಾಟಕಗಳನ್ನು ಹೊಂದಿಸಿಕೊಂಡು, ಅವುಗಳಲ್ಲಿಯ ಭಾವಸೂಕ್ಷ್ಮಗಳನ್ನು, ಮಾತಿನ ಹಿಂದಿನ ಧ್ವನಿಯನ್ನೂ ಗ್ರಹಿಸಬಲ್ಲವರಾಗಿದ್ದರು.

ಹೀಗೆ ಗ್ರೀಕ್ ಭಾಷೆಯನ್ನು ಕಲಿತು ಆ ಭಾಷೆಯಲ್ಲಿನ ನಾಟಕಗಳನ್ನು ಓದಿದ ಮೇಲೆ ಗ್ರೀಕರ ಉದಾತ್ತವಾದ ದುರಂತ ನಾಟಕ ಪರಂಪರೆ ನಮ್ಮಲ್ಲಿ ಏಕೆ ಇರಬಾರದು ಎಂದು ಚಿಂತಿಸಿದರು. ಭಾರತೀಯ ರಂಗಸ್ಥಳದ ಮೇಲೆ ಸಾವು-ನೋವಿನ ದೃಶ್ಯಗಳು ಪ್ರದರ್ಶನಗೊಳ್ಳಬಾರದೆಂದು ಅಂತಹ ಸನ್ನಿವೇಶಗಳಿರುವ ನಾಟಕಗಳ ಪ್ರದರ್ಶನವನ್ನು ನಿರ್ಬಂಧಿಸಲಾಗಿತ್ತು. ಆದರೆ ಇದನ್ನು ಒಪ್ಪದ ಶ್ರೀಯವರು ಇಂತಹ ಸಾಹಸಕ್ಕೆ ಕೈಹಾಕಿ ಯಶಸ್ವಿಯಾದರು.

ಶ್ರೀಯವರು ಬಹಳ ದಿನಗಳಿಂದಲೂ ಗ್ರೀಕ್ ಮಾದರಿಯ ದುರಂತ ನಾಟಕಗಳನ್ನು ಹೊರತರಬೇಕೆಂದು ಹಂಬಲಿಸುತ್ತಿದ್ದರು. ಗ್ರೀಕ್ ನಾಟಕದ ಪ್ರಭಾವವನ್ನು ನಮ್ಮ ವಸ್ತುವಿನ ಸಂದರ್ಭದಲ್ಲಿ ಹೇಗೆ ಸದುಪಯೋಗಪಡಿಸಿಕೊಳ್ಳಬಹುದು ಎಂಬುದಕ್ಕೆ ೧೯೨೯ರಲ್ಲಿ ಶ್ರೀಯವರು ಪ್ರಕಟಿಸಿದ **'ಅಶ್ವತ್ಥಾಮನ್'** ನಾಟಕ ಸಾಕ್ಷಿಯಾಗಿದೆ. ಇದು ಕನ್ನಡದ ಮೇರು ಕೃತಿಯಾಗಿ ಹೊರಹೊಮ್ಮಿದ್ದಲ್ಲದೆ, ಕನ್ನಡ ನಾಟಕ ಪ್ರಪಂಚದಲ್ಲೇ ಕಿರೀಟಪ್ರಾಯವಾಗಿರುವ ಶ್ರೇಷ್ಠ ದುರಂತ ನಾಟಕವಾಗಿ ಹೆಸರುಗಳಿಸಿದೆ. ಇದು ಸಮರ್ಥವಾದ ಭಾಷಾಪ್ರಯೋಗವನ್ನು ಹೊಂದಿರುವುದರ ಜೊತೆಗೆ ಇದರಲ್ಲಿ ಅಡಗಿರುವ ಕವಿತಾಶಕ್ತಿ, ದುರಂತಾನುಭವ, ರಚನಾವಿಧಾನದಿಂದಾಗಿ ಇದೊಂದು ಯಶಸ್ವಿ ನಾಟಕವಾಗಿದೆ. ಇದು ಸೋಪೋಕ್ಲೀಸನ 'ಏಜಾಕ್ಸ್' ನಾಟಕದ ರೂಪಾಂತರವಾದರೂ ಅಶ್ವತ್ಥಾಮನ್ ಶ್ರೀಯವರ ಕೈಯಲ್ಲಿ ಒಂದು ಸ್ವತಂತ್ರವಾದ ನಾಟಕವೆನ್ನುವಷ್ಟರ ಮಟ್ಟಿಗೆ ಸ್ವಯಂ ಪೂರ್ಣತೆಯನ್ನು ಸಾಧಿಸಿದೆ. ಪಾತ್ರ, ಸನ್ನಿವೇಶ, ಸ್ಥಳ ಮುಂತಾದವುಗಳಲ್ಲಿನ ಬದಲಾವಣೆಯಿಂದ ಈ ನಾಟಕ ಸ್ವಂತಿಕೆ ಪಡೆದಿರುವುದನ್ನು ಕಾಣುತ್ತೇವೆ. ಸೋಪೋಕ್ಲೀಸನ ನಾಟಕದಲ್ಲಿ ಬರುವ ಏಜಾಕ್ಸ್ ಕತೆಯ ಮಾದರಿಯನ್ನು ಶ್ರೀಯವರು ಮಹಾಭಾರತದಲ್ಲಿನ ಸೌಪ್ತಿಕ ಪರ್ವದಲ್ಲಿ ಬರುವ ಅಶ್ವತ್ಥಾಮನ ಹಿನ್ನೆಲೆಗೆ ಸರಿದೂಗಿಸಿಕೊಂಡಿದ್ದಾರೆ. ಇಂತಹ ಸನ್ನಿವೇಶದ ಅಂಶಗಳನ್ನೆತ್ತಿಕೊಂಡು ಭಾರತೀಯ ಪರಿಸರಕ್ಕನುಗುಣವಾಗಿ ಇಲ್ಲಿ ಕಥೆಯನ್ನು ಹೆಣೆಯಲಾಗಿದೆ. ಈ ಎರಡೂ ಕಥೆಗಳು ವಿಭಿನ್ನ ಭೂಗೋಳ ಪರಿಸರದವುಗಳಾದರೂ ಶ್ರೀಯವರು ಸಾಮಾನ್ಯತೆಯನ್ನು ಕಂಡುಕೊಂಡಿದ್ದಾರೆ. ಜೊತೆಗೆ ಇಲ್ಲಿ ವೈಶಮ್ಯಗಳಿದ್ದೂ ನಾಟಕ ಬೇರೆಯಾಗಿಯೇ ನಿಲ್ಲುತ್ತದೆ.

ಅಶ್ವತ್ಥಾಮನ್ ಆತುರದ ಭರದಲ್ಲಿ ನಿರಪರಾಧೀ ಉಪಪಾಂಡವರ ತಲೆಗಳನ್ನು ಕಡಿದುಹಾಕುತ್ತಾನೆ. ಏಜಾಕ್ಸ್ ನಾದರೂ ಮಂಕುಕವಿದ ಸಮಯದಲ್ಲಿ ತಾನು ನಾಯಕನನ್ನೇ ಕೊಲ್ಲುತ್ತಿದ್ದೇನೆಂಬ ಭ್ರಮೆಯಲ್ಲಿ ಮೂಕಪ್ರಾಣಿಗಳನ್ನು ಕೊಲ್ಲುತ್ತಾನೆ. ಆ ಮೂಲಕ ಒಬ್ಬೊಬ್ಬರೂ ದುರಂತ ಸಾವಿಗೀಡಾಗುತ್ತಾರೆ. ಗ್ರೀಕ್ ನಾಟಕದಲ್ಲಿ ಬರುವ ಪಾತ್ರಗಳನ್ನು ಶ್ರೀಯವರು ಈ ಕೆಳಕಂಡಂತೆ ಹೊಂದಿಸಿದ್ದಾರೆ.

ಏಜಾಕ್ಸ್	–	ಅಶ್ವತ್ಥಾಮನ್
ಟ್ಯೂಸರ್	–	ಏಕಲವ್ಯ
ಯೂರಿಸೇಕ್ಸ್	–	ರುದ್ರಶಕ್ತಿ
ಟಿಕ್‌ಮೆಸ್ಸ	–	ಭಾರ್ಗವಿ
ಮೆನೆಲೋಸ್ ಮತ್ತು ಅಗಮೆಮ್ನನ್	–	ಭೀಮ
ಒಡಿಸ್ಯೂಸ್	–	ಕೃಷ್ಣ
ಅಥೀನೆ	–	ರುದ್ರ
ಮೇಳ	–	ಬೇಡರು

ಈ ಬಗೆಯ ಪಾತ್ರಯೋಜನೆಯನ್ನು ನೋಡಿದರೆ ಇದೊಂದು ಭಾರತದ ವಾತಾವರಣಕ್ಕೆ ಸರಿಹೊಂದುವಂತಹ ನಾಟಕವಾಗಿ ಪರಿಣಮಿಸುತ್ತದೆ. ಹೀಗೆ ಅಶ್ವತ್ಥಾಮನ್ ನಾಟಕ ಸೋಪೋಕ್ಲೀಸನ ರೂಪಾಂತರವಾದರೂ ಸ್ವತಂತ್ರ ದುರಂತ ನಾಟಕವಾಗಿದೆ. ಅಶ್ವತ್ಥಾಮನ್ ನಾಟಕದಲ್ಲಿ ಹಳಗನ್ನಡ ಬಳಕೆಯಾಗಿದ್ದರೂ, ಸಂಸ್ಕೃತದ ಆಡಂಬರವಿಲ್ಲದೆ ಸುಲಭ, ಸರಳವಾದ ಲಯಬದ್ಧತೆಯಿಂದ ಓದುಗರನ್ನು ಆಕರ್ಷಿಸುತ್ತದೆ. ಪಾತ್ರಗಳ ಮೂಲಕ ಬಾಯಲ್ಲಿ ಭಾವಗೀತೆಗಳನ್ನು ಹೇಳಿಸುವುದರ ಮೂಲಕ ರುದ್ರನಾಟಕದ ಸೊಬಗನ್ನು ಶ್ರೀಯವರು ಹೆಚ್ಚಿಸಿದ್ದಾರೆ. ಇದೊಂದು ಉತ್ತಮ ರೂಪಾಂತರವಾಗಿ ಓದುಗರ ಮೆಚ್ಚುಗೆ ಗಳಿಸಿದೆ.

ಮೂಲ ನಾಟಕವು ಶ್ರೀಯುವರಲ್ಲಿ ಹೇಗೆ ಕಂಡರಣೆಗೊಂಡು ಮರುಸೃಷ್ಟಿಯಾಗುತ್ತದೆಂಬುದಕ್ಕೆ ಈ ದೃಶ್ಯಗಳು ಸಾಕ್ಷಿಯಾಗಿವೆ.

ಮೂಲ :

ಒಡಿಸ್ಯೂಸ್ : **"voice of Athena, dearest to me immortals**
I hear they call and seize it in my soul"

ಅನುವಾದ :

ಕೃಷ್ಣನ್ : "ಎನ್ನೊಡೆಯ, ಅಮರರೋಳ್ ನನಗೆ ಪರಮ ಪ್ರೇಮಿ,
ಓ ರುದ್ರ, ನಿನ್ನಾತ್ಮಮ್ ಎನ್ನುಸಿರ್.....

ಮೂಲದಷ್ಟೇ ಪರಿಣಾಮಕಾರಿಯಾಗಿರುವ ಈ ಭಾಷಾಂತರಿತ ಸಾಲುಗಳು ಶ್ರೀಯವರ ಬಹುಮುಖಪ್ರತಿಭೆಗೆ, ಅವರ ಸೃಜನಶೀಲ ವಿದ್ವತ್ತಿಗೆ ಶ್ರೇಷ್ಠ ಉದಾಹರಣೆಯಾಗಿವೆ.

ಮೂಲ :

ಒಡಿಸ್ಯೂಸ್ :

"Sometimes I recognise the foot-prints as his ; But sometimes I am bewildered and cannot read whose they are"

ಅನುವಾದ :

ಕೃಷ್ಣನ್ : " .... **ಒರ್ಮೆ ಕಾಣ್ಬುದು ಪಜ್ಜೆ, ಒರ್ಮೆ ಕಾಣದು"**

ಮೂಲ :

ಒಡಿಸ್ಯೂಸ್:

"And why was his insensate hand put Forth so fiercely?

ಅನುವಾದ :

ಕೃಷ್ಣನ್ : **"ಏಕೆ ಕೈಯಿಟ್ಟನೋ ಇಂತಪ್ಪ ಘೋರದೋಳ್"**

ಮೂಲದಲ್ಲಿರುವ ಸಾರಸರ್ವಸ್ವವನ್ನೂ ಪಡಿಮೂಡಿಸಿರುವ ಈ ಭಾಷಾಂತರ ಒಳ್ಳೆಯ ಅನುವಾದಕ್ಕೊಂದು ನಿದರ್ಶನ. ಇಲ್ಲಿ ಭಾಷೆಯ ಜಾಯಮಾನಕ್ಕನುಗುಣವಾಗಿ ಮೂಲದಲ್ಲಿರುವ ಅನಗತ್ಯ ವಿಷಯಗಳನ್ನು ಕೈಬಿಟ್ಟು ಕಥೆಯ ಮುಂದುವರಿಕೆಗೆ ಸಹಾಯಕವಾಗಬಲ್ಲ ಅಂಶಗಳನ್ನು ಮಾತ್ರ ಉಳಿಸಿಕೊಂಡು ಭಾಷಾಂತರಿಸಿರುವುದು ಶ್ರೀಯವರ ಔಚಿತ್ಯಪ್ರಜ್ಞೆಯ ದ್ಯೋತಕವಾಗಿವೆ.

ಮೂಲ :

ಅಥೀನೆ : **" 't was in your blood, as he deeded, that he was Dyeing his hand"**

ಅನುವಾದ : **"ನಿಮ್ಮನೆಲ್ಲರನ್ ಕೊಂದೆನ್ ಎಂಬುದೇ ಅವನೆಣಿಕೆ"**

ಅನುವಾದ :

ಒಡಿಸ್ಯೂಸ್: **"what cause, then, stayed his eager hand from murder ?"**

ಅನುವಾದ :

ಕೃಷ್ಣನ್ : **"ಆರ್ ತಡೆದರ್ ಆ ಕೊಲೆಯ ಕಯ್ಯನ್ ?"**

ಹೀಗೆ ಅಶ್ವತ್ಥಾಮನ್ ನಾಟಕವು ಪ್ರತಿಹಂತದಲ್ಲಿಯೂ ಏಜಾಕ್ಸ್ ನಾಟಕದ ಜಾಡಿನಲ್ಲಿಯೇ ಮುನ್ನುಗ್ಗಿ, ಮೂಲವನ್ನು ಪುನರ್ ಸೃಷ್ಟಿಸುವತ್ತಲೇ ಹೆಚ್ಚು ಗಮನಹರಿಸಿದೆ. ಮೂಲದಲ್ಲಿ ಬಂದಿರುವ ಅನಗತ್ಯ ಸಂಗತಿಗಳನ್ನು ಕೈ ಬಿಟ್ಟು ಕನ್ನಡದ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ರೂಪಾಂತರಿಸಿರುವುದು ಅಪ್ಯಾಯಮಾನವಾಗಿದೆ. ಹೀಗೆ ರೂಪಾಂತರ ವಿಧಾನದಲ್ಲಿ ಭಾಷಾಂತರ ವಹಿಸಬಹುದಾದಷ್ಟೇ ಸ್ವಾತಂತ್ರ್ಯವನ್ನು ವಹಿಸುವುದರ ಮೂಲಕ ಒಂದು ಶ್ರೇಷ್ಠ ಕೃತಿ ಕನ್ನಡದಲ್ಲಿ ನೆಲೆ ನಿಲ್ಲುವಂತೆ ಮಾಡಿದ್ದಾರೆ.

'ಗದಾಯುದ್ಧ ನಾಟಕಂ' : ರನ್ನನ ಗದಾಯುದ್ಧದಲ್ಲಿ ಒಂದು ರುದ್ರನಾಟಕ ಅಡಗಿದ್ದಂತೆ ಬಿ.ಎಂ.ಶ್ರೀಯವರಿಗೆ ಕಂಡಿತು. ಹಾಗಾಗಿ ೧೯೩೦ರಲ್ಲಿ ರನ್ನನ ಗದಾಯುದ್ಧದಲ್ಲಿದ್ದ ಅಂಶವನ್ನು ಆಧರಿಸಿ 'ಗದಾಯುದ್ಧ ನಾಟಕಂ' ಎಂದು ರೂಪಾಂತರಿಸಿದ್ದಾರೆ. ಸಾಹಸಭೀಮವಿಜಯದಲ್ಲಿನ ರೌದ್ರಾವತಾರವನ್ನು ಹೆಕ್ಕಿ ತೆಗೆದುದರ ಜೊತೆಗೆ ನಾಟಕಕ್ಕೆ ಹೊಂದಲಾರದ, ಅನಗತ್ಯವೆನಿಸಿದ ಭಾಗಗಳನ್ನು ಕೈಬಿಟ್ಟಿರುವುದನ್ನು ಕಾಣುತ್ತೇವೆ. ಈ ನಾಟಕದ ಕತೆಯ ಬೆಳವಣಿಗೆಗಾಗಿ ಮತ್ತು ಉತ್ತಮ ಸಂಭಾಷಣೆಗಾಗಿ ಇವರು ರನ್ನನಿಂದಲೇ ಮಾತುಗಳನ್ನು ಆಯ್ಕೆಮಾಡಿಕೊಂಡಿದ್ದಾರೆ. ರನ್ನ ತನ್ನ ಕಾವ್ಯದ ಮೂಲಕ ಆಶ್ರಯದಾತನನ್ನು ಹೊಗಳಬೇಕಾಗಿತ್ತು. ಹಾಗಾಗಿ ಭೀಮನ ಸಾಹಸದೋಪಾದಿಯಲ್ಲಿ ತನ್ನ ದೊರೆಯ ಸಾಹಸ ಅವನಿಗೆ ಗೋಚರಿಸುತ್ತದೆ. ಈ ಕಾವ್ಯದಲ್ಲಿ ಬರುವ ದುರ್ಯೋಧನ ಅನುಭವಿಸಿದ ನೋವು ಶ್ರೀಯವರಿಗೆ ದುರಂತ ಸನ್ನಿವೇಶವಾಗಿ ಪಡಿಮೂಡಿದೆ.

ಗದಾಯುದ್ಧ ನಾಟಕಂ ದಲ್ಲಿನ ಕ್ರಿಯೆಯು ಮೂಲ ಕಾವ್ಯದಲ್ಲಿ ಗೋಚರಿಸುವ ವಿನ್ಯಾಸವನ್ನೇ ಸಂಪೂರ್ಣವಾಗಿ ಅನುಸರಿಸಿದೆ. ಈ ರಚನೆಯಲ್ಲಿ ಗ್ರೀಕ್ ರುದ್ರನಾಟಕದಲ್ಲಿ ಅಡಗಿರುವ ಅಂಶಗಳು ಶ್ರೀಕಂಠಯ್ಯನವರಿಗೆ ಗೋಚರಿಸಿದಂತೆ ತೋರುತ್ತದೆ.

ರನ್ನನ 'ಗದಾಯುದ್ಧ' ಕೃತಿಯು ಹತ್ತು ಆಶ್ವಾಸಗಳಿಂದ ಕೂಡಿರುವ ದುರ್ಯೋಧನನ ದುರಂತ ಕಥೆಯನ್ನು ಚಿತ್ರಿಸುವ ಒಂದು ಮಾರ್ಮಿಕ ಕೃತಿಯಾಗಿದೆ.

ಇಂತಹ ದುರಂತ ಕಥೆಯನ್ನುಳ್ಳ ಕಾವ್ಯದಲ್ಲಿನ ಎಂಟನೆಯ ಹಾಗೂ ಒಂಬತ್ತನೆಯ ಆಶ್ವಾಸದಲ್ಲಿನ ಕಥೆಯನ್ನು ಆಧರಿಸಿ ಶ್ರೀಯವರ ಗದಾಯುದ್ಧ ನಾಟಕ ಸೃಷ್ಟಿಯಾಗಿದೆ. ಎಂಟನೆಯ ಆಶ್ವಾಸದಲ್ಲಿನ

ಶ್ರೀ ರಮಣಿಗೆ ನೆಲೆ ತನ್ನಯ
ಪೇರುರಮಂ ಮಾಳ್ಪೆನೆಂಬ ಬಗೆ ಮಿಗೆ ಸಮರ
ಪ್ರಾರಂಭಕೆ ಪೂಣ್ದಿರ್ಪಂ
ಕೌರವ ಕುಲವಿಲಯಕೇತು ಸಾಹಸಭೀಮಂ ॥

ಈ ಪದ್ಯದೊಂದಿಗೆ ಆರಂಭವಾಗುವ ಈ ನಾಟಕವು ಐದು ರಂಗದಿಂದ ಕೂಡಿದೆ. ವಸ್ತು ರನ್ನನ ಕಾವ್ಯದ್ದಾದರೂ ಗ್ರೀಕ್ ರುದ್ರನಾಟಕಗಳಲ್ಲಿ ಅಡಗಿರುವ ದುರಂತ ಚಿತ್ರಣ ದುರ್ಯೋಧನನ ಪಾತ್ರದಲ್ಲೂ ಅಡಗಿರುವಂತೆ ಶ್ರೀಯವರಿಗೆ ಭಾಸವಾಗಿದೆ. ಆದ್ದರಿಂದಲೇ ಗ್ರೀಕ್ ರುದ್ರನಾಟಕಗಳಲ್ಲಿ ಕಂಡುಬರುವ ಪಾತ್ರಗಳಲ್ಲಿನ ರುದ್ರರಮಣೀಯತೆಯು ಭೀಮ, ದುರ್ಯೋಧನರಲ್ಲಿದ್ದಂತೆ ಇವರಿಗೆ ಗೋಚರಿಸುತ್ತದೆ. ಕಾಲ, ಪ್ರದೇಶ, ಸನ್ನಿವೇಶ, ಹಿನ್ನೆಲೆ ಬೇರೆ ಬೇರೆಯಾದರೂ ಸ್ವಭಾವ ಒಂದೇ ತೆರನಾದುದಲ್ಲವೆ? ಎಂಬುದು ಇವರಿಗೆ ಪ್ರಶ್ನೆಯಾಗಿದೆ. ಹಾಗಾಗಿ ಗ್ರೀಕ್ ನಾಟಕಗಳಲ್ಲಿನ ಮುಖ್ಯ ಪಾತ್ರಗಳ ಸ್ವಭಾವ, ಸನ್ನಿವೇಶ ಗದಾಯುದ್ಧ ನಾಟಕದಲ್ಲಿನ ಪಾತ್ರಗಳಲ್ಲಿ ಸಮೀಕರಣಗೊಂಡಿದೆ.

ದುರ್ಯೋಧನ ಕ್ರೂರಿ, ಪಶುಸದೃಶನಂತೆ ಚಿತ್ರಣಗೊಂಡಿದ್ದರೂ ಕರ್ಣನ ವಿಷಯ ಬಂದಾಗ ಮೃದು ಸ್ವಭಾವಕ್ಕೊಳಗಾಗಿ ಗಳಗಳನೆ ಅತ್ತುಬಿಡುತ್ತಿದ್ದುದರ ಚಿತ್ರವೂ ಇಲ್ಲಿದೆ. ಹೀಗೆ ಅವನಲ್ಲಿದ್ದ ದೊಡ್ಡತನ ಅವನನ್ನು ಹಿರಿಮೆಯ ಸ್ಥಾನಕ್ಕೆ ತಂದಿರುವುದನ್ನು ಕಾಣುತ್ತೇವೆ. ಇದು ಗ್ರೀಕ್ ರುದ್ರನಾಟಕಗಳ ಪ್ರೇರಣೆಯಿಂದಾದುದೆನ್ನಬಹುದು. ದುರ್ಯೋಧನನ ಬಗ್ಗೆ, ಭಾರತೀಯರು ತಪ್ಪು ಗ್ರಹಿಕೆ ಹೊಂದಿದ್ದಾರೆ. ಇವನೊಬ್ಬ ದುರಹಂಕಾರಿ, ಛಲಗಾರ, ಸ್ವಪ್ರತಿಷ್ಠೆಯನ್ನು ಬಿಟ್ಟು ಬರಲಾರದವನೆಂದು ಚಿತ್ರಣಗೊಂಡಿದ್ದಾನೆ. ಆದರೆ ಶ್ರೀಯವರಿಗೆ ಮಾತ್ರ ದುರ್ಯೋಧನ ನಾಯಕ. ಏಕೆಂದರೆ ವಿಧಿ ಮನುಷ್ಯನನ್ನು ಸೂತ್ರದ ಗೊಂಬೆಯ ಥರ ಕುಣಿಸುತ್ತಿರುತ್ತದೆ. ಯಾರಲ್ಲಿಯೂ ತನ್ನ ತನವಿಲ್ಲದಿರುವುದರಿಂದ ಹೀಗಾಗುತ್ತದೆಂಬುದು ಒಟ್ಟಾರೆ ಅಭಿಪ್ರಾಯವಾಗಿದೆ.

ಹೀಗೆ ಬಿ.ಎಂ.ಶ್ರೀಯವರ 'ಗದಾಯುದ್ಧ ನಾಟಕಂ' ರನ್ನನ ಗದಾಯುದ್ಧಂ ಕಾವ್ಯದಿಂದಲೂ, ಗ್ರೀಕ್ ರುದ್ರನಾಟಕಗಳಿಂದಲೂ ಪ್ರೇರಣೆಗೊಂಡು ಸಣ್ಣಪುಟ್ಟ ಬದಲಾವಣೆ, ಹೊಸ ಅಂಶಗಳ ಸೇರ್ಪಡೆ ಇತ್ಯಾದಿಗಳ ಮೂಲಕ ಒಂದು ಯಶಸ್ವಿ ನಾಟಕವಾಗಿ ಅವತರಣಿಕೆಯಾಗಿದೆ. ಭಾಷೆ, ಶೈಲಿಯು ಹಳಗನ್ನಡದ್ದಾದರೂ ಛಂದಸ್ಸಿನ ವಿಚಾರದಲ್ಲಿ ಪಾಶ್ಚಾತ್ಯರ ಅನುಕರಣೆ ಮೇಳೈಸಿದೆ.

3

'ಪಾರಸಿಕರು' ಶ್ರೀಯವರ ಮತ್ತೊಂದು ಯಶಸ್ವಿ ನಾಟಕ. ಇದು ಈಸ್ಕಿಲಸ್ಸನ ಪರ್ಸೆ ನಾಟಕದ ಅನುವಾದವಾಗಿದೆ. ಒಂಬೈನೂರ ಮೂವತ್ತ ನಾಲ್ಕು ಸಾಲುಗಳಲ್ಲಿ ರಚಿತವಾಗಿರುವ ಇದು ಆಧುನಿಕ ಕನ್ನಡದ ಹೊಸಗನ್ನಡ ಛಂದಸ್ಸಿನಲ್ಲಿ ಸೃಷ್ಟಿಯಾಗಿದೆ. ಸೆಲಾಮಿಸ್ ಯುದ್ಧದ ನಂತರದ ಕಾಲಘಟ್ಟದಲ್ಲಿ ಸೃಷ್ಟಿಯಾಗಿರುವ ಇದು ಹೊಸ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪರ್ಷಿಯಾದ ರಾಜ ಕ್ಷಯಾರ್ಷ ರಾಜ್ಯವನ್ನಾಳುತ್ತಿದ್ದುದರ ಚಿತ್ರಣವನ್ನೊಳಗೊಂಡಿದೆ. ದರ್ಯವುಷ್, ಕ್ಷಯಾರ್ಷ, ಹುತೌಶ, ದೂತ ಮತ್ತು ಮೇಳದವರು ಈ ನಾಟಕದಲ್ಲಿನ ಪಾತ್ರಧಾರಿಗಳಾಗಿದ್ದಾರೆ.

ಹೀಗೆ ಬಿ.ಎಂ.ಶ್ರೀಯವರು ಕಾವ್ಯ, ನಾಟಕ ಹಾಗೂ ಗದ್ಯಪ್ರಕಾರಗಳ ಅನುವಾದ, ಅಳವಡಿಕೆ ಮತ್ತು ರೂಪಾಂತರಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಜೊತೆಗೆ ಸೃಜನಶೀಲ ಸಾಹಿತಿಯಾಗಿಯೂ ದೊಡ್ಡ ಹೆಸರುಮಾಡಿದ್ದಾರೆ. ಇವರ ಇತರ ಕೃತಿಗಳು :

೧. ಹೊಂಗನಸುಗಳು – ೧೯೪೫
೨. ಕನ್ನಡ ಸಾಹಿತ್ಯ ಚರಿತ್ರೆ – ೧೯[illegible]
೩. ಕನ್ನಡ ಛಂದಸ್ಸಿನ ಚರಿತ್ರೆ – ೧೯೩೬
೪. ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ – ೧೯೪೮
೫. ಕನ್ನಡ ಕೈಪಿಡಿ– ಕನ್ನಡ ಭಾಷೆಯ ವಿಚಾರಗಳು – ೧೯೧೩
೬. A Hand Book of Rhotoric – 1919
೭. The Improvement of Kanarese – 1915

ಕನ್ನಡ ನಾಡುನುಡಿಗಾಗಿ ಅವಿರತ ಶ್ರಮಿಸಿದ ಬಿ.ಎಂ.ಶ್ರೀಯವರು ೧೯೨೮ರಲ್ಲಿ ನಡೆದ ೧೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೩೮ರಲ್ಲಿ ಮೈಸೂರು ಮಹಾರಾಜರು ಇವರಿಗೆ 'ರಾಜಾಸೇವಾಸಕ್ತ' ಎಂಬ ಬಿರುದು ನೀಡಿ ಗೌರವ ಸಮರ್ಪಣೆ ಮಾಡಿದ್ದಾರೆ. 'ಸಂಭಾವನೆ' ಎಂಬ ಅಭಿನಂದನಾಗ್ರಂಥ ಹಾಗೂ ಶ್ರೀಸಾಹಿತ್ಯ ಎಂಬ ನೂರರ ನೆನಪಿನ ಗ್ರಂಥಗಳೂ ಇವರ ಹೆಸರಿನಲ್ಲಿ ಹೊರಬಂದಿವೆ. ಹೀಗೆ ಕನ್ನಡದ ಪುನರುಜ್ಜೀವನಕ್ಕೆ ಹಾಗೂ ಕನ್ನಡ ಸಾಹಿತ್ಯದಲ್ಲಿ ಆಧುನಿಕತೆಯನ್ನು ತಂದ ವೀರರಾಗಿ ಇವರು ಮೆರೆದಿದ್ದಾರೆ.

□□□

೩. ಜನಪದ ಸಾಹಿತ್ಯದಲ್ಲಿ ತ್ರಿಪದಿ

– ರಮೇಶ ಡಿ

ವಿಶಿಷ್ಟವಾದಂತಹ ಸಂಸ್ಕೃತಿಯ ನೆಲೆಯಲ್ಲಿ ಬಾಳುವ ಜನಸಮೂಹ ಬದುಕನ್ನು ಕಂಡುಕೊಳ್ಳುವಲ್ಲಿ ಭಾವನೆಯ ನೆಲೆ, ಆಲೋಚನೆಯ ಅಭಿವ್ಯಕ್ತಿಗಳನ್ನು ಅನುಸರಿಸುತ್ತದೆ. ಸುತ್ತಲಿನ ಪರಿಸರದ ಪ್ರಭಾವದಿಂದ ಬದುಕನ್ನು ಕಂಡುಕೊಳ್ಳುವಂತೆ ಗುಣಧರ್ಮವನ್ನು ಪಡೆದುಕೊಂಡು ತನ್ನ ಸಂಸ್ಕೃತಿಯ ಪ್ರತೀಕವಾಗಿ ಬದುಕನ್ನು ನಡೆಸುತ್ತದೆ. ಈ ರೀತಿಯಾಗಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸಾಹಿತ್ಯವೇ ಜನಪದ ಸಾಹಿತ್ಯ.

ಜನಪದ ಸಾಹಿತ್ಯ ಜನಸಾಮಾನ್ಯರಿಂದ ಹೊರಬಂದ ಅವರ ಅಂತರಂಗದ ಅಮೂಲ್ಯ ರತ್ನ. ಮೌಖಿಕವಾಗಿ ಸಂಪ್ರದಾಯವನ್ನು ಅನುಸರಿಸಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವ ಈ ಸಾಹಿತ್ಯ, ಸರಳ ಸ್ಪಷ್ಟ ಹಾಗೂ ನೇರವಾದ ಅಭಿವ್ಯಕ್ತಿಯಿಂದ ವಿಶ್ವದ ಮೌಲಿಕ ಗುಣಗಳನ್ನು ಜನಪದರಿಂದ ಪಡೆದುಕೊಂಡಿದೆ.

ಜನಪದರು ತಮ್ಮ ಜೀವನದ ಸುಖದುಃಖಗಳು, ಕಷ್ಟ–ನಷ್ಟಗಳು ಜೀವನದ ಅನುಭವಗಳು, ಭಾವನಾತ್ಮಕ ಸಂಬಂಧಗಳು ನಿಸರ್ಗದೊಡನೆ ತಮ್ಮ ಒಡನಾಟ ಇವೆಲ್ಲವನ್ನು ಪ್ರತಿಬಿಂಬಿಸುವ ಜನಪದ ಸಾಹಿತ್ಯದೊಂದಿಗೆ ಶತಶತಮಾನಗಳಿಂದಲೂ ಮನಸ್ಸು ಬಿಚ್ಚಿ ಮಾತನಾಡಿದ್ದಾರೆ. ಆದ್ದರಿಂದಲೇ ಜನಪದರು ತಮ್ಮ ಅನುಭವದ, ಅಭಿವ್ಯಕ್ತಿಯನ್ನು ಶ್ರೀಮಂತಗೊಳಿಸಿಕೊಂಡು ಪ್ರತಿಭಾಶಾಲಿಗಳಾಗಿದ್ದಾರೆ. ಈ ರೀತಿಯಾಗಿ ಜನಪದರ ನಡುವೆ ಬಂದು ಸಾಹಿತ್ಯ ಜಾನಪದ ಸಾಹಿತ್ಯದ ಒಂದು ಭಾಗವಾಗಿದೆ.

ಜನಪದರು ತಮ್ಮ ಬದುಕನ್ನು ಜನಪದ ಸಾಹಿತ್ಯದ ಮೂಲಕ ಹೊರಚೆಲ್ಲಿದ್ದಾರೆ. ಅದು ಅಂಶ ಛಂದಸ್ಸಿನ ಛಂಧೋಬಂಧವಾದ ತ್ರಿಪದಿಯ ಮೂಲಕ ಮನಸ್ಸು ಬಿಚ್ಚಿ ಮಾತನಾಡಿದ್ದಾರೆ. ಯಾವುದೇ ಜಾತಿ, ಮತ, ಬೇಧವಿಲ್ಲದೆ, ಲಿಂಗ ತಾರತಮ್ಯವಿಲ್ಲದೆ ಮೌಖಿಕವಾಗಿ ತ್ರಿಪದಿಯ ಮೂಲಕ ಸಾಹಿತ್ಯ ರಚಿಸುತ್ತಾ

ಬಂದಿದ್ದಾರೆ. ಅದರಲ್ಲೂ ಅವರ ಕಾವ್ಯಶಕ್ತಿ ಅದರಲ್ಲಿ ಕಾವ್ಯದ ಸತ್ವ ಹಾಗೂ ಅವರ ವಿಶ್ವಾಸದ ನುಡಿ ಎದ್ದು ಕಾಣುವಂತಿದೆ.

ಅಂದರೆ ತಮ್ಮ ನಡುವೆ ಸುಲಿವಂತಹ, ಮತ್ತೊಬ್ಬರನ್ನು ಸವಾಲಿನಿಂದ ಸ್ವೀಕರಿಸುವ ಜಾಣ್ಮೆ ಅವರಲ್ಲಿದ್ದು, ಇದು ಶಿಷ್ಟಸಾಹಿತ್ಯ ಸ್ವರೂಪದ ಮುನ್ನುಡಿಯಂತೆ ಗೋಚರಿಸುತ್ತದೆ.

> ಪದಬಂದರ್ಹೇಳು ಬಾರದಿದ್ದರೆ ಶರಣಾಗು
> ಪದವುಂಟು ನನ್ನ ಎದೆಯಲ್ಲಿ । ತಾಮ್ರದ
> ತಾಯ್ತುಂಟು ನನ್ನ ತೋಳಲ್ಲಿ[೧]

ಜನಪದೀಯವಾಗಿಯೇ ಸಂಸ್ಕೃತಿಯನ್ನು ಬಿಂಬಿಸುವ ಸಾಂಪ್ರದಾಯಿಕವಾದ ಮಾತಿನಲ್ಲೇ ಸವಾಲನ್ನು ಹಾಕುವಂತಹ ಧೈರ್ಯವಂತರು ಜನಪದರು ಎಂಬುದು ಮೇಲಿನ ತ್ರಿಪದಿಯಿಂದ ಅರಿವಾಗುತ್ತದೆ.

ಈ ರೀತಿಯಾಗಿ ಮೌಖಿಕವಾಗಿದ್ದ ಸಾಹಿತ್ಯ, ಶಿಷ್ಟ ರೂಪಕ್ಕೆ ಬರಬೇಕಾದರೆ ಹಲವಾರು ಶತಮಾನಗಳೇ ಬೇಕಾಯಿತು. ಆದ್ದರಿಂದಲೇ ಜನಪದ ತ್ರಿಪದಿಯನ್ನು ದೇಶೀಯ ಛಂದೋಬಂಧ ಎಂಬುದಾಗಿ ಕರೆಯುವುದುಂಟು. ಮಾತು ಬಲ್ಲ, ಮನುಷ್ಯನೊಡನೆ ಜನ್ಮ ತಾಳಿದ ಇದರ ಸ್ವರೂಪ ಶಿಷ್ಟ ಸಾಹಿತ್ಯಕ್ಕಿಂತ ಭಿನ್ನವಾಗಿದೆ. ಏಕೆಂದರೆ ಇದು ಗದ್ಯ ಪದ್ಯಗಳೆರಡರಲ್ಲೂ ಹುಟ್ಟಿಕೊಂಡಿತು, ಇದರಲ್ಲಿ ಪದ್ಯ ಸಾಹಿತ್ಯ ತ್ರಿಪದಿಯ ರೂಪತಾಳಿ ಜನಪ್ರಿಯತೆಯನ್ನು ಪಡೆದುಕೊಂಡಿತು. ಆದ್ದರಿಂದಲೇ ತ್ರಿಪದಿಯನ್ನು "ಕನ್ನಡ ಛಂದೋಗಂಗೆಯ ಗಂಗೋತ್ರಿ, ಜನಪದ ಸಾಹಿತ್ಯದ ಜಾಹ್ನವಿ" ಎಂದೂ ವಿದ್ವಾಂಸರು ಗೌರವಿಸಿದ್ದಾರೆ.[೨]

ಜನಪದ ಸಾಹಿತ್ಯದಲ್ಲಿ ತ್ರಿಪದಿಗೆ ಒಂದು ಮಹತ್ತ್ವದ ಸ್ಥಾನವಿದೆ. ಏಕೆಂದರೆ ಜನಪದ ತ್ರಿಪದಿಗಳು ನಾಡಿನ ಅಮೂಲ್ಯ ನಿಧಿಗಳಾಗಿ ಸೊಗಸಾದ ಭಾವಗೀತೆಗಳ ಸತ್ವವನ್ನು ಪಡೆದುಕೊಂಡಿವೆ. ನೂರಾರು ಕಥನಗೀತಗಳಾಗಿವೆ. ಇನ್ನೂ ಕೆಲವು ಹಲಕೆಲವಂತೂ ಉತ್ಕೃಷ್ಟ ಕಾವ್ಯದ ಶಕ್ತಿಯನ್ನು ಹೊಂದಿವೆ. ಅಲ್ಲದೆ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಗಳನ್ನೆಲ್ಲ ಶಕ್ತಿಯುತವಾಗಿ ಪ್ರದರ್ಶಿಸುತ್ತವೆ ಹಾಗೂ ರಾಜಕೀಯ ದುರಂತವನ್ನು ನಿರೂಪಿಸುವ ಅಸಾಧಾರಣ ಗೀತೆಗಳಾಗಿ, ವೀರ ಪರಂಪರೆಯನ್ನು ನಿರೂಪಿಸುವ ಹಾಡುಗಳಾಗಿ ತ್ರಿಪದಿಗಳು ಜನಪದ ಸಾಹಿತ್ಯದಲ್ಲಿ ಮೆರೆದಾಡಿವೆ.

ಶಿವಶರಣರನ್ನು ಕುರಿತು ಹಲವಾರು ತ್ರಿಪದಿಗಳು ಕಥನಗೀತೆಗಳ ರೂಪದಲ್ಲಿ ರಸಬಳ್ಳಿಯಂತೆ ಹಬ್ಬಿಕೊಂಡಿವೆ. ಬೆಜ್ಜ ಮಹಾದೇವಿ, ಬೇಡರ ಕಣ್ಣಯ್ಯ, ಬಸವಣ್ಣ,

ಮಾಚಯ್ಯ ಮೊದಲಾದವರನ್ನು ಕುರಿತು ಗೀತೆಗಳು ಜನಪದ ಕವಿಗಳ ಪ್ರತಿಭಾ ಪೂರ್ಣವಾದ ಕವಿತ್ವಶಕ್ತಿಗೆ ಜ್ವಲಂತ ಸಾಕ್ಷಿಗಳಾಗಿ ಹೊರಹೊಮ್ಮಿವೆ.

ಇಂತಹ ತ್ರಿಪದಿಗಳು ಹೆಚ್ಚಾಗಿ ಜನಪದರ, ಜನಸಾಮಾನ್ಯರ ಸಂಬಂಧಗಳ ಪೂರಕವಾಗಿ ಬೆಳೆದು ಬಂದಿವೆ. ಅಂದರೆ ಜನಪದರು ಗರತಿಗೆ ಒಂದು ವಿಶಿಷ್ಟ ಸ್ಥಾನವನ್ನು ನೀಡಿದ್ದಾರೆ. ಗರತಿಯನ್ನು ಆಧಾರವಾಗಿಸಿಕೊಂಡು ಪೂರಕವಾಗಿ ತಂದೆ–ತಾಯಿ, ಅಣ್ಣ–ತಮ್ಮ ಅಕ್ಕ–ತಂಗಿ, ಮಗ–ಮಗಳು, ಮಗಳು–ಅಳಿಯ, ಮಗಳು–ಸೊಸೆ, ತವರು ಮನೆ, ಬಸರು–ಬಯಕೆ ತಾಯಿ ಇಲ್ಲದ ಮನೆ, ವಿರಸ–ಸರಸ ಈ ರೀತಿಯ ಗರತಿಯ ಕರುಳ ಬಳ್ಳಿಯ ಸಂಬಂಧದ ಪ್ರತೀಕವಾಗಿಯೇ ತ್ರಿಪದಿಗಳು ಜನಪದ ಸಾಹಿತ್ಯ ಹೆಚ್ಚಾಗಿ ಬೆಳವಣಿಗೆ ಕಂಡಿವೆ.

ಹೆಣ್ಣು ಮಕ್ಕಳು ಬೀಸುವಾಗ, ಲಾಲಿಹಾಡುವಾಗ, ಜೋಗುಳ ಹೇಳುವಾಗ ಹಲವಾರು ಸಾಂಪ್ರದಾಯಿಕವಾದ ಶಾಸ್ತ್ರ ಮಾಡುವಾಗ, ಸೋಭಾನೆ ಪದಗಳು, ಹಂತಿಯ ಹಾಡುಗಳು, ಸಾವಿನ ಸಂದರ್ಭದಲ್ಲಿ ಹಾಡುವ ಪದಗಳು, ನೀತಿ ನಿಯಮವನ್ನು ಸಾರುವಂತಹ ಹಾಡುಗಳು, ತ್ರಿಪದಿಯ ಸಾರವನ್ನು ಒಳಗೊಂಡು ಅಂಶಛಂದಸ್ಸಿನಲ್ಲಿ ಬೆಳವಣಿಗೆ ಹೊಂದಿರುವುದು ಒಂದು ಪ್ರಶಂಸವೇ ಸರಿ.

ಇದನ್ನು ಗಮನಿಸಿದಾಗ ಛಂದಸ್ಸು, ಭಾಷೆ, ಬದುಕು ಅನುಭವ ಎಲ್ಲವೂ ಜಾನಪದವಾದ್ದರಿಂದ ಅನಾಯಾಸವಾದ ಸಾಮರಸ್ಯ ತಲೆದೋರಿದೆ. ಆ ಜನಾಂಗದ ಬದುಕಿನ ಅನುಭವ, ಆದರ್ಶ, ಸಮಸ್ಯೆ ಇವೆಲ್ಲಾ ಅಮೂಲ್ಯ ನಿಧಿಗಳಾಗಿವೆ ಹಾಗೂ ಸಂಬಂಧಗಳ ಅನುಸಾರವಾಗಿ ಬೆಳೆದು ಬಂದಿರುವ ಜನಪದ ತ್ರಿಪದಿಗಳು ವ್ಯಕ್ತಿನಿಷ್ಠೆಯನ್ನು ಅಳವಡಿಸಿಕೊಂಡು ಸೊಗಸಾದ ಭಾವಗೀತೆಗಳ ಸತ್ವವನ್ನು ಪಡೆದುಕೊಂಡವು.

ಇವುಗಳು ಕವಿಗಳ ಕಥಾನಕಲೆ, ಕಲ್ಪನೆ, ಪ್ರತಿಮಾ ನಿರ್ಮಾಣ, ಕೌಶಲ್ಯ, ದೈವಭಕ್ತಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಗಳನ್ನೆಲ್ಲ ಶಕ್ತಿಯುತವಾಗಿ ಪ್ರದರ್ಶಿಸುತ್ತವೆ. ಆದ್ದರಿಂದ ವೈಚಾರಿಕ ನೆಲೆಯಲ್ಲಿ ಬಂದಂತಹವು ಎನಿಸುತ್ತದೆ. ಏಕೆಂದರೆ ವೈಚಾರಿಕವಾಗಿ ವೈಜ್ಞಾನಿಕವಾಗಿ ಬೆಳವಣಿಗೆಯಾಗುತ್ತಾ ಹೋದಂತೆಲ್ಲಾ ಹೊಸ ನಾಗರಿಕತೆಯ ಪ್ರಭಾವದಿಂದ ನಾಸ್ತಿಕತೆ ಬೆಳೆಯುತ್ತಾ ಹೋಗುತ್ತದೆ. ಆದರೆ ಇದೆಲ್ಲಾ ಕ್ಷಣಮಾತ್ರ ಎಂದೆನಿಸುವುದು ಸಹಜ ಸಂಗತಿ. ದೇವರ ಸಂಖ್ಯೆ ಹೆಚ್ಚುತ್ತಿರುವುದರ ಜೊತೆಗೆ ದೇವರನ್ನು ಆರಾಧಿಸುವ ವಿಧಿ–ವಿಧಾನಗಳು ಬೇರೆಯೇ ಆಗಿವೆ. ಇಂತಹ ಸಂದರ್ಭದಲ್ಲಿ ಗರತಿಯರ ಸ್ತುತಿಯ ಭಾವನೆಗಳನ್ನು ಆಧುನಿಕತೆಯ ಮನೋಭಾವದಲ್ಲಿ ಅನುಭವಿಸಲು ಸಾಧ್ಯವಾಗುವುದಿಲ್ಲವೇನೋ ಎನಿಸುತ್ತದೆ. ಆದ್ದರಿಂದ ಜನಪದ ಬದುಕೇ ವಿಶಿಷ್ಟವಾದ ಸ್ವರೂಪದ್ದು ಎಂದರೆ ತಪ್ಪಾಗಲಾರದು.

ಜನಪದರು ಬೀಸುವ ಕಲ್ಲಿನ ಮುಂದೆ ಕೂತು ಬೀಸುತ್ತಾ ದಿನಚರಿಯನ್ನು ಆರಂಭಿಸುವಾಗ.

ಬೀಸಲಾಕ ಕುಂತೇನ ಈಶ್ವರನ ನೆನದೇನ
ದೇಶವ ಮ್ಯಾಗಿನ ಪರಶಿವನ । ಗುಣಗಳ
ತಾಸಿಗೊಮ್ಮೆಮ್ಮೆ ನೆನದೇನ[೬]

ಎಂದು ಹಾಡುತ್ತಿದ್ದರು ಅಂದರೆ ಸಮಯಕ್ಕೊಮ್ಮೆ ಪರಶಿವನನ್ನು ನೆನೆಯುತ್ತೇನೆ ಎಂದು ಹೇಳುವಲ್ಲಿ ಅವರ ದೇವರಲ್ಲಿ ಭಕ್ತಿ, ನಂಬಿಕೆ, ಧರ್ಮನಿಷ್ಠೆ ತಿಳಿಯುತ್ತದೆ ಹಾಗೂ ಪ್ರಾಚೀನತೆಯನಲ್ಲಿ ಪ್ರತಿಬಿಂಬಿಸುವ ಪೌರಾಣಿಕ ಮಹಾಭಾರತ, ರಾಮಾಯಣವನ್ನು ನೆನಪಿಸುವಂತೆ ದನಿಯೆತ್ತಿ ಹಾಡುತ್ತಿದ್ದರು.

ತಾವು ನಂಬಿದಂತಹ ದೇವರನ್ನು ಮನಪೂರ್ವಕವಾಗಿ ಭಾವತುಂಬಿ ಸ್ಮರಿಸುತ್ತಾರೆ. ದೇವರ ಧ್ಯಾನ ಮಾಡಿದರೆ ಕೆಲಸ ದಣಿವಿಲ್ಲದೆ ಸರಳವಾಗಿ ಎಂಬುದು ಅವರ ಭಾವನೆ, ಆ ಹಿನ್ನೆಲೆಯಿಂದಲೇ ಜನಪದ ತ್ರಿಪದಿಗಳು ಸಂಬಂಧಗಳ ಪೂರಕವಾಗಿ ಬೆಳೆದು ಬಂದಿವೆ ಎನ್ನಬಹುದು. ತಾಯಿ ತಂದೆಯರ ಸಂಬಂಧ ಅವಿನಾಭಾವ ಗರತಿಗೆ ಅಲ್ಲದೆ ಅವರ ಬಗ್ಗೆ ಎಲ್ಲಿಲ್ಲದ ಕಾಳಜಿ ಅದಕ್ಕೆ ತನ್ನ ಹಡೆದವ್ವ ತಂಪಾಗಿರಲಿ ಎಂದೂ ಪ್ರಾರ್ಥಿಸುತ್ತಾಳೆ.

ಬ್ಯಾಸಗಿ ದಿವಸಕ ಬೇವಿನ ಮರತಂಪ
ಭೀಮರತಿಯೆಂಬ ಹೊಳಿ ತಂಪ । ಹಡದಮ್ಮ
ನೀ ತಂಪ ನನ್ನ ತವರೀಗಿ[೭]

ಪ್ರಕೃತಿಯು ತಂಪಾಗಿರುವಂತೆ, ಭೀಮಾರತಿ ಹೊಳೆಯಂತೆ, ನನ್ನ ತವರಿಗೆ ತಂಪು ತಾಯಿ, ಎಂಬುದನ್ನು ಹೇಳುತ್ತಾಳೆ. ಇದು ಅವಳ ಧನ್ಯತೆ ಪ್ರತೀಕವಾಗಿದೆ. ಅದಕ್ಕಾಗಿ ತಾಯವ್ವ ಇದ್ದಾಳೆ ಎನ್ನುವುದೇ ನನ್ನ ಜೀವನದ ಸುಖ ಎಂಬುದಾಗಿ ಹೇಳುತ್ತಾಳೆ.

ಮಗಳು ತನ್ನ ಬಯಕೆಗಳನ್ನು ತಾಯಿಯಲ್ಲಿ ಹೇಳಿಕೊಳ್ಳುವುದು ಹೆಚ್ಚು ಹಾಗೂ ಹೊತ್ತು ಗೊತ್ತು ಇಲ್ಲದೆ ತಾಯಿಯನ್ನು ನೆನೆಯುತ್ತಾಳೆ. ಅದಕ್ಕಾಗಿ ತಾಯಿಯನ್ನು ನೆರೆಯುದರಿಂದಲೇ ಮಾಡಿಸಿ ತಲೆ ಕೂಡಾ ಮಡಿಯಾಗುತ್ತದೆ ಎಂದೂ ನಂಬಿದವಳು, ತಾಯಿ ಹಾಲುಣಿಸಿದ ಬೆಳೆಸಿದವಳು ಅದಕ್ಕಾಗಿ ತನ್ನ ಹಡೆದವ್ವ 'ತವನಿಧಿ' ಜೀವನದ ಬೆಳಕು ಎಂಬುದಾಗಿ ಹೇಳುತ್ತಾಳೆ.

ಹಾಲುಂಡ ತವರ ತವನಿಧಿ ಹಡದವ್ವ
ದೂರ ಬಂದ್ಯಲ್ಲ ಕಳವೂತ । ತಾಯವ್ವ
ನನ್ನ ಜೀವದ ಬೆಳಕು ನೀನವ್ವ[೮]

ತಾಯಿ ಮಗಳಿಗೆ ಬೆನ್ನೆಲುಬಾಗಿ ನಿಂತು ಆಕೆಯ ಸುಖದುಃಖದಲ್ಲಿ ಭಾಗಿಯಾಗುತ್ತಾಳೆ. ಮಗಳ ಒಳಿತಿಗಾಗಿ ತಾನು ಶ್ರಮಿಸುವುದು ಎಂದೂ ದಿಟ್ಟನುಡಿಯನ್ನಾಡುತ್ತಾಳೆ. ಈ ರೀತಿಯಾಗಿ ಪರಸ್ಪರ ಅನ್ಯೋನ್ಯತೆಯಿಂದ ಕೂಡಿದ ಇವರ ಬದುಕಲ್ಲಿ ಒಂದು ವೇಳೆ ಅಸಹಾಯಕತೆಯಿಂದ ತಾಯಿ ತನ್ನನ್ನು ಮರೆತರೆ ನೇರವಾಗಿ ತಾಯಿಯೊಂದಿಗೆ ಹುಸಿಮುನಿಸು ಜಗಳ ಆಗುತ್ತದೆ. ಇವರ ಜಗಳವನ್ನು ಕ್ಷಣಮಾತ್ರ ಮರೆತು ಮರುಗುವುದು ತಾಯಿಯ ಭಾವನಾತ್ಮಕವಾದ ವಾತ್ಸಲ್ಯ ಭಾವಕ್ಕೆ ಪ್ರತೀಕ.

ತಾಯಿಯಂತೆ ತಂದೆಯನ್ನು ಕೂಡಾ ಪ್ರೀತಿಯಿಂದ ಕಾಣುತ್ತಾಳೆ. ತಂದೆ-ಯನ್ನು ನೆನೆದರೆ ತಂಗಳು ಬಿಸಿಯಾಗುತ್ತದೆ. ಬಳಗ ಹೆಚ್ಚಾಗುತ್ತದೆ ಎನ್ನುತ್ತಾ ತಂದೆಯ ಬೆಂಬಲದಾಸೆಯನ್ನು ಅನುಗಾಲ ಇಟ್ಟುಕೊಂಡಾಕೆ ಮಗಳು.

ತಂದೀನ ನೆನದರ ತಂಗುಳ ಬಿಸಿದಾಗೆ
ಗಂಗಾದೇವಿ ನನ್ನ ಹಡದವ್ವ । ನೆನದರ
ಮಾಸಿದ ತೆಲಿಯು ಮಡಿಯಾಗೆ[೬]

ತಂದೆ ಬರುವ ದಾರಿಯನ್ನು ಕಾಯುತ್ತಾ ಅಡಿಗೆ ಮಾಡಿಕೊಂಡು ನಿಲ್ಲುತ್ತಾಳೆ. ಆ ಸಂದರ್ಭದಲ್ಲಿ ತಂದೆಯು ಬರದೆ ಹೋದಾಗ ಅವಳಿಗಾಗು ನೋವು ಯಾತನೆ ಭಾವನಾತ್ಮಕವಾಗಿ ಮೂಡಿ ಬಂದಿದೆ.

ಇದೆಲ್ಲಾವನ್ನು ಗಮನಿಸಿದಾಗ ಯಾವುದೇ ವಸ್ತು ಒಡವೆ ಮುರಿದರೆ ಮಾಡಿಸಬಹುದು. ಸೇರಿಸಬಹುದು. ಆದರೆ ಹಡೆದಂಥ ತಾಯಿ-ತಂದೆ ನಮಗೆಲ್ಲಿ ದೊರೆತಾರು? ಎಂಬ ಭಾವನೆ ನಮ್ಮಲ್ಲಿರಬೇಕು. ಅವರಿಗೆ ನೋವಾಗದಂತೆ ನಡೆದುಕೊಳ್ಳಬೇಕು ಎಂಬ ಭಾವನೆಯನ್ನು ಜನಪದ ತ್ರಿಪದಿಗಳು ತಿಳಿಸಿಕೊಡುತ್ತವೆ.

ತಂದೆ-ತಾಯಿಯರ ಸಂಬಂಧದಂತೆ ಅಣ್ಣ-ತಮ್ಮಂದಿರ ಮೇಲು ಗರತಿಗೆ ಅದಮ್ಯವಾದ ಪ್ರೀತಿ, ಅದಕ್ಕಾಗಿ ಅವರನ್ನು ನಾನಾ ರೀತಿಯಲ್ಲಿ ಇಂದ್ರ-ಚಂದ್ರ ಅಂತೆಲ್ಲಾ ಬಣ್ಣಿಸುತ್ತಾಳೆ.

ಇಂದ್ರ ನನ್ನ ಸಂಗಣ್ಣ ಚಂದ್ರ ನನ್ನ ಶರಣಣ್ಣ
ನಂದಿಸೂರಜ ಗುರುಸಂಗಣ್ಣ । ಅಣ್ಣತಮ್ಮರು
ರಾಜಗೋಪಾಲ ನನ್ನ ಗುರುಬಸಣ್ಣ[೭]

ಅಣ್ಣ-ತಮ್ಮರನ್ನು ಕಸವಿಲ್ಲದ ಬಂಗಾರದವರು ಎಂದೂ ಹೆಮ್ಮೆಯಿಂದಾ ಹೇಳಿಕೊಂಡು ಅವರು ತನ್ನ ಊರಿಗೆ ಬರುತ್ತಾರೆಂದು ತಿಳಿದಾಗ ರುಚಿಯಾದ ಅಡುಗೆ ಮಾಡಿಕೊಂಡು ಬರುವ ದಾರಿಯನ್ನು ಕಾಯುತ್ತಾ ನಿಲ್ಲುತ್ತಾಳೆ ಹಾಗೂ

ಹಬ್ಬ ಹರಿದಿನಗಳಲ್ಲಿ ನನ್ನನ್ನು ಕರೆಯಲು ಬರುತ್ತಾರೆ ಎಂದು ಹೆಮ್ಮೆಯಿಂದ ಅಪೇಕ್ಷೆ ಪಡುತ್ತಾಳೆ.

ಅಣ್ಣ-ತಮ್ಮಂದಿರ ಮುಖವನ್ನು ನೋಡಿ ಅವರ ಅಂತರಂಗವನ್ನು ಅರ್ಥಮಾಡಿಕೊಳ್ಳಬಲ್ಲಳು ಅದಕ್ಕಾಗಿ ಅವರಿಗೆ ಎಚ್ಚರಿಸುತ್ತಾಳೆ. ಅವರು ಎಲ್ಲದರಲ್ಲಿ ಮೇಲಾಗಿ ಸಂತೋಷದಿಂದ ಇರಬೇಕು ಎಂದು ಗುಣಗಾನ ಮಾಡುತ್ತಾಳೆ ಹಾಗೂ ಹೊರಗಿನಿಂದ ಬಂದ ಅತ್ತಿಗೆಯಿಂದ ಏನೇ ವಿರಸವಾದರೂ ಅಣ್ಣತಮ್ಮಂದಿರು ಸುಖವಾಗಿರಲೆಂದು, ಅವರಿಗೆ ಒಳ್ಳೆಯದಾಗಲೆಂದು ಹರಸುತ್ತಾಳೆ.

ಅಕ್ಕತಂಗಿಯರು ಕೂಡಾ ಒಟ್ಟಾಗಿ ಒಂದೇ ಮನೆಯಲ್ಲಿ ಬಾಳಿ ಬದುಕಿದವರು. ತವರು ಮನೆಯ ಹಲವಾರು ಸಂಪ್ರದಾಯಗಳಲ್ಲಿ ಪಾಲ್ಗೊಂಡು ಸಂಭ್ರಮದಿಂದ ನಲಿದವರು. ಇದರಿಂದ ಅವರ ಸಂಬಂಧ ಶಾಶ್ವತವಾಗಿ ಕಲ್ಮಶವಿಲ್ಲದೆ ನಡೆದುಕೊಂಡು ಬಂದಿದೆ.

ಅಕ್ಕತಂಗಿಯರಿಬ್ಬರು ಪರಸ್ಪರ ಒಬ್ಬರಿಗೊಬ್ಬರು ಹರಸುತ್ತಾ ಬೆಳೆದವರು ತಂಗಿ ಅಕ್ಕನ ಮನೆಯನ್ನು ಹೊಗಳುತ್ತಾ ಅವಳ ಹೊಲದಲ್ಲಿ ಮಳೆ ಬರಲಿ, ಆಗ ಅವಳ ಬದುಕು ಹಸನಾಗುತ್ತದೆ ಎಂಬ ನಂಬಿಕೆಯಿಂದ ಹರಸುತ್ತಾಳೆ.

> **ಅಕ್ಕನ ಊರಾಗ ಮೆಕ್ಕೀಯ**
> **ಗಕ್ಕನೇ ಬಾರೋ ಮಳಿರಾಜ । ನನ್ನಕ್ಕ**
> **ಮಕ್ಕಳ ತಾಯಿ ಮಂಗ್ಯಾಳೋ[3]**

ಏಕೆಂದರೆ ಮಕ್ಕಳ ತಾಯಿಯಾಗಿದ್ದರಿಂದ ನನ್ನಕ್ಕಳ ಹೊಲದಲ್ಲಿ ಮಳೆ ಬರಲಿ ಎನ್ನುತ್ತಾಳೆ ಹೊರತು ಅಕ್ಕನ ಊರಿಗಲ್ಲ. ಅಷ್ಟೊಂದು ವ್ಯಾಮೋಹ ಅಕ್ಕನ ಮೇಲೆ. ಇವರಿಬ್ಬರ ಸಾಮರಸ್ಯ ಒಂದೇ ರೀತಿಯಾಗಿರುತ್ತದೆ. ಪರಸ್ಪರ ಹೊಗಳುವುದರಲ್ಲೂ ಕೂಡ ನಿರಂತರತೆ ಇರುತ್ತದೆ. ಕೆಲವು ಸಂದರ್ಭದಲ್ಲಿ ಜಗಳವಾಡಿದರೂ ಕ್ಷಣಮಾತ್ರ ಅದನ್ನು ಮರೆತು ಮತ್ತೊಂದು ಗಳಿಗೆಯಲ್ಲಿ ಒಟ್ಟಾಗಿ ಬದುಕುತ್ತಾರೆ. ಇಬ್ಬರು ಒಂದೇ ಮನೆಯವರು ಹಾಗೂ ಇಬ್ಬರ ನಡೆನುಡಿ ಒಂದೇ ಎಂದು ಜಗಳ ಮರೆತು ಬದುಕುತ್ತಾರೆ.

> **ಇಬ್ಬರ ನಡಿವೊಂದೆ ಇಬ್ಬರ ಮಡಿವೊಂದೆ**
> **ಇಬ್ಬರ ಶೀರಿ ಸೆರೊಂದೆ । ಈರಮ್ಮ**
> **ಇಬ್ಬರ ತವರ ಮನಿಯೊಂದೆ[4]**

ಈ ರೀತಿಯಾಗಿ ಒಂದಾಗಿ ಬದುಕುವ ದಾರಿಯನ್ನು ಕಂಡುಕೊಳ್ಳುತ್ತಾರೆ. ಅಲ್ಲದೆ ತಂಗಿಯು ಬಸಿರು ಬಯಕೆಯಲ್ಲಿ ಆಕೆಯ ಬಯಕೆಯನ್ನು

ಈಡೇರಿಸಿ ಸಂಭ್ರಮದಿಂದ ಗುಣ ಮಾಡುವ ಅಕ್ಕ ಕೂಡಾ ಹೆಚ್ಚಾಗಿ ಮಮತೆಯುಳ್ಳವಳಾಗಿರುತ್ತಾಳೆ. ಇದನ್ನು ಅನುಸರಿಸಿಕೊಂಡು ಬದುಕುವ ಪರಿಪಾಠವನ್ನು ಇಂದು ಕಲಿಯಬೇಕು ಎನಿಸುತ್ತದೆ.

ಮಗ ಮಗಳ ಸಂಬಂಧ ಇತರ ಸಂಬಂಧಗಳಂತೆ ಮೂಡಿಬಂದಿದೆ. ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಇವರದು ಕರುಳಬಳ್ಳಿಯ ಸಂಬಂಧ. ತಾಯಿ ಗಂಡುಮಗನನ್ನು ಬಂಗಾರ ಎನ್ನುವ ಮಾತ್ರಕ್ಕೆ, ಮಗಳನ್ನು ಹೊರತು ಪಡಿಸಿಯೆಂದಲ್ಲ, ಏಕೆಂದರೆ ಇಬ್ಬರು ತಾನೇಹೆತ್ತ ಮಕ್ಕಳಾಗಿರುತ್ತಾರೆ.

ಮಗ ಪಾಲಕಿಯ ಮುಂದೆ ಇರಲಿ ಎಂಬ ಬಯಕೆ ಅಷ್ಟೇ, ಮಗನ ಹೊಗಳಿಕೆಯಲ್ಲಿ ಅವಳು ಕಲ್ಪನೆಯನ್ನು ಮೀರಿ ನಡೆಯುವಳು. ಮಗನು ಮನೆಯಲ್ಲಿ ಓಡಾಡಿಕೊಂಡು ಇದ್ದರೆ ಸಾಕು. ನಿಬ್ಬಣದ ಎತ್ತು ಬೆದರುತ್ತವೆ ಎಂದು ಭಾವಿಸಿಕೊಳ್ಳುತ್ತಾಳೆ. ಮಗನನ್ನು ಆನಂದದಿಂದ ಹೊಗಳುತ್ತಾ, ಅವನ ಅಂದ ಚೆಂದವನ್ನು ಮತ್ತೊಂದಕ್ಕೆ ಹೋಲಿಸಿ ಹಾಡಿ ಹರಸುತ್ತಾಳೆ.

ಗುಬ್ಬಿನನ ಕಂದಯ್ಯ ಗೆಜ್ಜೆಸಪ್ಪುಳ ಕೇಳಿ
ನಿಬ್ಬಣದೆತ್ತು ಬೆದರ್ಯಾವು । ಬೆಟ್ಟಸೇರಿ
ಮಧ್ಯಾಹ್ನ ಮೇವ ಮರೆತಾವು[೧೦]

ಬಾಳಿಹಣ್ಣಿನ ಮಾಟ ಬಾದಾಮಿ ಎಲಿತೋಟ
ಬಾಗಿಲಾಗಾಡುವ ಮಗನಾಟ । ಶರಣನ
ತೇರಿನ ಮಾಟ ಬಲುಮಾಟ[೧೧]

ಈ ರೀತಿಯಾಗಿ ಮಗನನ್ನು ಕುರಿತು ಆಡಿ ಹೊಗಳಿದ ತಾಯಿ, ಕೆಲವು ದಿನಗಳ ಅನಂತರ ಮಗ ಬೆಳೆದು ದೊಡ್ಡವನಾದಾಗ ತಂದೆ–ತಾಯಿಯರನ್ನು ತಿರಸ್ಕರಿಸಿದಾಗ ಅವನಿಂದ ಫಲ ಸಿಗದಿದ್ದಾಗ ಮರುಗುತ್ತಾಳೆ.

ಗಂಡು ಹಡದವ್ವನ ಬಂಡಾಟ ಕೇಳಿರಿ
ಮುಂಗೈ ಮೇಲೆ ರಗಟೀಯ । ಹಾಕೊಂಡು
ಇಂಬ ಕೇಳ್ಯಾಳ ಮನಿ ಮನಿಯ[೧೨]

ವಾಸ್ತವತೆಯ ಪ್ರಜ್ಞೆಯ ಅರಿವು ಆಕೆಗೆ ಆದಂತಾಗಿ ಒಂದು ತುತ್ತಿಗಾಗಿ ಮನೆಮನೆಯನ್ನು ಬೇಡುವ ಪರಿಸ್ಥಿತಿಯು ಬರುವುದುಂಟು ಅದಕ್ಕಾಗಿ ಮರುಗುತ್ತಾಳೆ. ಆದರೆ ಮಗಳ ವಿಚಾರದಲ್ಲಿ ಹಾಗಲ್ಲ. ಅವಳು ಒಂದು ಪ್ರಾಪ್ತ ವಯಸ್ಸಿಗೆ ಬಂದಾಗ ಕೇವಲ ಮಗಳಾಗಿರದೆ ಆಪ್ತ ಸ್ನೇಹಿತಳಾಗಿ ಸುಖದುಃಖದಲ್ಲಿ ಭಾಗಿಯಾಗುತ್ತಾಳೆ. ಮಗಳ ಮಾತು ಎಂದರೆ ಎಲ್ಲಿಲ್ಲದ ನಂಬಿಕೆ ತಾಯಿಗೆ.

ಮೂಡು ಸಂಜೀರಿ ಮುತ್ತೈದಿ ಬಾಯಲಿ
ಕೇಲಿ ಬಾ ತಮ್ಮ ವಚನವ । ನನ ಮಗಳ
ಹಾಲಂತ ವಾಕ್ಯ ನುಡಿದಾಳ[೧೩]

ತನ್ನ ಅಣ್ಣ-ತಮ್ಮಂದಿರನ್ನು ಕರೆದು ಮಗಳು ಹಾಡುವ ಮಾತನ್ನು ಕೇಳಿ ಎನ್ನುವಾಗ ಅವಳ ಮನಸ್ಸಿನಲ್ಲಿ ಭಾವನಾತ್ಮಕವಾದ ಆನಂದ ಮೂಡುತ್ತದೆ. ತನ್ನ ಮಗಳು ಯಾವುದೇ ವಸ್ತುವನ್ನು ಧರಿಸಿದರೂ, ಆಭರಣವನ್ನು ಧರಿಸಿದರೂ ತಾಯಿ ಕಣ್ಣಿಗೆ ಅದು ಸುಂದರವಾಗಿಯೇ ಕಾಣುತ್ತದೆ. ಕೆಲವು ಸಂದರ್ಭದಲ್ಲಿ ಮಗಳ ಧೈರ್ಯವನ್ನು ಕಂಡು ಮೆಚ್ಚುತ್ತಾಳೆ. ಅವಳ ಗುಣವನ್ನು ಮನಸಾರೆ ಮೆಚ್ಚುತ್ತಾಳೆ.

ತನ್ನ ಮನೆಯ ಬೆಳಕು ಎಂದು ಹೇಳುತ್ತಾಳೆ. ಅಲ್ಲದೆ ತನ್ನ ಮಗಳು ಆಚಾರವಂತಿ, ಗುಣವಂತಿ, ಮಗಳು ಮಕ್ಕಳ ತಾಯಿ. ಆದರೂ ಹೆತ್ತ ತಾಯಿಗೆ ಕೂಸಾಗಿಯೇ ಕಾಣುತ್ತಾಳೆ. ಇದೆಲ್ಲವನ್ನು ಅರಿತಾಗ ಜನಪದರು ಮಗಳನ್ನು ಎಂದೂ ಅಸಮಾನ ದೃಷ್ಟಿಯಿಂದ ಕಂಡವರಲ್ಲ. ತಮ್ಮ ಮನೆಯ ಭಾಗ್ಯ ದೇವತೆ ಎಂದುಕೊಂಡವರು. ಏಕೆಂದರೆ ಕನ್ನಡಿಯಂತೆ ಹೊಳೆಯುವ, ಬಣ್ಣದ ಗೌರಿಯಂಥ ಹೊಳೆಯುವ ಮಗಳನ್ನು ಹಡೆದಿದ್ದೇನೆ ಎನ್ನುತ್ತಾರೆ.

ಪ್ರಸ್ತುತ ಸಮಾಜದಲ್ಲಿರುವ ವಾಸ್ತವತೆಯ ಕಾಳಜಿಯನ್ನು ಅರಿತು ಹೇಳುವುದಾದರೆ ಇಂದು ಹೆಣ್ಣು ಮಗುವು ಬೇಡ ಎನ್ನುವ ತೀರ್ಮಾನಕ್ಕೆ ತಾಯಂದಿರು ಬರುತ್ತಾರೆ. ಆದರೆ ಪ್ರೀತಿ, ಮಮತೆ, ವಾತ್ಸಲ್ಯವೇ ಬೇರೆಯದಾಗಿರುತ್ತದೆ. ಅದಕ್ಕೆ ಪೂರಕವಾದಂತೆ

ಹತ್ತು ಗಂಡು ಹಡೆದರು ಬಂಜೆಯೆಂಬುದು ಬಿಡಲಿಲ್ಲ
ದಟ್ಟಿಯ ಉಡುವ ಧರಣೀಯ । ಹಡೆದರ
ಮಕ್ಕಳ ತಾಯಂದ ಕರದಾರ[೧೪]

ಹೆಣ್ಣು ಮಕ್ಕಳನ್ನು ಹೆತ್ತಾಗ ಮಾತ್ರ ತನಗೆ ಮಕ್ಕಳ ತಾಯಿ ಎಂದು ಕರೆಯುತ್ತಾರೆ ಎಂಬ ನೆಮ್ಮದಿಯ ನುಡಿಯಾಡುತ್ತಾಳೆ.

ಇದರಂತೆ ಸತಿಪತಿಯರ ಸಂಬಂಧವು ಕೂಡಾ ಕುಟುಂಬದ ವಿಸ್ತಾರ ದಾಂಪತ್ಯ ಜೀವನದ ಮೂಲವಾಗಿದೆ. ಅದು ತಲೆಮಾರಿನಿಂದ ತಲೆಮಾರಿಗೆ ಬೆಳೆಯುತ್ತಾ ಹೋಗುತ್ತದೆ. ಗಂಡು-ಹೆಣ್ಣುಗಳು ತಮ್ಮ ಜೀವನದ ಅರಿಕೆಯನ್ನು ಪರಸ್ಪರ ತುಂಬಿಕೊಂಡು ಬಂದವರು. ಇವರಿಬ್ಬರ ಸಂಬಂಧ ಹೇಗೆ ಇದ್ದರೂ ಎಲ್ಲ ಬಂಧು-ಬಳಗವನ್ನು ಮರೆಸುವಂತದ್ದು.

ಸರವಾರ ನಿಮ್ಮಿಂದ ಸುರವೆಲ್ಲ ಮರೆತೇನ
ಸರವಾಗ ಗುಳದಾಳ । ನಿಮ್ಮಿಂದ
ಸರುವ ಬಳಗೆಲ್ಲ ಮರೆತೇನ ।[೧೫]

ಈ ರೀತಿಯಾಗಿ ಗಂಡಹೆಂಡತಿಯರು ಹೊಂದಾಣಿಕೆಯಿಂದ ಬದುಕಿದ್ದರೆ, ಆ ಕುಟುಂಬ ಸುಖೀ ಕುಟುಂಬ ಆಗಿರುತ್ತದೆ. ಕೆಲವು ಸಂದರ್ಭದಲ್ಲಿ ಅನ್ಯ ವಿಷಯಕ್ಕೆ ಸಂಬಂಧಿಸಿದಂತೆ ಜಗಳವಾದಾಗ ಒಬ್ಬರಾದರೂ ಸೋಲಲೇಬೇಕು. ಇಲ್ಲದಿದ್ದರೆ ಸಂಸಾರ ಮುರಿದು ಹೋಗಿ ಬದುಕು ಬೀದಿಗೆ ಬರುತ್ತದೆ. ಹೀಗಾಗುವುದು ವಾಸ್ತವತೆಯಲ್ಲಿ ಕಡಿಮೆ ಎನಿಸುತ್ತದೆ.

ಜನಪದರು ಇವೆಲ್ಲವನ್ನು ಸುಖಾಂತವಾಗಿಯೇ ಕಾಣಬಯಸುವರು, ಹೀಗಾಗಿ ಅವರು 'ಗಂಡ-ಹೆಂಡಿರ ಜಗಳ ಉಂಡು ಮಲಗುವವರೆಗೆ' – ಗಂಡ ಹೆಂಡಿರ ಮಾತು ಒಂದೇ ಹಾಸಿಗಿ ಮ್ಯಾಲ, ಗಂಡ ಹೆಂಡಿರ ಜಗಳ ಗಂಧ ತೀಡಿದಾಗ ಎಂದು ಹೇಳುತ್ತಾರೆ. ಅವರಿಬ್ಬರು ಪರಸ್ಪರ ಅನ್ಯೋನ್ಯತೆಯಿಂದ ಬದುಕುವ ಹಂಬಲದಿಂದ ಕೂಡಿರುತ್ತಾರೆ. ಅದಕ್ಕಾಗಿ ಹೆಂಡತಿ ಗಂಡನನ್ನು

ಕಾಣದೆ ಇರಲಾರೆ ಕನ್ನಡಿ ಮುಖದವರ
ಕಾಮನಿಗಿಂತ ಚಲುವರ । ಚನ್ನಿಗರ
ಕಾಣದರಗಳಿಗೆ ಇರಲಾರೆ.[೧೬]

ಇದು ಇವರಿಬ್ಬರ ಅನ್ಯೋನ್ಯತೆಯ ಸಂಬಂಧ ಸೂಚಕವಾಗಿದೆ ಎನ್ನಬಹುದು. ಈ ರೀತಿಯ ಹಲವಾರು ರಕ್ತಸಂಬಂಧಗಳ ನೆಲೆಯಲ್ಲಿ ಜನಪದ ಸಾಹಿತ್ಯದಲ್ಲಿ ತ್ರಿಪದಿಗಳು ಬೆಳೆದು ಬಂದಿದ್ದರು. ಇವುಗಳ ಹಿನ್ನೆಲೆಯಲ್ಲಿ ಮಾನವನ ಸಂಸ್ಕೃತಿಯನ್ನು ಬಿಂಬಿಸುವಂತಹ ವೈಚಾರಿಕವಾಗಿ ಪ್ರತಿಬಿಂಬಿಸುವ ಗುಣಗಳಿಗೆ ಅನುಗುಣವಾಗಿ ಅಳಿಯ, ತವರು ಮನೆಯ ಸಂಬಂಧ, ಪರಕೆ, ನೀತಿ, ಸಹನೆ, ವಿರಸ, ಸರಸ ಇವುಗಳು ಸಂಬಂಧ ಸೂಚಕ ಹಾಗೂ ಭಾವನಾತ್ಮಕ ಸೂಚಕವಾಗಿ ಮೂಡಿಬಂದಿವೆ.

ಮಗಳು ರಕ್ತಸಂಬಂಧಿಯಾದರೆ ಅಳಿಯ ದೈವದ ಸಂಕೇತವಾಗಿ ಕಾಣಿಸಿಕೊಳ್ಳುತ್ತಾನೆ ಜನಪದರ ಹೆಮ್ಮೆ. ಅವರ ನಿಷ್ಠೆ ಮಗಳ ಮೇಲಿನ ಪ್ರೀತಿಯನ್ನು ಬಿಂಬಿಸುತ್ತದೆ. ಅದಕ್ಕಾಗಿ ಅಳಿಯನನ್ನು ಹಲವರ ಪ್ರತಿಬಿಂಬವಾಗಿ ಹೋಲಿಕೆ ಮಾಡುವುದು ಜನಪದ ಸಂತೋಷದ ಪ್ರತಿಬಿಂಬ ಎನ್ನಬಹುದು. ಅದರಿಂದ ಅಳಿಯನನ್ನು ಕುರಿತು ಹೇಳುತ್ತಾರೆ.

ಮಗಳು ಎಂಥ ಚಲುವಿ ನಕ್ಕರ ತುಟಿಗೆಂಪು
ಅಳಿಯ ಎಂಥವರು ನನಗ್ಹೇಳ । ಹಂಪಿಯ
ವಿರೂಪಾಕ್ಷನಿಗಿಂತ ಚೆಲುವರು[೧೭]

ಮಗಳಿಗಿಂತ ಅಳಿಯ ಚಲುವು ಇಲ್ಲಿ ಮುಖ್ಯವೆನಿಸುತ್ತದೆ. ಅದಕ್ಕಾಗಿ ಹಂಪಿಯ ವಿರೂಪಾಕ್ಷನಿಗೆ ಹೋಲಿಸುತ್ತಾ ಹೇಳಿದ್ದಾನೆ. ಅಳಿಯನನ್ನು ಕುರಿತು ಮಗಳ ಆಳುವ ಸುಭೇದಾರ, ದಳವಾಯಿ, ದೊರೆ ಎಂದೆಲ್ಲಾ ಹೋಗಳಿ ಹೇಳಿರುವ ಅನೇಕ ತ್ರಿಪದಿಗಳು ಜನಪ್ರಿಯಗೊಂಡಿವೆ.

ನೀತಿ ಮನುಷ್ಯನ ಸಂಸ್ಕೃತಿಯ ಒಂದು ಪ್ರತೀಕ, ವ್ಯಕ್ತಿಯ ನಡೆ ನುಡಿಯು ಅದರಲ್ಲಿ ಅಡಕವಾಗಿದೆ. ಒಂದರ್ಥದಲ್ಲಿ ಒಳ್ಳೆಯದೇ ನೀತಿಯಾಗುತ್ತದೆ. ಪೂರ್ವಕಾಲದಿಂದಲೂ ನಡೆದು ಬಂದಿರುವ ಒಳ್ಳೆಯ ವಿಚಾರಗಳು ರೂಢಿ ಸಂಪ್ರದಾಯಗಳು ಕೂಡ ನೀತಿಯಲ್ಲಿ ಒಳಗೊಳ್ಳುತ್ತವೆ. ಆದ್ದರಿಂದ ಇದರ ವ್ಯಾಪ್ತಿ ದೊಡ್ಡದಾಗಿದೆ.

ಜನಪದ ಸಾಹಿತ್ಯ ನೀತಿ ಸುಂದರವಾಗಿ ಮೂಡಿಬಂದಿದೆ. ಜನಪದರಲ್ಲಿ ಗುರುಹಿರಿಯರಲ್ಲಿ ಗೌರವ, ಧರ್ಮದಲ್ಲಿ ನಂಬಿಕೆ, ದೇವರಲ್ಲಿ ಭಕ್ತಿ ಇವೆಲ್ಲವು ಇದ್ದವು. ನೀತಿಯೆಂದರೆ ನೈತಿಕ ವರ್ತನೆ ನ್ಯಾಯಧರ್ಮ ಆಚಾರ–ವಿಚಾರ ಅನ್ನುವ ಅರ್ಥದಲ್ಲಿ ಬಳಸುತ್ತದೆ.

ಬೆಳಗ್ಗೆ ಎದ್ದು ದೇವರನ್ನು ನೆನೆವುದನ್ನು ಮೊದಲು ಮಾಡಿಕೊಂಡು ಮಲಗುವವರೆಗೆ ನಾವು ಮಾಡುವ ಕಾರ್ಯದಲ್ಲಿ ನೀತಿ ಅಡಕವಾಗಿದೆ. ಇದಕ್ಕೆ ಪೂರಕವಾಗಿ ತ್ರಿಪದಿಗಳು ಮೂಡಿ ಬಂದಿವೆ.

ವಾರಿ ರುಂಬಾಲ ಸುತ್ತಿ ದಾರ್ಯಾಗ ನಿಂತಿದ್ಯ
ಹ್ವಾರ್ಯಾ ಇಲ್ಲೇನೊ ಮನಯಾಗ । ನನತಮ್ಮ
ನಾರಿಯಿಲ್ಲೇನೋ ಮನಿಯಾಗ[೧೮]

ಇಲ್ಲಿ ಹೆಣ್ಣು ಒಂದು ಮಾಯೆ ಅದರೊಡನೆ ಅದಕ್ಕೆ ಸಮಯ ವ್ಯರ್ಥ ಮಾಡಬೇಡ, ಅದು ಸರಿಯಲ್ಲವೆಂದು ತಮ್ಮನಿಗೆ ಹೇಳಿದ ನೀತಿಯಾಗಿದೆ ಹಾಗೂ ಅವನ ಹೆಂಡತಿಯ ನೆನಪನ್ನು ಅದು ಮಾಡಿಕೊಳ್ಳುವಂತಿದೆ.

ಹೆಣ್ಣೆಂದು ರಾವಣ ಮಣ್ಣು ಮುಕ್ಕಿದವನಯ್ಯಾ
ಹೆರವರ ಹೆಣ್ಣುಬಯಸದೆ । ಲಗ್ನದ
ಸತಿಯೊಡನೆ ಸುಖದಿ ಬಾಳಣ್ಣ[೧೯]

ಇಲ್ಲಿ ಪುರಾಣದ ಘಟನೆಯನ್ನು ನೆನಪಿಗೆ ತಂದು ನೀತಿ ಹೇಳಿರುವುದು ಗರತಿಯ ಹಿರಿಮೆಯ ಸೂಚಕ ಎಂದೆನ್ನಬಹುದು. ಜನಪದದಲ್ಲಿ ಹೆಣ್ಣು ಮಕ್ಕಳಿಗೆ ಗುಣವೇ ಶೃಂಗಾರ, ಸೌಂದರ್ಯಕ್ಕೆ ಮರುಳಾಗುವುದು ಮರುಳತನವಾದೀತು। ಕೊನೆಯವರೆಗೂ ಉಳಿಯುವುದು ಸೌಂದರ್ಯದಲ್ಲಿ ಗುಣ ಎಂಬುದು ಹೇಳುವುದು ಕಂಡುಬಂದಿದೆ.

ಮುಂದುವರೆದು ಸತಿಪತಿಯರ ವಿರಸ, ಗೆಳತಿಯೊಡನೆ ಬಾಳಿದ ಸಂದರ್ಭ, ಮಕ್ಕಳ ಕುರಿತಂತೆ ಲಾಲಿ ಹಾಡುಗಳು, ಜೋಗುಳ ಹಾಡುಗಳು ಇವೆಲ್ಲವು ಜನಿಸಿದ ಬದುಕಿಗೆ ಸ್ಫೂರ್ತಿಯಾಗಿ ಬಂದಂತಹ ಹಾಗೂ ಅವರ ಸಂಸ್ಕೃತಿಯ ಪ್ರತೀಕವಾಗಿ ನಿಂತವು. ಇದೆಲ್ಲವನ್ನು ಗಮನಿಸಿದಾಗ ಜನಪದ ತ್ರಿಪದಿಗಳು ನಾಡಿನ ಅಮೂಲ್ಯ ನಿಧಿಗಳಾಗಿವೆ ಎಂದು ಹೇಳಬಹುದು ಹಾಗೂ ಜನಪದ ಸಾಹಿತ್ಯದಲ್ಲಿ ಒಂದು ಹೊಸ ಇತಿಹಾಸವನ್ನೇ ತ್ರಿಪದಿ ಸಾಹಿತ್ಯ ಸೃಷ್ಟಿಸಿದೆ ಎಂದರೆ ತಪ್ಪಾಗಲಾರದು. ಜನಪದರ ಬದುಕಿನ ಪ್ರತಿಯೊಂದು ಸನ್ನಿವೇಶವನ್ನು ಅವರ ಜೀವನ ಕ್ರಮವನ್ನು ಸಂಬಂಧದ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗಿದೆ.

ಜನಪದರು ಗರತಿಗೆ ವಿಶಿಷ್ಟವಾದ ಸ್ಥಾನವನ್ನು ನೀಡಿ; ಅವಳ ಮುಖಾಂತರ ಸಂಬಂಧದ ನೆಲೆಯನ್ನು ಹೇಳಹೊರಟಿರುವುದು ಸಂಸ್ಕೃತಿಯ ಪ್ರತಿಬಿಂಬಿಕವಾಗಿದೆ. ಗರತಿಯ ಮೂಲಕ, ತಂದೆ–ತಾಯಿ, ಸತಿ–ಪತಿ, ಅಕ್ಕ–ತಂಗಿ, ಅಣ್ಣ–ತಮ್ಮ ಇಂತಹ ರಕ್ತಸಂಬಂಧದ ಜೊತೆಗೆ, ಕೃಷಿಗೆ ಸಂಬಂಧಿಸಿದ ಹಾಡುಗಳು, ದೈವದ ಹಾಡುಗಳು, ಹಂತಿಮ ಪದಗಳು, ಮದುವೆ ಮುಂತಾದ ಶಾಸ್ತ್ರಗಳ ಸಂದರ್ಭದಲ್ಲಿ ನಡೆಯುವ ಹಾಡುಗಳು, ನೀತಿ ನಿಯಮ ಹಾಗೂ ಮುಂತಾದ ವಿಷಯಕ್ಕೆ ಸಂಬಂಧಿಸಿದಂತೆ ತ್ರಿಪದಿಗಳು ಜನಪದ ಸಾಹಿತ್ಯದಲ್ಲಿ ಬೆಳೆದು ಬಂದಿವೆ.

ಅಡಿಟಿಪ್ಪಣಿಗಳು

೧. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ, ಪ್ರಸ್ತಾವನೆ ಪು. xi.
೨. ಚಿದಾನಂದಮೂರ್ತಿ ಎಂ., ಸಂಶೋಧನಾ ತರಂಗ, ಪುಟ. ೮೨.
೩. ಜಯಶ್ರೀ ದಂಡೆ ಕನ್ನಡ ತ್ರಿಪದಿ ಸಂಗ್ರಹ, ಪದ್ಯ ೮೭ ಪು. ೧೨.
೪. ಹಲಸಂಗಿ ಗೆಳೆಯರು, ಗರತಿಯ ಹಾಡು, ಪು. ೩೫.
೫. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ ಪದ್ಯ ೯೧, ಪು. ೧೨.
೬. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ, ಪದ್ಯ ೧೨೬ ಪು. ೧೬.
೭. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ, ಪದ್ಯ ೨೧೮. ಪು. ೨೮.
೮. ಎಂ.ಬಿ. ಹೋಗಾರ, ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ, ಪು. ೩೭.
೯. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ ಪದ್ಯ ೨೮೯. ಪು. ೩೮.

೧೦. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ ಪದ್ಯ ೨೯೯, ಪು. ೩೯.

೧೧. ಜಯಶ್ರೀ ದಂಡೆ, ಕನ್ನಡ ತ್ರಿನದಿ ಸಂಗ್ರಹ, ಪದ್ಯ ೩೦೫, ಪು. ೪೦.

೧೨. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ ಪ್ರಸ್ತಾವನೆ.

೧೩. ಜಯಶ್ರೀ ದಂಡೆ ಕನ್ನಡ ತ್ರಿಪದಿ ಸಂಗ್ರಹ ಪದ್ಯ ೩೩೦, ಪು. ೪೩.

೧೪. ಜಯಶ್ರೀ ದಂಡೆ ಕನ್ನಡ ತ್ರಿಪದಿ ಸಂಗ್ರಹ ಪದ್ಯ ೩೩೮, ಪು. ೪೭.

೧೫. ಎಂ.ಬಿ. ಹೋಗಾರ, ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ, ಪು. ೨೩.

೧೬. ಎಂ.ಬಿ. ಪೋಗಾರ, ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ, ಪು. ೨೪.

೧೭. ಜಯಶ್ರೀ ದಂಡೆ, ಕನ್ನಡ ತ್ರಿಪದಿ ಸಂಗ್ರಹ ಪದ್ಯ ೩೮೨, ಪು. ೫೦.

೧೮. ಎಂ.ಬಿ. ಹೂಗಾರ, ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ, ಪು. ೪೫.

೧೯. ಎಂ.ಬಿ. ಹೋಗಾರ, ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ. ಪು. ೪೫.

ಪರಾಮರ್ಶನ ಗ್ರಂಥಗಳು

೧. ಜನಪದ ಸಾಹಿತ್ಯ – ಖಂಡೋಬಾ ಪಿ.ಕೆ.

೨. ಕನ್ನಡ ತ್ರಿಪದಿ ಸಂಗ್ರಹ (ಸಂ) – ಜಯಶ್ರೀ ದಂಡೆ.

೩. ಗರತಿಯ ಹಾಡು (ಕನ್ನಡ ತ್ರಿಪದಿ ಸಂಗ್ರಹ) – ಹಲಸಂಗಿ ಗೆಳೆಯರು.

೪. ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ – ಎಂ.ಬಿ. ಹೂಗಾರ.

□□□

೪. ಮೈಸೂರು ಜಿಲ್ಲೆಯ ಸ್ಮಾರಕ ಶಾಸನಗಳು

– ಎಸ್.ಪಿ. ಮಂಜುಶ್ರೀ

ಮೈಸೂರು ಜಿಲ್ಲೆಯು ಪ್ರಸ್ತುತ ಏಳು ತಾಲ್ಲೂಕುಗಳನ್ನು ಹೊಂದಿದೆ. ಅವುಗಳು ಯಾವುವೆಂದರೆ ನಂಜನಗೂಡು, ಹೆಗ್ಗಡದೇವನಕೋಟೆ, ಹುಣಸೂರು, ಕೃಷ್ಣರಾಜನಗರ, ಪಿರಿಯಾಪಟ್ಟಣ, ಮೈಸೂರು ಮತ್ತು ತಿರುಮಕೂಡಲು ನರಸೀಪುರ. ಈ ಏಳು ತಾಲ್ಲೂಕುಗಳಿಂದ ಕೂಡಿರುವ ಮೈಸೂರು ಜಿಲ್ಲೆಯಲ್ಲಿ ಇದುವರೆಗೆ ಒಟ್ಟು ೧೪೩೫ ಪ್ರಕಟಿತ ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ಕನ್ನಡ, ಸಂಸ್ಕೃತ, ಇಂಗ್ಲಿಷ್, ತೆಲುಗು, ಪರ್ಷಿಯನ್, ಅರೇಬಿಕ್ ಹಾಗೂ ಉರ್ದು ಭಾಷೆಯ ಶಾಸನಗಳೂ ಇವೆ.

ಮೈಸೂರು ಜಿಲ್ಲೆಯಲ್ಲಿನ ಪ್ರಕಟಿತ ಸುಮಾರು ೧೪೩೫ ಶಾಸನಗಳಲ್ಲಿ ದಾನಶಾಸನಗಳೇ ಅತಿ ಹೆಚ್ಚು ಪ್ರಮಾಣದಲ್ಲಿವೆ. ನಂತರದ ಸ್ಥಾನ ಸ್ಮಾರಕ ಶಾಸನಗಳಿಗೆ ಸಲ್ಲುತ್ತದೆ. ಸ್ಮಾರಕ ಶಾಸನಗಳನ್ನು ಪ್ರಮುಖವಾಗಿ ಮೂರು ಭಾಗಗಳಾಗಿ ವಿಂಗಡಿಸಿ ಅಭ್ಯಸಿಸಬಹುದಾಗಿದೆ. ಮೊದಲನೆಯದಾಗಿ ವೀರಗಲ್ಲುಗಳು, ಎರಡನೆಯದಾಗಿ ಮಹಾಸತಿ ಕಲ್ಲುಗಳು ಅಥವಾ ಮಾಸ್ತಿಕಲ್ಲುಗಳು ಮತ್ತು ಮೂರನೆಯದಾಗಿ ನಿಸಿಧಿಕಲ್ಲುಗಳು. ಮೈಸೂರು ಜಿಲ್ಲೆಯಲ್ಲಿ ವೀರಗಲ್ಲುಗಳು ಅಧಿಕ ಪ್ರಮಾಣದಲ್ಲಿ ಲಭ್ಯವಿದ್ದು ನಂತರದ ಸ್ಥಾನದಲ್ಲಿ ನಿಸಿಧಿಗೆಗಳು ಹಾಗೂ ಬೆರಳೆಣಿಕೆಯಷ್ಟು ಮಾತ್ರ ಮಾಸ್ತಿಕಲ್ಲುಗಳಿವೆ. ಈ ಸ್ಮಾರಕ ಶಾಸನಗಳನ್ನು ಮುಂದಿನಂತೆ ಅವಲೋಕಿಸಲಾಗಿದೆ.

ವೀರಗಲ್ಲುಗಳು

ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಸುಮಾರು ೧೮ನೇ ಶತಮಾನದವರೆಗೂ 'ವೀರಗುಣ' ಸಮಾಜದ ಮನೋಧರ್ಮವಾಗಿತ್ತು. ರಾಜರುಗಳ ನಡುವಿನ ಯುದ್ಧದಲ್ಲಿ ಒಡೆಯನ ಹಿತರಕ್ಷಣೆಗಾಗಿಯೋ, ಊರಿನ ಒಳಿತಿಗಾಗಿಯೋ, ದುಷ್ಟಶಿಕ್ಷೆಗಾಗಿಯೋ ಅಥವಾ ಸ್ವಾಮಿನಿಷ್ಠೆಯಿಂದಲೋ ಹೋರಾಡಿ ಮಡಿದ ವೀರ ಪುರುಷರ ಸ್ಮರಣಾರ್ಥವಾಗಿ ನಿಲ್ಲಿಸಿದ ಸ್ಮಾರಕ ಶಿಲೆಗಳನ್ನೇ ವೀರಗಲ್ಲುಗಳೆಂದು

ಕರೆಯಲಾಗಿದೆ. ಕನ್ನಡನಾಡಿನಲ್ಲಿ ಉಪಲಬ್ಧವಿರುವ ಶಾಸನಗಳಲ್ಲೇ ಅತಿ ಪ್ರಾಚೀನ ಶಾಸನವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಹಲ್ಮಿಡಿ ಶಾಸನವು ಸಹ ಯುದ್ಧದಲ್ಲಿ ಪಾಲ್ಗೊಂಡು ಜಯಪಡೆದ ವಿಜಅರಸನೆಂಬ ಯೋಧನಿಗೆ ಕತ್ತಿಯ ಕೊಡುಗೆಯಾಗಿ ಎರಡು ಗ್ರಾಮಗಳನ್ನು ದಾನವಾಗಿ ನೀಡಿದ ದಾಖಲೆಯನ್ನೊಳಗೊಂಡ ಸ್ಮಾರಕ ಶಾಸನವೇ ಆಗಿದೆ.

ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ 'ತುರುಗೋಳ್' ಅಂದರೆ ಗ್ರಾಮದ ಅಥವಾ ಊರಿನ ಪಶುಸಂಪತ್ತನ್ನು ದೋಚುವ ಮತ್ತು ಊರಿನ ಹೆಣ್ಣುಮಕ್ಕಳನ್ನು ಅಪಹರಿಸುವಂತಹ ಅನಿಷ್ಠ ಪದ್ಧತಿಗಳ ವಿರುದ್ಧ, ಪಶುಗಳು ಮತ್ತು ಹೆಣ್ಣುಮಕ್ಕಳ ರಕ್ಷಣೆಗಾಗಿ ಹೋರಾಡಿ ಮಡಿದ ವೀರರ ನೆನಪಿನ ದ್ಯೋತಕವಾಗಿ ನಿಲ್ಲಿಸಿದ ಸ್ಮಾರಕ ಶಾಸನಗಳಾದ 'ತುರುಗೋಳ್' ವೀರಗಲ್ಲು ಮತ್ತು ಪೆಣ್ಬುಯ್ಯಲ್ ವೀರಗಲ್ಲುಗಳು ಸಹ ಮೈಸೂರು ಜಿಲ್ಲೆಯಲ್ಲಿ ಲಭ್ಯವಿದೆ. ಇದಲ್ಲದೇ ಸ್ಮಾರಕಗಳ ಮತ್ತೊಂದು ಪ್ರಕಾರವಾದ 'ಕೀಳ್ಗುಂಟೆ' ಶಾಸನಗಳೂ ಕೂಡ ಮೈಸೂರು ಜಿಲ್ಲೆಯಲ್ಲಿದೆ. 'ಕೀಳ್ಗುಂಟೆ' ಎಂದರೆ ಒಡೆಯ ಅಥವಾ ಸ್ವಾಮಿ ಮರಣ ಹೊಂದಿದಾಗ ಆತನ ಆಶ್ರಿತನು ತನ್ನ ಆತ್ಮಾಹುತಿಯನ್ನು ಮಾಡಿಕೊಂಡು ಒಡೆಯನ ಶವದೊಡನೆಯೇ ಸಂಸ್ಕರಿತನಾಗುವುದು. ಹೊಯ್ಸಳರ ಕಾಲದಲ್ಲಿ ಇದು ಉದ್ದೇಶವನ್ನು ಮಾತ್ರ ಉಳಿಸಿಕೊಂಡು ಅಲ್ಪಸ್ವಲ್ಪ ಬದಲಾವಣೆಗಳೊಡನೆ ಗರುಡ ಪದ್ಧತಿಯೆಂದು ಹೆಸರಾಗಿತ್ತು.

ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಸೋಮೇಶ್ವರ ದೇವಸ್ಥಾನದ ಉತ್ತರದ ಗೋಡೆಯ ಸಮೀಪದಲ್ಲಿ ಎರಡು ವೀರಗಲ್ಲುಗಳಿದ್ದು ಇವು ಇಮ್ಮಡಿ ಹೊಯ್ಸಳ ವೀರಬಲ್ಲಾಳನು ರಾಜ್ಯಾಡಳಿತ ನಡೆಸುತ್ತಿದ್ದಾಗ ಇವನ ದಂಡನಾಯಕನಾದ ಕುಮಾರ ಲಕ್ಷ್ಮೀದೇವನು ಹಿರಿಯನಾಡಿನ ಎಡೆನಾಡ ಸೊತ್ತಿಯೂರಿನ ಶತೃಗಳ ಮೇಲೆ ದಂಡೆತ್ತಿ ಹೋದಾಗ, ಯುದ್ಧದಲ್ಲಿ ಯಭರಸಾಲೆಯನ ತಮ್ಮ ಮಂಚೆಯಣ್ಣ ಮಡಿದ ವಿಷಯವನ್ನು ದಾಖಲಿಸಿದೆ. ಈ ಶಾಸನದ ಕಾಲವನ್ನು ಕ್ರಿ.ಶ. ೧೧೯೬-೯೭ ಎಂದು ನಿರ್ಧರಿಸಲಾಗಿದೆ. ಇದರೊಡನಿರುವ ಮತ್ತೊಂದು ಶಾಸನವು ಕ್ರಿ.ಶ.೧೩ನೇ ಶತಮಾನದ್ದಾಗಿದ್ದು, ಮಲಿಸೆಟ್ಟಿಯ ಮಗನಾದ ಚಿಕಣನು ಕಣೆಯಲ ಯುದ್ಧದಲ್ಲಿ ಸ್ವರ್ಗಸ್ಥನಾದುದನ್ನು ತಿಳಿಸುತ್ತದೆ.

ಲಿಪಿಯ ಆಧಾರದ ಮೇಲೆ ಕ್ರಿ.ಶ.೧೨ನೇ ಶತಮಾನದ್ದೆಂದು ಊಹಿಸಲಾದ ತ್ರುಟಿತವಾದ ಶಾಸನವೊಂದು ನಂಜನಗೂಡು ತಾಲ್ಲೂಕಿನ ಕಾರ್ಯ ಗ್ರಾಮದಲ್ಲಿ ದೊರೆತಿದೆ. ಈ ಶಾಸನವು ಭುಜಬಲವೀರಗಂಗ ಜಗದೇಕಮಲ್ಲ ಹೊಯ್ಸಳದೇವನು

ರಾಜ್ಯವಾಳುತ್ತಿದ್ದಾಗ ಕಾಳಗವೊಂದರಲ್ಲಿ ಮಡಿದ ವೀರನ ಸಾಹಸವನ್ನು ಸ್ಮರಿಸಿದೆ.[೨] ಇದೇ ಗ್ರಾಮದ ಇನ್ನೊಂದು ಶಾಸನವು ಸಹ ಕ್ರಿ.ಶ.೧೨ನೇ ಶತಮಾನದ್ದಾಗಿದ್ದು, ಕುಳ್ಕಲಕೋಟೆಯನ್ನು ಆಕ್ರಮಿಸಿದ ಕಾಳಗದಲ್ಲಿ ಬಾರಂದರಕುಳಪತಿ ಕಾರೆಯದ ಹೆರ್ಮ್ಮಡಿ ಗಾವುಂಡನ ವೀರಮರಣವನ್ನು ದಾಖಲಿಸುತ್ತದೆ.[೩]

ಹೆಗ್ಗಡದೇವನಕೋಟೆ ತಾಲ್ಲೂಕಿನ ಹಿರನಂದಿ ಗ್ರಾಮದ ಸೋಮೇಶ್ವರ ದೇವಾಲಯದ ಮುಂದೆ ಬಿದ್ದಿರುವ ಶಿಲಾಶಾಸನವು ಸುಮಾರು ೧೦ನೇ ಶತಮಾನದ್ದಾಗಿದು, ಬಯಲ್ನಾಡಿನ ಆಡಳಿತದ ಅಧಿಕಾರಕ್ಕಾಗಿ ಭುವನಾದಿತ್ಯನ ವಿರುದ್ಧವಾಗಿ ಕಿರಿಯ ರಾಚಮಲ್ಲನ ಪರವಾಗಿ ಐದು ಸಾಮಂತರು ಮತ್ತು ಪೆರ್ಗಡೆಗಳಿಂದ ಮಾಗುಂಡಿಯಲ್ಲಿ ನಡೆದ ಯುದ್ಧದಲ್ಲಿ ನಿಂದಿಯ ಕೂರಂತಿಯರಸರ ನಾಲ್ವರು ಮಕ್ಕಳು ಹತರಾದ ಘಟನೆಯನ್ನು ನಿರೂಪಿಸುತ್ತದೆ.[೪]

ಇದೇ ತಾಲ್ಲೂಕಿನ ಜಿನ್ನಹಳ್ಳಿ ಗ್ರಾಮದ ಸುಮಾರು ಕ್ರಿ.ಶ.೯-೧೦ನೇ ಶತಮಾನದ್ದಿರಬಹುದಾದ ಶಾಸನವು, ಸತ್ಯವಾಕ್ಯ ಪೆರ್ಮಾನಡಿಗಳ ಏಳನೆಯ ವರ್ಷದ ಆಳ್ವಿಕೆಯಲ್ಲಿ ಗುತ್ತಿಯಗಂಗನ ಆದೇಶಾನುಸಾರ ನೊಳಂಬಾಧಿರಾಜನ ವಿರುದ್ಧ ತುರುಂದವೊಳಲಲ್ಲಿ ನಡೆದ ಯುದ್ಧದಲ್ಲಿ ಎರೆಯಂಗಪ್ಪನ ಮಗನಾದ ಮಾಚಿಗನು ಕಾದಿ ಮಡಿದ ವಿಷಯವನ್ನು ಅರುಹುತ್ತದೆ.[೫] ಲಿಪಿಯ ಆಧಾರದಿಂದ ಕ್ರಿ.ಶ.೧೩ನೇ ಶತಮಾನದ್ದೆಂದು ಗುರುತಿಸಿರುವ ಹುಣಸೂರು ತಾಲ್ಲೂಕಿನ ಹರವೆ ಗ್ರಾಮದ ಈಶ್ವರ ದೇವಸ್ಥಾನದ ಮುಂದಿರುವ ಶಾಸನವು ತ್ರುಟಿತವಾಗಿರುವುದರಿಂದ ಪೂರ್ಣ ವಿವರಗಳು ಲಭ್ಯವಾಗದೇ ಕೇವಲ ವೀರನೊಬ್ಬನ ಮರಣದ ಸ್ಮರಣಾರ್ಥವಾಗಿ ಅಥವಾ ಗೌರವಾರ್ಥವಾಗಿ ರಾಮ ಗಾವುಂಡ ಮತ್ತು ಬಸವ ಗಾವುಂಡರು ವೀರಗಲ್ಲನ್ನು ನಿಲ್ಲಿಸಿದ ವಿಷಯ ತಿಳಿದುಬರುತ್ತದೆ.[೬]

ಇದೇ ತಾಲ್ಲೂಕಿನ ಮರೂರು ಗ್ರಾಮದ ಆಂಜನೇಯ ದೇವಸ್ಥಾನದ ಬಳಿಯಿರುವ, ಸುಮಾರು ೧೧ನೇ ಶತಮಾನದ ವೀರಗಲ್ಲು ವರಲಕ್ಷ್ಮಗಾವುಂಡನ ಮಗ ರಾಜೇಂದ್ರ ಚೋಳಸೆಟ್ಟಿಯು ಮರಣ ಹೊಂದಿದ ಪ್ರಯುಕ್ತ ಎಂಟು ಖಂಡುಗ ಬೀಜವರಿಯ ಭೂಮಿಯನ್ನು ನೀಡಿದ ವಿವರವನ್ನು ದಾಖಲಿಸಿದೆ.[೭]

ಇದೇ ವೀರಗಲ್ಲಿನ ಬಳಿಯಿರುವ ಇನ್ನೊಂದು ವೀರಗಲ್ಲು ಕ್ರಿ.ಶ. ೧೧ನೇ ಶತಮಾನದ್ದಾಗಿದ್ದು, ತುರುಗಳ ಮೇಲೆ ಆಕ್ರಮಣ ನಡೆದಾಗ ಕಾದಿ ಮೃತನಾದ ಬಪಗೂಂಡನೆಂಬ ವೀರನ ಸಾಹಸವನ್ನು ಮೆಚ್ಚಿ ನಾಲ್ಕು ಖಂಡುಗ ಬೀಜವರಿಯ ಭೂಮಿಯನ್ನು ಕೊಡುಗೆಯಾಗಿ ನೀಡಿದ ವಿಷಯವನ್ನು ದಾಖಲಿಸಿದೆ.[೮]

ಹುಣಸೂರು ತಾಲ್ಲೂಕಿನ ಮರದೂರು ಗ್ರಾಮದಲ್ಲಿರುವ ಹೊಲವೊಂದರಲ್ಲಿರುವ ವೀರಗಲ್ಲು, ತುರುಗಳ ರಕ್ಷಣೆಯ ಸಲುವಾಗಿ ನಡೆದ ಕಾಳಗದಲ್ಲಿ ಮಾರಗವುಡನ ಮಗ ಕಾರಗವುಡನು ಸೆಣಸಿ ಮೃತನಾದ ಸ್ಮರಣಾರ್ಥ ಭೂಮಿಯನ್ನು ನೀಡಿರುವ ವಿಷಯದ ಸ್ಮಾರಕ ಶಾಸನವಾಗಿದೆ.[೯] ಈ ಶಾಸನದ ಕಾಲ ಕ್ರಿ.ಶ.ಸುಮಾರು ೧೧೦೬.

ಹೆಗ್ಗಂದೂರು ಗ್ರಾಮದ ಶಾಸನವು ಕ್ರಿ.ಶ. ಸುಮಾರು ೧೧೮೬–೮೭ರ ಕಾಲದ್ದಾಗಿದ್ದು ಮಹಾಮಂಡಲೇಶ್ವರ ಕುಲೋತ್ತುಂಗ–ಚೋಳ–ಚಂಗಾಳ್ವದೇವನ ಆಳ್ವಿಕೆಯಲ್ಲಿ ನಡೆದ ತುರುಗಳ ಆಕ್ರಮಣದಲ್ಲಿ ಕಾದಿ ಮರಣಹೊಂದಿದ ನಾಟಯ್ಯನೆಂಬ ವೀರನಿಗೆ ವಿಜವಮ್ಮ ನೀಡಿದ ಕೊಡುಗೆಯನ್ನು ದಾಖಲಿಸಿದೆ.[೧೦]

ಪಿರಿಯಾಪಟ್ಟಣ ತಾಲ್ಲೂಕಿನ ವಾಜನಹಾಳ ಗ್ರಾಮದಲ್ಲಿರುವ ವೀರಗಲ್ಲು ಕೃಷ್ಣದೇವರಾಯನ ಅಣ್ಣನಾದ ವಿಜಯನಗರದ ಅರಸ ವೀರನರಸಿಂಹನ ಆಳ್ವಿಕೆಯನ್ನು ಹೆಸರಿಸುತ್ತಾ, ಯುದ್ಧದಲ್ಲಿ ಪಾಲ್ಗೊಂಡು ವಿಜಯಲಕ್ಷ್ಮಿಯನ್ನು ತಂದುಕೊಟ್ಟು ಮಡಿದ ಬಯಿಚಂಗನ ಉಲ್ಲೇಖವನ್ನು ಹೊಂದಿದೆ.[೧೧] ಈ ಶಾಸನದ ಕಾಲ ಕ್ರಿ.ಶ. ೧೫೦೬ ಆಗಿರುತ್ತದೆ.

ಇದೇ ತಾಲ್ಲೂಕಿನ ಚಪ್ಪರದಹಳ್ಳಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಬಳಿ ಇರುವ ಮಹಾಮಂಡಲೇಶ್ವರ ಕುಲೋತ್ತುಂಗ ಚೋಳ ಚಂಗಾಳ್ವದೇವನ ಆಳ್ವಿಕೆಯ ಕಾಲದ ಶಾಸನವು ಕಳ್ಳರು ಅತ್ತಿಯಕುಪ್ಪೆಯಿಂದ ತುರುಗಳನ್ನು ಕದ್ದೊಯ್ಯುವಾಗ ಅವರನ್ನು ಎದುರಿಸಿ, ತುರುಗಳನ್ನು ರಕ್ಷಿಸಿ ಹಿಂದಿರುಗಿಸಿ ಮಡಿದ ಅಂಕರಸನ ಪರೋಕ್ಷ ವಿನಯಕ್ಕೆ ಆತನ ಮಗ ಮಹಾದೇವ ವೀರಗಲ್ಲನ್ನು ನಿಲ್ಲಿಸಿದ ಘಟನೆಯನ್ನು ದಾಖಲಿಸಿದೆ.[೧೨] ಇದರ ಕಾಲ ಕ್ರಿ.ಶ. ೧೧೭೨.

ಪಿರಿಯಾಪಟ್ಟಣ ತಾಲ್ಲೂಕಿನ ಅಡಗೂರು ಗ್ರಾಮದಲ್ಲಿ ದೊರೆತಿರುವ ಕ್ರಿ.ಶ. ೧೧೭೪ರ ಶಾಸನ ತನ್ನ ವಿಷಯದ ದೃಷ್ಟಿಯಿಂದ ಮಹತ್ವದ್ದೆನಿಸುತ್ತದೆ. ಕುಲೋತ್ತುಂಗ ಚೋಳಭುಜಬಲ ಚಂಗಾಳ್ವದೇವರು ರಾಜ್ಯವಾಳುತ್ತಿದ್ದಾಗ, ವಡಗೂರಿನ ಮಲ್ಲಿಸೆಟ್ಟಿಯ ಮಯ್ದುನನಾದ ಮತ್ತು ಚಿಕ್ಕಬೂವಿಸೆಟ್ಟಿಯ ಅಣ್ಣನಾದ ಬೂವಿಸೆಟ್ಟಿಯು ಊರಿಗೆ ಬಂದ ಮದುವೆ ದಿಬ್ಬಣದಲ್ಲಿ ಉಂಟಾದ ಕಲಹದಲ್ಲಿ ಕಾದಿ ಮಡಿದ. ಇವನ ಪರೋಕ್ಷ ವಿನಯಕ್ಕಾಗಿ ತಮ್ಮನಾದ ಚಿಕ್ಕಬೂವಿಸೆಟ್ಟಿಯು ವೀರಗಲ್ಲನ್ನು ಹಾಕಿಸಿದ ವಿವರ ಈ ಶಾಸನದಲ್ಲಿ ದಾಖಲಾಗಿದೆ.[೧೩]

ಇದೇ ಗ್ರಾಮದಲ್ಲಿರುವ ಮತ್ತೊಂದು ವೀರಗಲ್ಲು ಶಾಸನದಲ್ಲಿ ವಡಗೂರಿನ ಮಲ್ಲಿಸೆಟ್ಟಿಯ ಮಾವನಾದ ಬಲ್ಲಸೆಟ್ಟಿ ತುರುಗಾಳಗದಲ್ಲಿ ಮೃತನಾದ ಸ್ಮಾರಕವಾಗಿ, ಅವನ ಮಗನಾದ ಬುವಿಸೆಟ್ಟಿ ಪರೋಕ್ಷ ವಿನಯವಾಗಿ ನಿಲ್ಲಿಸಿದ ಶಾಸನವಾಗಿರುತ್ತದೆ.[೧೪]

ಪಿರಿಯಾಪಟ್ಟಣ ತಾಲ್ಲೂಕಿನ ಕಣಗಾಲ ಗ್ರಾಮದ ಆಂಜನೇಯ ಗುಡಿಯ ಮುಂದಿನ ವೀರಗಲ್ಲು ಶಾಸನವು ಲಿಪಿಸ್ವರೂಪದಿಂದ ೧೧ನೇ ಶತಮಾನಕ್ಕೆ ಸೇರಿದ್ದು, ಬಲ್ಲಕೊಂಗಾಳ್ವನು ತುರುಗಳ ಮೇಲೆ ಆಕ್ರಮಣ ನಡೆಸಿದಾಗ, ತುರುಗಳನ್ನು ರಕ್ಷಿಸುವ ಯತ್ನದಲ್ಲಿ ಮನಮನೆಂಬ ವೀರ ಮೃತನಾದ ಘಟನಾವಳಿಯನ್ನು ನಿರೂಪಿಸಿದೆ.[೧೫] ಇದೇ ತಾಲ್ಲೂಕಿನ ಕಿತ್ತೂರು ಗ್ರಾಮದ ಕೋಟೆ ಬಾಗಿಲ ಬಳಿ ನಿಲ್ಲಿಸಿರುವ ಎರಡು ವೀರಗಲ್ಲುಗಳಲ್ಲಿ,[೧೬] ಒಂದು ಕ್ರಿ.ಶ. ೧೨ನೇ ಶತಮಾನಕ್ಕೆ ಸೇರಿದ್ದಾಗಿದ್ದು, ಯುದ್ಧವೊಂದರಲ್ಲಿ ಮಡಿದ ಹೆಮ್ಮಾಡಿಗೊಂಡನ ನೆನಪಿಗಾಗಿ ಆತನ ಮಗ ಮಸಣಗೊಂಡ ಪರೋಕ್ಷ ವಿನಯವಾಗಿ ಶಾಸನವನ್ನು ನಿಲ್ಲಿಸಿದ್ದಾನೆ. ಎರಡನೇ ವೀರಗಲ್ಲು ತುರುಗಾಳಗದಲ್ಲಿ ಪ್ರಾಣತೆತ್ತ ವೀರನಾದ ಅಲೆಮಾರಯ್ಯನ ಮಗನಾದ ಚಣ್ಣಯನ ಪರೋಕ್ಷ ವಿನಯಕ್ಕಾಗಿ ಅವನ ತಮ್ಮ ಮಾಚಣ್ಣ ನಿಲ್ಲಿಸಿರುವುದಾಗಿ ತಿಳಿದುಬರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕಿನ ಮಾಕೋಡು ಗ್ರಾಮದಲ್ಲಿನ ಬಸವೇಶ್ವರ ದೇವಸ್ಥಾನದ ಪ್ರಾಕಾರದಲ್ಲಿ ನೆಟ್ಟಿರುವ ವೀರಗಲ್ಲು ಕ್ರಿ.ಶ. ೧೧೭೫–೭೭ನೇ ವರ್ಷದ್ದಾಗಿದ್ದು, ಯುದ್ಧದಲ್ಲಿ ಮಡಿದ ವೀರನ ಸ್ಮಾರಕ ಶಾಸನವಾಗಿದೆ.[೧೭] ಆದರೆ ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿವರಗಳನ್ನು ಗ್ರಹಿಸಲಾಗುವುದಿಲ್ಲ.

ಕೃಷ್ಣರಾಜನಗರ ತಾಲ್ಲೂಕಿನ ಬ್ಯಾಡ್ರಹಳ್ಳಿ ಗ್ರಾಮದ ಸೋಮೇಶ್ವರ ದೇವಾಲಯದ ಬಳಿ ನೆಟ್ಟಿರುವ ವೀರಗಲ್ಲು, ಭುಜಬಲವೀರಗಂಗ ಪೊಯ್ಸಳದೇವನ ಆಳ್ವಿಕೆಯ ಕಾಲದಲ್ಲಿ ಬೇಡರಹಳ್ಳಿಯು ಬಗದ್ಧನಪಳಿ ಬಂಮಾರನು ತುರುಗಳನ್ನು ಕೊಂಡೊಯ್ಯುವಾಗ ಅವನನ್ನೆದುರಿಸಿ ತುರುಗಳನ್ನು ಮರಳಿಸಿ ಮೃತನಾದ ಗಂಗರ ಬೋಕಿಮಯ್ಯನ ಸ್ಮಾರಕ ಶಾಸನವಾಗಿದೆ.[೧೮] ಇದರ ಕಾಲ ಕ್ರಿ.ಶ. ಸುಮಾರು ೧೧೨೭

ಇದೇ ತಾಲ್ಲೂಕಿನ ಸಾಲಿಗ್ರಾಮ ಗ್ರಾಮದ ಹೊಲವೊಂದರಲ್ಲಿನ ಶಾಸನವು ಕ್ರಿ.ಶ. ೧೦೭೯ನೇ ವರ್ಷದ್ದಾಗಿದ್ದು, ತ್ರಿಭುವನಮಲ್ಲ ಕೊಂಗಾಳ್ವದೇವನ ಆಳ್ವಿಕೆಯ ಕಾಲದಲ್ಲಿ ಸಾಲಿಗಾಮೆಯನ್ನು ಮುತ್ತಿಗೆ ಹಾಕಿದ ಚಂಗಾಳ್ವರ ವಿರುದ್ಧದ ಯುದ್ಧದಲ್ಲಿ ಹೋರಾಡಿ ಅಸುನೀಗಿದ ತ್ರೈಲೋಕ್ಯಸೆಟ್ಟಿ ಮತ್ತು ಚೆಳುಕಸೆಟ್ಟಿಯರ ಸ್ಮರಣಾರ್ಥವಾಗಿ ಕಮ್ಮನೂರ ಬಳವಿಯಲಿ ಐದು ಖಂಡುಗ ಬೆಳೆ ಬೆಳೆಯುವ ಭೂಮಿಯನ್ನು ಕಲ್ಲುನೆಟ್ಟು ಕೊಡುಗೆ ನೀಡಿದುದನ್ನು ದಾಖಲಿಸಿದೆ.[೧೯] ಇದೇ ಗ್ರಾಮದ ಮತ್ತೊಂದು ಶಾಸನವು ಕ್ರಿ.ಶ. ೧೧೦೪ನೇ ವರ್ಷದ್ದಾಗಿದ್ದು, ತ್ರಿಭುವನಮಲ್ಲ ಕೊಂಗಾಳ್ವದೇವನು ರಾಜ್ಯವನ್ನು ಪಾಲಿಸುತ್ತಿರುವಾಗ ಸಾಲಿಗ್ರಾಮವನ್ನು ಆಕ್ರಮಿಸಿದ ಚಂಗಾಳ್ವರ ವಿರುದ್ಧ ನಡೆದ ಕಾಳಗದಲ್ಲಿ ಹೋರಾಡಿ ಸ್ವರ್ಗಸ್ಥನಾದ ತ್ರೈಲೋಕ್ಯಸೆಟ್ಟಿಯ ಮಗ ಮಾಸಯ್ಯನನ್ನು ಹೆಸರಿಸಿದೆ.[೧೯]

ಕೃಷ್ಣರಾಜನಗರ ತಾಲ್ಲೂಕಿನ ಹೆಬಸೂರು ಗ್ರಾಮದ ರಾಮೇಶ್ವರ ದೇವಸ್ಥಾನದಲ್ಲಿರುವ ವೀರಗಲ್ಲು ಶಾಸನವು ಸುಮಾರು ಕ್ರಿ.ಶ.೧೨ನೇ ಶತಮಾನದ್ದಾಗಿದ್ದು, ಹೊಯ್ಸಳ ವೀರಬಲ್ಲಾಳನ ಆಡಳಿತಾವಧಿಯಲ್ಲಿ ನಡೆದ ಯುದ್ಧವೊಂದರಲ್ಲಿ ಹೆಬ್ಬಸೂರಿನ ಮಲ್ಲಿಬೋವನ ಮಗನಾದ ಮಾದಿಬೋವನು ಪಾಲ್ಗೊಂಡು ಮಡಿದುದರ ನೆನಪಿಗಾಗಿ ಮಾದಿಬೋವನ ಮಗನು ನಿಲ್ಲಿಸಿದ ಕಲ್ಲು ಎಂಬ ವಿವರವನ್ನು ಒದಗಿಸುತ್ತದೆ.[೨೦] ಇದೇ ಗ್ರಾಮದ ಮತ್ತೊಂದು ಶಾಸನವು ಕ್ರಿ.ಶ. ೧೨೦೪ರಲ್ಲಿ ಬಾರಡೆಯ ಮಗನಾದ ಪದುಮಾಡೆ, ಇವನ ಮಗನಾದ ಬಾರಡೆಯು ವೀರಗಲ್ಲನ್ನು ನಿಲ್ಲಿಸಿದ ವಿಷಯವನ್ನು ದಾಖಲಿಸಿದೆ.[೨೧] ಇದೇ ತಾಲ್ಲೂಕಿನ ಕುರುಬಳ್ಳಿ ಗ್ರಾಮದಲ್ಲಿ ದೊರೆತಿರುವ ವೀರಗಲ್ಲನ್ನು[೨೨] ಬನಿಕಿ ಬುಂಕರ ಗಾವುಂಡನ ಮಗನಾದ ಬಿಂಜವುಣಿರದೇವನ ಸ್ಮರಣಾರ್ಥ ಹಾಕಿಸಲಾಗಿದೆ. ಈತ ರಾಜೇಂದ್ರಚೋಳದೇವನ ರಾಜ್ಯದಿಂದ ಚಂಗಾಳ್ವನಾಯಕ ಪಾಡಿಕಬೆಗೆ ತೆರಳಿದಾಗ, ಚಂಗಾಳ್ವನ ಪರವಾಗಿ ಹೋರಾಡಿ ಮಡಿದವನು. ಈ ಶಾಸನವು ಕ್ರಿ.ಶ. ೧೦೩೪ರ ಕಾಲಘಟ್ಟದ್ದೆಂದು ಗುರುತಿಸಲಾಗಿದೆ.

ಮೈಸೂರು ತಾಲ್ಲೂಕಿನ ವರುಣ ಗ್ರಾಮದಲ್ಲಿನ ಮಹಾದೇವೇಶ್ವರ ದೇವಾಲಯದಲ್ಲಿರುವ ಕ್ರಿ.ಶ. ೧೦ನೇ ಶತಮಾನದ್ದೆಂದು ಗುರುತಿಸಲಾಗಿರುವ ವೀರಗಲ್ಲು ಬಹಳಷ್ಟು ಸವೆದು ಹೋಗಿದ್ದು, ಮಹಾಸಾಮಂತ ಚಾಲುಕ್ಯ ವಂಶದ ನರಸ್ನಿಂಗ ಮತ್ತು ಆತನ ಪತ್ನಿ ಗಾವಿಬ್ಬಲರಸಿ ಹೆಸರುಗಳನ್ನುಳಿದು ಇನ್ನಿತರ ಅಂಶಗಳು ಬಹುತೇಕ ನಷ್ಟಗೊಂಡಿವೆ.[೨೩] ಇದೇ ವರುಣ ಗ್ರಾಮದಲ್ಲಿ ಒಟ್ಟು ಏಳು ಶಾಸನಗಳು[೨೪] ಒಟ್ಟಾಗಿ ಒಂದೆಡೆಯಿದ್ದು, ಇವುಗಳ ಕಾಲ ಕ್ರಿ.ಶ. ಸುಮಾರು ೧೦ನೇ ಶತಮಾನದ್ದೆಂದು ಲಿಪಿಸ್ವರೂಪದಿಂದ ಊಹಿಸಲಾಗಿದೆ. ಈ ವೀರಗಲ್ಲು ಶಾಸನಗಳು ಉತ್ತವಗಳ್ಳ ಮತ್ತು ಎಡವರಿಯರ ನಡುವೆ ನಡೆದ ಕಾಳಗದಲ್ಲಿ ಗೊಗ್ಗಿಯ ಮನೆಮಕ್ಕಳಾದ (ಮನೆವಗತಿ ಮತ್ತು ಮನೆಮಗತಿ) ಎರೆಬೀರಯ್ಯ, ಬೋಚಿಗಧರ್ಮಸೆಟ್ಟಿ, ಮಸಿಕಲ್ಲಗಾವುಂಡನ ಮಗನಾದ ದಡಿಗೆವಳಿಯ ಮಟ್ಟಿಗ ಇವರುಗಳು ಉತ್ತವಗಳ್ಳನ ಪರವಾಗಿ ಕಾದಿ ಮೃತರಾದಾಗ ಎರಡು ಖಂಡುಗ ಭೂಮಿಯನ್ನು ಕೊಡುಗೆಯಾಗಿ ನೀಡಿದುದನ್ನು ದಾಖಲಿಸುತ್ತವೆ. ಇದಲ್ಲದೆ ನಾಲ್ಕನೆಯ ವೀರಗಲ್ಲು ಪೊಲೆಕೇಸಿ ಮತ್ತು ಬೂದಿಗನ ನಡುವೆ ನಡೆದ ಕಾಳಗದಲ್ಲಿ ಎರೆಯಂಗನೆಂಬ ವೀರನು ಪೊಲೆಕೇಸಿಯ ಒಡತಿಯ ಕುದುರೆಕಾರನನ್ನು ಕೊಂದು ತಾನೂ ಮರಣಿಸಿದ ಘಟನೆಯನ್ನು ನಿರೂಪಿಸಿದೆ.

ತಿರುಮಕೂಡಲು ನರಸೀಪುರ ತಾಲ್ಲೂಕಿನ ಕಲಿಯೂರು ಗ್ರಾಮದ ಮಾರಿಗುಡಿಯ ಬಲಕ್ಕೆ ನಿಲ್ಲಿಸಿರುವ ಮೂರು ವೀರಗಲ್ಲುಗಳು[೨೫] ಕ್ರಿ.ಶ. ೧೨-೧೩ನೇ

ಶತಮಾನಕ್ಕೆ ಸೇರಿದವಾಗಿದ್ದು, ಇವುಗಳಲ್ಲಿ ಮೊದಲನೆಯದು ರಣಭಯಂಕರ ಮಾರೋಜನ ವೀರಮರಣವನ್ನು ದಾಖಲಿಸಿದರೆ, ಎರಡನೆಯದು ಮಾಲಂಗಿ ಮಾವಿನಹಳ್ಳಿಯ ಯುದ್ಧದಲ್ಲಿ ಮಡಿದ ಬಲ್ಲಾಳನ ಬಗ್ಗೆ ವಿವರಗಳನ್ನು ಮತ್ತು ಮೂರನೆಯ ವೀರಗಲ್ಲು ಅಲ್ಲೋಜನ ಮರಣವನ್ನು ದಾಖಲಿಸಿದೆ. ಇದೇ ತಾಲ್ಲೂಕಿನ ಮೂಗೂರು ಗ್ರಾಮದ ವೀರಗಲ್ಲು ಕ್ರಿ.ಶ. ೧೪–೧೫ನೇ ಶತಮಾನದ್ದಾಗಿದ್ದು, ರರಯೂರ ಯುದ್ಧದಲ್ಲಿ ಬೋವನ ಮಗನಾದ ಸಂಣಬೋವ ಮುದಿಯಬೋವನು ಮಡಿದ ಸ್ಮರಣಾರ್ಥ ಮಾದಂಣನು ನಿಲ್ಲಿಸಿದ ಶಾಸನವಾಗಿದೆ.[೨೬] ಇದೇ ಗ್ರಾಮದ ಮತ್ತೊಂದು ಶಾಸನವು ತನ್ನ ವಿಷಯ ವೈವಿಧ್ಯದಿಂದ ವಿಶೇಷವೆನಿಸಿದೆ. ಲಿಪಿಸ್ವರೂಪದಿಂದ ಕ್ರಿ.ಶ. ೧೪ನೆಯ ಶತಮಾನದ್ದೆಂದು ನಿರ್ಧರಿಸಿರುವ ಈ ಶಾಸನವು ಹಿರಿಯನಾಡ ಮಹಾಪ್ರಭುಗಳಾದ ಮೂಗೂರ ಮಾದಣ್ಣನವರ ಮಗ ಮಾದಪ್ಪನು ತಲೆಮಲೆಗೆ ಹೋಗುತ್ತಿದ್ದಾಗ ಮಾರ್ಗಮಧ್ಯೆ ಹಂದಿಗನಹಳ್ಳಿಯ ಘಟ್ಟದಲ್ಲಿ ನಲ್ವತ್ತು ಕಳ್ಳರು ಬಂದು ಮುತ್ತಿದಾಗ, ಅವರಲ್ಲಿ ಇಬ್ಬರು ಕಳ್ಳರನ್ನು ಕೊಂದು ತನ್ನೊಡೆಯನಾದ ಮಾದಪ್ಪನ ಪ್ರಾಣವನ್ನು ಉಳಿಸಿ ಹೋರಾಟದಲ್ಲಿ ವೀರಸ್ವರ್ಗವನ್ನು ಪಡೆದ ಆಳಿನ ನೆನಪಿಗಾಗಿ ವೀರಗಲ್ಲನ್ನು ನೆಟ್ಟಿರುವ ವಿಷಯವನ್ನು ದಾಖಲಿಸಿದೆ.[೨೭]

ಇದೇ ತಾಲ್ಲೂಕಿನ ವಾಟಾಳು ಗ್ರಾಮದಲ್ಲಿನ ದುರ್ಗಮ್ಮನ ಗುಡಿಯ ಎದುರಿನಲ್ಲಿರುವ ಹೊಲದ ತೆವರಿಯಲ್ಲಿರುವ ವೀರಗಲ್ಲು ಕ್ರಿ.ಶ.೧೧೯೬ರ ಕಾಲಘಟ್ಟಕ್ಕೆ ಸೇರಿದ್ದು, ಹಿರಿಯುನಾಡ ವಾಟಹಳ ಬುತಿಕಾರ ಸಾಂಕಪಾಳರಕುಲದ ಬಾವಾಚಾರಿಯು ನಾಡಿನ ಗಡಿವಿವಾದದಲ್ಲಿ ಹತನಾದ ವಿಷಯವನ್ನು ದಾಖಲಿಸಿದ ಶಾಸನವಾಗಿದೆ.[೨೮]

ತಿರುಮಕೂಡಲು ನರಸೀಪುರ ತಾಲ್ಲೂಕಿನ ದೊಡ್ಡಹುಂಡಿ ಗ್ರಾಮದಲ್ಲಿನ ಶಾಸನವು ವಿಶಿಷ್ಟವಾದ ಘಟನೆಯೊಂದನ್ನು ದಾಖಲಿಸಿದೆ.[೨೯] ಲಿಪಿ ಸ್ವರೂಪದಿಂದ ಕ್ರಿ.ಶ.೧೦ನೇ ಶತಮಾನದ್ದೆಂದು ಗುರುತಿಸಲಾಗಿರುವ ಈ ಶಾಸನವು ಅಂದಿನ ಸಮಾಜದಲ್ಲಿ ಪ್ರಚಲಿತವಿದ್ದ ವಿಶಿಷ್ಟ ಪದ್ಧತಿಯೊಂದನ್ನು ಪರಿಚಯಿಸಿದೆ. ಗಂಗರಾಜನಾದ ನೀತಿಮಾರ್ಗ ಪೆರ್ಮ್ಮಾನಡಿಯು ಸ್ವರ್ಗಸ್ಥನಾದಾಗ, ಪೆರ್ಮ್ಮಾನಡಿಗಳ ಮನೆಮಗನಾದ ಅಗರಯ್ಯನು ಒಡೆಯನಿಗೆ ಕೀಳ್ಗುಂಟೆಯಾದನು. ಕೀಳ್ಗುಂಟೆ ಎಂದರೆ ತನ್ನ ಒಡೆಯನು ಅಸುನೀಗಿದಾಗ, ಆತನಿಗೆ ತನ್ನ ಪ್ರಾಣವನ್ನು ಮುಡಿಪಾಗಿಟ್ಟಿದ್ದ ಸೇವಕನು (ಮನೆಮಗತ್ತಿನ್) ಒಡೆಯನ ಶರೀರವನ್ನು ತನ್ನ ದೇಹದ ಮೇಲಿಟ್ಟುಕೊಂಡು ಸಜೀವನಾಗಿ ಸುಡಿಸಿಕೊಂಡು ಅಥವಾ ಹೂಳಿಸಿಕೊಂಡು ಪ್ರಾಣಾರ್ಪಣೆ ಮಾಡುವುದು ಎಂದರ್ಥ. ಕ್ರಿ.ಶ. ೧೦ನೇ

ಶತಮಾನದಲ್ಲಿ ಈ ಪದ್ಧತಿಗೆ ಕೀಳ್ಗುಂಟೆ ಎಂಬ ಹೆಸರಿದ್ದು, ಸುಮಾರು ಕ್ರಿ.ಶ. ೧೨ನೆಯ ಶತಮಾನದಲ್ಲಿ ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಇದೇ ರೀತಿಯ ಪ್ರಾಣಾರ್ಪಣೆಯ ಆಚರಣೆಯು 'ಗರುಡ ಪದ್ಧತಿ' ಎಂದು ಪ್ರಸಿದ್ಧವಾಗಿತ್ತು. ಇದಕ್ಕೆ ಉದಾಹರಣೆಯಾಗಿ ಕುವರಲಕ್ಷ್ಮನ ಶಾಸನವನ್ನು ಹೆಸರಿಸಬಹುದು. ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕಹನಸೋಗೆ ಗ್ರಾಮದಲ್ಲಿ ಐದು ವೀರಗಲ್ಲು ಶಾಸನಗಳಿವೆ. ಮೈಸೂರು ನಗರದ ವೀರನಗೆರೆಯಲ್ಲಿ ಸುಮಾರು ಕ್ರಿ.ಶ. ೧೫ನೇ ಶತಮಾನದ ವೀರಗಲ್ಲೊಂದಿದ್ದು, ಇದರಲ್ಲಿ ಮೂರು ಫಲಕಗಳಿವೆ. ಮೊದಲನೆಯ ಫಲಕದಲ್ಲಿ ವೀರನು ಆನೆಯ ವಿರುದ್ಧ ಹೋರಾಡುತ್ತಿರುವ ದೃಶ್ಯವಿದೆ. ಇದಲ್ಲದೇ ಮೈಸೂರು ನಗರದ ವೀರರ ಓಣಿಯಲ್ಲಿ ಹಲವಾರು ವೀರಗಲ್ಲುಗಳಿವೆ. ಸಾಮಾನ್ಯವಾಗಿ ವೀರಗಲ್ಲುಗಳಲ್ಲಿ ಮೂರು ಫಲಕಗಳಿದ್ದು, ಮೊದಲನೆಯದರಲ್ಲಿ ವೀರನ ಹೋರಾಟ, ಎರಡನೆಯದರಲ್ಲಿ ಅಪ್ಸರೆಯರೊಡನೆ ಸ್ವರ್ಗಕ್ಕೆ ತೆರಳುತ್ತಿರುವ ವೀರ ಮತ್ತು ಮೂರನೆಯ ಫಲಕದಲ್ಲಿ ಶಿವಲಿಂಗವನ್ನು ಅಥವಾ ತನ್ನ ಇಷ್ಟದೈವವನ್ನು ಪೂಜಿಸುತ್ತಿರುವ ವೀರ ಇಂತಹ ಕೆತ್ತನೆಗಳಿರುತ್ತವೆ. ಮೂರಕ್ಕಿಂತಲೂ ಹೆಚ್ಚು ಹಂತಗಳನ್ನೊಳಗೊಂಡ ವೀರಗಲ್ಲುಗಳೂ ಇರುತ್ತವೆ.

ಒಟ್ಟಾರೆಯಾಗಿ ಶಾಸನ ಸಹಿತ ಅಥವಾ ಶಾಸನ ರಹಿತ ವೀರಗಲ್ಲುಗಳನ್ನು ಅವಲೋಕಿಸಿದಾಗ, ಅಂದಿನ ಸಮಾಜದ ಸಾಮಾಜಿಕ ಅನಿಷ್ಟವಾಗಿದ್ದ 'ತುರುಗೋಳ್' ವಿರುದ್ಧದ ಹೋರಾಟದಲ್ಲಿ ಮಡಿದ ವೀರರ ಸಂಖ್ಯೆಯೇ ಹೆಚ್ಚಾಗಿರುವುದನ್ನು ಗಮನಿಸಬಹುದು. ನಂತರದ ಸ್ಥಾನ ಯುದ್ಧದಲ್ಲಿ ಮಡಿದ ವೀರಯೋಧರದ್ದಾಗಿರುತ್ತದೆ.

ಮಾಸ್ತಿ ಕಲ್ಲುಗಳು :

ಪತಿಯ ಮರಣಾನಂತರ ಸತಿಯೂ ತನ್ನ ಪ್ರಾಣಾರ್ಪಣೆಯ ಮೂಲಕ ಪತಿಯನ್ನು ಹಿಂಬಾಲಿಸುವ ಆಚರಣೆ ಕರ್ನಾಟಕದಲ್ಲಿ ಸುಮಾರು ಕ್ರಿ.ಶ. ೬ನೇ ಶತಮಾನದಿಂದ ೧೯ನೇ ಶತಮಾನದವರೆಗೂ ಕಂಡುಬರುತ್ತದೆ. ಇಂತಹ ಸತಿಯರನ್ನು 'ಮಹಾಸತಿ'ಯೆಂದು ಕರೆದು ಅವಳ ನೆನಪಿಗಾಗಿ ನೆಟ್ಟ ಸ್ಮಾರಕಗಳೇ ಮಾಸ್ತಿಕಲ್ಲುಗಳು. ಈ ಪದ್ಧತಿಯನ್ನು ಸಹಗಮನ ಎಂದು ಕರೆಯಲಾಗುತ್ತಿತ್ತು. ಪತಿಯ ಶವದೊಡನೆಯೇ ಚಿತೆಯೇರಿ ದಹನಕ್ಕೆ ಒಳಗಾಗುವುದು ಅಥವಾ ಹೂಳಿಸಿಕೊಳ್ಳುವುದು 'ಸಹಗಮನ'ವೆನಿಸಿಕೊಂಡರೆ ಪತಿ ದೂರದಲ್ಲೆಲ್ಲೋ ಮಡಿದ ಸುದ್ದಿ ತಿಳಿದು, ಅವನ ಶವದ ಅನುಪಸ್ಥಿತಿಯಲ್ಲಿ ಪತಿಗೆ ಸೇರಿದ ಯಾವುದಾದರೊಂದು ವಸ್ತುವನ್ನು ಹಿಡಿದುಕೊಂಡು ಮರಣ ಹೊಂದುವುದು 'ಅನುಗಮನ'ವೆನಿಸಿಕೊಂಡಿದೆ.

ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಿಂದ ಇದುವರೆಗೆ ದೊರೆತಿರುವ ಮಹಾಸತಿಕಲ್ಲುಗಳು ಕೇವಲ ಎರಡು ಮಾತ್ರ. ಹೆಗ್ಗಡದೇವನಕೋಟೆ ತಾಲ್ಲೂಕಿನ ಬೆಳತೂರು ಗ್ರಾಮದ ಅಡ್ಡಕಟ್ಟೆ ಹೊಲದಲ್ಲಿ ಇಂದು ಪಾಳುಬಿದ್ದಿರುವ ಬಿನಕಲ್ಲಮ್ಮನ ಗುಡಿಯ ಬಳಿ ಈ ಶಾಸನ ದೊರೆತಿದೆ. ಶಾಸನದ ಕಾಲ ಕ್ರಿ.ಶ. ೧೦೫೭. ನುಗುನಾಡಿನ ಅರಸನಾದ ರವಿಗನ ಮಗಳು ದೇಕಬ್ಬೆ, ನವಲೆನಾಡಿನ ಅಧಿಪತಿಯಾಗಿದ್ದ ತನ್ನ ಪತಿ ಏಚನನ್ನು ಚಕ್ರವರ್ತಿಯಾಗಿದ್ದ ಇಮ್ಮಡಿ ಚೋಳ ರಾಜೇಂದ್ರನು ಅವನ ದಾಯಾದಿಯನ್ನು ಕೊಂದ ದೂರಿನ ಮೇರೆಗೆ ತಲಕಾಡಿಗೆ ಕರೆಸಿಕೊಂಡು ಸಂಹರಿಸಿದ ವಿಷಯವನ್ನು ಕೇಳಿ, ಅಗ್ನಿಪ್ರವೇಶ ಮಾಡಿದ ವಿವರ ಈ ಶಾಸನದಲ್ಲಿದೆ.[೩೦] ಮಗಳ ಅನುಗಮನದ ಸ್ಮಾರಕವಾಗಿ ತಂದೆ ರವಿಗ ಈ ಶಾಸನವನ್ನು ನಿಲ್ಲಿಸಿದ್ದಾನೆ. ಶಾಸನ ಸಾಹಿತ್ಯವು ಅತ್ಯುತ್ತಮವಾಗಿದ್ದು, ಇದನ್ನು ರಚಿಸಿದವನು ಕವಿರಾಜಬಾಂಧವನಾದ ಮಲ್ಲ. ದೇಕಬ್ಬೆ ಶಾಸನವು ಇದುವರೆಗೆ ಕರ್ನಾಟಕದಲ್ಲಿ ದೊರೆತಿರುವ ಮಾಸ್ತಿಕಲ್ಲು ಶಾಸನಗಳಲ್ಲೇ ಅತ್ಯುತ್ತಮವಾದುದು. ಸಾಹಿತ್ಯದ ದೃಷ್ಟಿಯಿಂದ ಮೇರುಸ್ಥಾನದಲ್ಲಿದೆ. ಈ ಸ್ಮಾರಕ ಶಿಲೆಯ ಒಂದು ಭಾಗದಲ್ಲಿ ಶಾಸನವಿದ್ದರೆ ಮತ್ತೊಂದು ಭಾಗದಲ್ಲಿ ಶಿಲ್ಪಗಳಿವೆ. ಈ ಕಾರಣದಿಂದಲೂ ಶಾಸನವು ಅತಿ ವಿಶಿಷ್ಟವಾಗಿದೆ.

ಇದೇ ತಾಲ್ಲೂಕಿನ ಹೆಬ್ಬಲಗುಪ್ಪೆ ಗ್ರಾಮದ ರಾಮೇಶ್ವರ ದೇವಾಲಯದ ಬಳಿ ನೆಟ್ಟಿರುವ ವೀರಗಲ್ಲಿನ ಕಾಲ ಕ್ರಿ.ಶ. ೧೦೮೮. ಈ ಶಾಸನವು ಒಂದನೇ ಕುಲೋತ್ತುಂಗ ಚೋಳನ ೧೮ನೇ ವರ್ಷದ ಆಳ್ವಿಕೆಯದ್ದಾಗಿದ್ದು, ನವಿಲೆನಾಡಿನ ನಾಳ್ಗಾವುಂಡನಾದ ಪೆರ್ವಯಲಿನ ಅರಗಿಯ ಚೋಳನ ಮಗನಾದ ನವಲಾಷಿರಾಜ ಸತ್ತಾಗ ಆತನ ಪತ್ನಿ ತಪರೆಯು ನೀರಿನ ಹಳ್ಳಕ್ಕೆ ಬಿದ್ದು ಸಾಯುತ್ತಾಳೆ. ಇವರ ಸ್ಮಾರಕವಾಗಿ ಅರಗಿಯ ಚೋಳನು ಭೂದಾನ ನೀಡಿದ ವಿವರ ಈ ಶಾಸನದಲ್ಲಿದೆ.[೩೧]

ಮೇಲಿನ ಎರಡೂ ಶಾಸನಗಳು ಅನುಗಮನದ ಶಾಸನಗಳಾಗಿದ್ದು, ಮೈಸೂರು ನಗರದ ವೀರರ ಓಣಿಯಲ್ಲಿ ಹಾಗೂ ಮತ್ತಿತರ ಕಡೆ ಸತಿಶಿಲ್ಪಗಳಿವೆ. ಸಾಮಾನ್ಯವಾಗಿ ಮಾಸ್ತಿಕಲ್ಲಿನಲ್ಲಿ ಎರಡು ಅಥವಾ ಐದು ಫಲಕಗಳಿರುತ್ತವೆ. ಮೊದಲನೆಯದರಲ್ಲಿ ಆಶೀರ್ವದಿಸುವಂತೆ ಕೈ ಎತ್ತಿದ ಸ್ತ್ರೀಯ ತೋಳಿನ ಚಿತ್ರವಿರುತ್ತದೆ. ನಂತರದ ಫಲಕದಲ್ಲಿ ಸ್ತ್ರೀಯ ಸಹಗಮನದ ಶಿಲ್ಪ, ಹಿನ್ನೆಲೆಯಲ್ಲಿ ಬೆಂಕಿಯ ಜ್ವಾಲೆಗಳೂ ಇರುತ್ತವೆ. ಮೂರನೆಯ ಮತ್ತು ಇತರೆ ಫಲಕಗಳಲ್ಲಿ ಅಪ್ಸರೆಯರು ಮಹಾಸತಿಯನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಶಿಲ್ಪಗಳಿರುತ್ತವೆ. ಫಲಕದಲ್ಲಿ ಒಂದು ತೋಳಿನ ಶಿಲ್ಪವಿದ್ದರೆ 'ಒಕ್ಕೈ ಮಾಸ್ತಿ' ಎಂದೂ ಎರಡೂ ಕೈ ಎತ್ತಿದ್ದರೆ 'ಇಕ್ಕೈ ಮಾಸ್ತಿ' ಎಂದು ಕರೆಯುತ್ತಾರೆ.

ನಿಸಿದಿಗಲ್ಲುಗಳು :

ಸನ್ಯಸನ ವಿಧಿಯಿಂದ ಸಲ್ಲೇಖನ ವ್ರತ ಕೈಗೊಂಡು ಸಮಾಧಿ ಮರಣ ಹೊಂದುವ ಜೈನರಿಗಾಗಿ ನಿರ್ಮಿಸುವ ಸ್ಮಾರಕಗಳನ್ನು ನಿಸಿದಿಗಳೆಂದು ಕರೆಯಲಾಗಿದೆ.

ನಂಜನಗೂಡು ತಾಲ್ಲೂಕಿನ ತಗಡೂರು ಗ್ರಾಮದಲ್ಲಿ ಸುಮಾರು ಕ್ರಿ.ಶ. ೧೪ನೇ ಶತಮಾನಕ್ಕೆ ಸೇರಿದ ನಿಸಿದಿ ಶಾಸನವೊಂದಿದೆ. ಮೂಲ ಸಂಘದ ಕೊಂಡಕುಂದಾನ್ವಯಕ್ಕೆ ಸೇರಿದ ನಾಗನಂದಿ ಅನಂತಭಟ್ಟಾರಕರ ಶಿಷ್ಯರಾದ ನಂದಿ ಭಟ್ಟಾರಕರು, ಇವರ ಶಿಷ್ಯೆ ಸನ್ಯಸನ ವಿಧಿಯಿಂದ ಸಮಾಧಿ ಮರಣ ಹೊಂದಿದ ವಿಷಯವನ್ನು ಶಾಸನ ದಾಖಲಿಸಿದೆ.[೩೨]

ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ಗ್ರಾಮದ ಬಸದಿಯಲ್ಲಿ ನೆಟ್ಟಿರುವ ನಿಸಿದಿಗಲ್ಲು ಶಾಸನವು ಕ್ರಿ.ಶ. ೧೩೮೩ರ ಕಾಲಘಟ್ಟದ್ದಾಗಿದ್ದು, ಮೂಲಸಂಘ ದೇಶಿಯಗಣ ಪುಸ್ತಕಗಚ್ಛ ಕೊಂಡಕುಂದಾನ್ವಯಕ್ಕೆ ಸೇರಿದ ಶ್ರುತಕೀರ್ತಿದೇವ ಮುನಿಯು ಸನ್ಯಸನವಿಧಿಯಿಂದ ಮುಕ್ತಿ ಹೊಂದಿದ ನೆನಪಿಗಾಗಿ ಅವರ ಪ್ರಿಯಶಿಷ್ಯರು ಸುಮತಿ ತೀರ್ಥಂಕರನ ಚೈತ್ಯಾಲಯದ ಜೀರ್ಣೋದ್ಧಾರವನ್ನು ಮಾಡಿಸಿದ ದಾಖಲೆಯನ್ನು ಒಳಗೊಂಡಿದೆ.[೩೩] ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕಹನಸೋಗೆ ಗ್ರಾಮದ ಬಸದಿಯಲ್ಲಿನ ನಿಸಿದಿ ಶಾಸನವು ಕ್ರಿ.ಶ. ೧೧೦೦ರ ಕಾಲಘಟ್ಟದ್ದಾಗಿದ್ದು, ಮೂಲ ಸಂಘ ದೇಸಿಯ ಗಣ, ಪುಸ್ತಕಗಚ್ಛದ ದಿವಾಕರಣಂದಿ ಸಿದ್ಧಾಂತಿದೇವರ ಶಿಷ್ಯೆಯಾದ ಬಸವವೆಗಂತಿಯು ನೀಡಿದ ಕೊಡುಗೆಯನ್ನು ತಿಳಿಸುತ್ತದೆ.[೩೪] ಶಾಸನವನ್ನು ಹಾಕಿಸಿದವನು ದಂಡನಾಯಕ ನಾಕಿಮಯ್ಯ.

ಮೈಸೂರು ತಾಲ್ಲೂಕಿನ ವರಕೋಡು ಗ್ರಾಮದಲ್ಲಿರುವ ನಿಸಿದಿ ಶಾಸನವನ್ನು ಲಿಪಿಸ್ವರೂಪದಿಂದ ಕ್ರಿ.ಶ. ೧೦ನೇ ಶತಮಾನದ ಕಾಲಘಟ್ಟದ್ದೆಂದು ಗುರುತಿಸಲಾಗಿದ್ದು, ದುರ್ಗ್ಗನ ಅರಸಿಯಾದ ಪಿಟ್ಟಬ್ಬೆಯ ಮರಣವನ್ನು ದಾಖಲಿಸಿದೆ.[೩೫] ಇದೇ ತಾಲ್ಲೂಕಿನ ವರುಣ ಗ್ರಾಮದ ಸಂಸ್ಕೃತ ಶಾಸನದ ಕಾಲ ಸುಮಾರು ಕ್ರಿ.ಶ. ೧೩ನೇ ಶತಮಾನ. ಈ ನಿಸಿದಿ ಶಾಸನವು ದ್ರಾವಿಳ ಸಂಘದ ನಂದಿ ಸಂಘಕ್ಕೆ ಸೇರಿದ ಶ್ರೀಪಾಲನ ಶಿಷ್ಯರಾದ ಪದ್ಮಪ್ರಭ, ಇವರ ಶಿಷ್ಯರಾದ ಧರ್ಮಸೇನರು ಸನ್ಯಸನ ವಿಧಿಯಿಂದ ಮರಣ ಹೊಂದಿದ ಘಟನೆಯನ್ನು ದಾಖಲಿಸಿದೆ.[೩೬]

ವೀರಗಲ್ಲು, ಮಾಸ್ತಿಗಲ್ಲು ಮತ್ತು ನಿಸಿದಿ ಶಾಸನಗಳಷ್ಟೇ ಅಲ್ಲದೇ ಮೈಸೂರು ಜಿಲ್ಲೆಯಲ್ಲಿ ಇನ್ನೂ ಹಲವು ಸ್ಮಾರಕ ಶಾಸನಗಳಿವೆ. ಮಂಟೇಸ್ವಾಮಿಯ ಗದ್ದುಗೆ

ಮತ್ತು ಮೈಸೂರು ನಗರದ ಮಧುವನದಲ್ಲಿನ ಮೈಸೂರು ಅರಸ ಮತ್ತು ಅರಸಿಯರ ಸಮಾಧಿಗಳು ಹಾಗೂ ಅವುಗಳ ಮೇಲಿರುವ ಶಾಸನಗಳು ಸಹ ಸ್ಮಾರಕ ಶಾಸನಗಳ ವ್ಯಾಪ್ತಿಗೆ ಬರುತ್ತವೆ.

ಒಟ್ಟಿನಲ್ಲಿ, ಸ್ಮಾರಕ ಶಾಸನಗಳು ತಮ್ಮ ವಿಷಯ ವೈವಿಧ್ಯತೆ ಮತ್ತು ಘಟನೆಗಳ ಉಲ್ಲೇಖದಿಂದ ನಾಡಿನ ಸಂಸ್ಕೃತಿ ಮತ್ತು ಆಚರಣೆಗಳನ್ನು ಬಿಂಬಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆಯೆಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಡಾ. ಬಾ.ರಾ. ಗೋಪಾಲ್ (ಸಂ), ಎಪಿಗ್ರಾಫಿಯಾ ಕರ್ನಾಟಿಕ ಸಂ. ೩, ನಂಜನಗೂಡು ೨೨೦, ೨೨೧, ಸುತ್ತೂರು, ಪುಟ ೩೧೬.
೨. ಪೂರ್ವೋಕ್ತ: ೨೮೩, ಕಾರ್ಯ, ಪುಟ ೩೫೯.
೩. ಪೂರ್ವೋಕ್ತ: ೨೮೪, ಕಾರ್ಯ, ಪುಟ ೩೬೦.
೪. ಪೂರ್ವೋಕ್ತ: ೨೩, ಹಿರನಂದಿ, ಪುಟ ೪೪೬.
೫. ಪೂರ್ವೋಕ್ತ: ೨೬, ಜಿನ್ನಹಳ್ಳಿ, ಪುಟ ೪೪೭.
೬. ಪೂರ್ವೋಕ್ತ: ಸಂ. ೪, ಹುಣಸೂರು ೦೧, ಹರವೆ, ಪುಟ ೪೮೩.
೭. ಪೂರ್ವೋಕ್ತ: ೦೪, ಮರೂರು, ಪುಟ ೪೮೪.
೮. ಪೂರ್ವೋಕ್ತ: ೦೫, ಮರೂರು, ಪುಟ ೪೮೫.
೯. ಪೂರ್ವೋಕ್ತ: ೧೫, ಮರದೂರು, ಪುಟ ೪೮೯.
೧೦. ಪೂರ್ವೋಕ್ತ: ೩೬, ಹೆಗ್ಗುಂದೂರು, ಪುಟ ೫೦೬.
೧೧. ಪೂರ್ವೋಕ್ತ: ಪಿರಿಯಾಪಟ್ಟಣ ೦೩, ವಾಜನಹಾಳ, ಪುಟ ೫೧೦.
೧೨. ಪೂರ್ವೋಕ್ತ: ೧೨, ಚಪ್ಪರದಹಳ್ಳಿ, ಪುಟ ೫೧೫.
೧೩. ಪೂರ್ವೋಕ್ತ: ೧೪, ಅಡಗೂರು, ಪುಟ ೫೧೬.
೧೪. ಪೂರ್ವೋಕ್ತ: ೧೫, ಅಡಗೂರು, ಪುಟ ೫೧೬.
೧೫. ಪೂರ್ವೋಕ್ತ: ೧೮, ಕಣಗಾಲ, ಪುಟ ೫೧೭.
೧೬. ಪೂರ್ವೋಕ್ತ: ೧೪೩ & ೧೪೪, ಕಿತ್ತೂರು, ಪುಟ ೫೮೨ & ೫೮೩.
೧೭. ಪೂರ್ವೋಕ್ತ: ೧೪೮, ಮಾಕೋಡು, ಪುಟ ೫೮೪.
೧೮. ಪೂರ್ವೋಕ್ತ: ಸಂ. ೫, ಕೃಷ್ಣರಾಜನಗರ ೦೮, ಬ್ಯಾಡ್ರಹಳ್ಳಿ, ಪುಟ ೭.
೧೯. ಪೂರ್ವೋಕ್ತ: ೬೬ ಮತ್ತು ೬೭, ಸಾಲಿಗ್ರಾಮ, ಪುಟ ೬೫.
೨೦. ಪೂರ್ವೋಕ್ತ: ೭೩, ಹೆಬಸೂರು, ಪುಟ ೬೭.
೨೧. ಪೂರ್ವೋಕ್ತ: ೭೬, ಹೆಬಸೂರು, ಪುಟ ೬೯.
೨೨. ಪೂರ್ವೋಕ್ತ: ೮೫, ಕುರುಬಳ್ಳಿ, ಪುಟ ೮೯.
೨೩. ಪೂರ್ವೋಕ್ತ: ಮೈಸೂರು ೧೬೭, ವರುಣ, ಪುಟ ೨೯೩.

೨೪. ಪೂರ್ವೋಕ್ತ: ೧೭೩ರಿಂದ ೧೭೯, ವರುಣ, ಪುಟ ೨೯೫ ರಿಂದ ೨೯೭.

೨೫. ಪೂರ್ವೋಕ್ತ: ತಿರುಮಕೂಡಲು ನರಸೀಪುರ ೨೨೧ರಿಂದ ೨೨೩, ಕಲಿಯೂರು, ಪುಟ ೬೦೩ ಮತ್ತು ೬೦೪.

೨೬. ಪೂರ್ವೋಕ್ತ: ೨೮೪, ಮೂಗೂರು, ಪುಟ ೬೫೫.

೨೭. ಪೂರ್ವೋಕ್ತ: ೨೮೬, ಮೂಗೂರು, ಪುಟ ೬೫೫.

೨೮. ಪೂರ್ವೋಕ್ತ: ೨೯೬, ವಾಟಾಳು, ಪುಟ ೬೬೧.

೨೯. ಪೂರ್ವೋಕ್ತ: ೨೫೭, ದೊಡ್ಡಹುಂಡಿ, ಪುಟ ೬೩೯.

೩೦. ಪೂರ್ವೋಕ್ತ: ಸಂಪುಟ ೩, ಹೆಗ್ಗಡದೇವನಕೋಟೆ ೬೦. ಬೆಳತೂರು, ಪುಟ ೪೬೪.

೩೧. ಪೂರ್ವೋಕ್ತ: ೬೧, ಹೆಬ್ಬಲಗುಪ್ಪೆ, ಪುಟ ೪೬೭.

೩೨. ಪೂರ್ವೋಕ್ತ: ನಂಜನಗೂಡು ೨೬೩, ತಗಡೂರು, ಪುಟ ೩೪೨.

೩೩. ಪೂರ್ವೋಕ್ತ: ಸಂಪುಟ ೫, ಕೃಷ್ಣರಾಜನಗರ ೧೨೫, ರಾವಂದೂರು, ಪುಟ ೫೭೧.

೩೪. ಪೂರ್ವೋಕ್ತ: ೨೩, ಚಿಕ್ಕಹನಸೋಗೆ, ಪುಟ ೧೫.

೩೫. ಪೂರ್ವೋಕ್ತ: ಮೈಸೂರು ೧೨೯, ವರಕೋಡು, ಪುಟ ೨೭೩.

೩೬. ಪೂರ್ವೋಕ್ತ: ೮೧, ವರುಣ, ಪುಟ ೨೯೮.

□□□

೫. ಕನ್ನಡ ನಾಮಪದಗಳು

– ಬಸವರಾಜ ಕೋಡಗುಂಟಿ

ಕನ್ನಡ ನಾಮಪದಗಳ ರಚನೆ ಮತ್ತು ಬಳಕೆಯನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಈ ಬರವಣಿಗೆಯಲ್ಲಿ ಮಾಡಿದೆ. ನಾಮಪದ ಎನ್ನುವುದು ಸಾಮಾನ್ಯವಾಗಿ ೧) ವಸ್ತು, ವ್ಯಕ್ತಿ, ಕ್ರಿಯೆ ಇಲ್ಲವೆ ಸಾರರೂಪಿ ಹೀಗೆ ಯಾವುದನ್ನಾದರೂ ಹೆಸರಿಸುತ್ತದೆ, ೨) ವಿಬಕ್ತಿಪ್ರತ್ಯಯ ಮತ್ತು ಬಹುವಚನ ಪ್ರತ್ಯಯಗಳನ್ನು ತೆಗೆದುಕೊಳ್ಳುತ್ತದೆ, ೩) ವಾಕ್ಯದಲ್ಲಿ ಕರ್ತೃ ಇಲ್ಲವೆ ಕರ್ಮದ ಸ್ತಾನದಲ್ಲಿ ಇರುತ್ತದೆ.

ಕನ್ನಡದ ನಾಮಪದಗಳನ್ನು ಈ ಕೆಳಗಿನಂತೆ ತಿಳಿದುಕೊಳ್ಳುವ ಪ್ರಯತ್ನ ಮಾಡಿದೆ.

೧) ನಾಮಪದಗಳ ದ್ವನಿರಚನೆ

೨) ನಾಮಪದಗಳ ಆಕ್ರುತಿಮಾತ್ಮಕ ರಚನೆ

೩) ನಾಮಪದಗಳ ಗುಂಪಿಕೆ

೪) ನಾಮಪದಗಳಿಗೆ ಹತ್ತುವ ಪ್ರತ್ಯಯಗಳು

೧) ನಾಮಪದಗಳ ದ್ವನಿರಚನೆ :

ಇಂದಿನ ಕನ್ನಡದಾಗ ಬಳಕೆಯಲ್ಲಿರುವ ಸಾಮಾನ್ಯ ನಾಮಪದಗಳಲ್ಲಿ ಈ ಕೆಳಗಿನ ದ್ವನಿರಚನೆ ಇರುವುದನ್ನು ಗುರುತಿಸಲು ಸಾದ್ಯ. ಇಂದಿನ ಕನ್ನಡದಲ್ಲಿ ಎರಡು ಪದಗಳು ಸೇರಿ ರಚನೆಯಾಗಿರುವಂತ ನಾಮಪದಗಳನ್ನು ಇಲ್ಲಿ ಪರಿಗಣಿಸಿಲ್ಲ. ಒಂದೊಮ್ಮೆ ಎರಡು ಪದಗಳು ಪರಸ್ಪರ ಸೇರಿ ಇಂದು ಅವುಗಳ ರಚನೆಯನ್ನು ಸುಲಬವಾಗಿ ತಿಳಿದುಕೊಳ್ಳಲು ಸಾದ್ಯವಿಲ್ಲದಷ್ಟು ಬೆಳೆದು ಇಂದು ಒಂಟಿ ನಾಮಪದದ ಹಾಗೆಯೆ ಬಳಕೆಯಲ್ಲಿರುವ ಪದಗಳನ್ನು ಮಾತ್ರ ಪರಿಗಣಿಸಿದೆ.

ಇಂದಿನ ಶಿಷ್ಟಕನ್ನಡದಲ್ಲಿ ಇರುವ ನಾಮಪದಗಳಲ್ಲಿ ಈ ಕೆಳಗಿನ ಧ್ವನಿರಚನೆ ಕಂಡುಬರುತ್ತದೆ.

೧.೧ ಸ್ವರಮೊದಲಿನ ನಾಮಪದಗಳು :

೧. ಸ್ವ(ಗಿ)+ವ್ಯ+ಸ್ವ(ಗಿ)

೨. ಸ್ವ(ಉ)+ವ್ಯ+ಸ್ವ(ಗಿ)

೩. ಸ್ವ(ಗಿ)+ವ್ಯ+ವ್ಯ+ಸ್ವ(ಗಿ)

೪. ಸ್ವ(ಗಿ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)

೫. ಸ್ವ(ಉ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)

೬. ಸ್ವ(ಉ)+ವ್ಯ+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)

ಕನ್ನಡದಾಗ ನಾಮಪದಗಳ ಒಟ್ಟು ಆರು ಬಗೆಯ ಧ್ವನಿರಚನೆಯನ್ನು ಗುರುತಿಸಲು ಸಾಧ್ಯ. ಕನ್ನಡದ ಒಂದೆರಡು ಸಹಜ ಗುಣಗಳನ್ನು ಮೊದಲಿಗೆ ಅವಗಾಹಿಸಬಹುದು. ಇಂದಿನ ಕನ್ನಡದಾಗ ಪದಕೊನೆಯಲ್ಲಿ ವ್ಯಂಜನ ಬರುವುದಿಲ್ಲ. ಎಲ್ಲ ಪದಗಳೂ ಸ್ವರಕೊನೆಯವು ಆಗಿವೆ. ಇವುಗಳಲ್ಲಿ ಪದಕೊನೆ ಸ್ವರ ಸಾಮಾನ್ಯವಾಗಿ ಗಿಡ್ಡಕ್ಕರ ಮಾತ್ರ ಆಗಿರುತ್ತದೆ. ಉದ್ದಕ್ಕರ – ಕೊನೆ ನಾಮಪದಗಳು ಕಾಣಸಿಗುವುದಿಲ್ಲ. ಅದರಂತೆ ಕನ್ನಡದ ಪದಗಳು ಪದಮೊದಲ ಒತ್ತಕ್ಕರದಿಂದ ಆರಂಬ ಆಗುವುದಿಲ್ಲ.

ಇಲ್ಲಿ ಗಮನಿಸಬಹುದಾದ ಅಂಶವೆಂದರೆ, ಇಂದಿನ ಕನ್ನಡದಾಗ ಒಂದಕ್ಕರದ ನಾಮಪದಗಳು ಇಲ್ಲ. ಎರಡಕ್ಕರದ ಮತ್ತು ಮೂರಕ್ಕರದ ನಾಮಪದಗಳು ಸಿಗುತ್ತವೆ. ಇವುಗಳಲ್ಲಿ ಎರಡಕ್ಕರದ ಪದಗಳಲ್ಲಿ ಸ್ವರಮೊದಲಿನ ಮತ್ತು ವ್ಯಂಜನಮೊದಲಿನ ನಾಮಪದಗಳು ಸಿಗುತ್ತವೆ. ಇವುಗಳಲ್ಲಿ ಪದಮೊದಲಿಗೆ ಗಿಡ್ಡಕ್ಕರ ಇಲ್ಲವೆ ಉದ್ದಕ್ಕರ ಇರಬಹುದು. ಎರಡಕ್ಕರದ ಪದಗಳಲ್ಲಿ ಪದಮೊದಲಿಗೆ ಗಿಡ್ಡಕ್ಕರ ಇದ್ದಲ್ಲಿ ಪದನಡುವೆ ಒತ್ತಕ್ಕರ ಬರಬಹುದು. ಪದಮೊದಲಿಗೆ ಉದ್ದಕ್ಕರ ಇದ್ದಲ್ಲಿ ಪದನಡುವೆ ಒತ್ತಕ್ಕರ ಬರುವುದಿಲ್ಲ. ಇನ್ನು ಮೂರಕ್ಕರದ ಪದಗಳಿಗೆ ಬಂದಾಗ ಸ್ವ+ವ್ಯ+ಸ್ವ+ವ್ಯ+ಸ್ವ ರಚನೆಯ ನಾಮಪದಗಳು ಕಾಣಸಿಗುತ್ತವೆ. ಇದರಲ್ಲಿ ಪದಮೊದಲಿಗೆ ಗಿಡ್ಡಕ್ಕರ ಇಲ್ಲವೆ ಉದ್ದಕ್ಕರ ಇರಬಹುದು. ಪದನಡುವೆ ಉದ್ದಕ್ಕರ ಬರುವುದಿಲ್ಲ, ಕೇವಲ ಗಿಡ್ಡಕ್ಕರ ಮಾತ್ರ ಬರುತ್ತವೆ. ಸಾಮಾನ್ಯವಾಗಿ ಮೂರಕ್ಕರದ ನಾಮಪದಗಳಲ್ಲಿ ಪದನಡುವೆ ಉದ್ದಕ್ಕರ ಕಂಡುಬಂದಲ್ಲಿ ಅವು ಎರಡು ಪದಗಳು ಸೇರಿ ರಚನೆ ಆಗಿರುತ್ತವೆ. ಇನ್ನು, ಮೂರಕ್ಕರದ ಪದಗಳಲ್ಲಿಯೂ ಪದಮೊದಲಿಗೆ ಉದ್ದಕ್ಕರ

ಇರುವಾಗ ಪದನಡುವಿನ ಒತ್ತಕ್ಕರ ಬರುವುದಿಲ್ಲ. ಪದಮೊದಲಿಗೆ ಗಿಡ್ಡಕ್ಕರ ಇದ್ದಾಗ ಮಾತ್ರ ಪದನಡುವೆ ಒತ್ತಕ್ಕರ ಬರುತ್ತದೆ. ಇಂತಾ ರಚನೆಗಳು ಕೂಡ ಹಳೆಯ ಕಾಲದಲ್ಲಿ ಎರಡು ಪದಗಳು ಸೇರಿ ಒಂದು ಪದವಾಗಿ ಇಂದು ಆ ಬೆಳವಣಿಗೆಯನ್ನು ವಿವರಿಸುವುದಕ್ಕೆ ಆಗದಶ್ಟು ಬೆಳೆದಿವೆ.

ಈ ಎಲ್ಲ ರಚನೆಗಳಿಗೆ ಈ ಕೆಳಗೆ ಉದಾಹರಣೆಗಳನ್ನು ತೋರಿಸಿದೆ.

೧. ಸ್ವ(ಗಿ)+ವ್ಯ+ಸ್ವ(ಗಿ)
ಅರಿ, ಇರಿ, ಉಡ, ಎದೆ, ಒದೆ

೨. ಸ್ವ(ಉ)+ವ್ಯ+ಸ್ವ(ಗಿ)
ಆರು, ಈಜು, ಊರು, ಏರು, ಓಡು

೩. ಸ್ವ(ಗಿ)+ವ್ಯ+ವ್ಯ+ಸ್ವ(ಗಿ)
ಅಣ್ಣ, ಇನ್ಬು, ಉಣ್ಣು, ಎಣ್ಬು, ಒಣ್ಟಿ

೪. ಸ್ವ(ಗಿ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)
ಅರಿವು, ಇರುಳು, ಉದುರು, ಎದುರು, ಒದರು,

೫. ಸ್ವ(ಉ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)
ಆಕಳು, ಈಳಿಗೆ

೬. ಸ್ವ(ಗಿ)+ವ್ಯ+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)
ಅಮ್ಬರ, ಇದ್ದಿಲು, ಉಕ್ಕಡ, ಎನ್ಜಲು, ಒತ್ತಡ

೧.೨ ವ್ಯಂಜನಮೊದಲಿನ ನಾಮಪದಗಳು :

೧. ವ್ಯ+ಸ್ವ(ಗಿ)+ವ್ಯ+ಸ್ವ(ಗಿ)

೨. ವ್ಯ+ಸ್ವ(ಉ)+ವ್ಯ+ಸ್ವ(ಗಿ)

೩. ವ್ಯ+ಸ್ವ(ಗಿ)+ವ್ಯ+ವ್ಯ+ಸ್ವ(ಗಿ)

೪. ವ್ಯ+ಸ್ವ(ಗಿ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)

೫. ವ್ಯ+ಸ್ವ(ಉ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)

೬. ವ್ಯ+ಸ್ವ(ಗಿ)+ವ್ಯ+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)

ವ್ಯಂಜನ ಮೊದಲಿನ ಪದಗಳಲ್ಲಿ ಆರು ಬಗೆಯ ದ್ವನಿರಚನೆ ಇರುವ ಪದಗಳನ್ನು ಕಾಣಬಹುದು. ಇದರಲ್ಲಿಯೂ ಒಂದಕ್ಕರದ ನಾಮಪದಗಳು ಸಿಗುವುದಿಲ್ಲ. ಎರಡಕ್ಕರದ ಪದಗಳಲ್ಲಿ ಈ ಮೇಲೆ ಸ್ವರಮೊದಲಿನ ಪದಗಳ

ಸಂದರ್ಭದಲ್ಲಿ ಮಾತನಾಡಿದಂತೆ ಮೊದಲ ಸ್ವರ ಗಿಡ್ಡಕ್ಕರವಾಗಿರುವ ಇಲ್ಲವೆ ಉದ್ದಕ್ಕರವಾಗಿರುವ ನಾಮಪದಗಳು ಸಿಗುತ್ತವೆ. ಇವರಲ್ಲಿ ಪದಮೊದಲಲ್ಲಿ ಗಿಡ್ಡಕ್ಕರ ಇರುವ ಸಂದರ್ಭಗಳಲ್ಲಿ ಪದನಡುವೆ ಒತ್ತಕ್ಕರ ಬರಬಹುದು. ಅದರಂತೆ, ಮೂರಕ್ಕರದ ಪದಗಳಲ್ಲಿಯೂ ಪದಮೊದಲಿಗೆ ಗಿಡ್ಡಕ್ಕರ ಇಲ್ಲವೆ ಉದ್ದಕ್ಕರ ಬರಬಹುದು. ಪದನಡುವೆ ಗಿಡ್ಡಕ್ಕರ ಮಾತ್ರ ಬರುತ್ತದೆ. ಇದರಲ್ಲಿಯೂ ಪದಮೊದಲಿಗೆ ಗಿಡ್ಡಕ್ಕರ ಇದ್ದಾಗ ಪದನಡುವೆ ಒತ್ತಕ್ಕರ ಬರುವ ಸಾಧ್ಯತೆ ಇರುತ್ತದೆ.

ಇಲ್ಲಿ ವ್ಯಂಜನಮೊದಲಿನ ಪದಗಳ ಪ್ರತಿಯೊಂದು ರಚನೆಗೆ ಉದಾಹರಣೆಗಳನ್ನು ಕೊಟ್ಟಿದೆ.

೧. ವ್ಯ+ಸ್ವ(ಗಿ)+ವ್ಯ+ಸ್ವ(ಗಿ)
ಕಡಿ, ಗಡಿ, ಚಡಿ, ಜಡಿ, ತಡೆ, ದಡ, ನಡೆ, ಪಡೆ, ಬಡ, ಮಡಿ

೨. ವ್ಯ+ಸ್ವ(ಉ)+ವ್ಯ+ಸ್ವ(ಗಿ)
ಕಾರು, ಗೀರು, ಚೂರು, ಜಾರು, ತೂರು, ದೂರು, ನೂರು, ಪಾರು, ಬೀರು, ಮೀರು, ಸೂರು

೩. ವ್ಯ+ಸ್ವ(ಗಿ)+ವ್ಯ+ವ್ಯ+ಸ್ವ(ಗಿ)
ಕಡ್ಡಿ, ಗಿಡ್ಡ, ಚಡ್ಡಿ, ಜಡ್ಡು, ತಗ್ಗು, ದಮ್ಮು, ನುಗ್ಗು, ಪುಗ್ಗಿ, ಬುಗ್ಗೆ, ಮೊಗ್ಗು, ಸುಗ್ಗಿ

೪. ವ್ಯ+ಸ್ವ(ಗಿ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)
ಕುದುರು, ಗುಟುರು, ಚದುರು, ತೊಡರು, ದುಡುಕು, ನುಸುಳು, ಬೆದರು, ಮುದುಡು

೫. ವ್ಯ+ಸ್ವ(ಉ)+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)
ಕಾವಲು, ತೋರಣ, ನೇಸರ, ಬಾಗಿಲು

೬. ವ್ಯ+ಸ್ವ(ಗಿ)+ವ್ಯ+ವ್ಯ+ಸ್ವ(ಗಿ)+ವ್ಯ+ಸ್ವ(ಗಿ)
ಕಟ್ಟಿಗೆ, ಗಣ್ಣಲು, ಬಜ್ಜಾರ, ಮೆಟ್ಟಿಲು

ಇಲ್ಲಿ, ವಿವಿದ ದ್ವನಿಗಳು ಕನ್ನಡದ ಪದಗಳಲ್ಲಿ ಬರುವ ಪರಿಸರಗಳನ್ನು ತೋರಿಸಿದೆ.

ದ್ವನಿ	ಪದಮೊದಲಲ್ಲಿ	ಪದನಡುವಲ್ಲಿ	ಪದಕೊನೆಯಲ್ಲಿ	ಒತ್ತಕ್ಕರಗಳಲ್ಲಿ
ಸ್ವರಗಳು				
ಅ	ಅಪ್ಪ	ಕಣ್ಣು	ಕರು	--
ಆ	ಆಸೆ	ಕಾದು	--	--
ಇ	ಇಲಿ	ಬಳಿ	[illegible]	--

ಈ	ಈಸು	ನೀರು	--	--
ಉ	ಉರಿ	ಮುಗಿ	ಕಾಡು	--
ಊ	ಊಟ	ಸೂಡು	--	--
ಎ	ಎದೆ	ನೆಲ	ಹೊರೆ	--
ಏ	ಏಣಿ	ಮೇರು	--	--
ಒ	ಒಲವು	ಕೊಡ	--	--
ಓ	ಓಟ	ನೋಟ	--	--
ವ್ಯಂಜನಗಳು				
ಕ್	ಕರಿ	ಸಾಕು	--	ಅಕ್ಕ
ಗ್	ಗಾಡಿ	ಮಗ	--	ಹಗ್ಗ
ಙ್	--	--	--	ಅಙ್ಗಿ (ಅಂಗಿ)
ಚ್	ಚಳಿ	ಸೂಚಿ	--	ಹುಚ್ಚ
ಜ್	ಜಾರು	ಸೂಜಿ	--	ಕಜ್ಜಿ
ಞ್	--	--	--	ಕಞ್ಚು (ಕಂಚು)
ಟ್	ಟಗರು	ಕಾಟ	--	ಕಟ್ಟು
ಡ್	ಡಪ್ಪು	ತೊಡೆ	--	ಅಡ್ಡ
ಣ್	--	ಮಣ	--	ಕಣ್ಣು
ಳ್	--	ಕೊಳೆ	--	ಕಳ್ಳ
ತ್	ತಳಿ	ಕೋತಿ	--	ಹತ್ತಿ
ದ್	ದಾರಿ	ಹದ	--	ಸುದ್ದಿ
ನ್	ನಾಯಿ	ಮನೆ	--	ಕನ್ನ
ಲ್	ಲಾಳಿಕೆ	ಕಾಲು	--	ಕಲ್ಲು
ಪ್	ಪಾಳು	ಕಾಪು	--	ತುಪ್ಪ
ಬ್	ಬಾಳು	ತೂಬು	--	ಹಬ್ಬ
ಮ್	ಮರ	ಜೋಮು	--	ಅಮ್ಮ

ಯ್	ಯಾರು	ನಾಯಿ	--	ಕಯ್ಯಿ
ವ್	ವಗರು	ಕಾವು	--	ಅವ್ವ
ರ್	ರಾಗ	ನರ	--	
ಸ್	ಸರಿ	ಕಸ	--	
ಶ್	ಶಕ್ತಿ	ಕಳಶ	--	
ಹ್	ಹಸಿ	ಬಹಳ	--	--

* ಇವು ಆಡುನುಡಿಯಲ್ಲಿ ವ್ಯಾಪಕವಾಗಿ ಬಳಕೆಯಲ್ಲಿವೆ

ಕನ್ನಡ ನಾಮಪದಗಳ ಆಕ್ರುತಿಮಾತ್ಮಕ ರಚನೆ: ಕನ್ನಡದಲ್ಲಿ ನಾಮಪದಗಳನ್ನು ಸಾದಿಸುವುದಕ್ಕೆ ಮೂರು ಮುಕ್ಯವಾದ ವಿದಾನಗಳನ್ನು ಕಾಣಬಹುದು.

ಪದ+ಪ್ರತ್ಯಯ=ನಾಮಪದ

ಪದ+ಪದ=ನಾಮಪದ

ಜೋಡುಪದ

ಪದ+ಪ್ರತ್ಯಯ=ನಾಮಪದ : ಒಂದು ಪದಕ್ಕೆ ಒಂದು ಪ್ರತ್ಯಯವನ್ನು ಸೇರಿಸುವ ಮೂಲಕ ಹೊಸದೊಂದು ನಾಮಪದವನ್ನು ಸಾದಿಸುವುದು ಕನ್ನಡದಲ್ಲಿ ಸಾಮಾನ್ಯ. ಇದರಲ್ಲಿ ಈ ಕೆಳಗಿನ ಕೆಲವು ಸಾದ್ಯತೆಗಳನ್ನು ಉದಾಹರಣೆಗಳೊಂದಿಗೆ ಇಲ್ಲಿ ಗಮನಸಿಬಹುದು.

ಕ್ರಿ + Ø = ನಾ

ನಾ + ಪ್ರ = ನಾ

ಕ್ರಿ + ಪ್ರ = ನಾ

ವಿ + ಪ್ರ = ನಾ

ಕ್ರಿ + Ø = ನಾ

ಹಾಡು + Ø = ಹಾಡು

ಊರು + Ø = ಊರು

ನಾ + ಪ್ರ = ನಾ

– ಇಕ ದಿನ+–ಇಕ=ದಿನಿಕ

– ಇಗ ಗಾಣ+–ಇಗ=ಗಾಣಿಗ

– ಇತಿ ಸಮ+–ಇತಿ=ಸಮಿತಿ

– ಇಷ್ಟ ಕೋಪ+–ಇಷ್ಟ=ಕೋಪಿಷ್ಟ, ಪಾಪಿಷ್ಟ

– ಕಾರ ಗೆಣೆ+–ಕಾರ= ಗೆಣೆಕಾರ, ನಯಕಾರ, ಮಾಯಕಾರ

– ಕೋರ ಜೂಜು+–ಕೋರ=ಜೂಜುಕೋರ, ಲಾಬಕೋರ

– ಗಾರ ಹೂ+–ಗಾರ=ಹೂಗಾರ, ಮೋಸಗಾರ

– ಗಿರಿ ಗುಂಡಾ+–ಗಿರಿ=ಗುಂಡಾಗಿರಿ

– ಗಿತ್ತಿ ಹಾದರ+–ಗಿತ್ತಿ=ಹಾದರಗಿತ್ತಿ

– ಗೇಡಿ ಬುದ್ಧಿ+–ಗೇಡಿ=ಬುದ್ಧಿಗೇಡಿ

– ತನ ತಾಯಿ+–ತನ=ತಾಯ್ತನ, ಬಡತನ, ಸಿರಿತನ

– ತಿ ಗವುಡ+–ತಿ=ಗವುಡತಿ, ಸಾಹುಕಾರತಿ,

– ತೆ ಗನ+–ತೆ=ಗನತೆ, ಜನತೆ

– ದಾರ ಜಮೀನು+–ದಾರ=ಜಮೀನುದಾರ, ತಹಸೀಲುದಾರ, ಜಮಾದಾರ, ಜವಾಬ್ದಾರ

– ವಂತ ಹಣ+–ವಂತ=ಹಣವಂತ, ಗುಣವಂತ, ಸಿರಿವಂತ

– ವು ನಡ+–ವು=ನಡುವು

ಕ್ರಿ+ಪ್ರ=ನಾ

– ಅ ಆಡು+–ಅ=ಆಟ, ನೋಟ, ಕಾಟ

– ಅಣೆ ಸಾಗು+–ಅಣೆ=ಸಾಗಣೆ

– ಅಳ ಮುಚ್ಚು+–ಅಳ=ಮುಚ್ಚಳ

– ಇಕೆ ಓದು+–ಕೆ=ಓದಿಕೆ, ಸೋರಿಕೆ, ಹಾರಿಕೆ

– ಇಗೆ ನಾಚು+–ಗೆ=ನಾಚಿಗೆ

– ಕು ಹರಿ+–ಕು=ಹರಕು, ಕೊಳಕು, ಮುರುಕು

– ಕೆ ಸೋರು+–ಕೆ=ಸೋರಿಕೆ, ಕೋರಿಕೆ, ಹಾರಿಕೆ

– ಗ ಓಡು+–ಗ=ಓಡುಗ, ಓದುಗ, ಕೇಳುಗ

– ಗೆ ಹೊಲಿ+–ಗೆ=ಹೊಲಿಗೆ, ನಡಿಗೆ, ಅಡಿಗೆ, ಗಲ್ಗೆ

– ತ ಕುದಿ+–ತ=ಕುದಿತ, ತುಡಿತ, ಮಿಡಿತ, ಹಿಡಿತ

– ತೆ ಅಳೆ+–ತೆ=ಅಳತೆ, ನಡತೆ

– ಪು ಕಾಯು+–ಪು=ಕಾಯ್ಪು

5

– ಮೆ ತಾಳು+–ಮೆ=ತಾಳ್ಮೆ, ಗೆಲ್ಮೆ, ಬಾಳ್ಮೆ

– ವಳಿ ಸಾಗು+–ವಳಿ=ಸಾಗುವಳಿ

– ವು ಅಳಿ+–ವು=ಅಳಿವು, ಉಳಿವು, ಹಸಿವು

ವಿ+ಪ್ರ=ನಾ

– ಅ ಕರಿ+–ಅ=ಕರಿಯ

– ಅಗೆ ತೆಳು+–ಅಗೆ=ತೆಳ್ಳಗೆ

– ಇ ಚಲಿ+–ಇ=ಚಲುವಿ

– ತನ ಹೊಸ+–ತನ=ಹೊಸತನ

– ತು ಹೊಸ+–ತು=ಹೊಸತು

– ಪು ಬಿಳಿ+–ಪು=ಬಿಳುಪು

– ಮೆ ಹೆರ್+–ಮೆ=ಹೆಮ್ಮೆ, ಗೆಯ್ಮೆ

– ಸು ಎಳ+–ಸು=ಎಳಸು

– ಸ್ತನ ದೊಡ್ಡ+–ಸ್ತನ=ದೊಡ್ಡಸ್ತನ

ಪದ+ಪದ=ನಾಮಪದ : ಎರಡು ಪದಗಳು ಪರಸ್ಪರ ಸೇರಿ ಇನ್ನೊಂದು ಪದವನ್ನು ಸಾದಿಸುವುದು ಕೂಡ ಕನ್ನಡದಲ್ಲಿ ಸಾಮಾನ್ಯ. ಇವುಗಳಲ್ಲಿ ನಾಮಪದ, ಕ್ರಿಯಾಪದ ಮತ್ತು ವಿಶೇಶಣ ಈ ಮೂರು ಪದವರ‍್ಗಗಳಿಗೆ ನಾಮಪದ ಇಲ್ಲವೆ ಕ್ರಿಯಾಪದ ಸೇರಿ ಹೊಸದೊಂದು ನಾಮಪದ ಆಗುವುದನ್ನು ಕಾಣಬಹುದು.

ನಾ+ನಾ=ನಾ

ನಾ+ಕ್ರಿ=ನಾ

ಕ್ರಿ+ನಾ=ನಾ

ವಿ+ನಾ=ನಾ

ನಾ+ನಾ=ನಾ

ಕಯ್+ಮಗ್ಗ=ಕಯ್ಮಗ್ಗ

ತವರು+ಮನೆ=ತವರ‍್ಮನೆ

ನೆಲ+ತಾಯಿ=ನೆಲದಾಯಿ

ಮೂಗು+ದಾರ=ಮುಗುದಾರ

ನಾ+ಕ್ರಿ=ನಾ

ಕಾಡು+ಆಟ=ಕಾಡಾಟ

ಕಣ್ಣು+ಉರಿ=ಕಣ್ಣುರಿ

ಕ್ರಿ+ನಾ=ನಾ

ಕಡೆ+ಕೋಲು=ಕಡೆಗೋಲು

ಜಾರು+ಬಂಡಿ=ಜಾರುಬಂಡಿ

ಬೀಸು+ಕಲ್ಲು=ಬೀಸುಗಲ್ಲು

ಸುಳಿ+ಗಾಳಿ=ಸುಳಿಗಾಳಿ

ವಿ+ನಾ=ನಾ

ಎಳ+ಮಾವು=ಎಳಮಾವು

ತಣ್+ಗಾಳಿ=ತಂಗಾಳಿ

ಕರಿ+ನಾಲಿಗೆ=ಕರಿನಾಲಿಗೆ

ಒಳ+ಮಾತು=ಒಳಮಾತು

ನಾಮಪದಗಳ ಗುಂಪಿಕೆ : ನಾಮಪದಗಳನ್ನು ಪಾರಂಪರಿಕವಾಗಿ ರೂಢ, ಅಂಕಿತ, ಅನ್ವರ್ಥ ಎಂದು ಮೂರು ರೀತಿಯಲ್ಲಿ ಗುಂಪಿಸಿ ವಿವರಿಸಲಾಗಿದೆ.

ರೂಢನಾಮ : ಒಂದು ಸಮೂಹವನ್ನು ಹೆಸರಿಸುವುದು ರೂಢನಾಮ. ಇದು ಒಂದು ಬಗೆಯ ವಸ್ತು ಇಲ್ಲವೆ ವ್ಯಕ್ತಿಗಳ ಗುಂಪನ್ನು, ಅವುಗಳ ಸಮಾನ ಗುಣಗಳನ್ನು ಆದರಿಸಿ ಹೆಸರಿಸುತ್ತದೆ. ಇದನ್ನು ಸಮೂಹನಾಮ ಎಂದು ಕರೆಯಬಹುದು. ಪಾರಂಪರಿಕವಾಗಿ ಇದನ್ನು ರೂಢಿಗತವಾಗಿ ಬಂದುದು ಎಂದು ಸಾಮಾನ್ಯವಾಗಿ ವಿವರಿಸಿದೆ.

ಉದಾ : ನದಿ, ಗುಡ್ಡ, ಊರು, ಹುಡುಗ, ಹೂವು, ಹಣ್ಣು, ಗಿಡ, ಹೆಣ್ಣು, ಕಾಡು, ನಾಡು.

ಅಂಕಿತನಾಮ : ಒಂದು ವಸ್ತು ಇಲ್ಲವೆ ವ್ಯಕ್ತಿಯನ್ನು ನಿರ್ದಿಷ್ಟವಾಗಿ ಹೆಸರಿಸುವುದು ಮತ್ತು ಇತರರಿಂದ ಪ್ರತ್ಯೇಕವಾಗಿಸಿ ತೋರಿಸುವುದು. ಅಂಕಿತನಾಮ ಎಂಬುದನ್ನು ಇಟ್ಟ ಹೆಸರು ಎಂದು ಪಾರಂಪರಿಕವಾಗಿ ಹೇಳಲಾಗಿದೆ.

ಉದಾ : ಕ್ರಿಶ್ಣಾ, ಇಂದ್ರಕೀಲ, ಕಲಬುರಗಿ, ಕರಿಯ, ಮಲ್ಲಿಗೆ, ಬಾಳೆ, ಬೇವು, ಕೋಮಲ, ನಾಗರಹೊಳೆ, ಕರ್ನಾಟಕ

ಇನ್ನು ಆದುನಿಕ ಕಾಲದಲ್ಲಿ ನಾಮಪದಗಳನ್ನು ಗುಂಪಿಸುವ ಹಲವು ಬಗೆಗಳನ್ನು ಕಾಣಬಹುದು. ಇವುಗಳಲ್ಲಿ ಮುಕ್ಯವಾದ ಕೆಲವನ್ನು ಇಲ್ಲಿ ಉಲ್ಲೇಕಿಸಲಾಗುವುದು.

ಹೆಸರಿಸುವ ಮತ್ತು ವರ್ಣಿಸುವ ನಾಮಪದಗಳು : ನಾಮಪದಗಳನ್ನು ಹೆಸರಿಸುವ ಮತ್ತು ವರ್ಣಿಸುವ ಎಂದು ಎರಡು ರೀತಿಯಲ್ಲಿ ಗುಂಪಿಸಲು ಸಾದ್ಯವಿದೆ. ಕೆಲವು ನಾಮಪದಗಳು ಕೇವಲ ಹೆಸರಿಸುವ ಕೆಲಸವನ್ನು ಮಾಡುತ್ತಿದ್ದರೆ ಇನ್ನು ಕೆಲವು ವರ್ಣಿಸುವ ಕೆಲಸವನ್ನು ಮಾಡುತ್ತಿರುತ್ತವೆ.

ಎಣಿಸುವ ಮತ್ತು ಎಣಿಸದ ನಾಮಪದಗಳು : ಕೆಲವು ನಾಮಪದಗಳು ಎಣಿಸಲು ಬರುವಂತವು ಮತ್ತು ಕೆಲವು ಬಾರದಂತವು ಇವೆ.

ಎಣಿಸುವ ನಾಮಪದಗಳು : ಎಣಿಸಲು ಬರುವಂತವು.

ಉದಾ. ಮರ, ಮನೆ, ಗಿಡ, ಕಲ್ಲು

ಎಣಿಸದ ನಾಮಪದಗಳು : ಎಣಿಸಲು ಬಾರದ ನಾಮಪದಗಳು.

ಉದಾ. ನೀರು, ಕೂದಲು, ಹಾಲು

ನಾಮಪದಗಳಿಗೆ ಹತ್ತುವ ಪದರೂಪಪ್ರತ್ಯಯಗಳು : ನಾಮಪದಗಳು ಸಾಮಾನ್ಯವಾಗಿ ವಿಬಕ್ತಿ ಪ್ರತ್ಯಯಗಳನ್ನು ಮತ್ತು ಬಹುವಚನ ಪ್ರತ್ಯಯಗಳನ್ನು ಪಡೆದುಕೊಳ್ಳುತ್ತವೆ. ಈ ಪ್ರತ್ಯಯಗಳನ್ನು ಪದರೂಪ ಪ್ರತ್ಯಯಗಳು ಎಂದು ಕರೆಯುತ್ತಾರೆ.

ಬಹುವಚನ ಪ್ರತ್ಯಯಗಳು : ಕನ್ನಡದಲ್ಲಿ ಎರಡು ವಚನಗಳಿವೆ. ಒಂದನ್ನು ತಿಳಿಸುವ ಏಕವಚನ ಮತ್ತು ಒಂದಕ್ಕಿಂತ ಹೆಚ್ಚನ್ನು ತಿಳಿಸುವ ಬಹುವಚನ. ನಾಮಪದವೊಂದು ತನ್ನ ರೂಪದಲ್ಲಿಯೆ ಏಕವಚನವಾಗಿರುತ್ತದೆ. ಏಕವಚನಕ್ಕೆ ಬೇರೆ ಪ್ರತ್ಯಯ ಇಲ್ಲ. ಬಹುವಚನವನ್ನು ಹೇಳುವುದಕ್ಕೆ ಬೇರೆ ಬೇರೆ ಪ್ರತ್ಯಯಗಳು ಬಳಕೆಯಲ್ಲಿವೆ. ಮಾನವ ಬಹುವಚನವನ್ನು ಹೇಳುವುದಕ್ಕೆ ಮುಕ್ಯವಾಗಿ – ಅರು ಎಂಬ ರೂಪ ಮತ್ತು ಅದರ ಉಪರೂಪಗಳು ಬಳಕೆಯಲ್ಲಿವೆ. ಅದರಂತೆ –ಅಂದಿರು ಎಂಬ ಇನ್ನೊಂದು ರೂಪ ಕೂಡ ಮಾನವ ಬಹುವಚನವನ್ನು ಅಬಿವ್ಯಕ್ತಿಸುವುದಕ್ಕೆ ಬಳಕೆಯಲ್ಲಿದೆ. ಕೆಲವು ಮಾನವವಲ್ಲದ ನಾಮಪದಗಳಿಗೆ –ಗಳು ಎಂಬ ರೂಪ ಮತ್ತು ಅದರ ಉಪರೂಪಗಳು ಬಳಕೆಯಲ್ಲಿವೆ. ವಿಶೇಶವಾದ ಕೆಲವು ಸಂದರ್ಬಗಳಲ್ಲಿ –ಕಳು ಎಂಬ ರೂಪ ಕೂಡ ದೊರೆಯುತ್ತದೆ. ಈ ಎಲ್ಲ ರೂಪಗಳಿಗೆ ಕೆಳಗೆ ಉದಾಹರಣೆಗಳನ್ನು ಕೊಟ್ಟಿದೆ.

ಉದಾ :

ಮಾನವ : –ಅರು

ಹುಡುಗ + –ಅರು = ಹುಡಗರು

ಕರಿ + –ಅರು = ಕರಿಯರು

ಮುದುಕ + –ಅರು = ಮುದುಕರು

ಮಾನವ : –ಅಂದಿರು

ಅಕ್ಕ + –ಅಂದಿರು = ಅಕ್ಕಂದಿರು

ಅಳಿಯ + –ಅಂದಿರು = ಅಳಿಯಂದಿರು

ತಮ್ಮ + –ಅಂದಿರು = ತಮ್ಮಂದಿರು

ಮಾನವವಲ್ಲದ ಬಹುವಚನ ರೂಪ – ಗಳು ಕೂಡ ಕೆಲವು ನಿರ್ದಿಷ್ಟ ಪರಿಸರಗಳಲ್ಲಿ ಮಾನವಕ್ಕೆ ಬಳಕೆ ಆಗುತ್ತದೆ.

ಮಾನವ : – ಗಳು

ವಿದ್ಯಾರ್ತಿ + – ಗಳು = ವಿದ್ಯಾರ್ತಿಗಳು

ಮಂತ್ರಿ + ಗಳು = ಮಂತ್ರಿಗಳು

ಗುರು + –ಗಳು = ಗುರುಗಳು

ಮಾನವವಲ್ಲದ : –ಗಳು

ಕಲ್ಲು + –ಗಳು = ಕಲ್ಲುಗಳು

ನಾಯಿ + –ಗಳು = ನಾಯಿಗಳು

ಮನೆ + –ಗಳು = ಮನೆಗಳು

ಮರ + –ಗಳು = ಮರಗಳು

ಮಾನವವಲ್ಲದ : –ಕಳು

ಮಗು + –ಕಳು = ಮಕ್ಕಳು

ವಿಬಕ್ತಿ ಪ್ರತ್ಯಯಗಳು : ಒಂದು ವಾಕ್ಯವಲ್ಲಿ ಇರುವ ನಾಮಪದ ಅವರಲ್ಲಿರುವ ಕ್ರಿಯಾಪದದೊಂದಿಗೆ ಎಂತಹಾ ಸಂಬಂದವನ್ನು ಹೊಂದಿದೆ ಎಂಬುದನ್ನು ತಿಳಿಸುವುದೆ ವಿಬಕ್ತಿ. ಈ ಕೆಲಸವನ್ನು ಮಾಡುವ ಆಳಮಟ್ಟದ ಸಂಬಂದಕ್ಕೆ ಕಾರಕ ಎಂದು ಕರೆಯಲಾಗುತ್ತದೆ. ಕಾರಕವನ್ನು ಅಬಿವ್ಯಕ್ತಿಸುವಂತವು ವಿಬಕ್ತಿಗಳಾಗಿವೆ.

ಕನ್ನಡದಲ್ಲಿ ಪಾರಂಪರಿಕವಾಗಿ ಆರು ಕಾರಕ ಸಂಬಂದಗಳನ್ನು ಮತ್ತು ಏಳು ವಿಬಕ್ತಿ ಪ್ರತ್ಯಯಗಳನ್ನು ವಿವರಿಸಿದ್ದಾರೆ. ಅವುಗಳು ಈ ಕೆಳಗಿನಂತೆ ಇವೆ.

ಕಾರಕ ಸಂಬಂದ	ವಿಬಕ್ತಿ ಪ್ರತ್ಯಯ
ಮಾಡುಗ (ಕರ್‍ತ್ರು)	––
ಆಗುಗ (ಕರ್‍ಮ)	– ಅನ್ನು
ಸಾದನ (ಕರಣ)	– ಇಂದ
ಗುರಿ (ಸಂಪ್ರದಾನ)	– ಕೆ, – ಗೆ
ಬಿಡುಗಡೆ (ಅಪಾದಾನ)	– ಇಂದ
ನಾಮಪದಗಳ ಸಂಬಂದ	– ಅ
ನೆಲೆ (ಅದಿಕರಣ)	– ಅಲ್ಲಿ, – ಆಗ

ಆದುನಿಕ ಕಾಲದಲ್ಲಿ ವಿಬಕ್ತಿ ಮತ್ತು ಕಾರಕಗಳ ಮೇಲೆ ಹೆಚ್ಚಿನ ಚರ್‍ಚೆ ಆಗಿದೆ. ಇಲ್ಲಿ ಈ ವಿಬಕ್ತಿ ಪ್ರತ್ಯಯಗಳಿಗೆ ತುಸು ವಿವರಗಳೊಂದಿಗೆ ಉದಾಹರಣೆಗಳನ್ನು ಕೊಡಬಹುದು.

ಮಾಡುಗ : ವಾಕ್ಯದ ಕರ್‍ತ್ರು, ವಾಕ್ಯದಲ್ಲಿನ ಕೆಲಸವನ್ನು ಮಾಡುವಂತದ್ದು ಕರ್‍ತ್ರುಕಾರಕ ಇಲ್ಲವೆ ಮಾಡುಗ. ಕನ್ನಡದಲ್ಲಿ ಮಾಡುಗದ ಅಬಿವ್ಯಕ್ತಿಗೆ ಯಾವುದೆ ವಿಬಕ್ತಿ ರೂಪ ಇಲ್ಲ. ನಾಮಪದ ತನ್ನ ರೂಪದಲ್ಲಿಯೆ ಮಾಡುಗವನ್ನು ಅಬಿವ್ಯಕ್ತಪಡಿಸಬಲ್ಲದು.

ಉದಾ : ಹೂವು ಅರಳಿತು

ಬೆಳಕು ಹರಿಯಿತು

ನೆಲೆ : ವಾಕ್ಯದಲ್ಲಿ ಇರುವ ಕೆಲಸದ ಜಾಗವನ್ನು ಹೇಳುವುದು ನೆಲೆ. –ಅಲ್ಲಿ ಎಂಬ ರೂಪವು ಶಿಶ್ಟಕನ್ನಡದಲ್ಲಿ ವಿಶೇಶವಾಗಿ ನೆಲೆಯನ್ನು ಹೇಳುವುದಕ್ಕೆ ಬಳಕೆಯಲ್ಲಿದೆ. ಅದರಂತೆ –ಆಗ ಎಂಬುದು ಆಡುಕನ್ನಡದಲ್ಲಿ ವಿಶೇಶವಾಗಿ ಬಳಕೆಯಲ್ಲಿದೆ.

ಉದಾ : ಶಿಶ್ಟಕನ್ನಡ –ಅಲ್ಲಿ	ಮನೆಯಲ್ಲಿ ಇರು
	ಕಾಡಿನಲ್ಲಿ ಇದೆ
ಆಡುಗನ್ನಡ (ಮುಸ್ಕಿ ಕನ್ನಡ)	–ಆಗ
	ಮನ್ಯಾಗ ಇರು
	ಅಡಿವ್ಯಾಗ ಅಯ್ತಿ

ಗುರಿ : ಕೆಲಸದ ಗುರಿ ಯಾವುದು ಎಂಬುದನ್ನು ಸ್ಪಷ್ಟಪಡಿಸುವುದು ಗುರಿ. –ಕೆ/ಕ್ಕೆ ಮತ್ತು –ಗೆ ಎಂಬ ಎರಡು ರೂಪಗಳು ವಿಶೇಶವಾಗಿ ಶಿಶ್ಟಕನ್ನಡದಲ್ಲಿ ಬಳಕೆಯಲ್ಲಿವೆ. –ಕೆ/ಕ್ಕೆ ಎಂಬುದು 'ಅ'ಕೊನೆ ಪದಗಳಿಗೆ ಮತ್ತು ಉಳಿದಂತೆ ಅಂದರೆ 'ಇ', 'ಉ' ಮತ್ತು 'ಎ'ಕೊನೆ ಪದಗಳಿಗೆ –ಗೆ ಎಂಬ ರೂಪ ಸೇರುತ್ತದೆ.

ಉದಾ : –ಕೆ/ಕ್ಕೆ: ಹೊಲಕ್ಕೆ ಹೊರಡಿ
ನೆಲಕ್ಕೆ ಬಿತ್ತು
–ಗೆ: ಹರಿಗೆ ಕೊಡಿ
ಊರಿಗೆ ಹೊರಟಳು
ಮನೆಗೆ ಬಂದನು

ಆಗುಗ : ಆಗುಗ ವಾಕ್ಯವೊಂದರಲ್ಲಿ ಆಗುವ ಕ್ರಿಯೆಯಿಂದ ರೂಪುಗೊಳ್ಳುವುದು ಇಲ್ಲವೆ ಆ ಕ್ರಿಯೆಯ ಪರಿಣಾಮಕ್ಕೆ ಒಳಗಾಗುವುದು ಆಗಿದೆ. ಕನ್ನಡದಲ್ಲಿ ಇದು ಮಾನವ ಸಂದರ್ಬದಲ್ಲಿ ಕಡ್ಡಾಯ ಮತ್ತು ಮಾನವವಲ್ಲದ ಸಂದರ್ಬದಲ್ಲಿ ಕಡ್ಡಾಯವಲ್ಲ. –ಅನ್ನು ಎಂಬ ರೂಪ ಸಾಮಾನ್ಯವಾಗಿ ಶಿಶ್ಟಕನ್ನಡದಲ್ಲಿ ಆಗುಗವನ್ನು ಹೇಳುವುದಕ್ಕೆ ಬಳಕೆಯಲ್ಲಿದೆ. ಇದರೊಂದಿಗೆ –ನ, –ನ್ನ ಮೊದಲಾದ ರೂಪಗಳು ಕೂಡ ಬಳಕೆಯಲ್ಲಿವೆ. ಕನ್ನಡದಾಗ ಆಗುಗದ ಪ್ರತ್ಯಯವು ಮಾನವವಲ್ಲದ ಸಂದರ್ಬಗಳಲ್ಲಿ ಕಡ್ಡಾಯವಲ್ಲ.

ಉದಾ : –ಅನ್ನು ಕರಿಯನನ್ನು ಕರೆಯಿರಿ
ಹುಡುಗನನ್ನು ಕರೆಯಿರಿ
– ನ ಕುರಿನ ಕಟ್ಟಿರಿ
ನೆಲನ ತೋಡಿರಿ
– ನ್ನ ಅಕ್ಕನ್ನ ಕರೆಯಿರಿ
ಹೊಲನ್ನ ಮಾರಿರಿ

ಮಾನವವಲ್ಲದ ಸಂದರ್ಬಗಳಲ್ಲಿ ಆಗುಗ ಪ್ರತ್ಯಯ ಬಳಕೆ ಆಗುವುದಿಲ್ಲ
ದನ ಕಟ್ಟಿರಿ
ಮಂಚ ಮಾರಿರಿ

ಸಾದನ : ವಾಕ್ಯವೊಂದರಲ್ಲಿ ಇರುವ ಕೆಲಸವನ್ನು ನಡೆಸುವುದಕ್ಕೆ ಸಾದನವಾಗಿರುವುದು ಇದು. ಇದನ್ನು – ಇಂದ ಎಂಬ ರೂಪದ ಮೂಲಕ ಅಬಿವ್ಯಕ್ತಿ ಮಾಡಲಾಗುವುದು. –ಇಂದ ಎಂಬ ರೂಪವು ಬಿಡುಗಡೆಯನ್ನು ಹೇಳುವುದಕ್ಕೂ ಬಳಕೆಯಾಗುತ್ತದೆ.

ಉದಾ : – ಇಂದ ಚಾಕಿನಿಂದ ಕೊಯ್ದರು

ಕಟ್ಟಿಗೆಯಿಂದ ಹೊಡೆದರು

ಬಿಡುಗಡೆ : ವಾಕ್ಯದ ಕೆಲಸ ಎಲ್ಲಿಂದ ಶುರುವಾಗಿದೆ ಎಂಬುದನ್ನು ಇಲ್ಲವೆ ಎಲ್ಲಿಂದ ಬಿಡುಗಡೆಯಾಗಿದೆ ಎಂಬುದನ್ನು ತಿಳಿಸುವುದು ಬಿಡುಗಡೆ. ಇದರ ಅಬಿವ್ಯಕ್ತಿಗೆ ಕನ್ನಡದಾಗ –ಇಂದ ಎಂಬ ರಊಪ ಬಳಕೆಯಲ್ಲಿದೆ.

ಉದಾ : – ಇಂದ ಮನೆಯಿಂದ ಬಾ

ಕಾಡಿನಿಂದ ಬಂದನು

ನಾಮಪದಗಳ ಸಂಬಂದ : ಎರಡು ನಾಮಪದಗಳ ನಡುವೆ ಸಂಬಂದವನ್ನು ಹೇಳುವಂತದ್ದು ಸಂಬಂದ. ಇದು ಕಾರಕ ಸಂಬಂದ ಅಲ್ಲ ಎಂದು ಪಾರಂಪರಿಕರು ವಿವರಿಸಿದ್ದಾರೆ. ಕನ್ನಡದಲ್ಲಿ –ಅ ಇದು ಎರಡು ನಾಮಪದಗಳ ನಡುವಿನ ಸಂಬಂದವನ್ನು ಹೇಳುವುದಕ್ಕೆ ಬಳಕೆಯಾಗುತ್ತದೆ.

ಉದಾ : – ಅ ನನ್ನ ಮನೆ

ಅವರ ಕನಸು

□□□

೬. ಜಿ.ಎಸ್. ಶಿವರುದ್ರಪ್ಪನವರ ಪ್ರವಾಸ ಕಥನಗಳ ವೈಶಿಷ್ಟ್ಯ

– ಡಾ. ಜಿ.ಆರ್. ತಿಪ್ಪೇಸ್ವಾಮಿ

ಪ್ರವಾಸ ಕಥನ ಎಂದಾಕ್ಷಣ 'ದೇಶ ಸುತ್ತಬೇಕು ಕೋಶ ಓದಬೇಕು' ಎಂಬ ಗಾದೆ ಮಾತು ನೆನಪಿಗೆ ಬರುತ್ತದೆ. ದೇಶಸಂಚಾರ ಮಾಡುವುದರಿಂದ ಕುಳಿತಲ್ಲಿಯೇ ಪುಸ್ತಕಗಳನ್ನು ಓದಿ ತಿಳಿಯುವುದರಿಂದ ನಮ್ಮ ತಿಳುವಳಿಕೆ ವಿಸ್ತಾರಗೊಳ್ಳುವುದಂತೂ ನಿಜ. ಹಿಂದಿನ ಕಾಲದಲ್ಲಿ ಇಂಥ ತಿರುಗಾಟಕ್ಕೆ ಹೋಗುತ್ತಿದ್ದುದು ಕಾಶಿ, ರಾಮೇಶ್ವರ, ಹರಿದ್ವಾರಗಳಿಗೆ, ಅದೂ ವಯಸ್ಸಾದ ಮೇಲೆ. ಕಾಶಿಯಾತ್ರೆಗೆಂದು ಹೋಗುವವರು ಮನೆಯ ಬಳಿ ಒಂದು ಗಿಡವನ್ನ ನೆಟ್ಟು ಅದು ಸದಾ ಹಸಿರಾಗಿದ್ದರೆ ಜೀವಂತವಾಗಿದ್ದೇನೆಂದೂ ಬಾಡಿ ಹೋದರೆ ಜೀವಂತವಾಗಿಲ್ಲವೆಂದು ಭಾವಿಸಬೇಕೆಂದೂ ಕುಟುಂಬದ ಸದಸ್ಯರಿಗೆ ಹೇಳಿ ಹೋಗುತ್ತಿದ್ದ ಆಶಯದ ಕತೆಗಳು ಮೌಖಿಕ ಪರಂಪರೆಯಲ್ಲಿವೆ. ದೀರ್ಘಕಾಲ ಮನೆಯಿಂದ ಹೊರಹೊರಟವರು ಏನಾದರೆಂಬುದನ್ನು ತಿಳಿಯಲು ಈಗಿನಷ್ಟು ಮಾಧ್ಯಮಗಳು ಆಗ ಇರಲಿಲ್ಲ. ಅಂಥ ಸಂವಹನ ಸಾಧ್ಯತೆಯನ್ನು ಗಿಡವನ್ನು ನಾಟಿ ಮಾಡುವುದರ ಮೂಲಕ ಅದರ ಹಸಿರಿನ ಮೂಲಕ ಅರ್ಥೈಸಿಕೊಳ್ಳುತ್ತಿದ್ದರು. ಪ್ರವಾಸವೇನಿದ್ದರೂ ಭಾರತದ ಒಳಗೆ ನಡೆಯುತ್ತಿತ್ತು. ಸಮುದ್ರಯಾನ ಮಾಡಿ ವಿದೇಶಗಳಿಗೆ ಭೇಟಿ ನೀಡುವುದು ಭಾರತೀಯ ಸಂಪ್ರದಾಯದಲ್ಲಿ ನಿಷಿದ್ಧವಾಗಿತ್ತು. ಅದನ್ನ ಮೀರಿದರೆ ಶಿಕ್ಷೆಗೆ ಒಳಪಡಬೇಕಾಗಿತ್ತು.

ಆದರೆ ವಿದೇಶಿಯರು ಮಾತ್ರ ಭಾರತಕ್ಕೆ ಬಂದು ಹಲವು ಕಡೆಗಳಲ್ಲಿ ಸಂಚರಿಸಿ ಯಾನ ಮುಗಿದ ನಂತರ ತಮ್ಮ ಅನುಭವ ಕಥನಗಳನ್ನ ರಚಿಸಿದ್ದಾರೆ. ವಿದೇಶಿಯರ ಇಂಥ ಅನುಭವ ಕಥನಗಳು ಎಚ್.ಎಲ್. ನಾಗೇಗೌಡರು ಹೊರತಂದಿರುವ 'ಪ್ರವಾಸಿಕಂಡ ಇಂಡಿಯಾ'ದ ಆರು ಸಂಪುಟಗಳಲ್ಲಿ ವಿಸ್ತಾರವಾಗಿ ಪ್ರಕಟಗೊಂಡಿರುವುದನ್ನ ಗಮನಿಸಬಹುದು. ಆದರೆ ಭಾರತೀಯರಲ್ಲಿ ಹಿಂದಿನವರು ವಿದೇಶಗಳಿಗೆ ಹೋಗಿ ಈ ರೀತಿಯ ಅನುಭವಗಳನ್ನು ವಿಸ್ತಾರವಾಗಿ ಪ್ರಕಟಪಡಿಸಿದ

ಗ್ರಂಥಗಳಾವುವೂ ನಮ್ಮ ಗಮನಕ್ಕೆ ಬರುವುದಿಲ್ಲವೆನ್ನಬಹುದು. 'ಪ್ರವಾಸ ಸಾಹಿತ್ಯ'ವೆಂಬ ಪ್ರಕಾರ ನಮ್ಮ ಗಮನ ಸೆಳೆಯುವುದು ಮಾತ್ರ ಆಧುನಿಕ ಸಂದರ್ಭದಲ್ಲಿ, ಅದು ಸಾಕಷ್ಟು ಬೆಳೆದಿದೆ. ಇನ್ನುಳಿದ ಸೃಜನಶೀಲ ಪ್ರಕಾರಗಳಿಗಿರುವ ಮನ್ನಣೆ ಇದಕ್ಕೂ ಸಂದಿದೆ.

ಅದರಲ್ಲೂ ಒಂದೇ ಸ್ಥಳಕ್ಕೆ ಹೋಗಿ ಅನುಭವಗಳನ್ನು ಅಭಿವ್ಯಕ್ತಿಸಿದವರು ಹಲವರಿದ್ದಾರೆ. ಅನುಪಮ ನಿರಂಜನ (ಅಂಗೈಯಲ್ಲಿ ಯೂರೋ ಅಮೆರಿಕ ೧೯೮೪), ಕೃಷ್ಣಾನಂದ ಕಾಮತ್ (ನಾನು ಅಮೆರಿಕೆಗೆ ಹೋಗಿದ್ದೆ ೧೯೬೯), ಕೆ.ಎನ್. ಕೃಷ್ಣಮೂರ್ತಿರಾವ್ (ಅಮೆರಿಕ ಪ್ರವಾಸದ ಅನುಭವಗಳು ೧೯೮೮), ಕೆ. ಗಣೇಶಮಲ್ಯ (ಅಮೆರಿಕದಲ್ಲಿ ಅರವತ್ತು ದಿನಗಳು ೧೯೭೨), ಗೊರೂರು (ಅಮೆರಿಕದಲ್ಲಿ ಗೊರೂರು ೧೯೭೯), ಗೌತಮ್ ಎಸ್ (ನಯಾಗಾರಕ್ಕೆ ಐನೂರು ಮೈಲಿ ೧೯೮೧), ಪ್ರಭುಶಂಕರ (ಅಮೆರಿಕದಲ್ಲಿ ನಾನು ಶಾಂತಿ ೧೯೭೮), ಹೋ. ಶ್ರೀನಿವಾಸಯ್ಯ (ಜಯಶ್ರೀಕಂಡ ಅಮೆರಿಕ ೧೯೮೯), ಉ.ಕಾ. ಸುಬ್ರಾಯಾಚಾರ್ (ಅಮೆರಿಕಾ ಅನುಭವ ೧೯೮೫), ರಾ.ಯ.ಧಾರವಾಡಕರ (ನಾನು ಕಂಡ ಅಮೆರಿಕೆ ೧೯೮೫), ಬಿ.ಜಿ.ಎಲ್. ಸ್ವಾಮಿ (ಅಮೆರಿಕಾದಲ್ಲಿ ನಾನು ೧೯೬೭), ಕೆ.ರಾಜೇಶ್ವರಿಗೌಡ (ಅದ್ಭುತ ಅಮೆರಿಕ ಮತ್ತು ಅನ್ಯ ರಾಷ್ಟ್ರಗಳಲ್ಲಿ ೨೦೦೦) – ಮುಂತಾದವರು ಅಮೆರಿಕಾ ದೇಶಕ್ಕೆ ಹೋಗಿಬಂದಿದ್ದಾರೆ. ತಮ್ಮ ಕೃತಿಗಳಲ್ಲಿ ಅನುಭವಗಳನ್ನು ದಾಖಲಿಸಿದ್ದಾರೆ. ಇವೆಲ್ಲವೂ ಭಿನ್ನ ರುಚಿ–ಅಭಿರುಚಿಗಳನ್ನ ನೀಡುವಂಥವು, ಬಗೆಬಗೆಯ ನೋಟಗಳನ್ನ ನೀಡುವಂಥವು. ಒಬ್ಬೊಬ್ಬರು ದೇಶವನ್ನ ನೋಡುವ ದೃಷ್ಟಿ, ನೋಡಿದ್ದನ್ನು ನಿರೂಪಿಸುವ ಕ್ರಮ ವೈವಿಧ್ಯಮಯವಾಗಿ ಗೋಚರವಾಗುವುದರಿಂದ ಒಬ್ಬೊಬ್ಬರದೂ ಒಂದೊಂದು ಶೈಲಿ ಗೋಚರವಾಗುತ್ತದೆ. ಹೀಗಾಗಿ ಪ್ರವಾಸ ಸಾಹಿತ್ಯ ಬರೆಯುವವರ ವಿಶಿಷ್ಟತೆಯನ್ನ ಎತ್ತಿಹಿಡಿಯುವ ಮುಖ್ಯ ಸಾಹಿತ್ಯ ಪ್ರಕಾರವಾಗಿ ಕಂಡುಬರುತ್ತದೆ.

ಜಿ.ಎಸ್. ಶಿವರುದ್ರಪ್ಪ ಅವರು ರಚಿಸಿದ ಪ್ರವಾಸ ಕಥನಗಳು ನಾಲ್ಕು : ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ (೧೯೭೩), ಗಂಗೆಯ ಶಿಖರಗಳಲ್ಲಿ (೧೯೮೫), ಅಮೆರಿಕದಲ್ಲಿ ಕನ್ನಡಿಗ (೧೯೯೫), ಇಂಗ್ಲೆಂಡಿನಲ್ಲಿ ಚತುರ್ಮಾಸ (೧೯೯೭). ತಮ್ಮ ಮೊದಲ ಪ್ರವಾಸ ಕಥನದ ಆರಂಭದಲ್ಲಿ (ಕಾಲಚಕ್ರ) 'ನನಗೆ ಸುಮ್ಮನೆ ಸುತ್ತುವುದೆಂದರೆ ತುಂಬ ಇಷ್ಟ', 'ಕಾಲಲ್ಲಿ ಚಕ್ರವಿರಬೇಕು', 'ಪ್ರವಾಸ ಮಾಡುವ ಯಾವ ಅವಕಾಶವನ್ನು ನಾನು ಕಳೆದುಕೊಳ್ಳಲು ಇಚ್ಛಿಸುವುದಿಲ್ಲ' ಎಂದಿದ್ದಾರೆ. 'ಸುತ್ತುವಾಗಲೇ ಓದುವುದು, 'ಓದುವುದೆಂದರೆ ಪುಸ್ತಕದಿಂದ ಅಲ್ಲ' ರೈಲು ಬಸ್ಸುಗಳಲ್ಲಿ

ಕುಳಿತು ಪುಸ್ತಕ ತೆಗೆದು ಓದುವವರನ್ನ ಕಂಡರೆ ಆಗುವುದಿಲ್ಲವೆನ್ನುವ ಜಿ.ಎಸ್.ಎಸ್. ಕಿಟಕಿಯ ಮೂಲಕ ದೃಶ್ಯ ಪರಂಪರೆಗಳು ನೀಡುವ ಸೊಗಸನ್ನ, ಯಾವ ಪುಸ್ತಕದಿಂದಲೂ ಪಡೆಯಲು ಆಗುವುದಿಲ್ಲ ಎನ್ನುತ್ತಾರೆ. ಈ ರೀತಿ ಹೇಳುವುದರ ಮೂಲಕ ಪ್ರವಾಸದ ಅಗತ್ಯ ಮತ್ತು ಪ್ರಯೋಜನವನ್ನು ಯಾರೂ ಕಳೆದುಕೊಳ್ಳ ಬಾರದು ಎಂಬ ಧ್ವನಿಗೆ ಒತ್ತು ನೀಡುತ್ತಾರೆ.

ರಷ್ಯಾದ ರಾಜಧಾನಿ ಮಾಸ್ಕೊ. ಅಲ್ಲಿಯ ಶೈಕ್ಷಣಿಕ ಹಾಗೂ ಸಾಹಿತ್ಯಿಕ ನೆಲೆಗಳನ್ನ ವಿವರಿಸುವ ಕೃತಿ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ', ವಿಚಾರವಂತರನ್ನ, ಕಲಾವಿದರನ್ನು ಜಿ.ಎಸ್.ಎಸ್. ಭೇಟಿ ಮಾಡುತ್ತಾರೆ. ವಿದೇಶಗಳಿಗೆ ಹೋಗುವವರು ಅಲ್ಲಿಯ ಪ್ರಗತಿ ಸಂಪತ್ತುಗಳನ್ನ ಕಣ್ತುಂಬಿಕೊಂಡವರು ತೀರ ಕಡಿಮೆ. ಅಂತ ವಿರಳರಲ್ಲಿ ಜಿ.ಎಸ್.ಎಸ್. ಪ್ರಮುಖರು. ಪ್ರವಾಸ ಕಥನ ಬರೆಯಲು ಹೊರಟವರಿಗೆ ಮುಖ್ಯವಾಗಿ ಚಾರಿತ್ರಿಕ ಪ್ರಜ್ಞೆ ಇರಬೇಕು. ಅದೆಲ್ಲವನ್ನು ವಿವರಿಸಿ ಹೇಳುವ ಸಂಯಮಶೀಲತೆ ಇರಬೇಕು. ಇದನ್ನ ಮರೆತರೆ ನ್ಯಾಯ ದೊರಕಿಸಿದಂತಾಗುವುದಿಲ್ಲ, ಸಿ.ವೀರಣ್ಣನವರು ಹೇಳುವಂತೆ "ಇವಲ್ಲದೆ ಈ ಬಗೆಯ ಬರವಣಿಗೆ ಕೇವಲ ಸಾಹಿತ್ಯವಾಗಿರದೆ ಆ ಜನಾಂಗದ ಅಭಿವೃದ್ಧಿ ಸಂಸ್ಕೃತಿಗಳ ಅಳತೆಗೋಲೂ ಆಗುವುದರಿಂದ ಅದಕ್ಕೆ ಹಿನ್ನೆಲೆಯಾಗಬೇಕಾದ ಆ ಜನತೆಯ ಜೀವನ ವ್ಯವಸ್ಥೆ ಅರಿವು ಭಾಷೆಯ ಮೂಲಕ ಕಾಣಬರುವ ಬದುಕು ಅವರೊಂದಿಗೆ ಸಾಕಷ್ಟು ಕಾಲ ಬದುಕುವ ಅವಕಾಶ ಇವುಗಳೆಲ್ಲ ಇರಬೇಕಾಗುತ್ತದೆ. ಇವುಗಳಲ್ಲಿ ಯಾವುದೊಂದು ಕಡಿಮೆಯಾದರೂ ನಾವು ಆ ಜನತೆಯ ಜೀವನದ ಬಗ್ಗೆ ತೆಗೆದುಕೊಳ್ಳಬಹುದಾದ ತೀರ್ಮಾನಗಳು ಅವುಗಳನ್ನು ಹೇಳಿದ ವ್ಯಕ್ತಿಯ ಆಲೋಚನೆಯ ಇತಿಮಿತಿಗಳನ್ನ ಮಾತ್ರ ತಿಳಿಸುತ್ತವೆ. ಈ ಹಿನ್ನೆಲೆಯಲ್ಲಿ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಕೃತಿಯನ್ನು ಗಮನಿಸುವುದು ಹೆಚ್ಚು ಸೂಕ್ತ" (ಸ್ನೇಹ ಕಾರ್ತೀಕ ಪು.೩೨೮).

ಮಾಸ್ಕೋದಲ್ಲಿ ಮೊದಲು ಕಾಣಿಸುವುದು ಜನತೆಯ ಅವಶ್ಯಕತೆಗೆ ತಕ್ಕಂತಿರುವ ವಾಸಗೃಹಗಳು. ಕುಟುಂಬದ ಸದಸ್ಯರಿಗನುಗುಣವಾಗಿ 'ನೆಲೆ' ನಿರ್ಮಾಣವಾಗಿರುತ್ತದೆ. ಅಧಿಕಾರ, ಅಂತಸ್ತನ್ನ ಅವಲಂಬಿಸಿರುವುದಿಲ್ಲ. ನಿರುದ್ಯೋಗದ ಸಮಸ್ಯೆ ಇಲ್ಲ. ವಯಸ್ಸಾದ ಮೇಲೆ ಅನಾಥರಾಗುವ ಭಯಗಳಿಲ್ಲ. ಮಕ್ಕಳ ಪಾಲನೆಯ ಜವಾಬ್ದಾರಿ ಸರ್ಕಾರದ ಮೇಲಿದೆ. ದುಡಿಮೆಯಲ್ಲಿ ಮುಂಚೂಣಿಯಲ್ಲಿರುವ ಸ್ತ್ರೀಯರು ದೈನ್ಯತೆಯಿಂದ ಬಿಡುಗಡೆ ಪಡೆದಿದ್ದಾರೆ. ಹೀಗೆ ಜಿ.ಎಸ್.ಎಸ್. ಅಲ್ಲಿಯ ಜನಜೀವನ, ಸಾಮಾಜಿಕ ಸ್ಥಿತಿಗತಿಗಳ ಬಗೆಗೆ ಬರೆಯುತ್ತಾರೆ.

ಚಾರಿತ್ರಿಕವಾಗಿಯೂ ಮಹತ್ವ ಪಡೆದ ನಗರ ಮಾಸ್ಕೋ. ತಮ್ಮ ನೆಲದ ಚರಿತ್ರೆಯ ಬಗೆಗೆ ಜನಕ್ಕೆ ಎಲ್ಲಿಲ್ಲದ ಅಭಿಮಾನ. ಇತಿಹಾಸದಿಂದ ಕಲಿಯಬಹುದಾದ ಅಂಶಗಳು ಬಹಳವೆಂಬ ನಂಬಿಕೆ ಅವರದು. ಆದ್ದರಿಂದ ಅದನ್ನ ಶುಚಿಯಾಗಿಟ್ಟುಕೊಳ್ಳಲು ಅವರು ಮಾಡುವ ಪ್ರಯತ್ನಗಳು ಹಲವಾರು. ಶುಭ್ರತೆಗಾಗಿ ಎಚ್ಚರ ವಹಿಸುತ್ತಾರೆ. ಗಸ್ತೆಯ ಅಕ್ಕಪಕ್ಕಗಳಲ್ಲಿ ಗಿಡಮರಗಳನ್ನ ಬೆಳೆಸುತ್ತಾರೆ. ಸಸ್ಯ ಸಂಪತ್ತಿನಿಂದ ಮನುಷ್ಯನ ಶಾರೀರಿಕ ಮಾನಸಿಕ ಆರೋಗ್ಯ ಸುಧಾರಿಸುತ್ತದೆಂಬುದನ್ನು ಅವರು ಕಂಡುಕೊಂಡಿದ್ದಾರೆ. ಅದೇರೀತಿ ಶೈಕ್ಷಣಿಕ, ಸಾಹಿತ್ಯಿಕ ನೆಲೆಗಳನ್ನ ಜಿ.ಎಸ್.ಎ.ಸ್. ಪರಿಚಯಿಸುತ್ತ ಅದರೊಂದಿಗೆ ಭಾರತೀಯ ವ್ಯವಸ್ಥೆಯನ್ನ ಹೋಲಿಸಿ ನೋಡುವಂತೆ ಓದುಗರನ್ನ ಸಜ್ಜುಗೊಳಿಸುತ್ತಾರೆ. ವಿದ್ಯಾರ್ಥಿ ಸಮುದಾಯದಲ್ಲಿ ಅಶಿಸ್ತಿಲ್ಲ, ವಿಶ್ವವಿದ್ಯಾಲಯಗಳಲ್ಲಿ ಶುಭ್ರ ವಾತಾವರಣವಿದೆ. ಈ ರೀತಿಯ ಮಾತುಗಳನ್ನ ಕೇಳಿದಾಗ ನಮ್ಮಲ್ಲಿ ಯಾಕೆ ಅವ್ಯವಸ್ಥೆಗಳಿವೆ? ಎಂಬ ಪ್ರಶ್ನೆ ಮೂಡುವಂತಾಗುತ್ತದೆ. ಧರ್ಮ, ದೇವರು ಬಗೆಗೆ ದೂರವಿರುವವರು ಲೆನಿನ್‌ನನ್ನು ದೇವರನ್ನಾಗಿಸಿದಂತೆ ಕಾಣುತ್ತದಂತೆ. ಆತನ ಶವಾಲಯದ ಬಗೆಗೆ ಜನ ತೋರುವ ಗೌರವವನ್ನು ಗಮನಿಸಿ ಜಿ.ಎಸ್.ಎಸ್. ಈ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಪ್ರಸಿದ್ಧ ಕಾದಂಬರಿಕಾರ ಟಾಲ್‌ಸ್ಟಾಯ್‌ನ ಸ್ವಂತ ಊರು ಯಾಸ್ನಾಯಾ ಪೋಲ್ಯಾನಕ್ಕೆ ಪ್ರವೇಶಿಸಿದ ತಕ್ಷಣ ಜಿ.ಎಸ್.ಎಸ್. ಅಲ್ಲಿರುವ ಪ್ರಶಾಂತ ಹಸಿರು ವಾತಾವರಣದಿಂದ ರೋಮಾಂಚನಗೊಳ್ಳುತ್ತಾರೆ. ಟಾಲ್‌ಸ್ಟಾಯ್‌ನ ಎಸ್ಟೇಟ್ ಮ್ಯೂಸಿಯಂ ಗೇಟ್ ದಾಟಿದ ನಂತರ ಸಾಗುವ ವಿಶಾಲವಾದ ಕೆರೆಯಲ್ಲಿ ಆತ ಈಜುತ್ತಿದ್ದನಂತೆ. ಚಳಿಗಾಲದಲ್ಲಿ ಹಿಮಹಾಸಿನ ಮೇಲೆ ಸ್ಕೇಟಿಂಗ್ ಆಡುತ್ತಿದ್ದನಂತೆ. ಮರವೊಂದರ ಕೆಳಗಿನ ಹಾಸುಗಲ್ಲಿನ ಮೇಲೆ 'ಟಾಲ್‌ಸ್ಟಾಯ್ ಹುಟ್ಟಿದ್ದು ಇಲ್ಲಿ' ಎಂಬ ಬರಹವಿದೆಯಂತೆ. ದಟ್ಟವಾಗಿರುವ ಬೃಹತ್ತಾದ ಮರಗಳು ಕವಾಯತಿಗೆ ನಿಂತಹಾಗಿವೆಯಂತೆ. ಯಾತ್ರೆಗೆ ಬಂದವರಂತೆ ಸಂಚರಿಸುತ್ತಿರುವಾಗ ಕುವೆಂಪು ಅವರ ನೆನಪಾಗುತ್ತಿದೆ. ಇಬ್ಬರನ್ನ ಹೋಲಿಸಿ ನೋಡುತ್ತಾರೆ. "ಉದ್ದಕ್ಕೂ ನನಗೆ ನಮ್ಮ ಕುವೆಂಪು ಅವರ ನೆನಪು. ಇಂಥದೇ ಹಸುರಿನ ದಟ್ಟಗಾಡಿನ ನಡುವೆ ಬೆಳೆದದ್ದು ಅವರ ಚೇತನ. ಟಾಲ್‌ಸ್ಟಾಯ್‌ನಂತೆಯೇ ಕ್ರಾಂತಿಕಾರಕರಾದ ದಿಟ್ಟ ವ್ಯಕ್ತಿತ್ವ ಕುವೆಂಪು ಅವರದು. ಸತ್ವದಲ್ಲಿ ಗಾತ್ರದಲ್ಲಿ ಅವರ ಕೃತಿಗಳು ಟಾಲ್‌ಸ್ಟಾಯ್ ಬರೆದ ಕೃತಿಗಳನ್ನ ನೆನಪಿಸುತ್ತವೆ. ಟಾಲ್‌ಸ್ಟಾಯ್‌ನಂತೆಯೇ ಕುವೆಂಪು ಅವರೂ ದಟ್ಟವಾದ ಅರಣ್ಯಗಳ ನಡುವೆ ತಮ್ಮ ದಾರಿಗಳನ್ನ ದಿಟ್ಟತನದಿಂದ ತೆರೆದು ನಡೆದವರು" (ಸಮಗ್ರಗದ್ಯ ಪು. ೮೧-೮೨).

ಲೆನಿನ್ ಮತ್ತು ಕ್ರಾಂತಿಯ ಮ್ಯೂಸಿಯಂಗಳು, ಸಮಕಾಲೀನ ಕವಿ ರಾಬರ್ಟ್ ರೊಸ್ಡಸ್ವವೆನ್‌ಸ್ಕಿಯೊಂದಿಗೆ ನಡೆಸಿದ ಸಂಭಾಷಣೆ, ಸಾಮಾಜಿಕ ಜೀವನದಲ್ಲಿ ಹೆಣ್ಣು ಗಂಡುಗಳ ಪಾತ್ರ, ಜನರ ಕಲಾಭಿರುಚಿ, ರಂಗಮಂದಿರ ಮುಂತಾದವುಗಳ ಬಗೆಗೆ ಔಚಿತ್ಯಪೂರ್ಣ ವಿವರಗಳನ್ನ ನೀಡುವುದಲ್ಲದೆ ಆ ಪರಿಸರವನ್ನು ಓದುಗರ ಅಂತರಂಗದಲ್ಲಿ ಜಿ.ಎಸ್.ಎಸ್. ಪ್ರತಿಸೃಷ್ಟಿ ಮಾಡುತ್ತಾರೆ. ಹಸಿರನ್ನ ಕಂಡ ಕವಿಯ ಮನಸ್ಸು ಗದ್ಯವನ್ನೇ ಪದ್ಯವನ್ನಾಗಿಸಿಬಿಡುತ್ತದೆ. ಅಂತಹ ಶಕ್ತಿ ಜಿ.ಎಸ್.ಎಸ್. ಬರವಣಿಗೆಗೆ ಇದೆ ಎಂಬುದು ಇದರಿಂದ ತಿಳಿಯುತ್ತದೆ.

'ಗಂಗೆಯ ಶಿಖರಗಳಲ್ಲಿ', ಗಂಗೋತ್ರಿ, ಯಮುನೋತ್ರಿ, ಕೇದಾರನಾಥ, ಬದರಿನಾಥ ಕ್ಷೇತ್ರಗಳನ್ನ ದರ್ಶಿಸಲು ಜಿ.ಎಸ್.ಎಸ್. ತನ್ನ ಕುಟುಂಬದವರೊಂದಿಗೆ ಮಾಡಿದ ಯಾತ್ರೆ. "ನಾನು ಪುಣ್ಯ ಸಂಪಾದನಾರ್ಥಿಯಾದ ಯಾತ್ರಿಕನೂ ಅಲ್ಲ ಅಥವಾ ಕೇವಲ ಸೌಂದರ್ಯಾನ್ವೇಷಿಯಾದ ಪ್ರವಾಸಿಯೂ ಅಲ್ಲ" ಎಂದು ಅವರೇ ಹೇಳಿಕೊಂಡಿದ್ದಾರೆ. ಗಂಗೆಯ ದೀಪಮಾಲೆ, ಯಮುನೋತ್ರಿಯ ದಾರಿಯಲ್ಲಿ, ಕಣಿವೆಯಲ್ಲಿ ಖಾಂಡವ ದಹನ, ಗಂಗಾಲಹರಿ, ಕೇದಾರನಾಥಕ್ಕೆ, ವಿಶಾಲ ಬದರಿಗೆ, ಬೆಟ್ಟಗಳಿಂದ ಬಯಲಿಗೆ – ಈ ಅಧ್ಯಾಯಗಳಲ್ಲಿ ಅಲ್ಲಿಯ ನಿಸರ್ಗ ಸೌಂದರ್ಯ ದೈವಕ್ಷೇತ್ರಗಳು, ಭಕ್ತರ ಭಾವನೆ, ಭಜನೆಗಳು – ಮುಂತಾದ ಹಲವಾರು ವಿಷಯಗಳನ್ನ ಜಿ.ಎಸ್.ಎಸ್. ಸಹೃದಯ ಓದುಗರ ಗಮನಕ್ಕೆ ತರುತ್ತಾರೆ. ಒಂದೊಂದು ಸ್ಥಳವನ್ನು ಸಂದರ್ಶಿಸಿದಾಗ ಆಗುವ ರೋಮಾಂಚನ ಹೇಳತೀರದು. ಕೇದಾರೇಶ್ವರ ಲಿಂಗ ಕಂಡಾಗಲಂತೂ ನಿರ್ಲಿಪ್ತತೆಯತ್ತ ಅವರ ಬರವಣಿಗೆಯ ಶೈಲಿ ಸಾಗುತ್ತದೆ :

"ಕೇದಾರನಾಥ ಅನ್ನುವುದು ವಾಸ್ತವವಾಗಿ ಒಂದು ಮೂರ್ತಿ ಅಲ್ಲ. ಲಿಂಗವೂ ಅಲ್ಲ. ಅದೊಂದು ಶಿಲಾಖಂಡ. ಹೊರಗೆ ನಾವು ಕಾಣುವ ಮಹಾಪರ್ವತದ ಒಂದು ಸಂಕ್ಷಿಪ್ತ ರೂಪ. ಬೆಟ್ಟವೊಂದರ ಶಿಖರಕಾಯ ಮೈಯನ್ನು ಮೂರು ನಾಲ್ಕು ಅಡಿಗಳಿಗೆ ಭಟ್ಟಯಿಳಿಸಿದರೆ ಹೇಗೋ ಹಾಗಿರುವ ಒಂದು ಶಿಲಾಕೃತಿ. ಅಂದರೆ ಹೊರಗೆ ಕಾಣುವ ಪರ್ವತವನ್ನೇ ಇಲ್ಲಿ ಒಳಗೆ ಸಾಂಕೇತಿಕವಾಗಿ ಪೂಜಿಸುತ್ತಾರೆ ಎಂದರಾಯಿತು". ಹೀಗೆ ಅಲ್ಲಿಯ ನಿಸರ್ಗ ಸೌಂದರ್ಯವನ್ನ ವೈಚಿತ್ರಗಳನ್ನು ಜಿ.ಎಸ್.ಎಸ್. ಬೆರಗುಗಣ್ಣಿನಿಂದ ನೋಡಿ ರಸಸ್ಪರ್ಶವಾಗುವ ರೀತಿಯಲ್ಲಿ ವರ್ಣಿಸುತ್ತಾರೆ. ಹಾಗಾಗಿ ಅವರ ಬರವಣಿಗೆ ಆತ್ಮೀಯತೆಯನ್ನು ಸಂತೋಷವನ್ನು ಮೂಡಿಸುತ್ತದೆ.

ಹರಿದ್ವಾರದ ಗಂಗಾನದಿಯ ಸೀಳುಗಳಲ್ಲಿ ಭಕ್ತಾದಿಗಳು ದೀಪಗಳನ್ನು ತೇಲಿಬಿಡುತ್ತಾರೆ. ಅದನ್ನ ಜಿ.ಎಸ್.ಎಸ್. ಬರವಣಿಗೆಯ ಶೈಲಿ ನಮ್ಮ

ಮುಂದಿಡುವುದು ಹೀಗೆ : "ಸಂಜೆಯ ಕೆಂಪು ಹರಿಯುವ ನೀರಿನ ನಿರಿಗೆಗಳನ್ನು ವರ್ಣಮಯವನ್ನಾಗಿ ಮಾಡುತ್ತಿದ್ದಂತೆಯೇ 'ಗಂಗಾಮಾಯಿ'ಗೆ ಹೆಣ್ಣುಮಕ್ಕಳು, ಗಂಡ ಹೆಂಡತಿಯರು ತೇಲಿಬಿಟ್ಟ ಹೂವಿನ ದೊನ್ನೆಯ ದೀಪಗಳು ನದೀ ಜಲದಲ್ಲಿ ಚಲಿಸ ತೊಡಗಿದವು. ಕೆಲವು ದೊನ್ನೆಗಳು ತೇಲಿಬಿಟ್ಟ ನಂತರ ಒಂದೆರಡು ಮಾರು ದೂರ ಹೋಗುವಷ್ಟರಲ್ಲಿಯೇ ಸೆಳವಿಗೆಸಿಕ್ಕು ಗಿರಗಿರನೆ ಸುತ್ತಿ ತಲೆಕೆಳಗಾಗಿ ಹತ್ತಿದ ದೀಪ ನೀರಲ್ಲಿ ಆರಿ, ಅದರ ಜತೆಗಿದ್ದ ಹೂವುಗಳು ದಿಕ್ಕಾಪಾಲಾಗಿ ಕೊಚ್ಚಿಹೋಗುತ್ತಿದ್ದವು. ಕೆಲವು ದೊನ್ನೆ ದೀಪಗಳು ಸ್ವಲ್ಪ ದೂರದವರೆಗೆ ಉರಿಯುತ್ತಾ ನದೀಜಲದಲ್ಲಿ ಪ್ರತಿಬಿಂಬಿತವಾಗುತ್ತ ಮುಂದೆ ಹೋಗಿ ಇನ್ನಿತರ ದೊನ್ನೆಗಳಿಗೆ ತಗುಲಿ ತಲೆಕೆಳಗಾಗುತ್ತಿದ್ದವು. ಇನ್ನು ಕೆಲವು ಅಬಾಧಿತವಾಗಿ ತೇಲುತ್ತ, ಉರಿಯುವ ದೀಪಗಳ ಸಹಿತ ದೂರಕ್ಕೆ ಹೋಗುತ್ತಿದ್ದವು. ನೋಡಿದಂತೆ ನೋಡಿದಂತೆ ಬಹುಸಂಖ್ಯೆಯಲ್ಲಿ ತೇಲಿಬಿಟ್ಟ ದೀಪಗಳು ನದಿಯ ಹರಹನ್ನೆಲ್ಲ ತುಂಬಿಕೊಂಡು ಅದ್ಭುತವಾದ ದೃಶ್ಯಮಾಲೆಯನ್ನು ನಿರ್ಮಿಸಿದವು" (ಸಮಗ್ರ ಗದ್ಯ ಪ್ರವಾಸ ಚಕ್ರ ಪು.೩೮೭). ಈ ಸಾಲುಗಳನ್ನ ಓದುತ್ತಿದ್ದರೆ ಕಾವ್ಯವನ್ನ ಓದಿದ ಅನುಭವವಾಗಿಬಿಡುತ್ತದೆ. ಯಾಕೆಂದರೆ ನದಿಯಲ್ಲಿ ತೇಲುವ ಮುಳುಗುವ ದೀಪಗಳ ವರ್ಣನೆಯಲ್ಲಿ ಒಂದು ರೀತಿಯ ಲಯಗಾರಿಕೆ ಇದೆ. ಕವಿಯ ಮನಸ್ಸು ಪರಿಶುದ್ಧವಾಗಿದ್ದರೆ ಇಂತಹ ಸರಳ ಮಾತುಗಳಿಗೂ ಕವಿತೆಯ ಶಕ್ತಿ ಬಂದುಬಿಡುತ್ತದೆ. ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಕೇದಾರ, ಬದರಿ ಮುಂತಾದವುಗಳ ಬಗೆಗೆ ಇರುವ ಪುರಾಣ ಸಂಗತಿಗಳನ್ನು ನೆನಪು ಮಾಡುತ್ತಲೇ ಅದರ ಮೂಲಕ ಜಿ.ಎಸ್.ಎಸ್. ವಾಸ್ತವವನ್ನು ಅರಿಯುವಂತೆ ಮಾಡಲು ಪ್ರಯತ್ನಿಸುತ್ತಾರೆ. ಬಹುತೇಕ ಕಡೆಗಳಲ್ಲಿ ವೈಜ್ಞಾನಿಕ ಚಿಂತನೆಯತ್ತ ಗಮನಹರಿಸುವಂತೆ ಶೈಲಿಯನ್ನು ರೂಪಿಸುತ್ತಾರೆ.

"ಗಂಗಾನದಿಯಲ್ಲಿ ಸ್ನಾನ ಮಾಡುವುದರಿಂದ ಪುಣ್ಯ ಸಂಪಾದನೆಯಾಗುತ್ತದೆ. ಸದ್ಗತಿ ಪ್ರಾಪ್ತವಾಗುತ್ತದೆ ಎಂದು ನಾನೆಂದೂ ತಿಳಿದವನಲ್ಲ. ಆದರೆ, ಈ ಒಂದು ಭಾವನೆಯಿಂದ ಇಲ್ಲಿಗೆ ಬಂದು ಸ್ನಾನ ಮಾಡುವ ಇಷ್ಟೊಂದು ಜನರ ನಂಬಿಕೆಯನ್ನ ನಾನು ಸಂಶಯದಿಂದ ಅಥವಾ ಅಗೌರವದಿಂದ ನೋಡುವುದಿಲ್ಲ. ಅವರವರ ನಂಬಿಕೆ ಅವರಿಗೆ, ಅದನ್ನು ಪ್ರಶ್ನಿಸಲು ಅಥವಾ ಕೀಳ್ಗಳೆದು ನೋಡಲು ನನಗೇನು ಅಧಿಕಾರವಿದೆ? ಅವರಿಗಿರುವ ಈ ಭಾವನೆ ಬಹುಶಃ ಈ ಹಿಮಾಲಯದಷ್ಟೇ ಪ್ರಾಚೀನವಾದುದಿರಬೇಕು" (ಅದೇ, ಪು.೪೧೯) – ಹೀಗೆ ಹೇಳುತ್ತ ಗಂಗಾನದಿಯನ್ನು ಕುರಿತು ಈ ದೇಶದ ಮನಸ್ಸು ಇರಿಸಿಕೊಂಡ ಭಾವನೆಗಳು ಹಾಗೂ ತೋರಿಸಿರುವ ಪ್ರತಿಕ್ರಿಯೆಗಳು ಎಂಥ ಅದ್ಭುತವಾಗಿವೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತಾರೆ :

"ಅಲಹಾಬಾದ್ ಹತ್ತಿರ ಪ್ರವಹಿಸುವ ಗಂಗೆಯಲ್ಲಿ ನನ್ನ ದೇಹದ ಒಂದು ಹಿಡಿ ಬೂದಿಯನ್ನು ಬೆರೆಸಬೇಕೆಂದು ನನ್ನ ಮಹದಾಸೆ" ಎಂದು ವಿಚಾರವಾದಿ ಪಂಡಿತ್ ಜವಹರಲಾಲ್ ನೆಹರೂ ಅವರು ಬರೆದ ಮರಣಶಾಸನದ ಕೆಲವು ಸಾಲುಗಳನ್ನ ಜಿ.ಎಸ್.ಎಸ್. ಉಲ್ಲೇಖಿಸುತ್ತಾರೆ. ನೆಹರೂ ಅಂಥವರೇ ಈ ಬಗೆಯ ನಿಲುವನ್ನ ತಾಳಿರುವಾಗ ಲಕ್ಷಾಂತರ ಜನ ಗಂಗೆಯನ್ನು ಕುರಿತು ಅತ್ಯಂತ ಪೂಜ್ಯ ಭಾವನೆಯನ್ನು ಬೆಳೆಸಿಕೊಂಡಿರುವುದರ ಬಗೆಗೆ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಯಾಕೆಂದರೆ ಅವರೇ ಹೇಳುವಂತೆ "ಈ ದೇಶದ ಪುರಾಣಗಳು ಕಾವ್ಯಗಳು ಶಿಲ್ಪಗಳು, ಜಾನಪದ ಅಭಿವ್ಯಕ್ತಿಗಳು ಗಂಗೆಯನ್ನು ಕುರಿತ ಪವಿತ್ರಭಾವನೆಯನ್ನು ಜನಮನದಲ್ಲಿ ಚಿರಂತನವನ್ನಾಗಿಸಿವೆ".

ಗಂಗಾತೀರ ಧ್ಯಾನ ತಪಸ್ಸುಗಳಿಗೆ ಪವಿತ್ರವಾದುದೆಂದೂ ಹೇಳಲಾಗಿದೆ. ಅಲ್ಲಿ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಅನೇಕರ ಸಾಧನೆಯನ್ನು ಕವಿಗಳು ವರ್ಣಿಸಿದ್ದಾರೆ ಎಂದು ಹೇಳುವ ಜಿ.ಎಸ್.ಎಸ್. ಅದರ ಇನ್ನೊಂದು ಮುಖದ ವ್ಯಾಖ್ಯಾನದತ್ತಲೂ ಗಮನ ಸೆಳೆಯುತ್ತಾರೆ. ಅದರಲ್ಲಿ ಅವರ ವೈಚಾರಿಕ ನಿಲವು ವ್ಯಕ್ತವಾಗದಿರದು. "ಗಂಗಾನದಿಯಲ್ಲಿ ಸ್ನಾನ ಮಾಡುವುದರಿಂದ ಪಾಪಗಳೆಲ್ಲ ಪರಿಹಾರವಾಗುತ್ತವೆ ಎಂಬ ಪುರಾಣಗಳ ಘೋಷಣೆಯ ಜೊತೆಗೆ ಈ ದೇಶದ ವಿಚಾರವಂತರಾದ ಸಂತರು 'ಗಂಗಾಜಲದಲ್ಲಿ ಮುಳುಗುವುದರಿಂದ, ನಿಮ್ಮ ಪಾಪ ಪರಿಹಾರವಾಗಿ ಸದ್ಗತಿ ದೊರೆಯುವುದಾದರೆ, ಅದೇ ಜಲದಲ್ಲಿ ಸದಾ ಮುಳುಗಿರುವ ಮೀನು ಕಪ್ಪೆ-ಮೊಸಳೆ ಇತ್ಯಾದಿಗಳಿಗೂ ಯಾಕೆ ಸದ್ಗತಿ ದೊರೆಯಲಾರದು' ಎಂದು ಎಚ್ಚರಿಸಿದ ಮಾತುಗಳೂ ಇವೆ" ಎಂದಿದ್ದಾರೆ. "ಆದರೆ ವಿಚಾರ ಮಾಡುವ ತಲೆಗಳಿಗಿಂತ ಭಜನೆ ಮಾಡುವ ಬಾಯಿಗಳೇ ಹೆಚ್ಚಾಗಿರುವ ಈ ದೇಶದಲ್ಲಿ ಏನು ಮಾಡಿದರೂ ಹಳೆಯ ನಂಬಿಕೆಗಳದ್ದೇ ಮೇಲುಗೈ ಎನ್ನುವ ಗಂಗಾತೀರ್ಥವನ್ನ ಪಾತ್ರೆಗಳಲ್ಲಿ ತುಂಬಿಸಿಕೊಂಡು ಇರಿಸಿಕೊಳ್ಳುತ್ತಿದ್ದ ಮನಸ್ಥಿತಿಯನ್ನು ಕಣ್ಮುಂದೆ ತರುತ್ತಾರೆ. ಈ ಎಲ್ಲ ಇತಿಮಿತಿಗಳ ನಡುವೆಯೂ ಭಾವನೆಗಳಾಚೆ ನೋಡಿದಾಗಲೂ ಗಂಗಾನದಿಗೆ ಇರುವ ಗೌರವಾಸ್ಪದ ಸ್ಥಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಗಂಗೆಯ ಅಹಂಕಾರ ಹರಿಯುವ ರಭಸ ಶಿವನ ಜಟಾಜೂಟದ ತಡೆಯಿಂದ ಯಾವ ರೀತಿ ದಮನವಾಯಿತು ಎಂಬ ಸಂಗತಿಯನ್ನ ಪುರಾಣ, ಕಾವ್ಯ, ಕಲೆಗಳು ವಸ್ತುವನ್ನಾಗಿ ಮಾಡಿಕೊಂಡಿರುವ ಸಂಗತಿಯನ್ನ ಜಿ.ಎಸ್.ಎಸ್. ಸ್ವಾರಸ್ಯಪೂರ್ಣವಾಗಿ ನಮ್ಮ ಮುಂದಿಡುತ್ತಾರೆ. (ಅದೇ.ಪು.೪೨೭). ಅವರ ಭಾವನೆಗಳು, ಚಿಂತನೆಗಳು ಸಮಸಮವಾಗಿ ಪ್ರಸ್ತುತ ಬರವಣಿಗೆಯಲ್ಲಿ

ಕಾರ್ಯೋನ್ಮುಖವಾಗಿರುವುದು ಕಂಡುಬರುತ್ತದೆ. ಯಾವುದರ ಬಗೆಗೇ ಆಗಲಿ ಮನಮುಟ್ಟುವಂತೆ ವರ್ಣಿಸುವ ಶಕ್ತಿ ಜಿ.ಎಸ್.ಎಸ್. ಬರವಣಿಗೆಯಲ್ಲಿದೆ. ಯಾವುದು ಅಗತ್ಯವೋ ಅಂಥ ಚಾರಿತ್ರಿಕ ಸಂಗತಿಯನ್ನು ಅಲ್ಲಿ ನೀಡುತ್ತಾರೆ. ಪುರಾಣ ಸಂಗತಿಗಳನ್ನ ನೆನಪು ಮಾಡುತ್ತ ಆ ಮೂಲಕ ವಾಸ್ತವವನ್ನು ಅರಿಯುವ ಪ್ರಯತ್ನದಲ್ಲಿ ತೊಡಗುತ್ತಾರೆ. ಒಟ್ಟಾರೆ ಗಂಗೆಯ ಬಗೆಗೆ ಅಪಾರವಾದ ಅಪೂರ್ವವಾದ ಮಾಹಿತಿಯನ್ನು ನೀಡುವ ಕೃತಿ 'ಗಂಗೆಯ ಶಿಖರಗಳು'. ಈ ದೃಷ್ಟಿಯಿಂದ ಮಹತ್ವದ ಪ್ರವಾಸ ಕಥನವಾಗಿದೆ.

"ನಾನು ಅಮೆರಿಕದಲ್ಲಿ ನಮ್ಮ ಕನ್ನಡಿಗರ ನಡುವೆ ಇದ್ದರೂ ಅಮೆರಿಕನ್ನರ ಬದುಕಿನೊಂದಿಗೆ ಬೆರೆಯುವ ಅವಕಾಶ ದೊರೆಯದೇ ಹೋದರೂ, ಅಮೆರಿಕದ ಜೀವನವನ್ನು ಒಬ್ಬ ಭಾರತೀಯನಾಗಿ ನಾನು ಗಮನಿಸಿದ್ದೇನೆ" ಎಂಬುದಾಗಿ ಜಿ.ಎಸ್.ಎಸ್. ತಮ್ಮ ಮೂರನೇ ಪ್ರವಾಸಕಥನ 'ಅಮರಿಕದಲ್ಲಿ ಕನ್ನಡಿಗ'ದಲ್ಲಿ ಹೇಳಿಕೊಂಡಿದ್ದಾರೆ. ಒಂದು ಕಾಲದಲ್ಲಿ ಕೃಷಿಪ್ರಧಾನವಾದ ಗ್ರಾಮೀಣ ಪ್ರದೇಶವಾಗಿದ್ದ ಅಮೆರಿಕಾ ದೇಶ, ಹೇಗೆ ಅತ್ಯುತ್ತಮವಾದ ತಂತ್ರಜ್ಞಾನ ಹಾಗೂ ಕೈಗಾರಿಕೆಗಳಿಗೆ ಹೆಸರಾದ ಪ್ರಬಲ ರಾಷ್ಟ್ರವಾಯಿತೆಂಬುದನ್ನು ಹೆನ್ರಿಪೋರ್ಡ್ ಮತ್ತು ಗ್ರೀನ್ ಫೀಲ್ಡ್ ನಂತಹ ಮ್ಯೂಸಿಯಂಗಳ ಮೂಲಕ ಸೂಚಿಸುವ, ಅರ್ಥೈಸುವ ಕ್ರಮವನ್ನ ಜಿ.ಎಸ್.ಎಸ್. ಮೆಚ್ಚಿಕೊಂಡಿದ್ದಾರೆ. ಹದಿನೇಳು ಅಧ್ಯಾಯಗಳಲ್ಲಿ ಸ್ಯಾಲಿಸ್‌ಬರಿಯ ಸುತ್ತಿನ ಜೀವನೋಲ್ಲಾಸ, ಅಮೆರಿಕದಲ್ಲಿನ ಕನ್ನಡಿಗರ ಕೂಟಗಳು, ಅಮೆರಿಕದ ಪಯಣದ ಕಾರುಗಳ ಪಾರುಪತ್ಯ, ವಿವೇಕಾನಂದರ ಹೆಜ್ಜೆಗುರುತುಗಳ ಹುಡುಕಾಟ, ಜ್ವಾಲಾಮುಖಿಯ ನೆನಪುಗಳು, ಅರಣ್ಯಧಾಮ, ಪ್ರಪಾತವೈಭವ, ಧರ್ಮ ದೇವಸ್ಥಾನ, ಕಾವ್ಯಾಲಾಪ, ಜೂಜು ಮುಂತಾದ ಹಲವಾರು ಸಂಗತಿಗಳತ್ತ ಜಿ.ಎಸ್.ಎಸ್. ಬೆಳಕು ಚೆಲ್ಲುತ್ತಾರೆ.

ಬೆಂಗಳೂರಿನಿಂದ ಅಮೆರಿಕಕ್ಕೆ ಬಂದ ವಿಶ್ವನಾಥ್ ಎಂಬ ಇಂಜಿನಿಯರ ಮತ್ತು ಅವರ ಕುಟುಂಬದ ಬಗೆಗೆ ಪರಿಚಯಿಸುವಾಗ ಅಲ್ಲಿಯ ಭಾಷಾ ಸಮಸ್ಯೆಯತ್ತ ಗಮನಸೆಳೆಯುತ್ತಾರೆ. ಈ ಕುಟುಂಬದವರೇನೊ ಮನೆಯಲ್ಲಿ ಕನ್ನಡವನ್ನ ಮಾತನಾಡುತ್ತಾರೆ. ಅದನ್ನ ಗಮನಿಸಿದ ಜಿ.ಎಸ್.ಎಸ್. ಅಮೆರಿಕದ ಕನ್ನಡಿಗರ ಮನೆಯೊಳಗಣ ಭಾಷಾ ಸಮಸ್ಯೆ ಬಗ್ಗೆ ಹೀಗೆ ಹೇಳಿದ್ದಾರೆ : "ಮಕ್ಕಳು ಮನೆಯಾಚೆ ಹೇಗಾದರೂ ಇರಲಿ, ಆದರೆ, ಮನೆಯೊಳಗೆ ಮಾತ್ರ ಅವು ಕನ್ನಡದಲ್ಲಿಯೇ ವ್ಯವಹರಿಸುವುದು ಅಗತ್ಯವೆಂಬ ಸಂಗತಿಯನ್ನು ಮನದಟ್ಟು ಮಾಡಿಕೊಡಬೇಕಾಗಿದೆ. ತಮ್ಮ ತಮ್ಮ ಮನೆಗಳಲ್ಲಿ ಮಕ್ಕಳು ಕನ್ನಡದಲ್ಲಿ ಮಾತನಾಡದೆ ಇರುವಂಥ ಪರಿಸ್ಥಿತಿಗೆ

ತಂದೆ ತಾಯಂದಿರೇ ಕಾರಣ". ವಿಶ್ವನಾಥ ಅವರು ಅಮೆರಿಕದ ಶಿಷ್ಟಾಚಾರವನ್ನು ಒಪ್ಪಿಕೊಳ್ಳದಿರುವುದು ಜಿ.ಎಸ್.ಎಸ್.ಗೆ ಉಚಿತವೆನಿಸುತ್ತದೆ.

೧೮೯೩ ಸೆಪ್ಟೆಂಬರ್ ೧೧ರಂದು ಚಿಕಾಗೋದಲ್ಲಿ ಸ್ವಾಮಿವಿವೇಕಾನಂದರು ಅಪೂರ್ವ ಭಾಷಣ ಮಾಡಿದ್ದರು; ಜಗತ್ತಿನ ಗಮನಸೆಳೆದಿದ್ದರು. ಆ ಮೂಲಕ ಭಾರತಕ್ಕೆ ಗೌರವವನ್ನು ತಂದುಕೊಟ್ಟಿದ್ದರು. ಈ ಪ್ರಸಂಗ ಪ್ರಪಂಚದ ಧಾರ್ಮಿಕ ವಲಯ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಚಾರಿತ್ರಿಕ ಮಹತ್ವವನ್ನು ಪಡೆದಿತ್ತು. "ಯಾಕೆಂದರೆ ಮೊಟ್ಟಮೊದಲ ಬಾರಿಗೆ ಭಾರತದ ಪ್ರವಾದಿಯೊಬ್ಬ ಪಶ್ಚಿಮ ರಾಷ್ಟ್ರಗಳಿಗೆ ಪೂರ್ವದ ಸಂದೇಶವನ್ನು ಮುಟ್ಟಿಸುವುದರ ಮೂಲಕ ಜಗತ್ತಿನ ಸಾಂಸ್ಕೃತಿಕ ಪ್ರವಾಹಕ್ಕೆ ಭಾರತದ ವಿಚಾರಧಾರೆಯನ್ನು ಸೇರಿಸಿದ್ದು ಇಲ್ಲಿಯೇ ಮತ್ತು ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯ ತತ್ವವನ್ನು ಉದ್ಘೋಷಿಸಿದ ವಿವೇಕಾನಂದರು ಲೋಕವಿಖ್ಯಾತರಾದದ್ದು ಇಲ್ಲಿಯೇ" (ಅದೇ.ಪು.೧೬೪). ಆದ್ದರಿಂದ ವಿವೇಕಾನಂದರು ಭಾಷಣ ಮಾಡಿದ ಸಭಾಭವನ, ಅವರು ನಿಂತ ವೇದಿಕೆಯನ್ನು ನೋಡಬೇಕೆಂದು ಮಹದಾಸೆಯಿಂದ ಜಿ.ಎಸ್.ಎಸ್. ಕ್ಷೇತ್ರಕಾರ್ಯವನ್ನೇ ಮಾಡಿಬಿಡುತ್ತಾರೆ. "ಚಿಕಾಗೋ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ಸ್ ಎಂಬ ಬೃಹತ್ ವಿಸ್ತಾರದ ಕಟ್ಟಡವೊಂದರಲ್ಲಿ ಅದೇ ಹಿಂದೆ ಸರ್ವಧರ್ಮ ಸಮ್ಮೇಳನ ನಡೆದ ಸ್ಥಳ. ಈಗ ಆ ವಿಸ್ತಾರವಾದ ಭವನವನ್ನು ಸಣ್ಣಪುಟ್ಟ ಕೊಠಡಿಗಳನ್ನಾಗಿ ಮಾಡಿ ಆರ್ಟ್ಸ್ ಮ್ಯೂಸಿಯಂ ಮಾಡಿದ್ದಾರೆ" ಎಂಬ ಸಂಗತಿ ತಿಳಿದ ಕೂಡಲೆ ಅವರಿಗಾದ ನಿರಾಶೆ ಅಷ್ಟಿಷ್ಟಲ್ಲ? ಹಿಂದಿನ ದಿನ ಎರಡು ಮೂರು ಗಂಟೆಗಳ ಕಾಲ ಅಲ್ಲಿಯೇ ಸುತ್ತಾಡಿದ್ದ ಅವರಿಗೆ ವಿವೇಕಾನಂದರು ಉಪನ್ಯಾಸ ನೀಡಿದ ಜಾಗ ಅದೇ ಎಂಬುದು ತಿಳಿದಿರಲಿಲ್ಲ. ನವೋದಯ ಕವಿ ಪು.ತಿ.ನ. ಅವರ ಅಳಿಯ ರಂಗಾಚಾರ್ಯರ ಮನೆಯ 'ಕಾವ್ಯಾಲಾಪ', ನಯಾಗಾರ ಜಲಪಾತ, ಅಲ್ಲಿಯ ಪಾಚ್, ಗ್ರಾವೆಲೆಟ್, ಅನಿಟೈಲರ್ ಮುಂತಾದವರ ರೋಮಾಂಚನಕಾರಿ ಸಾಹಸಗಾಥೆಯನ್ನು ಜಿ.ಎಸ್.ಎಸ್. ವರ್ಣಿಸಿದ್ದಾರೆ. ಅವೆಲ್ಲವೂ ಸರಳ ಭಾಷೆ, ಸಹಜಶೈಲಿಯಲ್ಲಿ ಮೂಡಿಬಂದಿದ್ದು ಕೇಳಿದ್ದನ್ನು ಕಂಡದ್ದನ್ನು ಮನಮುಟ್ಟುವಂತೆ ವರ್ಣಿಸುವಲ್ಲಿ ಜಿ.ಎಸ್.ಎಸ್. ಸಮರ್ಥರೆನಿಸಿದ್ದಾರೆ. ಒಟ್ಟಾರೆ ಅಮೆರಿಕದ ಸದ್ಯದ ಪರಿಸ್ಥಿತಿಯನ್ನ ತಾತ್ತ್ವಿಕವಾಗಿ ಶೋಧಿಸುವುದರ ಮುಖೇನ ಕನ್ನಡತನವನ್ನ ಎಚ್ಚರಗೊಳಿಸುವ ಕೆಲಸವನ್ನ ಈ ಕೃತಿಯಲ್ಲಿ ಮಾಡಿದ್ದಾರೆ.

'ಇಂಗ್ಲೆಂಡಿನಲ್ಲಿ ಚತುರ್ಮಾಸ' ಕೃತಿಯಲ್ಲಿ 'ಇಂಗ್ಲೆಂಡ್, ಅಷ್ಟೇನೂ ದೊಡ್ಡ ದೇಶವಲ್ಲ, ಚಿಕ್ಕದೇಶ, ಅದರ ಸಾಧನೆ ದೊಡ್ಡದು ಎನ್ನುವ ಜಿ.ಎಸ್.ಎಸ್.

"ಒಂದು ಕಾಲಕ್ಕೆ ಜಗತ್ತಿನ ವಿವಿಧ ಭಾಗಗಳನ್ನೇ ಒಳಗೊಳ್ಳುವಷ್ಟು ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿದವರು ಈಜನ. ಇಂಗ್ಲೆಂಡಿಗಿಂತ ಎಷ್ಟೋಪಟ್ಟು ದೊಡ್ಡದಾದ ಇಂಡಿಯಾವನ್ನೇ ಸುಮಾರು ಎರಡು ಶತಮಾನಗಳ ಕಾಲ ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದದ್ದು ಈ ಪುಟ್ಟದೇಶ. ಈ ಹೊತ್ತಿಗೂ ಹಿಂದಿನ ಆ ವ್ಯಾಪಕತೆಯನ್ನು ಕಳೆದುಕೊಂಡರೂ ರಾಜಕೀಯವಾದ ಒಂದು ಶಕ್ತಿಯಾಗಿ ತನ್ನ ಪ್ರತಿಷ್ಠೆಯನ್ನು ಕಾಯ್ದುಕೊಂಡಿದೆ ಈ ದೇಶ" ಎಂದಿದ್ದಾರೆ (ಅದೇ' ಪು. ೨೪೮).

ನಿಸರ್ಗ, ಬರ್ಟನ್ನಿನ ಸುತ್ತುಮುತ್ತಿನ ಪರಿಸರ, ಷೇಕ್ಸ್‌ಪಿಯರ್‌ನ ನೆನಪುಗಳು, ಸ್ಕಾಟ್‌ಲೆಂಡಿನ ಕಾಡು ಕಣಿವೆಗಳು ಸರೋವರ ಮಂಡಲಗಳು, ಲಂಡನ್ ನಗರದ ವಿಸ್ಮಯಗಳು – ಆಕರ್ಷಣೆಗಳು ರೋಮನ್ನರ ನೆನಪುಗಳು (ನಗರಬಾತ್), ವರ್ಡ್ಸ್‌ವರ್ತ್ ಓಡಾಡಿದ ಜಾಗಗಳು ಈ ಕವಿಗೆ ಪ್ರೇರಿತವಾದ ಪರಿಸರ, ಥೇಮ್ಸ್ ನದಿಯ ಆಕರ್ಷಣೆ, ಅಲ್ಲಿಯ ಸುರಂಗಮಾರ್ಗ, ರೈಲುಗಳು, ಬಿಸಿನೀರಿನ ಸ್ನಾನಗೃಹಗಳು – ಮುಂತಾದ ಹಲವಾರು ಸಂಗತಿಗಳು ಅಭಿವ್ಯಕ್ತಿ ರೂಪಪಡೆದಿವೆ. ಇಂಗ್ಲೆಂಡಿನ ಹಸಿರು, ಕವಿಕಾವ್ಯಗಳ ಭಾವಲೋಕಗಳು, ಇಂಗ್ಲಿಷರ ಸಾಮಾಜಿಕ ಎಚ್ಚರ, ಸಾಂಸ್ಕೃತಿಕ ಸೂಕ್ಷ್ಮತೆಗಳು, ಐತಿಹಾಸಿಕಪ್ರಜ್ಞೆ ಇವನ್ನೆಲ್ಲ ಜಿ.ಎಸ್.ಎಸ್. ತುಂಬ ನವಿರಾಗಿ ಪರಿಚಯಿಸಿದ್ದಾರೆ. ಅದರ ಮೂಲಕ ಇಂಗ್ಲಂಡಿನ ಬಗ್ಗೆ ಆತ್ಮೀಯಭಾವ ಮೂಡಲು ಕಾರಣವಾಗಿದ್ದಾರೆ.

ಇಂಗ್ಲೆಂಡಿನಲ್ಲಿ ಸಂಚರಿಸುವಾಗ ದಟ್ಟ ಹಸಿರನ್ನ ಕಾಣುತ್ತ ಮಂಡ್ಯ ಪರಿಸರವನ್ನು ಸಹ್ಯಾದ್ರಿ ಪರಿಸರದ ಮಲೆನಾಡನ್ನ ನೆನಪಿಸಿಕೊಳ್ಳುತ್ತಾರೆ. ಡಾರ್ಬಿ, ಬರ್ಮಿಂಗ್‌ಹ್ಯಾಂ, ನಾಟಿಂಗ್‌ಹ್ಯಾಂ, ಆಕ್ಸ್‌ಫರ್ಡ್, ಎಡಿನ್‌ಬರೊ, ಗ್ಲಾಸ್ಗೊ ಇಂಥ ಊರುಗಳನ್ನ ಸುತ್ತಾಡಿದ ಅನುಭವಗಳನ್ನ ಹಂಚಿಕೊಂಡಿದ್ದಾರೆ. ೧೫೬೪ರಲ್ಲಿ ಹುಟ್ಟಿದ ಷೇಕ್ಸ್‌ಪಿಯರ್‌ನ ಸ್ಟ್ರಾಟ್‌ಫರ್ಡ್ ಅಪಾನ್ ಏವನ್ ಎಂಬ ಊರಿಗೆ ಭೇಟಿ ನೀಡಿ ಹೆನ್ರಿಸ್ಟ್ರೀಟ್ ನಲ್ಲಿರುವ ಮನೆಯನ್ನ ನೋಡಿ [illegible] ತಾಣಗಳನ್ನು ಗಮನಿಸುತ್ತಾರೆ. [illegible] ಆತನ ಸಮಾಧಿ [illegible] ತೋರುವ [illegible] – [illegible] ಸಂತಸದಿಂದಲೇ [illegible].

[illegible]

ಸರೋವರ ಮಂಡಲಗಳ ಮಧ್ಯೆಯಾಗಲಿ ಷೇಕ್ಸ್‌ಪಿಯರನ ನೆನಪುಗಳ ನಡುವೆಯಾಗಲಿ ಸುತ್ತಾಡುವುದು ಥೇಟ್ ಪಂಪಕವಿ ಬನವಾಸಿ ನಾಡಿನಲ್ಲಿ ಸುತ್ತಾಡಿದಂತೆ. ಅಲ್ಲಿನ ಹಸಿರು ಪ್ರಶಾಂತತೆಯನ್ನ ಹೀರಿಕೊಳ್ಳುತ್ತ ಅಲ್ಲಿನ ರಸಿಕರ ಕಾವ್ಯಪ್ರೇಮಕ್ಕೆ ಕನ್ನಡಿ ಹಿಡಿಯುತ್ತ ಒಬ್ಬ ಸಾಮಾನ್ಯನಂತೆ ಸರಳವಾಗಿ ಅಡ್ಡಾಡುತ್ತಾರೆ. ನಿಜವಾಗಲು ಆ ದೂರದ ನಾಡಿನಲ್ಲಿ ನಮ್ಮ ಪ್ರೀತಿಯ ಕನ್ನಡಿಗನೊಬ್ಬ ಸಂಚಾರ ಮಾಡುತ್ತಿರುವ ಖುಷಿಯನ್ನ ನೀಡುತ್ತಾರೆ. ಅವರಿಗೆ ಪಂಪ ಪ್ರಶಸ್ತಿ ನೀಡಿದ್ದು ಈ ದೃಷ್ಟಿಯಿಂದಲೂ ಸಾರ್ಥಕವಾಗಿದೆ" (ಹಣತೆ, ಜಿ.ಎಸ್.ಎಸ್. ಅಭಿನಂದನ ಗ್ರಂಥ, ಪು. ೨೩೨).

ಷೇಕ್ಸ್‌ಪಿಯರನ ಹುಟ್ಟಿದೂರಿನಲ್ಲಿ ಹರಿಯುತ್ತಿರುವ ಏವನ್ ನದಿಯ ದಂಡೆಯನ್ನ ಒಂದು ಜೀವಂತವಾದ ಸಾಂಸ್ಕೃತಿಕ, ನೈಸರ್ಗಿಕ ಸ್ಥಳವನ್ನಾಗಿ ಉಳಿಸಿಕೊಂಡಿದ್ದಾರೆ ಬ್ರಿಟಿಷರು. ಅದನ್ನು ಜಿ.ಎಸ್.ಎಸ್. ವರ್ಣಿಸಿದ್ದು ಹೀಗೆ : "ನದಿ ತೀರಾ ಅಗಲವಾಗೇನೂ ಇಲ್ಲ, ನದಿಯ ಎರಡೂ ಕಡೆ ವಿಸ್ತಾರವಾದ ಪಾರ್ಕುಗಳಿವೆ. ಪಾರ್ಕುಗಳಲ್ಲಿ ಮಕ್ಕಳಿಗೆ ಆಟದ ಸೌಕರ್ಯಗಳೂ ನೆರಳನ್ನು ಚೆಲ್ಲುವ ಮರಗಳೂ ಇವೆ. ನದಿಯ ಇಕ್ಕೆಲದಲ್ಲೂ ನೀರಿನಲ್ಲಿ ತಮ್ಮ ನೆರಳನ್ನು ನೋಡಿಕೊಳ್ಳುವಂತೆ ಬಾಗಿದ ದಟ್ಟವಾದ ವಿಲ್ಲೋ ವೃಕ್ಷಗಳಿವೆ. ನದಿಯ ಮೇಲೆ ಹಾದುಹೋಗಿರುವ ಮಧ್ಯಕಾಲೀನ ಮಾದರಿಯ ಎರಡು ಸೇತುವೆಗಳಿವೆ. ಕಳೆದ ಶತಮಾನದವರೆಗೂ ಇಂಗ್ಲೆಂಡಿನ ವಾಣಿಜ್ಯೋದ್ಯಮದ ಸಾರಿಗೆ ವ್ಯವಸ್ಥೆಯ ಮಾಧ್ಯಮವಾದ ಈ ನದಿಯಲ್ಲಿ ಈಗ ಪ್ರವಾಸಿಗಳಿಗಾಗಿ ದೋಣಿ ವಿಹಾರ ವ್ಯವಸ್ಥೆಯಿದೆ. ಒಂದು ಗಂಟೆಯ ಸಂಚಾರಕ್ಕೆ ಎರಡು ಪೌಂಡುಗಳು. ಬೆಳಗಿನಿಂದ ಸಂಜೆಯವರೆಗೆ ಜನ ಈ ನದೀಜಲದಲ್ಲಿ ದೋಣಿಗಳಲ್ಲಿ ಕೂತು ವಿಹರಿಸುತ್ತಾರೆ. ನದಿಯ ತುಂಬ ತೇಲುವ ದೋಣಿಗಳ ಅಕ್ಕಪಕ್ಕದಲ್ಲಿ ನಿರ್ಭಯವಾಗಿ ತೇಲುವ ಹಂಸಗಳು, ಬಾತುಕೋಳಿಗಳು ಅವುಗಳಿಗೆ ಬ್ರೆಡ್ಡಿನ ಚೂರನ್ನೆಸೆದು ಖುಷಿಪಡುವ ಮಕ್ಕಳು, ನದಿಯ ಎರಡೂ ಕಡೆ ಪಾರ್ಕುಗಳ ತುಂಬ ಜನ" (ಸಮಗ್ರ ಗದ್ಯ, ಪು. ೨೬೫).

ಇದೇ ರೀತಿ ಬರ್ನ್ಸ್ ಕಂಟ್ರಿಯ ಗ್ರಾಮೀಣ ಸೌಂದರ್ಯ, ಬರ್ನ್ಸ್ ಹುಟ್ಟಿದ ಗುಡಿಸಲಿನ ಮುಗ್ಧ ಪರಿಸರವನ್ನು ರಕ್ಷಿಸಿಕೊಂಡು ಬಂದ ರೀತಿ, ಗೌರಿಕ್ ಪರ್ವತಾರಣ್ಯದ ಹಸಿರು, ವರ್ಡ್ಸ್‌ವರ್ತ್ ಕವಿ ತನ್ನ ಬಾಲ್ಯದಲ್ಲಿ ಅಲೆದಾಡಿದ ಲೇಕ್‌ಡಿಸ್ಟ್ರಿಕ್ಟಿನ ಪ್ರಶಾಂತ ಪ್ರಕೃತಿ – ಈ ಎಲ್ಲವನ್ನು ಜಿ.ಎಸ್.ಎಸ್. ಎಳೆಎಳೆಯಾಗಿ ವರ್ಣಿಸಿದ್ದಾರೆ.

ಸಂಚಾರಿ ವ್ಯವಸ್ಥೆಯ ಅಲ್ಲಿನ ಶಿಸ್ತಿನೊಂದಿಗೆ ನಮ್ಮ ಸಾರಿಗೆ ವ್ಯವಸ್ಥೆ ಒಡ್ಡುವ ಅನಾನುಕೂಲಗಳನ್ನು ಹೋಲಿಸಿದ್ದಾರೆ. ಮಾಹಿತಿ ಕೇಂದ್ರದ ಅಚ್ಚುಕಟ್ಟಾದ ಪರಿಣತರಾದ ಮಾರ್ಗದರ್ಶಿಗಳ ಬಗೆಗಂತೂ ಮೆಚ್ಚುಗೆಯ ಮಾತುಗಳೇ ಇವೆ. ಯಾಕೆಂದರೆ ಸಾಹಿತ್ಯದ ಬಗ್ಗೆ ಚರಿತ್ರೆಯ ಬಗ್ಗೆ ಸಂಸ್ಕೃತಿಯ ಬಗ್ಗೆ ಈ ಮಾರ್ಗದರ್ಶಿಗಳು ನಿರರ್ಗಳವಾಗಿ ನಡುನಡುವೆ ವಿನೋದಮಯವಾಗಿ ಆಡುವ ಮಾತುಗಳನ್ನಾಲಿಸುತ್ತ ಹೋದಂತೆ, ಅದೊಂದು ಬಗೆಯ ಶಿಕ್ಷಣವೂ ಆಗುತ್ತದೆ ನಮ್ಮ ಪಾಲಿಗೆ" (ಅದೇ ಪು. ೨೫೫).

ರೋಮನ್ನರು ಸ್ನಾನಪ್ರಿಯರಂತೆ. ಅವರ ಸ್ನಾನಗೃಹಗಳ ಬಗೆಗೆ ಜಿ.ಎಸ್.ಎಸ್. ನೀಡುವ ಮಾಹಿತಿಯನ್ನು ಗಮನಿಸಿದರೆ ವಿಶಿಷ್ಟ ಜಾನಪದ ಲೋಕವೊಂದು ನಮ್ಮ ತಿಳುವಳಿಕೆಗೆ ಬರುತ್ತದೆ. ಅವರ ವರ್ಣನೆಯಲ್ಲಿ ಚಾರಿತ್ರಿಕ ನೋಟವಿರುವಂತೆ, ಸಾಂಸ್ಕೃತಿಕ ನೋಟವೂ ಇರುವುದನ್ನು ಕಾಣಬಹುದು : "ಹತ್ತೊಂಬತ್ತನೆ ಶತಮಾನದ ಪ್ರಾರಂಭದವರೆಗೆ ಇಂಗ್ಲೆಂಡಿನ ಜನಕ್ಕೆ ಸ್ನಾನ ಮಾಡಿಯೆ ಅಭ್ಯಾಸವಿರಲಿಲ್ಲವಂತೆ. 'ಶ್ರೀಮಂತರಾದವರೂ ಸಹ ಕೈ ಮುಖ ತೊಳೆದುಕೊಳ್ಳುತ್ತಿದ್ದರಷ್ಟೇ ಹೊರತು ಸ್ನಾನ ಮಾಡುತ್ತಿದ್ದದೂ ಅಪರೂಪವಂತೆ. ಹದಿನೆಂಟನೆಯ ಶತಮಾನದ ಕೊನೆಯಲ್ಲಿಯೆ ಈ ಪರಿಸ್ಥಿತಿ ಇದ್ದ ಮೇಲೆ ರೋಮನ್ನರು ಆಕ್ರಮಿಸಿಕೊಂಡ ಕ್ರಿ.ಶ. ಮೊದಲ ಶತಮಾನದ ಪೂರ್ವಾರ್ಧದಲ್ಲಿ ಇಂಗ್ಲೆಂಡಿನ ಜನ ಹೇಗಿದ್ದಿರಬೇಕು. ಈ ಜನಕ್ಕೆ ರೋಮನ್ನರು ನಾಗರಿಕತೆಯ ಮೊದಲ ಪಾಠಗಳನ್ನ ಕಲಿಸಿದರೆಂದು ಚರಿತ್ರೆ ಹೇಳುತ್ತದೆ. ಅಂದಿನ ಇಂಗ್ಲೆಂಡಿನ ಆ ಜನ ನಾಗರಿಕತೆಯ ಒಂದು ಪಾಠವಾಗಿ ಸ್ನಾನ ಮಾಡುವುದನ್ನು ಕಲಿತರೋ ಇಲ್ಲವೋ ಇಲ್ಲಿ ಬಂದು ನೆಲೆಸಿದ ರೋಮನ್ನರಂತೂ ಸ್ನಾನಗೃಹಗಳನ್ನು ಕಟ್ಟಿಕೊಂಡಿದ್ದಂತೂ ನಿಜ. ಹಾಗೆ ಸ್ನಾನ ಘಟ್ಟಗಳನ್ನು ಕಟ್ಟಲು ಅವರಿಗೆ ವರವಾಗಿ ದೊರೆತದ್ದು ಈ ಪರಿಸರದಲ್ಲಿ ಸಹಜವಾಗಿ ಪುಟಿಯುತ್ತಿದ್ದ ಬಿಸಿನೀರ ಬುಗ್ಗೆಗಳು. ಈ ಬಿಸಿನೀರ ಬುಗ್ಗೆಗಳಿಂದ ಹರಿಯುವ ನೀರನ್ನು ಶೇಖರಿಸುವ ವ್ಯವಸ್ಥೆಯನ್ನು, ಹಾಗೆ ಶೇಖರಗೊಂಡ ನೀರನ್ನು ಹಿಡಿದು ನಿಲ್ಲಿಸಲು ವಿಸ್ತಾರವಾದ ಸ್ನಾನ ಘಟ್ಟಗಳನ್ನು ಹಾಗೂ ಸ್ನಾನ ಘಟ್ಟಗಳ ಸುತ್ತ ಸ್ತಂಭಗಳನ್ನು, ಗೋಡೆಗಳನ್ನು ಛಾವಣಿಯನ್ನು ನಿರ್ಮಿಸಿದರು. ಈ ಸ್ನಾನ ಘಟ್ಟಗಳಲ್ಲಿ ಒಂದು ನಿಶ್ಚಿತವಾದ ಎತ್ತರಕ್ಕೆ ನಿಲ್ಲುವ ನೀರು ಮತ್ತೊಂದು ಕಡೆಯಿಂದ ಹರಿದು ಹೋಗಿ ಏವನ್ ನದಿಯನ್ನು ಸೇರುತ್ತದೆ. ಹೀಗಾಗಿ ಇಂಗ್ಲೆಂಡಿನಂತಹ ಶೀತ ದೇಶದಲ್ಲಿ ಸದಾ ಸುಖೋಷ್ಣವಾದ ನೀರನ್ನು ಚಿಮ್ಮಿಸುವ ಈ ಬುಗ್ಗೆಗಳಿಂದ ನಿರ್ಮಿತವಾದ ಸ್ನಾನಮಂದಿರವನ್ನು ಕೇಂದ್ರವನ್ನಾಗಿಸಿಕೊಂಡು ರೋಮನ್

ಪ್ರಭುಗಳು ಅದರ ಸುತ್ತಲೂ ನಗರವೊಂದನ್ನು ನಿರ್ಮಿಸಿದರು. ಈ ನಗರ ನಿರ್ಮಿತಿಗೆ ದೊರೆತ ಪರಿಸರ ಕೂಡಾ, ಗ್ರೀಸ್ ದೇಶದ ರೋಮ ನಗರಕ್ಕೆ ದೊರೆತ ಪರಿಸರದಂತೆ ಹಲವಾರು ಗುಡ್ಡ ಹಾಗೂ ಕಣಿವೆಗಳ ಪ್ರದೇಶವಾಗಿರುವುದರಿಂದ ಇಡೀ ಊರು ರೋಂ ನಗರದಂತೆ ಗಿರಿಗಳ ಹಾಗೂ ದರಿಗಳ ಏರಿಳಿತಗಳಲ್ಲಿ ಹರಡಿಕೊಂಡಿದೆ (ಅದೇ. ಪು. ೩೩೪-೩೩೫).

ಇಂಗ್ಲೆಂಡಿನ ಜನ ಶಿಷ್ಟಾಚಾರದ ಬಗ್ಗೆ ಮೊದಲ ಸ್ಥಾನ ನೀಡುತ್ತಾರಂತೆ. ಅಂದರೆ ತಾವಾಗಿಯೇ ಮುಂಚೆ ಮ್ಯಾಲೆಬಿದ್ದು ಮಾತನಾಡುವುದಿಲ್ಲ. ಪರಿಚಯ ಮಾಡಿಕೊಳ್ಳುವ ತನಕ ಅವರು ಮಾತನಾಡುವುದಿಲ್ಲ. ಅಮೆರಿಕಾದವರಾದರೆ ಪರಿಚಯವಿರಲಿ ಇಲ್ಲದಿರಲಿ 'ಹಾಯ್' ಅಂತ ಗ್ರೀಟ್ ಮಾಡ್ತ ಮುಗುಳ್ನಗೆಯೊಂದಿಗೆ ಮುಂದೆ ಹೋಗ್ತಾರಂತೆ. ಆದರೆ ಇಂಗ್ಲೆಂಡಿನವರು ಹಾಗಲ್ಲ. ಬಸ್ಸು, ರೈಲುಗಳಲ್ಲಿ ಪತ್ರಿಕೆಗಳನ್ನು ಓದುತ್ತಲೋ ಅತ್ತಿತ್ತ ನೋಡುತ್ತಲೋ ತಟಸ್ಥರಂತೆ ಕೂತಿರ್ತಾರೆ. ಎಕ್ಸ್‌ಕ್ಯೂಸ್‌ಮಿ ಅಂತ ಮಾತನಾಡಿಸಿದ ಮೇಲೆ ಸೌಜನ್ಯದಿಂದ ವರ್ತಿಸುವರಂತೆ. ಪ್ರತಿಯೊಂದು ಮಾತಿಗೂ ಥ್ಯಾಂಕ್ಯೂ, ಬೈಗಳಿದ್ದೇ ಇರುತ್ತವಂತೆ. "ಇಂಥ ಸಂದರ್ಭಗಳಲ್ಲಿ ಕಂಡುಬರುವ ಮಾನವೀಯತೆ ಈ ಪರಿಸರದ ಚೆಲುವಿನ ಇನ್ನೊಂದು ಭಾಗವೆಂಬಂತೆ ಭಾಸವಾಗುತ್ತದೆ". ಅಮೆರಿಕ ಕನ್ನಡಿಗರಲ್ಲಿ ಅಮೆರಿಕ ಜೀವನದ ಬಗೆಗೆ ಬರೆಯುವಾಗ ಜಿ.ಎಸ್.ಎಸ್. ಅಲ್ಲಿ ಮೂರು ಬಗೆಗಳನ್ನು ನಂಬಬಾರದೆಂದು ಹೇಳುವ ನಂಬಿಕೆಯೊಂದಿದೆಯೆಂದು ತಿಳಿಸಿದ್ದಾರೆ. Wife, Weather and Work. ಮದುವೆಯಾದ ಹೆಂಡತಿ (Wife) ಯಾವಾಗ ಬಿಟ್ಟು ಹೊರಟು ಹೋಗುತ್ತಾಳೆ ಎಂದು ಹೇಳಲುಬಾರದು. ಅಲ್ಲಿಯ ಹವಾಮಾನ (Weather) ಯಾವಾಗ ಯಾವ ರೂಪ ತಾಳುತ್ತದೋ ಹೇಳಲ್ಲಿಕ್ಕಾಗುವುದಿಲ್ಲ. ಕೆಲಸ (Work) ಸಹ ಅನಿಶ್ಚಿತ. ಮೇಲಧಿಕಾರಿ ಯಾವಾಗ ಯಾರನ್ನ ಕೆಲಸದಿಂದ ತೆಗೆಯುತ್ತಾನೆಂಬುದೇ ತಿಳಿಯುವುದಿಲ್ಲವಂತೆ.

ಅಮೆರಿಕದ ಮೂಲನಿವಾಸಿಗಳೆಂದರೆ ರೆಡ್‌ಇಂಡಿಯನ್ನರು. ಇವರ ಪಾಲಿಗೆ ನಯಾಗಾರ ಒಂದು ದೈವೀ ಅದ್ಭುತ. ನಯಾ ಎಂದರೆ ಅವರ ಭಾಷೆಯಲ್ಲಿ 'ಗುಡುಗುವ ನೀರು' ಎಂದರ್ಥ. "ವರ್ಷಕ್ಕೆ ಒಂದು ಸಲ ತಮ್ಮ ಜನಾಂಗದ ಚೆಲುವೆಯರ ಕನ್ಯೆಯೊಬ್ಬಳನ್ನು ಸರ್ವಾಲಂಕಾರಗಳಿಂದ ಶೃಂಗಾರಮಾಡಿ ಹೂವಿನಿಂದ ಅಲಂಕರಿಸಿದ ದೋಣಿಯೊಂದರಲ್ಲಿ ಕೂರಿಸಿ, ಈ ನದೀ ಜಲದ ಮೇಲೆ ತೇಲಿಬಿಡುತ್ತಿದ್ದರಂತೆ. ಹಾಗೆ ಬಿಟ್ಟ ದೋಣಿ ನಯಾಗಾರ ನದೀ ಪ್ರವಾಹದ ಗುಂಟ ವೇಗವಾಗಿ ಹಾಯ್ದು ಸೀದಾ ನಯಾಗಾರ ಜಲಪಾತದೊಳಗೆ ಬಿದ್ದು, ಆ ಕನ್ಯೆ ನದೀ ದೇವತೆಗೆ

ಅರ್ಪಿತವಾಗುತ್ತಿದ್ದಳಂತೆ. ಇದು ಅನುಕ್ರಮವಾಗಿ ಸರದಿ ಮೇಲೆ ಆ ಜನಾಂಗದಲ್ಲಿ ನಡೆದುಕೊಂಡು ಬಂದ ಒಂದು ಧಾರ್ಮಿಕ ಸಂಪ್ರದಾಯವಾಗಿತ್ತಂತೆ. ಒಮ್ಮೆ ಈ ಸರದಿ ಆ ಜನಾಂಗದ ನಾಯಕನ ಪಾಲಿಗೆ ಬಂದು ಆತ ತನ್ನ ಒಬ್ಬಳೇ ಒಬ್ಬ ಮುದ್ದಿನ ಮಗಳನ್ನು ಈ ಆರಾಧನೆಗೆ ಬಲಿಕೊಡುವಂಥ ಸಂದರ್ಭ ಪ್ರಾಪ್ತವಾಯಿತಂತೆ. ಆಗ ಆತ ಈ ವಿಧಿಗೆ ಕಟ್ಟುಬಿದ್ದು ತನ್ನ ಮಗಳನ್ನು ಸಿಂಗರಿಸಿದ ಹೂವಿನ ದೋಣಿಯೊಂದರಲ್ಲಿ ಕೂರಿಸಿ ತೇಲಿ ಬಿಟ್ಟನಂತೆ. ಅನಂತರ ತನ್ನ ಮುದ್ದಿನ ಮಗಳ ಅಗಲಿಕೆಯ ದುಃಖವನ್ನು ತಡೆಯಲಾರದೆ ಹಿಂದೆಯೇ ಒಂದು ದೋಣಿಯನ್ನೇರಿ ಹೊರಟು ಮಗಳ ಜೊತೆಗೆ ಬೋರ್ಗರೆಯುವ ಆ ಜಲಪಾತದೊಳಕ್ಕೆ ತಾನೂ ಬಲಿಯಾದನಂತೆ" (ಸಮಗ್ರ ಗದ್ಯ ಸಂಪುಟ, ಪು. ೨೩೭).

ಈ ನಾಲ್ಕು ಪ್ರವಾಸ ಕಥನಗಳಲ್ಲಿ ಜಿ.ಎಸ್.ಎಸ್. ರೊಳಗಿನ ಕವಿ, ವಿಮರ್ಶಕ, ವಿಚಾರವಾದಿ ತಾನು ಕೈಗೊಂಡ ಸ್ಥಳಗಳ ಕುರಿತು ಸ್ಪಂದಿಸಿದ, ಪ್ರತಿಕ್ರಿಯೆ ತೋರಿದ ಹಲವು ರೀತಿಗಳನ್ನ ಗುರುತಿಸಬಹುದು, ಆನಂದಿಸಬಹುದು. ಜಿ.ಎಸ್.ಎಸ್. ಅವರೇ ಹೇಳುವಂತೆ "ಈ ಪ್ರತಿಕ್ರಿಯೆಗಳು ಉದ್ದಕ್ಕೂ ಪಶ್ಚಿಮದ ರಾಷ್ಟ್ರಗಳ ಪ್ರವಾಸದ ಸಂದರ್ಭದಲ್ಲಿ ಅನೇಕ ವಿಷಯಗಳಲ್ಲಿ ನಮ್ಮ ದೇಶದ ಸ್ಥಿತಿಗತಿಗಳನ್ನು ಅಲ್ಲಿನ ಪ್ರಗತಿಯೊಂದಿಗೆ ತೌಲನಿಕವಾಗಿ ವಿವೇಚಿಸುವುದರಿಂದ ಸಹಜವಾಗಿಯೇ ನಿಷ್ಪನ್ನವಾಗುವ ದಟ್ಟವಾದ ವಿಷಾದದ ಛಾಯೆಯೊಂದು ಚಾಚಿಕೊಂಡಿದೆ" ಎಂಬುದನ್ನು ಮನಗಾಣಬಹುದು. ಭಾರತ ಹಾಗೂ ಭಾರತದ ಹೊರಗಿನ ದೇಶಗಳಾದ ಅಮೆರಿಕಾ, ಇಂಗ್ಲೆಂಡ್, ರಷ್ಯಾ ಮುಂತಾದ ದೇಶಗಳ ಸಾಮಾಜಿಕ, ಶೈಕ್ಷಣಿಕ, ಐತಿಹಾಸಿಕ, ಸಾಂಸ್ಕೃತಿಕ ಸ್ಥಿತಿಗತಿಯನ್ನು ಅರಿಯುವಲ್ಲಿ ಪರಸ್ಪರ ಹೋಲಿಕೆ, ವ್ಯತ್ಯಾಸಗಳನ್ನು ತೌಲನಿಕವಾಗಿ ಅಭ್ಯಸಿಸುವಲ್ಲಿ ಈ ಪ್ರವಾಸ ಕಥನಗಳು ನೆರವಾಗಬಲ್ಲವು.

□□□

೭. ಕಾ.ತ. ಚಿಕ್ಕಣ್ಣರ ಕತೆಗಳಲ್ಲಿ ಸ್ಥಳೀಯ ವೈವಿಧ್ಯ

– [illegible] ಮಹೇಂದ್ರ

ಸಾಮಾನ್ಯ ಮನುಷ್ಯನ ಮಹಾಕಾವ್ಯವೆನಿಸಿದ 'ಕಾದಂಬರಿ' ತನ್ನದೆ ಜನಪ್ರಿಯತೆ ಹೊಂದಿದೆ. ಕಾದಂಬರಿಯಂತೆ 'ಸಣ್ಣಕತೆ' ತನ್ನ ಸಾಧನಾ ಸಾಧ್ಯತೆಗಳನ್ನ ಗಳಿಸಿಕೊಂಡಿದೆ ಎಂದರೆ ಅತಿಶಯೋಕ್ತಿಯಲ್ಲ. ಯಾವುದೇ ಕಲಾಕೃತಿ (ಸಾಹಿತ್ಯ) ರಚನೆಯಾಗಬೇಕಾದರೆ 'ಸ್ಥಳೀಯತೆ' ಬೇಕಾಗಿದೆ. ಅಂದರೆ 'ಸ್ಥಳೀಯತೆ'ಯ ಪರಿಧಿಯಲ್ಲಿ ಸಾಮಾಜಿಕ, ಧಾರ್ಮಿಕ ಚರಿತ್ರೆ ಅಂತರ್ಗತವಾಗಿರುತ್ತದೆ. ಒಂದು ಪ್ರದೇಶದ ಜನಜೀವನದ ಚಿತ್ರಣ ಸವಿಸ್ತಾರವಾಗಿರುವುದು 'ಪ್ರಾದೇಶಿಕತೆ' ಎನಿಸಿಕೊಳ್ಳುತ್ತದೆ. ಕತೆಗಾರ ತನ್ನ ಪ್ರದೇಶದೊಡನೆ ಭಾವನಾತ್ಮಕ ಸಂಬಂಧವನ್ನ ಹೊಂದಿದ್ದು, ತನ್ನ ಸ್ಥಳೀಯತೆಯಿಂದ ಬೆಳೆದವನಾಗಿರುತ್ತಾನೆ. ಅಂದರೆ ಲೇಖಕ ಗ್ರಾಮೀಣ ಬದುಕಿನ ಚಿತ್ರಣದಲ್ಲಿ ತನ್ನ ಸ್ಥಳೀಯತೆಯ ಅಂಶಗಳನ್ನು ಸಾಂದರ್ಭಿಕ ಕ್ರಮದಲ್ಲೇ ತರುವುದಕ್ಕೆ ಸಕ್ರಿಯವಾಗಿ ಪಾತ್ರವಹಿಸಬೇಕಾಗುತ್ತದೆ.

ದಲಿತ-ಬಂಡಾಯ ಕತೆಗಾರರು ವಿವಿಧ ಭೌಗೋಳಿಕ ಪರಿಸರದಿಂದ ಬಂದವರಾಗಿದ್ದಾರೆ. ತಮ್ಮ ಪ್ರದೇಶಗಳಲ್ಲಿ ಹುಟ್ಟಿ ಬೆಳೆದಂತಹ ಪ್ರಾದೇಶಿಕ ವೈವಿಧ್ಯತೆಯ ಅಂಶಗಳನ್ನು ಕತೆಗಳಲ್ಲಿ ತರುವುದರಲ್ಲಿ ಸ್ಥಳೀಯ ಪ್ರೀತಿ ತೋರಿದ್ದಾರೆ. ಆ ಸ್ಥಳೀಯ ವಾತಾವರಣದಿಂದ ಪೋಷಿತರಾಗಿದ್ದಾರೆ. "ಅನುಭವವೆಂಬ ಜೀವದ್ರವ್ಯ ಈ ವಿಭಿನ್ನ ಲೇಖಕರ ಕೈಯಲ್ಲಿ ವಿಭಿನ್ನ ಭಾಷಾ ಶರೀರಗಳನ್ನು ಪಡೆದುಕೊಂಡಿದೆ. ಭಿನ್ನ ಪ್ರಾದೇಶಿಕ ಹಿನ್ನೆಲೆಯ ಸಮುದಾಯ ಕಥನಗಳು ಅಲ್ಲಿಯದೇ ಆಡುನುಡಿ ವೈಶಿಷ್ಟ್ಯದೊಂದಿಗೆ ಬರೆಯಲ್ಪಡಲು ತೊಡಗಿರುವುದು ಕನ್ನಡ ಭಾಷೆಯ ಸಾಮರ್ಥ್ಯವನ್ನು ಕುಗ್ಗಿಸಿದೆ."[1] ಹೀಗೆ ಕನ್ನಡದ ಪ್ರಮುಖ ಲೇಖಕರೆಲ್ಲ (ಮಿರ್ಜಿ ಅಣ್ಣಾರಾಯ, ಕುವೆಂಪು, ಕಾರಂತ, ಚದುರಂಗ) ತಮ್ಮ ಸ್ಥಳೀಯ ಬದುಕಿನ ಜನರ ನಾಡಿಮಿಡಿತ, ಜೀವನ ವಿಧಾನವನ್ನು ಕಥಾಸಾಹಿತ್ಯದಲ್ಲಿ ಪಡಿಮೂಡಿಸಿದ್ದಾರೆ. ದಲಿತ-ಬಂಡಾಯ ಕಾಲಘಟ್ಟದ ಸಂದರ್ಭದಲ್ಲಿ ತಮ್ಮ ಕಥಾಸಾಹಿತ್ಯದ ಮೂಲಕ ಸಾಹಿತ್ಯಿಕ ಛಾಪನ್ನು ಮೂಡಿಸಿದವರೆಂದರೆ ಕಾ.ತ. ಚಿಕ್ಕಣ್ಣ. ಇವರು ಮೈಸೂರು

ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಸಾಲಿಗ್ರಾಮ ಹೋಬಳಿಯ ಕಾಳಮ್ಮನವರ ಕೊಪ್ಪಲು ಎಂಬ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ಅಪ್ಪಟ ಗ್ರಾಮೀಣ ಚೇತನ. ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ತಮ್ಮ ನೆಲದ ಸತ್ವಯುತ ಕಥಾಸಾಹಿತ್ಯದಿಂದ ಹೆಚ್ಚು ಚರ್ಚಿತರಾದವರು ದಿ. ಬೆಸಗರಹಳ್ಳಿ ರಾಮಣ್ಣ. ಇಂತಹ ಬರಹಗಾರರಿಂದ ಪ್ರೇರಣೆ-ಪ್ರಭಾವಗಳನ್ನು ಸಾಧಿಸಿಕೊಂಡು ನಲ್ವತ್ತಕ್ಕೂ ಹೆಚ್ಚಿನ ಕತೆಗಳು, ಮುಂಜಾವು, ದಂಡೆಯಂತಹ ವಿಶಿಷ್ಟ ಕಾದಂಬರಿಗಳನ್ನು ರಚಿಸುವ ಮೂಲಕ ಚರ್ಚಿತರಾಗಿದ್ದಾರೆ. ಇವರು ಸಾಹಿತ್ಯಿಕ ರಚನೆಯೊಳಗೆ ಪ್ರವೇಶಿಸಿದ ಕಾಲಘಟ್ಟ ಮಹತ್ವಕಾರಿ. ಎಪ್ಪತ್ತರ ದಶಕದ (೧೯೭೪) ಸಂದರ್ಭದಲ್ಲಿ ಹಳ್ಳಿಗಾಡಿನ ಸಜೀವಿತ ಚಿತ್ರಣವನ್ನು ತಮ್ಮ ಪ್ರಾದೇಶಿಕ ವೈವಿಧ್ಯತೆಯೊಂದಿಗೆ ಪಡಿಮೂಡಿಸಿದ್ದು ಹೆಚ್ಚುಗಾರಿಕೆಯೆಂದರೂ ತಪ್ಪಲ್ಲ. ಮೈಸೂರು, ಮಂಡ್ಯ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ವಾಸಿಸುತ್ತಿರುವ ಜನಸಾಮಾನ್ಯರ ಜನಜೀವನವನ್ನು ಕೆಲವು ಕತೆಗಳಲ್ಲಿ ಆಕರ್ಷಕವಾಗಿ ಸೆರೆಹಿಡಿದಿದ್ದರಿಂದ [illegible]ಕ ಲಯಗಾರಿಕೆ, ಸಾಂಸ್ಕೃತಿಕ ಸೊಗಡು ಆಪ್ತವೆನಿಸುತ್ತವೆ. "ಚಿಕ್ಕಣ್ಣನವರ [illegible]ಕ ಕತೆಗಳಲ್ಲಿ ಎದ್ದು ಕಾಣುವುದು ಪ್ರಾದೇಶಿಕತೆ. ಅವರ ಬರಹಗಳಲ್ಲಿ ಪ್ರದೇಶ, ಅಲ್ಲಿಯ ಭಾಷೆ, ಸಂಸ್ಕೃತಿಗೆ ನಿರ್ದಿಷ್ಟ ಆವರಣವಿದೆ. ಜೀವಂತಿಕೆಯಿದೆ. ವಸಾಹತೋತ್ತರ ಸಂದರ್ಭದಲ್ಲಿ ನಮ್ಮ ಜನ ಹೇಗೆ ಬದುಕುತ್ತಿದ್ದಾರೆ ಎಂದು ಗುರುತಿಸುವುದು ಅವರ ಆಸಕ್ತಿಯಾಗಿದೆ."[೨] ಕಾವೇರಿ ನದಿಯ ಅಣೆಕಟ್ಟಿನ ಆಜು-ಬಾಜುವಿನ ಪರಿಸರ, ಆ ಪರಿಸರದಲ್ಲಿನ ಜೀವನ ವಿಧಾನ, ಸಾಂಸ್ಕೃತಿಕ ಧೀಮಂತಿಕೆ ಚಿಕ್ಕಣ್ಣರ ಕತೆಗಳಲ್ಲಿ ಮರುಸೃಷ್ಟಿಯಾಗಿದೆ ಎನಿಸುತ್ತದೆ. ಇವರ ಬಹುಪಾಲು ಕತೆಗಳು ಸ್ಥಳೀಯತೆಯ ಅಂಶಗಳನ್ನೆ ಮೈಗೂಡಿಸಿಕೊಂಡು ಕಲಾತ್ಮಕವಾಗಿ ಕಂಗೊಳಿಸುತ್ತವೆ. ಕಾ.ತ. ಚಿಕ್ಕಣ್ಣರ ಕಥನಸಾಹಿತ್ಯ ಎಂದಾಗ ೧೯೭೪ರ ನಂತರ ಬಂದಂತಹ ಕತೆಗಳನ್ನು ಗಮನಿಸಬೇಕು. ಅಧ್ಯಯನ ದೃಷ್ಟಿಯಿಂದ 'ಸುಮ್ಮಾನ' 'ಒಡಲುರಿ' 'ಹುಚ್ಚೀರಿಯ ಎಸರಿನ ಪ್ರಸಂಗ' 'ಜಪದಕಟ್ಟೆ' 'ಕರಗವ್ವ' ಕತೆಗಳನ್ನ ಸೂಕ್ಷ್ಮವಾಗಿ ಪರಿಗ್ರಹಿಸಿದಾಗ ತನ್ನ ಸೀಮಿತತೆಯ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವಲ್ಲಿ ಮೇಲಿನ ಕತೆಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರಿಂದ ಮತ್ತೆ ಮತ್ತೆ ಚರ್ಚೆಯಾಗುತ್ತಿರುವುದು.

ಮನುಷ್ಯ ಬದುಕನ್ನ ಕಂಡರಿಸುವ ಕತೆ 'ಕರಗವ್ವ'. ಗ್ರಾಮೀಣ ಸೊಗಡಿನ ವಾತಾವರಣವೆಂದಾಗ 'ಕರಗವ್ವ'ನಂತಹ ಪಾತ್ರಗಳು ಆಕರ್ಷಿಸುತ್ತವೆ. 'ಕರಗವ್ವ' ಮೂಲತಃ ಜಾನಪದೀಯ ಪಾತ್ರ, ತಾಳಿಕಟ್ಟಿದ ಗಂಡನನ್ನು ಬಿಟ್ಟು ನಾಟಕ ಹೇಳಿಕೊಡುವ ನಲ್ಲೂರಯ್ಯ ಮೇಸ್ಟರ ಜೊತೆ ಕಲೆಗಾರ ಎನಿಸಿಕೊಂಡ ವ್ಯಕ್ತಿಯ

ಹಿಂದೆ ಬರುತ್ತಾಳೆ. ಬಂದು ತನಗೆ ದಿಕ್ಕು ದೆಸೆಯಿಲ್ಲದ ಊರೊಳಗೆ ಉಳಿದು ಬಿಡುತ್ತಾಳೆ. ಹಳ್ಳಿಯೊಳಗೆ ಚಿಕ್ಕಮಕ್ಕಳಿಗೆ ಕತೆ ಹೇಳಿಕೊಡುವ 'ಕರಗವ್ವ'ನಾಗುತ್ತಾಳೆ. ಕರಗವ್ವನ ಕತೆ ಮತ್ತು ಮಾತು ಎಂದರೆ ಜೀವಪ್ರೀತಿಯ ಸಂಕೇತ. ಕತೆ ಕೇಳುವ ಹೈಕಳ ಪೈಕಿ 'ಬೀರ' ಒಂದು ಸಾರಿ ಕತೆ ಹೇಳ್ತಿನಿ ಹೇಳ್ತಿನಿ ಅಂತಲೇ ಇದ್ದೀಯ ಎಂದಾಗ 'ಕಾಯ್‌ಬೇಕು ಕನೊ: ಕಾದು ಕೇಳಿದಾಗ್ಲೇ ಅದರ ಕರಾಮತ್ತು ಮತ್ತೆ' ಎಂಬ ಮಾತು ಕತೆಗಾರನಿಗಿರುವ ಕಥಾಶ್ರದ್ಧೆ, ಕಥಾ ಒಡಲಿನ ಕುತೂಹಲವನ್ನ ತಿಳಿಸುತ್ತದೆ. ದಾಸಪ್ಪ, ಬೀರ, ಹೊನ್ನ, ಸಣ್ಣೀರ, ರಾಜ ಎಲ್ಲರೂ ಬಕಪಕ್ಷಿಯ ರೀತಿ ಕೂತು ಆಲಿಸುವುದು ಕಣ್ಣಿಗೆ ಕಥಾಚಿತ್ರ ಕಟ್ಟಿರುವಂತಿದೆ. ಕತೆ ಕೇಳುತ್ತ ಕೂತಂತಹ ಹುಡುಗರನ್ನು ಅವರ ಮನಸ್ಸನ್ನು ಅರ್ಥಮಾಡಿಕೊಳ್ಳುವುದು ಕರಗವ್ವನಿಗಿರುವ ಸೂಕ್ಷ್ಮ ಸಂವಹನಾಶೀಲತೆಯ ಹೆಗ್ಗುರುತೆನಿಸಿದೆ. ದಾಸಪ್ಪ ಎಷ್ಟೇ ಆವರೂ ಕಲೆಗಾರನನ್ನ ಮೆಚ್ಚಿಸಿದವಳು ತಾನೆ ಎಂದಾಗ ಕಲೆಗಾರ್ರು ವಿಷಯ ಅಲ್ಲ, ಕಳ್ಳುಬಳ್ಳಿ ವಿಷಯ ಎನ್ನುವ ರೀತಿ ಜೀವಪ್ರೀತಿಯ ದ್ಯೋತಕವೆನಿಸುತ್ತದೆ. ಕತೆ ಕೇಳುತ್ತಿದ್ದ ರಾಜನ ಮೇಲೆ ಸಿಟ್ಟಿನಿಂದ ಅವಳ ಅವ್ವ 'ನಂಜಿ' ಕರಗವ್ವನಿಗೆ ಬಯ್ಯುವ ರೀತಿ ಹಳ್ಳಿಗಾಡಿನ ಸ್ಥಳೀಯತೆಯನ್ನು ತೋರಿಸುತ್ತದೆ. 'ನೀನು ಅನಿಸ್ಟ್‌ದೋಳು! ನನ್ ಮಗುನ್ನ ಹಾಳ್ ಮಾಡದೆ ಎದ್ದು ಬಿದ್ದು ಇಲ್ಲೇ ಸಾಯ್ತಾನೆ. ಕೆಲ್ಸಿಲ್ಲ, ಕೇಮಿಲ್ಲ: ನಿಂಗೇನು ಮಕ್‌ಳೊ ಮರಿಯೊ?' ಎಂಬ ಮಾತುಗಳು ಕರಗವ್ವನನ್ನು ಘಾಸಿಗೊಳಿಸಿದರೂ ರಾಜ ಅಜ್ಜಿಯನ್ನು ಯಾಕೆ ಬಯ್ಯುತ್ತಿದ್ದೀಯ ಎಂದು ಪ್ರಶ್ನಿಸಿದಾಗ ಕರಗವ್ವ ಆಡುವ ಮಾತು ಹೀಗಿದೆ : ಕಣ್ಣೀರು ಬಟ್ಟಾಡುತ್ತಿದ್ದ ರಾಜನ ತಲೆನೀವಿ 'ಅಯ್ಯೋ ನನಕಂದ: ಎಂಥಾ ಮಾತಾಡ್ದೊ ಮಗ' ಎಂದು ಮುದ್ದಿಸುತ್ತಾಳೆ. ಮಕ್ಕಳ ಹೆತ್ತ ಮಾತ್ರಕ್ಕೆ ನಾವು ಹಿರಿಯೋರು ಆಗಾಕಿಲ್ಲ ಕನೆ ತಾಯಿ ಎಂಬ ಮಾತು ನಂಜಿಯಂತಹ ಸಿಡುಕಿನವಳನ್ನ ತಾಯ್ತನದ ಪ್ರೀತಿಯಂತಹ ಮಾತು ಅವಳನ್ನ ಸ್ವಪರಿವರ್ತನೆಗೊಳಿಸುತ್ತದೆ. ಇದು 'ಕರಗವ್ವ' ಕತೆಯ ಹೆಚ್ಚುಗಾರಿಕೆಯಷ್ಟೇ ಅಲ್ಲ, ಆದರ್ಶದ ದಾರಿಯನ್ನು ತೆರೆದು ತೋರಿಸುವ ಕತೆಗಾರನ ಇಂಗಿತ ಏನೆಂಬುದನ್ನು ತಿಳಿಯುವುದಕ್ಕೆ ಸಾಧ್ಯ.

'ಒಡಲುರಿ'ಯ ಸಣ್ಣಿಂಗಿ ಮೇಗ್ಲಟ್ಟಿ ಪೂಜಾರಪ್ಪನಿಂದ 'ತಡೆಒಡಿಯೊ ಶಾಸ್ತ್ರ' ಮುಗಿಸಿಕೊಂಡು ಬರುವ ಸಂಜೆ ಹೊತ್ತಿನಲ್ಲಿ ಅವಳನ್ನು ಬಲತ್ಕಾರಕ್ಕೆ ಪ್ರಯತ್ನಿಸಿದಾಗ ತನ್ನ ಕಾಲಿನಿಂದ ಒದ್ದು ದೂರತಳ್ಳಿ ಪ್ರತಿಭಟಿಸುತ್ತಾಳೆ. ಅಂದರೆ ದಲಿತ-ಬಂಡಾಯದ ಚೌಕಟ್ಟಿನೊಳಗೆ ಗುರುತಿಸಿಕೊಳ್ಳುವ ಎಲ್ಲಾ ವಿಶೇಷತೆ ಕತೆಯಲ್ಲಿದೆ. ಗ್ರಾಮೀಣ ಪರಿಸರದಲ್ಲಿ ನಿರಂತರ ಶೋಷಣೆ ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದಕ್ಕೆ ಈ ಕತೆ ಸ್ಥಳೀಯ ಸಾಕ್ಷಿ. ತಾನು ನಂಬಿದ 'ದೊಡ್ಡಮ್ಮ' ತಾಯಿ ದೇವರ ಹೆಸರಿನಲ್ಲಿ

ನಡೆಯುತ್ತಿರುವ ಶೋಷಣೆಯನ್ನು ಮತ್ತೆ ನನೆಸಿಕೊಂಡು ಕುದಿಯುತ್ತಾಳೆ ಹೊರತು ಶಾಂತವಾಗದಿರುವುದು ಸಣ್ಣಿಂಗಿ ಪಾತ್ರದ ವೈಶಿಷ್ಟ್ಯತೆಯಾಗಿದೆ. "ಇವರಿಂದ್ಲೇ ಎಂಥ ಘಾತಕ ಕೆಲ್ಸ? ಎಂಥ ಕೇಡು ಬಂತು? ಜಂಗಾಪ್ರ ಈ ಪೂಜೆ, ಪುರಸ್ಕಾರ, ದೇವರು ಮಡಿ ಅಂತೆಲ್ಲ ಯಾಕೆ ಮಾಡಿದ್ರು? ಇದ್ಯಾಗೇ ಕಂಕಣ ಕಟ್ಟಿಕೊಂಡೋನು ಹಂಗಿರಬೇಕು? ದೇವರ ನಿಷ್ಠೆ, ಭಕ್ತಿ, ಅವಳ ಜಾಕ ಬಣ್ಣ ನೀತಿ – ಇವೆಲ್ಲ ಇಷ್ಟೇಯಾ?" ಎಂಬಿತ್ಯಾದಿ ಮಾತುಗಳು ಬಹಳ ಹಿಂದಿನಿಂದಲೂ ರೂಢಿಸಿಕೊಂಡು ಬಂದಂತಹ ಪಾರಂಪರಾಗ್ರಹಿತ ನಂಬಿಕೆಗಳಿಗೆ ಪ್ರತಿರೋಧ ತೋರಿಸುವ ರೀತಿ ಪಳಿಕಬಂಡಾಯ ಕತೆಗಳಲ್ಲೇ ಅನನ್ಯವಾದದ್ದಾಗಿದೆ. ತಾನು ನಂಬಿದ 'ದೊಡ್ಡಮ್ಮ' ದೇವರು ಇರುವುದು ಸತ್ಯವೋ ಹುಸಿಯೋ ಎಂಬುದರ ಬಗ್ಗೆ ತನ್ನ ಮನಸ್ಸಿನಲ್ಲಿ ಹುಟ್ಟುತ್ತಿರುವ ಹತಾಶೆಗೆ ಕಾರಣವೆಂಬುದನ್ನು ಪೂಜಾರಪ್ಪ ಮಾಡಿದ ಹೀನಕೃತ್ಯದಿಂದ ಇವೆಲ್ಲವೂ ಹುಸಿ (ಸುಳ್ಳು) ಎಂಬ ಅಭಿಪ್ರಾಯ ಹೊಂದುತ್ತಾಳೆ.

ಪರಕೆ ಶಾಸ್ತ್ರ, ತಡೆಒಡಿಯೋ ಶಾಸ್ತ್ರದ ಸಂಪ್ರದಾಯಗಳು ಗ್ರಾಮೀಣ ವಾತಾವರಣದಲ್ಲಿ ಮಹತ್ವ ಪಡೆದುಕೊಂಡಿರುತ್ತವೆ. ಹಳ್ಳಿಗಾಡಿನಲ್ಲಿ ಬದುಕುವ ಮಂದಿಗೆ ತಾವು ಮಾಡುವ ಕೆಲಸಗಳು ಕೈಯತ್ತದಿದ್ದಾಗ, ತೊಂದರೆಗಳು ಕಾಣಿಸಿಕೊಂಡಾಗ ಅವುಗಳ ನಿವಾರಣೆಗೆ ಅಮವಾಸೆ ದಿನ ಇಳ್ಪೊತ್ತಿನಲ್ಲಿ 'ತಡೆ' ಒಡೆಸುತ್ತಾರೆ. ಈ ಸಂಪ್ರದಾಯ ಹೆಚ್ಚಾಗಿ ಮಂಡ್ಯ, ಮೈಸೂರು ಸುತ್ತಮುತ್ತಲಿನ ಪ್ರಾದೇಶಿಕ ದೇವಾಲಯಗಳಲ್ಲಿ ಹೆಚ್ಚಿದೆ. ಕಳ್ಳಿಕೊಪ್ಪಲು ಪೂಜಾರಿಯಾದ ಅಣ್ಣಯ್ಯನನ್ನು ಕರೆದುಕೊಂಡು ತಮ್ಮ ಹಳ್ಳಿ ಜನ 'ತಡೆ' ಒಡಿಸುತ್ತಿದ್ದ ಸಂಪ್ರದಾಯ ತಮ್ಮ ಪ್ರಾದೇಶಿಕ ಪರಿಸರದಲ್ಲಿ ಜೀವಂತವಾಗಿರುವುದನ್ನ ಕಂಡಂತಹ ಕತೆಗಾರ ಕತೆಯಾಗಿಸುವಲ್ಲಿ ಸ್ಥಳೀಯ ವೈವಿಧ್ಯತಾ ಅಂಶಗಳನ್ನು ತಂದಿರುವ ರೀತಿ ಮನೋಜ್ಞವಾಗಿದೆ. 'ಒಡಲುರಿ' 'ಕರಗವ್ವ' 'ದಾವರ' ಈ ಕತೆಗಳು "ಕೇವಲ ಶೋಷಣೆಯ ಅಮಾನವೀಯ ಮುಖವನ್ನು ಚಿತ್ರಿಸುವಲ್ಲಿ ತೃಪ್ತರಾಗದೆ ಕತೆಗಾರರು ಅಂತಹ ಶೋಷಣೆಯ ವಿರುದ್ಧ ಎಂದಾದರೂ ಒಂದು ದಿನ ಪ್ರತಿಭಟನೆಯ ಕಿಡಿ ಏಳುವುದರ ಅನಿವಾರ್ಯತೆಯನ್ನೂ ಈ ಕಥೆಗಳಲ್ಲಿ ಗುರುತಿಸುತ್ತಾರೆ" ಎಂಬ ಸಿ.ಎನ್. ರಾಮಚಂದ್ರನ್‌ರ ಅಭಿಪ್ರಾಯ ಪ್ರಾಯಶಃ ಕರಗವ್ವ, ಒಡಲುರಿ ಕತೆಗಳಿಗೆ ಅನ್ವಯಿಸುವಂತದ್ದಾಗಿದೆ. ಗ್ರಾಮೀಣ ಬದುಕಿನ ಪ್ರಾದೇಶಿಕತೆಯ ಒಳಹೊರಗನ್ನು ಬಲ್ಲಂತಹ ಚಿಕ್ಕಣ್ಣರಿಗೆ ಪ್ರೀತಿಸುವ ಕಲೆಗಾರಿಕೆಯೂ ಇದೆ. ಅಲ್ಲದೆ ಪ್ರಾದೇಶಿಕತೆಯ ಗ್ರಾಮೀಣ ಬದುಕಿನಲ್ಲಿರುವ ಹುಳುಕುಗಳನ್ನು ಪರಿಗ್ರಹಿಸಿಕೊಂಡು ಕಥಾ ಮಾದರಿಯಲ್ಲಿ ಕಾಣಿಸುವ ದೃಷ್ಟಿಯಿದೆ.

ಕತೆಗಾರ ತಾನು ಆಯ್ದುಕೊಂಡ ವಿಷಯವನ್ನು ನಿರೂಪಿಸುವಾಗ ತಾನು ಕಟ್ಟುವ ಕಥನದ ಒಳಗುಟ್ಟು ತಿಳಿಯದಂಗೆ ಮರೆಮಾಚುವ ತಂತ್ರಗಾರಿಕೆ 'ಹುಟ್ಟೇರಿಯ ಎಸರಿನ ಪ್ರಸಂಗ'ದಲ್ಲಿದೆ. "ಇವನ ಹೆಂಡತಿ ನಮ್ಮ ಹಟ್ಟಿಯಲ್ಲಿ ಕೋಳಿ ಎಸರು ಬಾಡೂಟ ಮಾಡಿದರ ಬಟ್ಟಲನ್ನು ಸ್ವಾಲೆ ಸೆರಗಿನೊಳಗೆ ಮರೆಮಾಡಿಕೊಂಡು ಬರುತ್ತಿದ್ದಳು. ಮೊಸರು ಕಡೆದ ದಿನ ಗಡಿಗೆ ಹಿಡಿದು ಬರುತ್ತಿದ್ದಳು. ನಾವು ಇವಳು ಬರುವುದನ್ನು ದೂರದಿಂದಲೇ ಕಂಡು ಬಾಗಿಲ ಬಳಿಗೆ ಓಡಿ ಬಂದು ಇವತ್ತು ಮಜ್ಜಿಗೆ ಕಡೆದಿಲ್ಲ ಅನ್ನುತ್ತಿದ್ದೆವು. ಕೋಳಿ ಕೊಂದಿಲ್ಲ ಅನ್ನುತ್ತಿದ್ದೆವು."[೪] ಹುಟ್ಟೇರಿಯ ಮನಸ್ಥಿತಿಯ ಮನೋಲೋಕವನ್ನು ತೆರೆದು ತೋರಿಸುವಾಗ ತರುವ ಸನ್ನಿವೇಶದಲ್ಲಿ ಸ್ಥಳೀಯತೆಯ ಸಾಕ್ಷಿಗಳನ್ನ ಗುರುತಿಸಿಕೊಳ್ಳುವುದಕ್ಕೆ ಸಾಧ್ಯ. ಒಂದೂರು ಒಂದ್ಕತೆ, ತಿರುದುಣ್ಣುವ ಜನರ ನಡುವೆ, ಜಪದ ಕಟ್ಟೆ, ಸುಮ್ಮಾನ ಕತೆಗಳಲ್ಲಿನ ಪಾತ್ರಗಳಲ್ಲಿ ವಸಾಹತೋತ್ತರ ಸಂದರ್ಭದ ಸ್ಥಿತ್ಯಂತರಗಳನ್ನು ನಿರಾಕರಿಸಿ ವಿರೋಧಿಸುವ ಪ್ರತಿಭಟನಾತ್ಮಕ ನೆಲೆಯಿದೆ. ಅಂದರೆ ಗ್ರಾಮೀಣ ವಾತಾವರಣದಲ್ಲಿ ದಿಢೀರನೆ ಉದ್ಭವವಾಗುವ ಸಮಸ್ಯೆಗಳಿಗೆ ಅಲ್ಲಿಯ ಸ್ಥಳೀಯ ಹಿರಿಕರೆ ಸಲಹಾಸೂಚನೆ ಪರಿಹಾರೋಪಾಯಗಳನ್ನು ತೋರಿಸುವವರಾಗಿದ್ದಾರೆ. ಆಧುನಿಕ ತಂತ್ರಜ್ಞಾನವೆಂಬ ಸಲಕರಣೆಗಳ ಮೂಲಕ ಪ್ರತಿಕ್ರಿಯಿಸದೆ ಸ್ಥಳೀಯ ಆವರಣದಲ್ಲಿ ನಿಂತುಕೊಂಡು ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಿಸುವಲ್ಲಿ ಕಾ.ತ. ಚಿಕ್ಕಣ್ಣರ ಕತೆಗಳು ಸಕ್ರಿಯವಾಗಿವೆ.

ಕೊನೆಟಿಪ್ಪಣಿಗಳು

೧. ಬಂಜಗೆರೆ ಜಯಪ್ರಕಾಶ್, ಬಂಡಾಯ ಸಾಹಿತ್ಯ: ಸಂದರ್ಭ ಮೀಮಾಂಸೆ, ೨೦೦೯, ಪು. ೩೮.

೨. ಕೇಶವಶರ್ಮ ಕೆ, ವಸಾಹತುಶಾಹಿ ಅನುಭವ, ೨೦೧೧, ಪು. ೨೩೪.

೩. ಕಾ.ತ. ಚಿಕ್ಕಣ್ಣ, ಕಂಚೇರಿ, ೨೦೦೪, ಪು. ೨೪೯

೪. ಸಿ.ಎನ್. ರಾಮಚಂದ್ರನ್, ಸಂ. ಎಚ್. ದಂಡಪ್ಪ, ಸೀರೊಳಗಣ ಬೆಳಕು, ೨೦೧೦, ಪು. ೫.

೫. ಕಾ.ತ. ಚಿಕ್ಕಣ್ಣ, ನಿಶಬ್ದದೆಡೆಗೆ, ೨೦೦೭, ಪು. ೧೧೨.

□□□

೮. ಬಹು ಅರ್ಥಗಳ 'ಮಾದಾರಿ ಮಾದಯ್ಯ'

– ರಾಘವೇಂದ್ರ ಪಿ.ಕೆ.

ಪ್ರಜಾವಾಣಿ ದಿನಪತ್ರಿಕೆಯಲ್ಲಿ 'ಪ್ರತಿಸ್ಪಂದನ' ಎಂಬ ಅಂಕಣವನ್ನು ಬರೆಯುತ್ತಿದ್ದ ಎಚ್.ಎಸ್. ಶಿವಪ್ರಕಾಶ್ ಅವರು ಕನ್ನಡನಾಡಿನ ಪ್ರಸಿದ್ಧ ಸಾಹಿತಿಗಳು. ಕವಿಯಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ, ಅನುವಾದಕರಾಗಿ, ಸಂಪಾದಕರಾಗಿ ಹೆಸರು ಗಳಿಸಿರುವ ಇವರು ವಿಭಿನ್ನ ಆಲೋಚನಾ ಕ್ರಮದಲ್ಲಿ ನಮಗೆ ಮುಖ್ಯರಾಗುತ್ತಾರೆ. ಹಲವು ದೇಶಗಳನ್ನು ಸುತ್ತಿರುವ ಇವರ ಜೋಳಿಗೆಯಲ್ಲಿ ಸಂಪದ್ಭರಿತ ಅನುಭವದ ರಾಶಿಯೇ ಇದೆ. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಬರೆಯುವ ಇವರ ಪ್ರಜ್ಞೆ, ಹುಟ್ಟಿ ಬೆಳೆದ ಪರಿಸರದೊಟ್ಟಿಗೆ ಬೆಸೆದುಕೊಂಡಿದೆ. ವಿಶ್ವದ ಗಮನವನ್ನು ಸೆಳೆದಿರುವ ಇವರು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಅನನ್ಯತೆಯನ್ನು ತಂದುಕೊಟ್ಟಿದ್ದಾರೆ. ಶ್ರೀಯುತರ ಸಾಹಿತ್ಯ ಸೇವೆಗಾಗಿ ಹಲವಾರು ಪ್ರಶಸ್ತಿ–ಪುರಸ್ಕಾರಗಳು ಅರಸಿಕೊಂಡು ಬಂದಿವೆ.

ಪುರಾಣ, ಇತಿಹಾಸ, ಜಾನಪದ ಮೊದಲಾದ ಆಕರಗಳಿಂದ ವಸ್ತುವನ್ನು ಆಯ್ದುಕೊಂಡು ಸಾಹಿತ್ಯ ಕೃಷಿಯಲ್ಲಿ ತೊಡಗಿರುವ ಇವರ ಆಸಕ್ತಿ ಇರುವುದು ಪರ್ಯಾಯವನ್ನು ಕಟ್ಟುವುದರಲ್ಲಿ. ಇಂದಿನವರೆಗೂ ನಾವು ಯಾವುದನ್ನು ಶ್ರೇಷ್ಠವೆಂದು ಭಾವಿಸುತ್ತಾ ಬಂದಿದ್ದೇವೋ ಅದಕ್ಕೆ ಸರಿಸಮವಾಗಿ ಇಲ್ಲವೇ ಪರ್ಯಾಯವಾಗಿ ನಿರ್ಲಕ್ಷ್ಯಕ್ಕೆ ಒಳಗಾದ ಸಂಗತಿಗಳನ್ನು ನಿಲ್ಲಿಸುವ ಇವರ ಚಿಂತನೆ ಜನಪರವಾದದ್ದು. ಜಾನಪದೀಯವಾದ 'ಮಲೆಯ ಮಾದೇಶ್ವರ' ಕಾವ್ಯದ ದ್ರವ್ಯವನ್ನು ಬಳಸಿ 'ಮಾದಾರಿ ಮಾದಯ್ಯ'(೧೯೯೦) ಎಂಬ ನಾಟಕವನ್ನು ಕಟ್ಟಿದ್ದಾರೆ. ಆ ಮೂಲಕ ಜನಪದರ ಬದುಕಿನ ಸತ್ತ್ವವನ್ನು ಸಾರ್ಥಕವಾಗಿ ಅನಾವರಣಗೊಳಿಸಿದ್ದಾರೆ. ಕೇವಲ ಜನಪದರ ಬದುಕು ಮಾತ್ರ ಆ ನಾಟಕದಲ್ಲಿಲ್ಲ; ಬದಲಾಗಿ ಆ ಜನಪದ ಕಾವ್ಯದ ವೈವಿಧ್ಯಮಯ ಧ್ವನಿ, ರೂಪಕಗಳನ್ನು ಪ್ರಸ್ತುತಕ್ಕೆ ಕನ್ನಡಿ ಹಿಡಿದಂತೆ ತೋರಿಸಿಕೊಟ್ಟಿದ್ದಾರೆ. ಸಮಷ್ಟಿ ಮನಸ್ಸಿನ ಅಭಿವ್ಯಕ್ತಿಯಾದ 'ಮಲೆಯ ಮಾದೇಶ್ವರ' ಮಹಾಕಾವ್ಯವು

ಎಚ್.ಎಸ್. ಶಿವಪ್ರಕಾಶರ ಸೃಷ್ಟಿ ಪ್ರಜ್ಞೆಯಲ್ಲಿ ಬಹು ಅರ್ಥಗಳ 'ಮಾದಾರಿ ಮಾದಯ್ಯ' ನಾಟಕವಾಗಿ ಮೂಡಿಬಂದಿದೆ. ಇದಕ್ಕೆ ಕಾರಣವಾದದ್ದು 'ಮಲೆಯ ಮಾದೇಶ್ವರ' ಮಹಾಕಾವ್ಯದ ನಾಟಕೀಯ ಗುಣ.

'ಮಾದಾರಿ ಮಾದಯ್ಯ' ನಾಟಕವು ಅಕ್ಟೋಬರ್ ೧೦, ೧೯೯೦ರಂದು ಕ್ಷೇತ್ರಯ್ಯ ಕಲಾಕ್ಷೇತ್ರ, ವಿಜಯವಾಡ ಇಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ, ನವದೆಹಲಿ ಏರ್ಪಡಿಸಿದ್ದ ದಕ್ಷಿಣವಲಯ ನಾಟಕೋತ್ಸವದಲ್ಲಿ ಪ್ರಥಮ ಪ್ರದರ್ಶನವನ್ನು ಕಂಡಿದೆ. ಈ ನಾಟಕ ಮೊದಲು 'ದೃಶ್ಯಾವಳಿ' ಎಂಬ ಹೆಸರನ್ನು ಹೊಂದಿತ್ತು. ಈ ನಾಟಕದ ರಚನೆಯ ವಿಶೇಷವೆಂದರೆ ರಂಗಪ್ರಯೋಗದ ಸಂದರ್ಭದಲ್ಲೇ ಬರೆದಿರುವುದು. "ಇದರ ರಚನೆಯಾಗಿದ್ದು ನನ್ನ ಆ ಕಲ್ಪನೆಯಲ್ಲಲ್ಲ, ಒಂದೆ ಕೋಣೆಯಲ್ಲಲ್ಲ. ನಿರ್ದೇಶಕ ಬಸವಲಿಂಗಯ್ಯನ, ಸಮುದಾಯ ತಂಡದ ಗೆಳೆಯರ ನಟ-ನಟಿಯರ ಕೂಡು ಪ್ರಯತ್ನ, ಪ್ರಯೋಗ, ಜಿಜ್ಞಾಸೆ, ಚರ್ಚೆಗಳ ಸನ್ನಿವೇಶದಲ್ಲಿ. ಹೀಗಾಗಿ ಈ ನಾಟಕ ಕೃತಿಗೆ ಸ್ಪಷ್ಟ ಮಾದರಿಗಳಿಲ್ಲ. ಕಂಸಾಳೆಯವರ ಕಥನಕ್ರಮ, ಅನೇಕ ಜಾನಪದ ಅರೆರಂಗ ನೃತ್ಯ, ಆಚರಣೆ ಇತ್ಯಾದಿಗಳು, ಓದಿದ, ಕೇಳಿದ, ಹೊಳೆದ, ಹುಡುಕಿದ ಒಳನೋಟಗಳು ಈ ಮುಂತಾದ ಎಳೆಗಳಿಂದ ಈ ನಾಟಕವನ್ನು ನೆಯ್ದಿದ್ದೇನೆ." (ಎಚ್.ಎಸ್. ಶಿವಪ್ರಕಾಶ್, ನಾಟಕಗಳು ಇಂದಿನವರೆಗೆ, ಪು. ೭೧೧) ಎನ್ನುವ ಎಚ್.ಎಸ್. ಶಿವಪ್ರಕಾಶರ ಮಾತುಗಳು ಈ ನಾಟಕ ಸಾಮೂಹಿಕ ಪ್ರಯತ್ನದಿಂದ ಮೂಡಿದ್ದು ಎಂಬುದನ್ನು ತಿಳಿಸುತ್ತದೆ.

ಜನಪದರ ಸಾಂಸ್ಕೃತಿಕ ವೀರಪುರುಷನಾದ 'ಮಾದಯ್ಯ'ನ ಕತೆಯು ಚರಿತ್ರೆ, ಐತಿಹ್ಯ ಮತ್ತು ಪುರಾಣಗಳಿಂದ ಮುಪ್ಪುರಿಗೊಂಡ ಮಹಾಕಾವ್ಯ ಎನ್ನಲಡ್ಡಿಯಿಲ್ಲ. ವಿದ್ವಾಂಸರು ಮಾದಯ್ಯನನ್ನು ಚರಿತ್ರೆಯ ಭಾಗ ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಇದರಿಂದ ಮಾದಯ್ಯ ೧೫-೧೬ನೆಯ ಶತಮಾನಕ್ಕೆ ಸೇರಿದವನು ಎಂದು ತಿಳಿದು ಬರುತ್ತದೆ. ಇತಿಹಾಸ, ಐತಿಹ್ಯ ಮತ್ತು ಪುರಾಣ ಈ ಮೂರರ ನಡುವಣ ವ್ಯತ್ಯಾಸವನ್ನು ಹೀಗೆ ಗುರುತಿಸಬಹುದು. ಇತಿಹಾಸ ನಡೆದ ಘಟನೆಯಾಗಿರುತ್ತದೆ; ಅದೇ ಇತಿಹಾಸ ತನ್ನ ಸ್ವರೂಪವನ್ನು ಮರೆಮಾಡಿಕೊಂಡರೆ ಐತಿಹ್ಯವಾಗುತ್ತದೆ; ಐತಿಹ್ಯ ಪವಿತ್ರಾವರಣವನ್ನು ಆರೋಪಿಸಿಕೊಂಡರೆ ಪುರಾಣವಾಗಿ ಬದಲಾಗುತ್ತದೆ. ಒಂದು ಕಾಲಕ್ಕೆ ಇತಿಹಾಸದ ಗರ್ಭದಲ್ಲಿ ಆಗಿ ಹೋಗಿರುವ 'ಮಾದಯ್ಯ' ಮುಂದೆ ಐತಿಹ್ಯವಾಗಿ, ಬರು-ಬರುತ್ತಾ ಪುರಾಣದ ಭಾಗವಾಗಿ ಮಾದಪ್ಪ, ಮಾದೇಶ್ವರ ಎಂದು ಮೊದಲಾದ ಅಂಕಿತಗಳನ್ನು ಧರಿಸುತ್ತಾನೆ. ಬಂಕಾಪುರಿಯ ಶ್ರವಣದೊರೆ ಮಾದಯ್ಯನನ್ನು 'ಮಾದಾರಿ' ಎಂದು ಸಂಬೋಧಿಸುತ್ತಾನೆ. ಇದರಿಂದ ಎಚ್.ಎಸ್. ಶಿವಪ್ರಕಾಶರು ತಮ್ಮ ನಾಟಕಕ್ಕೆ 'ಮಾದಾರಿ ಮಾದಯ್ಯ' ಎಂದು ಹೆಸರಿಟ್ಟಿರುವುದು ಉಚಿತವೆನಿಸುತ್ತದೆ.

"ಒಂದು ಅರ್ಥದಲ್ಲಿ ಈ ನಾಟಕ ನನ್ನ ಹಿಂದಿನ ಕೃತಿಗಳಾದ 'ಮಹಾಚೈತ್ರ', ಮಂಟೇಸ್ವಾಮಿಗಳ ಮುಂದುವರಿಕೆ. ಇವೆಲ್ಲವೂ ಏಸೋ ಹಾದಿಗಳ ಮೂಲಕ ಅದಿ ಕಲ್ಯಾಣದ ಆದಿ ಬಸವಣ್ಣನ ಹುಡುಕಾಟ."(ಅದೇ, ಪು.೭೧೨) ಎನ್ನುವ ನಾಟಕಕಾರರ ಮಾತನ್ನು ಗಮನಿಸಬೇಕು. ನಾಟಕವನ್ನು ಪರ್ಯಾಯದ ಚಿಂತನೆಯ ನೆಲೆಯಲ್ಲಿ ಅರ್ಥವಿಸಲು ಸಾಧ್ಯವಿದೆ. ಒಂದು ಕಾಲದವರೆಗೆ ರಂಗಭೂಮಿಯ ಮೇಲೆ ನಾಟಕವೊಂದು ಬರಬೇಕೆಂದಿದ್ದರೆ ಅದು ಶ್ರೇಷ್ಠವಾದ ಕತೆಯನ್ನು ಒಳಗೊಂಡಿರಬೇಕಿತ್ತು. ಈ ನಿಟ್ಟಿನಲ್ಲಿ ಮಾದೇಶ್ವರ ಕಾವ್ಯ ಆಧಾರಿತ ನಾಟಕವನ್ನು ರಂಗದ ಮೇಲೆ ತಂದದ್ದೇ ಪರ್ಯಾಯ ಚಿಂತನೆಯ ಹಿನ್ನೆಲೆಯಲ್ಲಿ. ಜನಪದರು ತಮ್ಮ ಇತಿಹಾಸವನ್ನು ತಾವೇ ಬರೆದುಕೊಳ್ಳಬೇಕು ಎಂಬ ಅರ್ಥ ನಾಟಕದೊಟ್ಟಿಗಿದೆ. ಗುಡ್ಡರು ಇಲ್ಲಿ ಶೋಷಿತರನ್ನು ಪ್ರತಿನಿಧಿಸುತ್ತಾರೆ. ನಿರ್ಜೀವವಾದ ಗುಡ್ಡಗಳಿಗೆ ವ್ಯಕ್ತಿತ್ವವನ್ನು ಆರೋಪಿಸಿ ಗುಡ್ಡರಾಗಿ ಮಾಡಿದ್ದು, ಶತ-ಶತಮಾನಗಳಿಂದ ಮೂಕವೇದನೆಯನ್ನು ಅನುಭವಿಸುತ್ತಿದ್ದ ಶೋಷಿತರು ಸೊಲ್ಲೆತ್ತುವುದನ್ನು ಸೂಚಿಸುತ್ತದೆ. ಅಚೇತನ ಏಳು ಗುಡ್ಡಗಳು ಸಚೇತನಗೊಂಡು ಪರಿಸರದ ಏಳು ವಿಭಿನ್ನ ನೋಟಗಳನ್ನು ಧರಿಸುತ್ತಾರೆ. ನಾಟಕದೊಳಗೆ ನಾಟಕ ಎಂಬ ತಂತ್ರದೊಟ್ಟಿಗೆ ಚಲಿಸುವ ಕತೆಯ ಚಲನೆಯಲ್ಲಿ ಜೀವಂತಿಕೆ ಇದೆ. ಗುಡ್ಡರು ಪವಾಡ ಕತೆಯ ಮಿತಿಯನ್ನು ಹೇಳುತ್ತಲೇ, ಮತ್ತೆ ಮಾದಯ್ಯನ ಪವಾಡ ಕತೆಯನ್ನು ಆಯ್ದುಕೊಳ್ಳುವುದರಲ್ಲೇ ವೈರುಧ್ಯವಿದೆ ಎಂದೆನಿಸಿದರೂ ಮುಂದೆ ಅದೇ ಕತೆಯ ಆಯ್ಕೆಯ ಔಚಿತ್ಯ ನಾಟಕದ ಸಂದರ್ಭದಲ್ಲಿ ನಮ್ಮ ಅರಿವಿಗೆ ಬರುತ್ತದೆ.

'ಮಾದಾರಿ ಮಾದಯ್ಯ' ಮೇಲ್ನೋಟಕ್ಕೆ ಪವಾಡಗಳ ನಾಟಕವೆಂದು ಗೋಚರಿಸಿದರೂ ಅದರ ಆಳದಲ್ಲಿ ಬಹು ಅರ್ಥಗಳಿವೆ. ಅದನ್ನು ನಾಟಕಕಾರರು ತಮ್ಮ ಲೇಖನಿಯಿಂದ ಸಾಧ್ಯವಾಗಿಸಿದ್ದಾರೆ. ನಾಟಕವನ್ನು ಈ ಕೆಳಕಂಡ ಅರ್ಥಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಿದೆ

೧. ಹಸಿವಿನ ಚಿತ್ರಣ

೨. ರಾಜನೀತಿಯ ವಿಡಂಬನೆ

೩. [illegible]

೪. [illegible]

೫. [illegible]

೬. [illegible]

೭. ಕಾಯಕಾಭಿಮಾನ

೮. ಧಾರ್ಮಿಕ ಸಂಸ್ಥೆಗಳ ಪ್ರಬಲ ಟೀಕೆ

೯. ನಗರೀಕರಣದ ಪರಿಣಾಮ ಮತ್ತು ಪರಿಸರ ಕಾಳಜಿ

೧೦. ಸಮಾನತೆಯ ಆಶಯ

ಹಸಿವಿನ ಚಿತ್ರಣ

ನಾಟಕದಲ್ಲಿ ಹಸಿವಿನ ಚಿತ್ರಣ ಮನಮುಟ್ಟುವಂತೆ ಆಗಿದೆ. ಮಾದಾರಿ ಮಾದಯ್ಯನ ವೇಷಧಾರಿಯಾದ ಗುಡ್ಡ ೭ ಹೇಳುವ ಸಾಲುಗಳು ಹೀಗಿವೆ: "ಈ ಅಸ್ವು ಲೋಕಾನೆಲ್ಲ ಕಿತ್ಕಂಡು ತಿನ್ತಾ ಅದೆ. ಇಂದುಲ್ ಕಾಲ್ದೊಳ್ಗೆ ಮಾರಿಮಸ್ಣೀರಾಗಿ ರಕ್ತ–ಮಾಂಸ ಕೇಳ್ತಿತ್ತು. ಇವಾಗ ಬೆಂಗ್ಳೂರು, ಮೈಸೂರು ದ್ವೊಡ್ ದ್ವೊಡ್ ಪೇಟೆಗುಳೊಳ್ಗೆ ಕೂಗುಲ್‌ಮಾರಿ ಅಂಗೆ ಬಡುವ್ರು ಬಿಕಾರಿಗುಳ್ ಕಳ್‌ನೊಳಗ್ ಕುಂತ್ಕಂಡು, ಕೆಂಡದ್ ನಾಲ್ಗೆ ಚಾಚಿ, ಕಣ್ ಕೆಕ್ಕರಿಸ್ಕಂಡು ನೋಡ್ತದೆ. ಅಸ್ವು ಬ್ರಮ್ಮಾಂಡ್ಲಕ್ಕಿಂತ ದೊಡ್ದು. ಬ್ರಮ್ಮಾಂಡ್ಲನೆಲ್ಲ ನಡುಗುಸ್ತದೆ."(ಪು.೩೬೧) ಎನ್ನುವ ಮಾತುಗಳು ಹಸಿವಿನ ಭೀಕರ ದೃಶ್ಯವನ್ನು ಓದುಗರ ಮುಂದೆ ತೆರೆದಿಡುತ್ತದೆ. ಗುಡ್ಡರು ಹಸಿವಿನಿಂದ ಕಂಗೆಟ್ಟು ಗುರುಮಠದ ಬಳಿ ಹೋಗಿ ಭಿಕ್ಷೆ ಬೇಡಿದಾಗ ಅವರಿಗೆ ಸಿಗುವುದು ವಚನದ ಆಹಾರ. ಈ ಸಂದರ್ಭದಲ್ಲಿ ಹೊಟ್ಟೆಯ ಹಸಿವಿನ ಮುಂದೆ ಆತ್ಮದ ಹಸಿವು ಏನೇನು ಅಲ್ಲ ಎಂಬ ಭಾವ ವ್ಯಕ್ತವಾಗುತ್ತದೆ. ಆದ್ದರಿಂದ ಸಾಂಸ್ಕೃತಿಕ ವೀರಪುರುಷನಾದ ಮಾದಯ್ಯ "ಈ ಅಸಿವಿನ ಉಲಿಯ ಬ್ಯಾಂಟೆಯಾಡ್ನಾಡೋ ನಮ್ಮ ಎತ್ತಯ್ಯ"ನಾಗಿ ಗಮನ ಸೆಳೆಯುತ್ತಾನೆ. ಹಸಿವಿನ ಹುಲಿಯ ಬೇಟೆಯ ರೂಪಕ ಶಕ್ತವಾಗಿದೆ.

ರಾಜಕೀಯ ವಿಡಂಬನೆ

ರಾಜಕೀಯ ವ್ಯವಸ್ಥೆಯ ವೈಪರೀತ್ಯಗಳನ್ನು ನಾಟಕ ಸಮರ್ಥವಾಗಿ [illegible]

(ಪು. ೩೪೨) ಎನ್ನುವ ಶ್ರವಣದೊರೆಯ ಮಾತು ರಾಜಕೀಯ ತಂತ್ರವಾಗಿ, ಹುಸಿ ಆಶ್ವಾಸನೆಯಾಗಿ ಅನುರಣನಗೊಳ್ಳುತ್ತದೆ. ಅಲ್ಲದೇ ಶ್ರವಣದೊರೆಯ ಬಯಕೆಗಳು ಆಕ್ಷೇಪಾರ್ಹವಾಗಿವೆ. "ಇಷ್ಟೆಲ್ಲ ಅದ್ಭುತ ವಿಜಯಗಳು ಕಣ್ಮುಂದೆ ಘಟಿಸುತ್ತಿದ್ದರೂ ನಮ್ಮ ರಾಜ್ಯದಲ್ಲಿ ಇನ್ನು ಹಸಿವು, ದಾರಿದ್ರ್ಯಗಳಿವೆಯೆಂಬ ಹುಸಿಸುದ್ದಿ ಎಬ್ಬಿಸುತ್ತಿದ್ದ ಕೆಲವರನ್ನು ಕಾನೂನು ರೀತ್ಯಾ ಮರಣದಂಡನೆಗೆ ಒಳಪಡಿಸಿದ್ದೇವೆ" (ಪು. ೩೪೫) ಎಂಬ ರಾಜನ ಮಾತಿನಲ್ಲಿ ರಾಜಕೀಯದ ನಿಗ್ರಹಬುದ್ಧಿ ವ್ಯಕ್ತವಾಗಿದೆ.

ಪರ್ಯಾಯ ಚಿಂತನೆ

ಪರ್ಯಾಯ ಚಿಂತನೆಯ ಫಲವಾಗಿಯೇ ನಾಟಕ ಪಡಿಮೂಡಿದೆ. ಅಂಚಿನ ಸಮುದಾಯದ ಸಾಂಸ್ಕೃತಿಕ ವೀರಪುರುಷನನ್ನು ಮುಖ್ಯಧಾರೆಗೆ ಇಲ್ಲವೇ ಮುನ್ನೆಲೆಗೆ ತಂದು, ಅವನ ಕತೆಗೆ ಮಹಾಕಾವ್ಯದ ಗಾಂಭೀರ್ಯವನ್ನು ತೊಡಿಸಿರುವುದು ಪರ್ಯಾಯ ಚಿಂತನೆಯ ಪರಿಣಾಮ. ಅಲ್ಲದೇ ಜನಪದರ ಕೇಂದ್ರದಿಂದ ಇತಿಹಾಸ ರಚಿಸಬೇಕಾದ ಅನಿವಾರ್ಯತೆಯನ್ನು ನಾಟಕ ಪ್ರತಿಪಾದಿಸುತ್ತದೆ.

ಮಹಿಳಾಪರ ಕಾಳಜಿ

ನಾಟಕ ತನ್ನ ಒಡಲಲ್ಲಿ ಮಹಿಳೆಯನ್ನು ಸಂಕೋಲೆಯಿಂದ ಪಾರುಮಾಡುವ ಆಶಯವನ್ನು ಇರಿಸಿಕೊಂಡಿದೆ. ನರ ಚಮ್ಮಾಳಿಗೆ ತರಲು ಹೊರಟ ಮಾದಯ್ಯನಿಗೆ ಕೇವಲ ಒಂದು ಕಾರ್ಯದ ಸಾಕಾರ ಮಾತ್ರವೇ ಮುಖ್ಯವಾಗಿರದೇ, ಅದರ ಜೊತೆಗೆ ಹಲವು ಕಾರ್ಯಗಳ ನೆರವೇರಿಕೆಯೂ ಪ್ರಮುಖವಾಗಿರುತ್ತದೆ. ಅದಕ್ಕಾಗಿ ಹಾದಿಯಲ್ಲಿ ಎದುರಾಗುವ ಸಂಕಮ್ಮನ ಗೋಳು ಮಾದಯ್ಯನ ಅರಿವಿಗೆ ಬರುತ್ತದೆ. ತನ್ನ ಗಂಡ ನೀಲಗೌಡನಿಂದ ಸಂಕೋಲೆಗೆ ಒಳಗಾಗುವ ಸಂಕವ್ವನ ಪರಿಸ್ಥಿತಿ ಶೋಚನೀಯವಾದದ್ದು. ಮಕ್ಕಳಾಗಲಿಲ್ಲ ಎಂಬ ಕಾರಣಕ್ಕೆ ಅವಳು ಪಡುವ ಪಾಡು ಅಷ್ಟಿಷ್ಟಲ್ಲ. ಬೇಟೆಗಾಗಿ ಬೇರೆ ಕಾಡಿಗೆ ಹೊರಡುವ ನೀಲಗೌಡ ತನ್ನ ಹೆಂಡತಿಯಾದ ಸಂಕವ್ವನನ್ನು ಬಂಜೆಯ ಕಾರಣಕ್ಕೆ ಅಲ್ಲೇ ಬಿಟ್ಟು ಹೋಗುತ್ತಾನೆ. ಇಷ್ಟು ಮಾತ್ರವಲ್ಲದೇ ಇವನು ಹೋಗುವ ಮುಂಚೆ ಸಂಕವ್ವನನ್ನು ಬಂಧಿಸುವ ರೀತಿ ಅಸಹನೀಯವಾದದ್ದು. ಅವಳ ಬಂಧನಕ್ಕೆ ಕಾರಣ ಹೀಗಿದೆ: "ನಾನು ಪಾಪಿ, ಆಡು ದನ ಕಾಯೊ ಉಡುಗ್ರುನ್ನ, ಈ ಕಾಡೊಳ್ಗಿರ ಜೋಗಿ ಜಂಗುಮ್ರನ್ನ ಮಡೀಕಂತೀನೀ ಅನ್ನ ಎದ್ರುಕೆಯಿಂದ ನನಗೀ ಕೊಡ್‌ಬಾರ್ದ ಕೊಲೆ ಕೊಟ್ಟೋಗೌವ್ರೆ" (ಪು. ೩೬೯) ಎನ್ನುವ ಮಾತುಗಳು ಹೃದಯಸ್ಪರ್ಶಿಯಾಗಿವೆ. ಮಾದಯ್ಯ ಸಂಕಮ್ಮನನ್ನು ಸಂಕೋಲೆಯಿಂದ ಪಾರುಮಾಡುವ ಚಿತ್ರ ಸಾಂಕೇತಿಕವಾಗಿದೆ.

ವಸಾಹತು ಮತ್ತು ನವ–ವಸಾಹತುಶಾಹಿ ವಿರೋಧ

ವಸಾಹತುಶಾಹಿ ತಂದ ಪರಿಣಾಮಗಳಲ್ಲಿ ನೆಲಮೂಲ ಸಂಸ್ಕೃತಿಯ ನಾಶ ಮುಖ್ಯವಾದುದು. ಬಂಕಾಪುರಿಯ ಶ್ರವಣದೊರೆ ನೆಲತಾಯಿಯನ್ನು ತನ್ನ ಅಡಿಯಾಳಾಗಿಸಿಕೊಳ್ಳುವ ರೀತಿ ವಸಾಹತುಶಾಹಿಯನ್ನು ಪ್ರತಿಬಿಂಬಿಸುತ್ತದೆ. "ಎಲ್ಲ ಸೌಂದರ್ಯವನ್ನು ಜೀವಂತವಾಗಿ ಭೋಗಿಸಬೇಕೇ ಹೊರತು ನಿರ್ಜೀವ ಶವವನ್ನಾಗಿ ಅಲ್ಲ" (ಪು.೩೪೬) ಎನ್ನುವ ಶ್ರವಣದೊರೆಯ ಮಾತಿನಲ್ಲಿ 'ಭೋಗಸಂಸ್ಕೃತಿ' ತಲೆಯೆತ್ತಿದೆ. ವಸಾಹತುಶಾಹಿಯ ಅನುಭವವನ್ನು ಭಾರತ ಮತ್ತು ಜಗತ್ತಿನ ಇನ್ನಿತರ ರಾಷ್ಟ್ರಗಳು ಈಗಾಗಲೇ ಪಡೆದುಕೊಂಡಿವೆ. ಅಲ್ಲದೇ ಅದರ ಪರಿಣಾಮವನ್ನು ಸಾಕಷ್ಟು ಎದುರಿಸಿವೆ. ವಸಾಹತುಶಾಹಿ ತನ್ನ ಸಾಮ್ರಾಜ್ಯ ವಿಸ್ತರಣೆಯ ಸಂದರ್ಭದಲ್ಲಿ ಎದುರಿಸಿದ ಎಡರು–ತೊಡರುಗಳು, ಕಂಡ ವೈಫಲ್ಯವನ್ನು ನಾಟಕ ಸಮರ್ಥವಾಗಿ ಬಿಂಬಿಸಿದೆ. ಶ್ರವಣದೊರೆ ಮೂರು ಲೋಕಗಳನ್ನು ಗೆದ್ದರೂ ಕೂಡ ಕೊನೆಯಲ್ಲಿ ಅಂತ್ಯ ಕಾಣಬೇಕಾದ ಪ್ರಸಂಗದ ಜೊತೆ ವಸಾಹತುಶಾಹಿಯ ಅಂತ್ಯ ತಳುಕು ಹಾಕಿಕೊಳ್ಳುತ್ತದೆ.

ಬಹುರಾಷ್ಟ್ರೀಯ ಕಂಪನಿಗಳಂತಹ ಬಂಡವಾಳಶಾಹಿ ವ್ಯವಸ್ಥೆಯು ನವವಸಾಹತುಶಾಹಿ ರೂಪಧರಿಸಿ ಮತ್ತೊಮ್ಮೆ ಶೋಷಣೆಗೆ ಒಳಗಾದ ದೇಶಗಳನ್ನೇ ಪ್ರವೇಶಿಸುವುದರ ವಿರುದ್ಧವು ನಾಟಕ ಸೊಲ್ಲೆತ್ತಿದೆ. "ಎಲವೋ ದುರುಳ, ನನ್ನನ್ನೇಕೆ ಆ ದರೋಡೆಕೋರರ ದವಡೆಗೆ ನೂಕಿದೆ? ನೀನು ಕೊಟ್ಟ ಹಿಂಸೆಗೆ ಪ್ರತಿಯಾಗಿ ಚಕ್ರಬಡ್ಡಿ ಸಮೇತ ನಿನಗೆ ಹಿಂತಿರುಗಿಸದಿದ್ದರೆ..."(ಪು.೩೮೯) ಎನ್ನುವ ಶನಿಯ ಮಾತಿಗೆ ಪ್ರತಿಕ್ರಿಯೆಯಾಗಿ ಮಾದಯ್ಯ, "ಅಪ್ಪಾ ಸನಿ, ಇನ್ನ ಈ ಲೋಕ್‌ದೊಳ್ಗೆ ಬಡ್ಡಿಯ ಯವಾರ ನಡ್ಯಾಕಿಲ್ಲ" (ಪು.೩೮೯) ಎಂದು ನುಡಿಯುವ ಮಾತು ನವವಸಾಹತುಶಾಹಿಯ ಕುರುಹಾದ ಬಂಡವಾಳಶಾಹಿಗೆ ಪ್ರತಿರೋಧದಂತಿದೆ.

ಬಸವಣ್ಣನ ತತ್ತ್ವಗಳಿಗೆ ಪ್ರಸ್ತುತ ಒದಗಿರುವ ಸ್ಥಿತಿ

'ಮಹಾಚೈತ್ರ' ನಾಟಕದಲ್ಲಿ ನೇರವಾಗಿ ಪ್ರವೇಶಿಸದ ಬಸವಣ್ಣನು ಈ ನಾಟಕದಲ್ಲಿ ಕಾಣಿಸಿಕೊಳ್ಳುತ್ತಾನೆ. ಅದೂ 'ಕಲ್ಲಾಗಿ'! ಎಂಬುದು ವಿಶೇಷ. ಕಲ್ಲು ಮಾತನಾಡುವ ಪರಿ ಮತ್ತೂ ವಿಶೇಷವೇ ಸರಿ. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ತಾತ್ತ್ವಿಕತೆಯನ್ನು ರೂಪಿಸಿಕೊಂಡಿದ್ದ ಬಸವಣ್ಣನನ್ನು ಕಲ್ಲಾಗಿ ಪೂಜಿಸುವಲ್ಲಿಯೇ ಬಸವಣ್ಣನ ತತ್ತ್ವಗಳಿಗೆ ಬಂದೊದಗಿರುವ ಸ್ಥಿತಿ ಅರಿವಾಗುತ್ತದೆ. ಕಲ್ಲಿನ ಬಸವಣ್ಣನನ್ನು ತಮ್ಮದೆನ್ನಲು ಕಠಾರಿವೀರರು ಮತ್ತು ಕತ್ತಿವೀರರು ಎನ್ನುವ ಎರಡು ಗುಂಪುಗಳು. ಅಲ್ಲದೇ ಬಸವಣ್ಣನೆನ್ನುವ ಕಲ್ಲಿನಿಂದಲೇ

ಹೊಟ್ಟೆಹೊರೆಯುವ ಅರ್ಚಕನೊಬ್ಬ. ಹೀಗೆ ಬಸವಣ್ಣನ ತತ್ತ್ವಗಳು ಪ್ರಸ್ತುತದಲ್ಲಿ ಅಪಮೌಲ್ಯೀಕರಣಗೊಂಡಿರುವುದನ್ನು ನಾಟಕ ಧ್ವನಿಸುತ್ತದೆ.

ಕಾಯಕಾಭಿಮಾನ

"ಏಳ್ ಬೇಲಿ ಆಚೆ ಕೀಳಾಗಿ ಬಾಳ್‌ತಿದ್ ಮಾದರ ಕುಲದ ಉತ್ರಾಜಮ್ಮ ಚಂದ್ರುಸೇಕರಪ್ನೋರ ಮಗನಾಗಿ ಉಟ್ಟಿಬಂದೆ. ಅದಿಕ್ಕೆ ನನ್ಗೆ ಮಾದಾರಿ ಅಂತ ಇನ್ನೊಂದೆಸ್ರು" (ಪು.೩೫೧) ಎನ್ನುವ ಮಾದಯ್ಯನ ಮಾತಿನಲ್ಲಿ ಕಾಯಕಾಭಿಮಾನವನ್ನು ಸ್ಪಷ್ಟವಾಗಿ ಗುರುತಿಸಬಹುದು. ಶತ-ಶತಮಾನದಿಂದಲೂ ಹರಳಯ್ಯ ಮತ್ತು ಕಲ್ಯಾಣಮ್ಮ ತಮ್ಮ ವೃತ್ತಿಯನ್ನು ನಿಷ್ಠೆಯಿಂದ ಮಾಡಿಕೊಂಡು ಬಂದದ್ದು ಕಾಯಕಾಭಿಮಾನದಿಂದಲೇ. ಅಲ್ಲದೇ ಆ ಕಾಯಕದ ಮೂಲಕವೇ ಅವರು ಮಾದಯ್ಯನಲ್ಲಿ ಶಿವನನ್ನು ಕಾಣುತ್ತಾರೆ. ಕಾಯಕ ನಿಷ್ಠೆಯನ್ನು ಅಳವಡಿಸಿಕೊಂಡರೆ ಆ ಮೂಲಕ ಆತ್ಮತೃಪ್ತಿಯನ್ನು ಕಾಣಲು ಸಾಧ್ಯ ಎನ್ನುವ ಆಯ್ದಕ್ಕಿ ಮಾರಯ್ಯ ಮತ್ತು ಬಸವಣ್ಣರ ಆಶಯ ಪ್ರತಿಧ್ವನಿತವಾಗುತ್ತದೆ.

ಧಾರ್ಮಿಕ ಸಂಸ್ಥೆಗಳ ಪ್ರಬಲ ಟೀಕೆ

ನಾಟಕ ಮೇಲ್ನೋಟಕ್ಕೆ ಧಾರ್ಮಿಕವೆಂಬ ಭ್ರಮೆಯನ್ನು ಹುಟ್ಟಿಸಿದರೂ ಅಂತರಾಳದಲ್ಲಿ ಧಾರ್ಮಿಕ ಸಂಸ್ಥೆ ಮತ್ತು ಸಿದ್ಧಾಂತಗಳನ್ನು ಪ್ರಬಲವಾಗಿ ಟೀಕಿಸುತ್ತದೆ. ಗುರುಮಠಗಳ ಇಂದಿನ ಉದ್ಯಮೀಕರಣವನ್ನು ತೆರೆದುತೋರಿಸುವ ನಾಟಕವು ಅದನ್ನು ಬಲವಾಗಿ ಟೀಕಿಸುತ್ತದೆ. ಕಲ್ಯಾಣಕ್ಕೆ ಮಾದಯ್ಯ ಪ್ರವೇಶಿಸಿದಾಗ ಅವನಿಗೆ ಪುರೋಹಿತಶಾಹಿಯು ದೇವರು-ಧರ್ಮದ ಹೆಸರಿನಲ್ಲಿ ನಡೆಸುವ ಸುಲಿಗೆಯ ದರ್ಶನವಾಗುತ್ತದೆ.

ನಗರೀಕರಣದ ಪರಿಣಾಮ ಮತ್ತು ಪರಿಸರ ಕಾಳಜಿ

"ಓ ಕತ್ಲೂ! ಕತ್ಲೂ! ಅಮಾಸೆ ಕತ್ಲು. ಮೈಯಲ್ಲಿ ಬೆಂಕಿ! ಬೆಂಕಿ! ಅಕ, ಬ್ಯಾಟೆಗಾರ್ರೆಲ್ಲ ಕಾಡೊಳ್ಗಿಂದ ಓಡೋಯ್ತಾವ್ರೆ. ಬೆಟ್ಟ-ಗುಡ್ಡದ್ ಮ್ಯಾಲೆಲ್ಲ ನೆಲ ಊಳ್ತಾವ್ರೆ...." (ಪು. ೩೭೦) ಎನ್ನುವ ಸಂಕವ್ವನ ಮಾತು ನಗರೀಕರಣದ ಸ್ಥಿತಿಗೆ ಕನ್ನಡಿ ಹಿಡಿದಿದೆ. ಬಂಡವಾಳಶಾಹಿಯು ಪರಿಣಾಮದಿಂದ ಕಾಡು ಬರಿದಾಗಿರುವುದರ ಕುರುಹಾಗಿ ಬೇಟೆಗಾರರು ನಗರಕ್ಕೆ ಕೆಲಸ ಅರಸುತ್ತಾ ಬರುವುದು, ಕೃಷಿಸಂಸ್ಕೃತಿಯ ಅಸ್ತಿತ್ವ ನಗರದ ಕಾರಣದಿಂದ ಮರೆಯಾಗುತ್ತಿರುವುದು ಜನಬದುಕಿನ ಸ್ಥಿತ್ಯಂತರಗಳನ್ನು ತೋರಿಸುತ್ತದೆ. ನಗರೀಕರಣದಿಂದ ಭೂಮಿ ಕಳೆದುಕೊಂಡ ರೈತರು ಸಹಜವಾಗಿಯೇ ಬೆಟ್ಟ-ಗುಡ್ಡದ ಮೇಲೆ ವ್ಯವಸಾಯ

ಆರಂಭಿಸಿದ್ದಾರೆ. ನಗರೀಕರಣದಿಂದಾದ ಪರಿಸರ ನಾಶದ ಪರಿಣಾಮಗಳನ್ನು ನಾಟಕ ತೋರಿಸುತ್ತದೆ. ಆ ಮೂಲಕ ಪರಿಸರ ಕಾಳಜಿಯನ್ನು ನಾಟಕ ವ್ಯಕ್ತಪಡಿಸಿದೆ.

ಸಮಾನತೆಯ ಆಶಯ

ವಸ್ತುಸ್ಥಿತಿಯನ್ನು ಬುಡಮೇಲುಗೊಳಿಸುವುದರ ಮೂಲಕ ಸಮಾನತೆಯ ಪ್ರಜ್ಞೆಯನ್ನು ಬೆಳೆಸಬಹುದು ಎಂಬ ಆಶಯವನ್ನು ಹೊಂದಿರುವ ನಾಟಕ ಆ ಕ್ರಿಯೆಯಲ್ಲಿ ನಿರತವಾಗುತ್ತದೆ. ಮಾದರ ಕುಲದ ಮಾದಯ್ಯನಿಂದಲೇ ನೆಲವನ್ನು ಶೋಷಿಸುವ ಶ್ರವಣದೊರೆಯ ಅಂತ್ಯ ಕುತೂಹಲಕಾರಿಯಾದುದು. ಶೋಷಿತರ ಪ್ರತಿನಿಧಿಯಾದ ಮಾದಯ್ಯನ ವ್ಯಕ್ತಿತ್ವ ಉನ್ನತವಾದದ್ದು. ಈ ಮೂಲಕ ಶೋಷಿತರು ಅಧಿಕಾರದಲ್ಲಿ ಗಟ್ಟಿಗೊಳ್ಳಬೇಕಾದ ಅಂಶವನ್ನು ನಾಟಕ ಒತ್ತಿಹೇಳಿದೆ.

ನಾಟಕದ ತಂತ್ರ ವಿಶಿಷ್ಟವಾದದ್ದು. ನಾಟಕದೊಳಗೆ ನಾಟಕ ಎಂಬ ತಂತ್ರದೊಟ್ಟಿಗೆ ಸಾಗುವ ಕತೆ ವಾಸ್ತವ ಮತ್ತು ಜನಪದರ ಚರಿತ್ರೆಯನ್ನು ಮುಖಾಮುಖಿಯಾಗಿಸಿದೆ. ಸಣ್ಣಾಟದ ಲಕ್ಷಣವನ್ನು ಹೊಂದಿರುವ ನಾಟಕ, ಅದರ ಲಕ್ಷಣದಂತೆಯೇ ಸಮಕಾಲೀನ ವಿಷಯಗಳ ಮೇಲೆ ಬೆಳಕು ಚೆಲ್ಲಿದೆ. ಸಾಂಸ್ಕೃತಿಕ ವೀರಪುರುಷನಾದ 'ಮಾದಯ್ಯ'ನಿಂದ ಜನಸಾಮಾನ್ಯರ ಭಾಷೆಯನ್ನು ನುಡಿಸಿರುವುದರಲ್ಲಿ ವೈಶಿಷ್ಟ್ಯವಿದೆ. ಒಟ್ಟಾರೆಯಾಗಿ ನಾಟಕ ಮೇಲಿನ ಅರ್ಥಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡು ಬಹು ಅರ್ಥಗಳ 'ಮಾದಾರಿ ಮಾದಯ್ಯ' ವಿಶೇಷಣಕ್ಕೆ ಅನ್ವರ್ಥವಾಗಿದೆ.

ಗ್ರಂಥಋಣ

೧. ಎಚ್.ಎಸ್. ಶಿವಪ್ರಕಾಶ್ : **ನಾಟಕಗಳು ಇಂದಿನವರೆಗೆ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧.

೨. ಪಿ.ಕೆ. ರಾಜಶೇಖರ್ (ಸಂ) : **ಜನಪದ ಮಹಾಕಾವ್ಯ ಮಲೆಯ ಮಾದೇಶ್ವರ, ಸಂಪುಟ–೧ ಮತ್ತು ೨,** ಸಂಯುಕ್ತ ಪ್ರಕಾಶನ, ಮೈಸೂರು, ೧೯೭೩.

□□□

೯. ಕನ್ನಡ ನಾಡು ನುಡಿ ಕುರಿತಂತೆ ಎಲ್.ಎಸ್. ಶೇಷಗಿರಿರಾವ್ ಅವರ ವಿಚಾರಧಾರೆ

– ಶಿವಕುಮಾರ ಡಿ.ಬಿ.

ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಕವಾಗಿ ಕನ್ನಡ ನಾಡು ಇಂದು ಶ್ರೀಮಂತಿಕೆಯಿಂದ ಬೆಳೆಯುತ್ತಿದೆ. ಇದಕ್ಕೆ ನೂರಾರು ಕನ್ನಡ ಸೇವಕರ ಸಾಧನೆ, ನಿಸ್ವಾರ್ಥ ಸೇವೆಯೇ ಕಾರಣ. ಅದರಲ್ಲೂ ನಾಡು ನುಡಿಗಳ ಸೇವೆಗಾಗಿ ಸಾಹಿತಿಗಳು ತಮ್ಮ ಜೀವಮಾನವನ್ನೇ ಮುಡಿಪಾಗಿ ಇಟ್ಟಿದ್ದಾರೆ. ವೃತ್ತಿಯಲ್ಲಿ ಅಧ್ಯಾಪಕರಾಗಿ ಪ್ರವೃತ್ತಿಯಲ್ಲಿ ಸಾಹಿತಿಗಳಾಗಿ ನೂರಾರು ಮಹತ್ವದ ಕೃತಿಗಳನ್ನು ಬರೆದು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡ ಕುವೆಂಪು, ವೀ. ಸೀತಾರಾಮಯ್ಯ, ಯು.ಆರ್. ಅನಂತಮೂರ್ತಿ, ದೇಜಗೌ, ಹಾ.ಮಾ. ನಾಯಕರಂತಹ ಇನ್ನೂ ಹಲವರು ಕನ್ನಡ ನೆಲದ ಆಸ್ತಿಗಳಾಗಿದ್ದಾರೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೊಂದಿದೆ. ಅದೆಂದರೆ ಕುವೆಂಪು, ವೀ.ಸೀ. ಅವರಂತಹ ಸಾಹಿತಿಗಳು ಕನ್ನಡ ಪ್ರಾಧ್ಯಾಪಕರಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಹಾಗೆಯೇ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸೇವೆ ಸಲ್ಲಿಸಿ ಕನ್ನಡತನವನ್ನು ಮೆರೆದ ಹಲವಾರು ಸಾಹಿತಿಗಳು ನಮ್ಮ ನೆಲದಲ್ಲಿ ಕನ್ನಡಿಗರು ಎಂದಿಗೂ ಮರೆಯಲಾರದ ಕಾಣಿಕೆ ನೀಡಿದ್ದಾರೆ. ಅವರುಗಳಲ್ಲಿ ಎ.ಎನ್. ಮೂರ್ತಿರಾವ್, ಬಿ.ಎಂ.ಶ್ರೀ, ಎಸ್.ವಿ. ರಂಗಣ್ಣ ಇನ್ನೂ ಹಲವರಿದ್ದಾರೆ. ಈ ಸಾಲಿಗೆ ಸೇರುವಂಥವರು ಎಲ್.ಎಸ್. ಶೇಷಗಿರಿರಾವ್, ನಲವತ್ತು ವರ್ಷಗಳ ಕಾಲ ಇಂಗ್ಲಿಷ್ ಭಾಷೆಯ ಶಿಕ್ಷಕರಾಗಿ ಆ ಭಾಷೆಯ ಪಾಂಡಿತ್ಯ, ಪಾಶ್ಚಾತ್ಯ ಸಾಹಿತ್ಯದ ಅಪಾರ ಜ್ಞಾನವನ್ನು ಪಡೆದ ಇವರ 'ಹೃದಯ ಕನ್ನಡದಲ್ಲಿ ಇದ್ದರೆ ಕಣ್ಣು ಇಂಗ್ಲಿಷಿನ ಮೇಲೆ.'[೧] ನಾವು ಹುಟ್ಟಿದ ಮಣ್ಣಿಗೆ ಏನಾದರೂ ಅಳಿಲು ಸೇವೆ ಸಲ್ಲಿಸಿಯೇ ತೀರಬೇಕೆಂಬ ನಿಶ್ಚಲ ಮನಸ್ಸಿನವರಾದ ರಾಯರು ಈಗಿನ ೯೦ನೇ ವಯಸ್ಸಿನಲ್ಲಿಯೂ ಕನ್ನಡ ನೆಲದ ಬಗ್ಗೆ ಅಪಾರ ಅಭಿಮಾನ ಹೊಂದಿದ್ದಾರೆ. "ಕನ್ನಡ ನನ್ನ ಭಾಷೆ ಕನ್ನಡ ನಾಡು ನನ್ನ ನಾಡು ಈ ಭಾಷೆಯಲ್ಲಿರುವ ಇತಿಹಾಸ ಅತ್ಯಂತ ಶ್ರೀಮಂತವಾದುದು

ವಚನ ಸಾಹಿತ್ಯದಂಥ ಚಳವಳಿ ಸೃಷ್ಟಿ ನನಗೆ ತಿಳಿದಂತೆ ಜಗತ್ತಿನ ಬೇರೆ ಯಾವ ದೇಶದಲ್ಲಿಯೂ ನಡೆದಿಲ್ಲ, 'ಸಿರಿಭೂವಲಯ'ದಂಥ ಕೃತಿ ಬೇರೆ ಯಾವ ಭಾಷೆಯಲ್ಲಿಯೂ ಇಲ್ಲ"[೨] ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು ಎಂದು ನವೆಂಬರ್ ತಿಂಗಳಲ್ಲಿ ಉದ್ಗಾರವೆತ್ತುವ ಕನ್ನಡಿಗರ ಬಗ್ಗೆ ರಾಯರಿಗೆ ಅಸಮಾಧಾನವಿದೆ.

ಹಾಗೆಯೇ ನಮ್ಮ ಕಣ್ಣ ಮುಂದಿರುವ ಇಂದಿನ ಕರ್ನಾಟಕದಲ್ಲಿ ಇರುವ ಭ್ರಷ್ಟಾಚಾರ ಲಂಚಗುಳಿತನ, ಹಳ್ಳಿಗಳಲ್ಲಿ ಇರುವ ಅನೈರ್ಮಲ್ಯ, ಅಸಮರ್ಥ ರಾಜಕಾರಣಿಗಳು ಇವೆಲ್ಲದರ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುವ ರಾಯರು ಭವಿಷ್ಯದ ದಿನಗಳ ಕನ್ನಡ ನಾಡಿನ ಪರಿಸ್ಥಿತಿ ನೆನೆದು ಮರುಗುತ್ತಾರೆ. ವೃತ್ತಿಯ ಆರಂಭದ ದಿನಗಳಿಂದ ಇಂದಿನವರೆವಿಗೂ ಕನ್ನಡಪರ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ಮೊದಲ ಅಧ್ಯಕ್ಷರಾಗಿ ಸಾರ್ಥಕ ಸೇವೆಯನ್ನು ಸಲ್ಲಿಸುತ್ತಾ ಕನ್ನಡ ನಾಡಿನ ಏಳುಬೀಳುಗಳ ಜೊತೆ ತಮ್ಮ ಬದುಕನ್ನು ಸವೆಸಿದ ರಾಯರ ಬದುಕು ನಿಜಕ್ಕೂ ಅರ್ಥಪೂರ್ಣವಾದುದು.

ಕನ್ನಡ ನಾಡನ್ನು ಕುರಿತು ಎಲ್.ಎಸ್.ಎಸ್. ಅವರ ಚಿಂತನೆಗಳು

೧೯೪೭ರಲ್ಲಿ ಕಾಸರಗೂಡಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ಸಭೆಯಲ್ಲಿ ಗೌರವ ಕಾರ್ಯದರ್ಶಿಯಾಗಿ ಆಯ್ಕೆಗೊಂಡ ರಾಯರಿಗೆ ಕೇವಲ ೨೨ ವರ್ಷ ವಯಸ್ಸು. ಕನ್ನಡಪರ ಚಟುವಟಿಕೆಗಳಿಗೆ ಮಾತೃಸಂಸ್ಥೆ ಎನಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಂದಿಗೆ ಇದ್ದ ಹಣಕಾಸಿನ ವ್ಯವಸ್ಥೆ ಆಡಳಿತ ರೀತಿಗಳನ್ನು ಕ್ರಮಬದ್ಧವಾಗಿ ರೂಪಿಸಿದ ಕೀರ್ತಿ ರಾಯರಿಗೆ ಸಲ್ಲುತ್ತದೆ. ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮೊದಲ ಅಧ್ಯಕ್ಷರಾಗಿದ್ದ ರಾಯರು ಕನ್ನಡದ ಜೊತೆಗೆ ವಿಜ್ಞಾನ, ತಂತ್ರಜ್ಞಾನ ಕುರಿತ ಪುಸ್ತಕಗಳ ಪ್ರಕಟಣೆಗೆ ಒತ್ತುಕೊಟ್ಟರು. ಪುಸ್ತಕ ಮೇಳಗಳನ್ನು ಯಶಸ್ವಿಯಾಗಿ ಏರ್ಪಡಿಸಿ ಸಾಹಿತಿಗಳ, ಪ್ರಕಾಶಕರ ಮೆಚ್ಚುಗೆಗೆ ಪಾತ್ರರಾದರು.

ಈ ನಾಡಿನ ನೆಲ, ಜಲ ಕನ್ನಡಿಗರಿಗೆ ಸಿಗಬೇಕಾದ ಸ್ಥಾನಮಾನ, ನಿರುದ್ಯೋಗ, ರಾಜಕಾರಣಿಗಳ ನಾಡಿನ ಭವಿಷ್ಯ ಕುರಿತ ಅಸಡ್ಡೆ, ಇಂತಹ ಹತ್ತು ಹಲವು ವಿಚಾರಗಳನ್ನು ಕುರಿತು ಚಿಂತಿಸಿರುವ ರಾಯರ ನಾಡಿನ ಪ್ರೇಮ ಅನುಕರಣೀಯವಾದುದು. ಬಹಳ ವರ್ಷಗಳ ಹಿಂದೆಯೇ ಈ ವಿಚಾರವಾಗಿ ಚಿಂತಿಸಿರುವ ಇವರು ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಕೇಂದ್ರ ಹೊರ

ತಂದಿರುವ ೨೦೦೦ಕ್ಕೂ ಹೆಚ್ಚು ಅಂಚೆ ಚೀಟಿಗಳಲ್ಲಿ ೨೦ ಮಾತ್ರ ಕರ್ನಾಟಕಕ್ಕೆ ಸಂಬಂಧಿಸಿದವು ಎಂದು ನೋವಿನೊಂದಿಗೆ ಹೇಳುತ್ತಾ ವೇಮನ ತಿರುವಳ್ಳರ್ ಅಂಚೆ ಚೀಟಿಗಳು ಬಂದಿವೆ, ಆದರೆ ಸರ್ವಜ್ಞನಿಗೆ ಸ್ಥಾನವಿಲ್ಲ, ತಾಂತ್ರಿಕ ಕೇಂದ್ರಗಳ ಸಾಲಿನಲ್ಲಿ ವಿಶ್ವೇಶ್ವರಯ್ಯ ತಂತ್ರಜ್ಞಾನ ಪ್ರದರ್ಶನಾಲಯಕ್ಕೆ ಅವಕಾಶವಿಲ್ಲ, ಬೆಂಗಳೂರಿನ ಜನರಲ್ ಪೋಸ್ಟ್ ಆಫೀಸಿನ ಅಂಚೆ ಚೀಟಿ ಇದೆ, ಆದರೆ ಒಂದು ಅಂಚೆ ಚೀಟಿಯೂ ಬೆಂಗಳೂರಿನ ವಿಧಾನಸೌಧವನ್ನು ನೆನಪಿಗೆ ತರುವುದಿಲ್ಲ. ಪಂಪ, ಮಾಸ್ತಿ, ಕುವೆಂಪು ಯಾರಿಗೂ ಅಂಚೆ ಚೀಟಿಯ ಗೌರವವಿಲ್ಲ. ಭಾರತ ಸರ್ಕಾರವು ಹೊರತಂದಿರುವ ನಾಣ್ಯಗಳತ್ತ ತಿರುಗಿದರೂ ಇದೇ ಅಲಕ್ಷ್ಯದ ಉಡುಗೊರೆಯೇ ಎಂದಿದ್ದಾರೆ. ಗಡಿಭಾಗಗಳು ಕನ್ನಡಿಗರಲ್ಲಿ ಒಕ್ಕೊರಲಿನ ದನಿಯಲ್ಲಿ ಒಂದಾಗಿ ಉಳಿಯದಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಇವರು ಡಿ.ಎಂ. ನಂಜುಂಡಪ್ಪನವರ ವರದಿಯ ಪ್ರಾಮಾಣಿಕ ಅನುಷ್ಠಾನವೇ ಇದಕ್ಕೆ ಮದ್ದು. ಈ ದಿಸೆಯ ನಡೆಯಲ್ಲಿ ನಡೆಯುವ ಯಾವುದೇ ಪ್ರಯತ್ನಕ್ಕೆ, ಹೋರಾಟಕ್ಕೆ ಎಲ್ಲರ ಬೆಂಬಲ ಇರಬೇಕು. ಹಂಬಲಿಸಿ, ಹೋರಾಡಿ ಒಂದಾದ ನಾಡನ್ನು ಒಡೆಯುವ ಪ್ರಯತ್ನ ಬೇಡ ಎಂದು ಎಲ್ಲ ವಿಭಾಗಗಳ ಕನ್ನಡಿಗರಲ್ಲಿ ಪ್ರಾರ್ಥನೆ ಮಾಡಿದ್ದಾರೆ. ಇಂತಹ ಸೂಕ್ಷ್ಮ ವಿಚಾರಗಳನ್ನು ಪ್ರಸ್ತಾಪಿಸಿರುವ ರಾಯರು ನಾಡಿನ ಪ್ರಮುಖ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ.

ಭಾರತದ ಭಾಗವಾಗಿ ಕರ್ನಾಟಕಕ್ಕೆ ನ್ಯಾಯವಾಗಿ ಸಲ್ಲಬೇಕಾದುದ್ದನ್ನು ಪಡೆಯುವುದಕ್ಕೂ ಕನ್ನಡಿಗರು ಜಾಗೃತರಾಗಿರಬೇಕು ಎಂಬ ಸರಳ ಸತ್ಯವನ್ನು ಕಲಿಯಲು ಕನ್ನಡಿಗರಿಗೆ ಮೂವತ್ತೊಂದು ವರ್ಷ ಬೇಕಾಯಿತೆಂದು ಶಕ್ತಿ ಕೇಂದ್ರದ ಸ್ಥಾಪನೆ ಸಂದರ್ಭದಲ್ಲಿ ರಾಯರು ವಿಷಾದ ತೋಡಿಕೊಂಡಿದ್ದಾರೆ. ಕನ್ನಡಿಗರಿಗೆ ಕರ್ನಾಟಕದ ಕಾರ್ಖಾನೆಗಳಲ್ಲಿ ಕೆಲಸ ಸಿಗುತ್ತಿಲ್ಲ ಇದಕ್ಕೆ ಸಂಬಂಧಿಸಿದಂತೆ ಸರೋಜಿನಿ ಮಹಿಷಿಯು ಸಮಿತಿ ಶಿಫಾರಸು ಮಾಡಿದ ಅಂಶಗಳು ಕಾರ್ಯಗತವಾಗಬೇಕು ಎಂದಿದ್ದಾರೆ. ಸಂಯುಕ್ತ ರಂಗದ ಸ್ಥಾಪನೆಯಾಗಿ ಹಲವು ವರ್ಷಗಳಾದರೂ ಇಲ್ಲಿನ ಸ್ಥಿತಿ ಅಂದಿಗಿಂತ ಉತ್ತಮವೇನೂ ಅಲ್ಲ ಎನ್ನುತ್ತಾರೆ. ಜೊತೆಗೆ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುವ ಇವರು ಕರ್ನಾಟಕದಲ್ಲಿ ಯಾವ ರಾಜಕೀಯ ಪಕ್ಷವೇ ಆಗಲಿ ಕನ್ನಡ ಕನ್ನಡಿಗ ಕರ್ನಾಟಕಗಳ ಹಿತ ರಕ್ಷಣೆಗೆ ಆದ್ಯತೆ ಕೊಡದಿದ್ದರೆ ಅದು ಅಧಿಕಾರದಲ್ಲಿ ಉಳಿಯುವುದೇ ಕಷ್ಟ ಎನ್ನುವಂತಹ ವಾತಾವರಣವನ್ನು ಸೃಷ್ಟಿಸಬೇಕಾಗಿದೆ ಎನ್ನುತ್ತಾರೆ. ಈಗ

ರೂಪುಗೊಳ್ಳುತ್ತಿರುವ ಸಂಘಟನೆಗಳಿಂದ ಕನ್ನಡ – ಕನ್ನಡಿಗ – ಕರ್ನಾಟಕದ ಸ್ಥಿತಿ ಉತ್ತಮವಾಗಿ ಆತ್ಮಗೌರವ ಉಳಿದು, ಆರ್ಥಿಕ ನ್ಯಾಯ ದೊರೆಯುವುದು ಮುಖ್ಯವೆಂದು ಸೂಚಿಸುವುದರೊಂದಿಗೆ ಇದಕ್ಕಾಗಿ ಹೋರಾಟ ಅನಿವಾರ್ಯವಾದರೆ ಅದಕ್ಕೂ ಸಿದ್ಧರಾಗಬೇಕಾಗಿದೆ ಎಂದಿದ್ದಾರೆ.

ಕನ್ನಡ ನಾಡು ನವೆಂಬರ್ ತಿಂಗಳಲ್ಲಿ ಆಚರಿಸುವ ಕನ್ನಡ ರಾಜ್ಯೋತ್ಸವದ ಬಗ್ಗೆ ಪ್ರಸ್ತಾಪಿಸಿರುವ ರಾಯರು "೧೯೫೬ರ ನವೆಂಬರ್ ಒಂದರಂದು ಕರ್ನಾಟಕ ರಾಜ್ಯ ಉದಯವಾದದ್ದು ಕನ್ನಡ ಭಾಷೆ ಅಥವಾ ಸಾಹಿತ್ಯ ಅಥವಾ ಕರ್ನಾಟಕದ ಲಲಿತ ಕಲೆಗಳು ಅಭಿವೃದ್ಧಿ ಹೊಂದುವುದಕಷ್ಟೇ ಅಲ್ಲ. ಕರ್ನಾಟಕದ ಮತ್ತು ಕನ್ನಡಿಗರ ಸರ್ವತೋಮುಖ ಅಭಿವೃದ್ಧಿಗಾಗಿ ನಾಡಿನ ಇತಿಹಾಸ ಮತ್ತು ಪರಂಪರೆಗಳನ್ನು ನಾವು ಅರಿತಿರಬೇಕಾದದ್ದು ಮುಖ್ಯ"[೩] ಎನ್ನುತ್ತಾರೆ. ಆದರೆ ನಮ್ಮ ದೃಷ್ಟಿಯು ಗತಕಾಲದಲ್ಲಿ ನೆಟ್ಟಿರಬಾರದು ಭವಿಷ್ಯದಲ್ಲಿಯೂ ನಮಗೆ ಆಸಕ್ತಿ ಇರಬೇಕು ಎಂಬ ಸಲಹೆಯನ್ನು ನೀಡಿದ್ದಾರೆ. ರಾಜ್ಯೋತ್ಸವದ ಸಂದರ್ಭದಲ್ಲಿ ಸಾಹಿತಿಗಳನ್ನು ಆಹ್ವಾನಿಸುವಂತೆ ವಿಜ್ಞಾನಿಗಳನ್ನು, ಅರ್ಥಶಾಸ್ತ್ರಜ್ಞರನ್ನು, ಕೈಗಾರಿಕಾ ನಿಪುಣರನ್ನು ಆಹ್ವಾನಿಸುವುದರಿಂದ ಭವಿಷ್ಯದಲ್ಲಿ ನಾಡನ್ನು ಹೇಗೆ ಕಟ್ಟಬಹುದೆಂಬ ಪ್ರಶ್ನೆಗೆ ವಿದ್ಯಾರ್ಥಿಗಳಿಗೆ ಉತ್ತರ ದೊರಕುತ್ತದೆ ಎಂಬ ಇವರ ಚಿಂತನೆ ಇವರ ಸಂಕೀರ್ಣ ಆಲೋಚನಾ ಕ್ರಮಕ್ಕೆ ಸಾಕ್ಷಿಯಾಗಿದೆ.

ಬೆಂಗಳೂರಿಗೆ ಬರುತ್ತಿರುವ ವಲಸಿಗರ ಬಗ್ಗೆ ಕಳವಳ ವ್ಯಕ್ತಪಡಿಸಿರುವ ರಾಯರು "ವಲಸೆಯು ಬೆಂಗಳೂರಿನ ಕುತ್ತಿಗೆಯನ್ನು ಹಿಡಿದು ಹಿಸುಕುತ್ತಿರುವ ಹೆಬ್ಬಾವು"[೪] ಎಂದಿದ್ದಾರೆ. ಹೊರಗಿನಿಂದ ಬೆಂಗಳೂರಿಗೆ ದಿನಕ್ಕೆ ೫೦೦೦ಕ್ಕೂ ಹೆಚ್ಚು ಜನ ವಲಸೆ ಬರುತ್ತಿರುವುದರಿಂದ ಇನ್ನು ೧೫ ವರ್ಷಗಳ ಒಳಗೆ ಬೆಂಗಳೂರಿನಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗಲಿದೆ ಎಂಬ ತಜ್ಞರ ವರದಿಯನ್ನು ರಾಯರು ಲೇಖನವೊಂದರಲ್ಲಿ ಹೇಳಿ ಕನ್ನಡಿಗರನ್ನು ಎಚ್ಚರಿಸಿದ್ದಾರೆ. ಇದೇ ಸಂದರ್ಭದಲ್ಲಿ ತಮಿಳರು ಈಗಾಗಲೇ ಎರಡು ಬಾರಿ ರಾಷ್ಟ್ರಪತಿಗಳಿಗೆ ಬೆಂಗಳೂರನ್ನು ಕೇಂದ್ರಾಡಳಿತ ನಗರವನ್ನಾಗಿ ಮಾಡಬೇಕೆಂದು ಮನವಿ ಸಲ್ಲಿಸಿರುವ ಆಘಾತಕಾರಿ ವಿಚಾರವನ್ನು ಪ್ರಸ್ತಾಪಿಸಿ ಕನ್ನಡ ನೆಲ ಜಲದ ಬಗೆಗೆ ಅವರಿಗಿರುವ ಅಭಿಮಾನವನ್ನು ವ್ಯಕ್ತಪಡಿಸಿ ಕನ್ನಡಿಗರಿಗೆ ಇರಬೇಕಾದ ನೈತಿಕ ಪ್ರಜ್ಞೆಯನ್ನು ಬಡಿದೆಬ್ಬಿಸಲು ಅಗತ್ಯ ಮಾಹಿತಿಗಳನ್ನು ರಾಯರು ನೀಡಿದ್ದಾರೆ.

ಕನ್ನಡಪರ ಹೋರಾಟಗಳಿಗೆ ರಾಯರದು ಸದಾ ತೆರದ ಮನಸ್ಸು. ಈ ನಿಟ್ಟಿನಲ್ಲಿಯೇ ಚಿಂತಿಸಿದ ಕನ್ನಡದ ಏಳಿಗೆಗಾಗಿ ಶ್ರಮಿಸಿದ ನಾಡಿನ ವಿದ್ವಾಂಸರಾದ

ಎಂ. ಚಿದಾನಂದಮೂರ್ತಿ ಅವರು ರಾಯರು ಬರೆದಿರುವ ಕನ್ನಡಪರ ಚಿಂತನೆಗಳನ್ನು ಹೊತ್ತ 'ಪ್ರಿಯ ಕನ್ನಡ ಬಂಧು' ಪುಸ್ತಕವನ್ನು ಕುರಿತು ಹಾಗೂ ರಾಯರ ಕನ್ನಡ ಪರ ಹೋರಾಟಗಳನ್ನು ಕುರಿತು ಶ್ಲಾಘಿಸಿದ್ದಾರೆ. ಅವರ ಅಭಿಪ್ರಾಯವು ಹೀಗಿದೆ : 'ಪ್ರಿಯ ಕನ್ನಡ ಬಂಧು' ಪುಸ್ತಕ ರಾಯರ ಬಹುಮುಖ ವಿದ್ವತ್ತಿಗೆ ಸಾಕ್ಷಿಯಾಗಿರುವಂತೆ ಅವರಲ್ಲಿ ನಿರಂತರವಾಗಿರುವ ಕನ್ನಡ ಅರಿವಿನ ಸಂಕೇತವು ಆಗಿದೆ[೫] ಎಂದಿದ್ದಾರೆ. ಹಾಗೆಯೇ ರಾಯರು ಕನ್ನಡ ಶಕ್ತಿಕೇಂದ್ರದ ಕೆಲಸವಾಗಬಹುದು ಅಥವಾ ಯಾವುದೇ ಕನ್ನಡಪರ ಕೆಲಸವಾಗಿರಬಹುದು ಸದಾ ಸಿದ್ಧರಾಗಿರುತ್ತಿದ್ದರು ಎಂದು ನೆನೆದಿದ್ದಾರೆ. ಅಲ್ಲದೆ ಇಂದಿನ ಕನ್ನಡ ವಿಮರ್ಶೆಯ ಕ್ಷೇತ್ರದ ಒಂದು ಅಗತ್ಯ ಕನ್ನಡ ಚಳವಳಿ ಕ್ಷೇತ್ರದ ಒಂದು ಅನಿವಾರ್ಯ ವ್ಯಕ್ತಿಯೆಂದು ರಾಯರ ಅವಶ್ಯಕತೆ ಕನ್ನಡದ ಪಾಲಿಗೆ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ತಿಳಿಸಿದ್ದಾರೆ.

ಕನ್ನಡ ಭಾಷೆಯನ್ನು ಕುರಿತಂತೆ ಎಲ್.ಎಸ್.ಎಸ್. ಅವರ ಚಿಂತನೆಗಳು

ಕನ್ನಡ ನಾಡಿನ ಬಗ್ಗೆ ಚಿಂತಿಸಿರುವಂತೆ ರಾಯರು ಕನ್ನಡ ಭಾಷೆಯ ಬಗ್ಗೆಯು ವ್ಯಕ್ತಪಡಿಸಿದ ವಿಚಾರಧಾರೆಗಳು ಮಹತ್ವದವಾಗಿವೆ. ಕನ್ನಡ ಭಾಷೆ ಇಂದು ಎದುರಿಸುತ್ತಿರುವ ಸಮಸ್ಯೆಗಳತ್ತ ಬೆಳಕು ಚೆಲ್ಲುವ ರಾಯರು ತಮ್ಮದೇ ಧಾಟಿಯಲ್ಲಿ ಪರಿಹಾರಗಳನ್ನು ಸೂಚಿಸುತ್ತ ಪ್ರತಿಯೊಬ್ಬ ಕನ್ನಡಿಗನ ಎದೆಯಲ್ಲಿ ಅಭಿಮಾನವನ್ನು ಬಿತ್ತುವುದರ ಜೊತೆಗೆ ಭಾಷೆಯ ಮಹತ್ವವನ್ನು ತಿಳಿಸಿಕೊಡುತ್ತಾರೆ.

ಭಾರತೀಯ ವಿವಿಧ ಭಾಷಾ ಸಂಸ್ಥೆಗಳ ಜೊತೆ ಸಂಪರ್ಕವಿರಿಸಿಕೊಂಡಿದ್ದ ರಾಯರು, ಅದನ್ನೆಲ್ಲ ಕನ್ನಡದ ಉಪಯೋಗಕ್ಕೆ ಬಳಸಿಕೊಳ್ಳಬಲ್ಲ ಬಹಳ ಮುಖ್ಯವಾದ ಕೆಲಸವನ್ನು ಮಾಡಿದ್ದಾರೆ. ಕರ್ನಾಟಕದ ಹೊರಗೆ ಸಾಹಿತ್ಯಕ ವೇದಿಕೆಗಳಲ್ಲಿ ಕನ್ನಡದ ಕಂಪು ಹರಡಿದ್ದಾರೆ. ಭಾರತೀಯ ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್‌ಟ್ರಸ್ಟ್‌ನಂತಹ ಹಲವು ಸಂಸ್ಥೆಗಳ ಮಾರ್ಗದರ್ಶಕರಾಗಿ ಇವರು ಕೆಲಸ ಮಾಡಿದ್ದಾರೆ. ಕನ್ನಡ ಮಾತೃಭಾಷೆಯಾಗಿ ಕಲಿಕೆಯಾಗುವುದಕ್ಕೆ ಸಂಪೂರ್ಣ ಸಹಮತ ವ್ಯಕ್ತಪಡಿಸುವ ರಾಯರು ಮಾತೃಭಾಷೆಯಾಗಿ ಕನ್ನಡವನ್ನು ಮಕ್ಕಳು ಕಲಿಯುವುದರಿಂದ ಆಗುವ ಅನುಕೂಲಗಳೇನು? ಎಂಬುದರ ಬಗ್ಗೆಯೂ ವಿಸ್ತೃತ ಚರ್ಚೆ ಮಾಡಿದ್ದಾರೆ. ಮಾತೃಭಾಷೆಯಿಂದಲೇ ಶಿಕ್ಷಣ ಆಗಲಿ, ಇಂಗ್ಲಿಷ್ ಬೇಡ ಎನ್ನುವುದಕ್ಕೆ ಕಾರಣ ನೀಡುವ ರಾಯರು ಮಗುವಿಗೆ ವಾಕ್ಯ, ವಾಕ್ಯಗಳ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕು, ಕಲಿತದ್ದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದರೆ ಅದಕ್ಕೆ

ಮಾತೃಭಾಷಾ ಕಲಿಕೆಯೇ ಮುಖ್ಯ ಎನ್ನುತ್ತಾರೆ. ಮಾತೃಭಾಷೆಯಾಗಿ ಕನ್ನಡ ಕಲಿಕೆಯ ಬಗ್ಗೆಯೇ ಹಲವಾರು ಲೇಖನಗಳನ್ನು ಬರೆದಿರುವ ರಾಯರು "ಮಗುವನ್ನು ಮಾತೃಭಾಷೆಯಿಂದ ದೂರ ಮಾಡುವುದು ಮಹಾಪಾಪ, ಇಂಥ ಮಗುವಿಗೆ ಮುಂದೆ ತನ್ನ ಭಾಷೆ, ನಾಡು, ಸಂಸ್ಕೃತಿಗಳಲ್ಲಿ ಅಭಿಮಾನ ಹೇಗೆ ಮೂಡುತ್ತದೆ?"[೬] ಎಂದು ಪ್ರಶ್ನಿಸಿದ್ದಾರೆ.

ಇಂಗ್ಲೆಂಡಿನಿಂದ ಬಂದ ಜಾನ್ ಮೆಕರಲ್ ೧೮೨೦ರಲ್ಲಿ ಕನ್ನಡ ವ್ಯಾಕರಣವನ್ನು ಪ್ರಕಟಿಸಿದ ಈತನ ಕಾರ್ಯವನ್ನು ಶ್ಲಾಘಿಸುವ ರಾಯರು ಈತ ಸ್ಥಳೀಯ ಭಾಷೆಯ ಮಹತ್ವವನ್ನು ಕುರಿತು 'ಸ್ಥಳೀಯ ಭಾಷೆ ಬಾರದ ನೌಕರ ತನಗಾಗಲಿ ಸರ್ಕಾರಕ್ಕಾಗಲಿ ಹೆಸರು ಬರುವಂತೆ ಜನಕ್ಕೆ ಪ್ರಯೋಜನವಾಗುವಂತೆ ಕೆಲಸ ಮಾಡಲಾರ' ಎಂದು ಹೇಳಿದ ಮಾತನ್ನು ನೆನಪಿಸುತ್ತಾರೆ. ಕನ್ನಡ ಭಾಷೆ ಆಡಳಿತ ಭಾಷೆಯಾಗಿ ಸಂಪೂರ್ಣ ವ್ಯವಹಾರ ಕನ್ನಡದಲ್ಲಿ ನಡೆಯಬೇಕು ಎಂಬುದು ರಾಯರ ನಿಲುವು. ನಮ್ಮ ನಾಡಿನ ಅಲ್ಪಸಂಖ್ಯಾತರ ವಿಷಯವನ್ನು ರಾಯರು ಮಾತನಾಡುವಾಗ ಬೇಂದ್ರೆ, ಮಾಸ್ತಿಯವರನ್ನು ನೆನಪಿಟ್ಟುಕೊಳ್ಳಬೇಕು ಎನ್ನುತ್ತಾರೆ. ಏಕೆಂದರೆ ಬೇಂದ್ರೆಯವರ ಮನೆ ಮಾತು ಮರಾಠಿಯಾದರೂ, ಮಾಸ್ತಿಯವರ ಮನೆ ಮಾತು ತಮಿಳಾದರೂ ಕನ್ನಡದಲ್ಲಿ ಪಾಂಡಿತ್ಯಗಳಿಸಿ ಕನ್ನಡ ನುಡಿಗೆ ನೀಡಿದ ಕಾಣಿಕೆ ಅಪಾರವಾದುದು ಎಂಬ ಮಹತ್ವದ ವಿಚಾರವನ್ನು ದಾಖಲಿಸುತ್ತಾರೆ.

ಭಾಷೆಯ ಬೆಳವಣಿಗೆಯನ್ನು ಕುರಿತು ಮಾತನಾಡುವಾಗ ಆಧುನಿಕ ಜಗತ್ತಿನಲ್ಲಿ ಹೊಸ ಜ್ಞಾನವನ್ನು ತಂತ್ರಜ್ಞಾನವನ್ನು ಪಡೆದುಕೊಂಡಂತೆ ನಮ್ಮ ಭಾಷೆಯಲ್ಲಿ ಆ ಎಲ್ಲ ಜ್ಞಾನವನ್ನು ತಿಳಿಸಿಕೊಡಲು ಸಾಧ್ಯವಾಗಬೇಕು ಎಂಬ ವಿಚಾರವನ್ನು ರಾಯರು ಪ್ರಸ್ತಾಪಿಸುತ್ತಾರೆ. ಹಾಗೆಯೇ ಈ ಕಾರ್ಯವನ್ನು ವಿವಿಧ ಕ್ಷೇತ್ರಗಳ ತಜ್ಞರೂ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರಗಳಂಥ ಸಂಸ್ಥೆಗಳೂ ಕೈಗೊಳ್ಳಬೇಕು ಎಂದು ಸೂಚಿಸುತ್ತಾರೆ. ಕನ್ನಡ ಪುಸ್ತಕಗಳು ಹೊರಬರುತ್ತಿರುವುದರ ಬಗ್ಗೆ ಪ್ರಸ್ತಾಪಿಸಿರುವ ರಾಯರು ಪುಸ್ತಕಗಳ ಲಭ್ಯತೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಎಲ್ಲ ಜ್ಞಾನವನ್ನು ಲಭ್ಯಮಾಡಿಕೊಡುವ ಪುಸ್ತಕಗಳು ಸಾಕಷ್ಟು ಕಡಿಮೆ ಇವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಇಂಥಹ ಪುಸ್ತಕಗಳ ಪ್ರಕಾಶನಕ್ಕೆ ಸಂಸ್ಥೆಗಳು ಮುಂದೆಬರಬೇಕು. ಈ ಪ್ರಕಾಶನ ಸಂಸ್ಥೆಗಳಿಗೆ ಆರ್ಥಿಕ ಸಹಕಾರ ನೀಡಬೇಕೆಂದಿದ್ದಾರೆ.

ತರಗತಿಯಲ್ಲಿ ಬೋಧಿಸುತ್ತಿರುವ ಇಂದಿನ ಭಾಷಾ ಬೋಧನಾ ವಿಧಾನದ ಬಗ್ಗೆ ಚಿಂತಿಸಿರುವ ರಾಯರು ಇಂಗ್ಲಿಷ್ ಆಗಲಿ, ಕನ್ನಡ ಆಗಲಿ ನಮ್ಮ ಭಾಷಾ

ಬೋಧನೆಯಲ್ಲಿ ಇದಕ್ಕೆ ಗಮನ ಕೊಡುತ್ತಿಲ್ಲ. ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತರಗತಿಯಲ್ಲಾಗಲಿ ಅದರಾಚೆಯಾಗಲಿ ಮಾತನಾಡುವ ಅವಕಾಶ ಎಷ್ಟು ಸಿಕ್ಕುತ್ತದೆ? ತರ್ಕಬದ್ಧವಾಗಿ ಯೋಚಿಸುವ ಮತ್ತು ಹೇಳುವುದನ್ನು ಸ್ಪಷ್ಟವಾಗಿ ಮನವೊಲಿಸುವಂತೆ ಹೇಳುವ ಶಕ್ತಿಗೆ ಶಿಕ್ಷಣ ಎಲ್ಲಿ ಸಿಕ್ಕುತ್ತದೆ? ಎಂದು ಪ್ರಶ್ನಿಸಿದ್ದಾರೆ. ನಾಗರಿಕ ಸಮಾಜದ ಅತ್ಯಂತ ಮುಖ್ಯ ಆಸ್ತಿಗಳಲ್ಲಿ ಒಂದು ಭಾಷೆ, ಅದು ಇಡೀ ಸಮುದಾಯದ ಸ್ವತ್ತು; ಪ್ರತಿಯೊಬ್ಬರೂ ಬಳಸಬೇಕಾದ ಆಸ್ತಿ, ಇದನ್ನು ಸರಿಯಾದ ಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು, ಬೆಳೆಸಬೇಕು. ಶಿಕ್ಷಣವ್ಯವಸ್ಥೆ ಈ ಅಗತ್ಯಕ್ಕೆ ಸನ್ನದ್ಧವಾಗಬೇಕು ಎಂಬುದು ರಾಯರ ಸಲಹೆ.

ಕೇಂದ್ರ ಸರ್ಕಾರವು ತಮಿಳಿಗೆ ಅಭಿಜಾತ ಭಾಷೆ (Classical language) ಎಂದು ಮನ್ನಣೆ ನೀಡುವ ವಿಚಾರ ಕುರಿತು ಚರ್ಚಿಸಿರುವ ರಾಯರು ಅಭಿಜಾತ ಭಾಷೆ ಎನ್ನುವ ಗೌರವವನ್ನು ಪಡೆಯಲು ತಮಿಳಿಗಿರುವ ಅರ್ಹತೆಯಷ್ಟೂ ಕನ್ನಡಕ್ಕಿದೆ ಎಂದು ಅಂದೇ ಚರ್ಚಿಸಿದ್ದಾರೆ. ಕೇಂದ್ರಕ್ಕೆ ಸಲ್ಲಿಸಿದ ಶಾಸ್ತ್ರೀಯ ಭಾಷಾ ವರದಿಯ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ ರಾಯರು ಕನ್ನಡ ಸಾಹಿತ್ಯವು ಆಧುನಿಕ ಯುಗದಲ್ಲಿ ಅಸಾಧಾರಣ ವಿಕಸನವನ್ನು ಸಾಧಿಸಿದೆ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಕರ್ನಾಟಕಕ್ಕೆ ಪುಸ್ತಕ ನೀತಿ ಅಗತ್ಯ ಎಂದಿರುವ ರಾಯರು ನಮ್ಮ ಇತಿಹಾಸ, ಸಂಸ್ಕೃತಿಗಳ ಸಂರಕ್ಷಣೆಗೆ ಕೊಡಬೇಕಾದ ಗಮನವನ್ನು ಸರ್ಕಾರವು ಕೊಡುತ್ತಿಲ್ಲ ಎಂದು ವಿಷಾದದಿಂದ ಹೇಳಿದ್ದಾರೆ. ನಿದರ್ಶನಕ್ಕೆ ಹಂಪೆಯ ಸ್ಥಿತಿಯನ್ನು ಪ್ರಸ್ತಾಪಿಸಿದ್ದಾರೆ. ಸರ್ಕಾರದ ನಿರ್ಲಕ್ಷ್ಯವನ್ನು ಖಂಡಿಸಿದ್ದಾರೆ. ನಾಡಿನ ಹೊರಗೆ ಇರುವ ಹೊರನಾಡ ಕನ್ನಡಿಗರ ಬಗ್ಗೆಯು ಲಕ್ಷ್ಯವಹಿಸಿರುವ ಇವರು ಗೋವಾ ಮಹಾರಾಷ್ಟ್ರದಲ್ಲಿ ಇರುವಂತಹ ಕನ್ನಡಿಗರ ಕ್ಷೇಮಾಭಿವೃದ್ಧಿಯ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳಬೇಕೆಂದಿದ್ದಾರೆ. ನಾಮಫಲಕಗಳಿಗೆ ಕನ್ನಡದವರ ಹೆಸರನ್ನೇ ಇಡಬೇಕೆಂದು ಸಲಹೆ ನೀಡುವ ಇವರು ರಾಜ್ಯದ ಪಾರ್ಕ್‌ಗಳು, ವಿದ್ಯಾಸಂಸ್ಥೆಗಳು, ಆಸ್ಪತ್ರೆಗಳು, ರಸ್ತೆಗಳು, ವಿಶ್ವವಿದ್ಯಾನಿಲಯಗಳು ಮೊದಲಾದವುಗಳಿಗೆ ರಾಜ್ಯದ ಹೊರಗಿನವರ ಹೆಸರುಗಳನ್ನು ಇಟ್ಟದ್ದು ಸಾಕು, ಕರ್ನಾಟಕದ ಒಂದು ಭಾಗದ ಹಿರಿಯರ ಹೆಸರನ್ನು ಮತ್ತೊಂದು ಭಾಗದಲ್ಲಿ ಸ್ಮರಿಸೋಣ ಎಂದಿದ್ದಾರೆ.

ಹೀಗೆ ಭಾಷೆ ಎಷ್ಟೆಲ್ಲಾ ರೀತಿಯಲ್ಲಿ ನಮ್ಮ ನಡುವೆ ಮುಖ್ಯವೆನಿಸಿದೆ. ಅದನ್ನು ಮುಂದೆ ಉಳಿಸಲು ನಾವು ಕೈಗೊಳ್ಳಬೇಕಾಗಿರುವ ಕ್ರಮಗಳು ಯಾವುವು ಎಂಬುದನ್ನು ರಾಯರು ಅವರ ಸಾಹಿತ್ಯದಲ್ಲಿ ಹಲವು ಕಡೆ ಚರ್ಚಿಸಿದ್ದಾರೆ.

ಕನ್ನಡ ಅಭಿಮಾನ ಕುರಿತು ಎಲ್.ಎಸ್. ಶೇಷಗಿರಿರಾವ್ ಅವರ ನಿಲುವು

ನವೆಂಬರ್ ತಿಂಗಳಿನಲ್ಲಿ ನಮ್ಮ ಜನ ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸಗಳ ಬಗ್ಗೆ ವಿಶೇಷವಾಗಿ ಗಮನಹರಿಸುವ; ರಾಜ್ಯೋತ್ಸವದ ನೆಪದಲ್ಲಿ ನಾಡು ನುಡಿಗಳಿಗಾಗಿ ಸೇವೆಗೈದ ಮಹನೀಯರನ್ನು ನೆನಪು ಮಾಡಿಕೊಳ್ಳುವ ಸಂಪ್ರದಾಯವನ್ನು ರಾಯರು ಒಪ್ಪುವುದಿಲ್ಲ. ಇವರಿಗೆ ಕನ್ನಡ ನೆಲ, ಈ ಭಾಷೆ ಎಲ್ಲವು ತಾಯಿಯಷ್ಟೇ ಪ್ರಧಾನವಾದುದು, ಹಾಗಾಗಿ ನಿಜವಾದ ಕನ್ನಡಾಭಿಮಾನ ಯಾವುದು ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾರೆ. "ಕನ್ನಡ ಅಭಿಮಾನ ಎಂದರೆ ಕನ್ನಡದಲ್ಲಿ ಪ್ರೀತಿ ನಮ್ಮ ಪ್ರಜ್ಞೆಯ ಒಂದು ಭಾಗವಾಗಿ ಹೋಗುವುದು. ನಮ್ಮ ಎಲ್ಲ ನಡೆನುಡಿಗಳಲ್ಲಿ ಕೆಲಸ ಕಾರ್ಯಗಳಲ್ಲಿ ಅನಿಸಿಕೆಗಳಲ್ಲಿ ನಮ್ಮ ಪ್ರಯತ್ನವಿಲ್ಲದೆಯೇ ಪ್ರೇರಕ ಶಕ್ತಿಯಾಗುವುದು, ಇತರ ಭಾಷೆಗಳಲ್ಲಾಗಲಿ, ಇತರ ಭಾಷೆಗಳನ್ನಾಡುವವರ ವಿಷಯದಲ್ಲಾಗಲಿ ಪೂರ್ವಗ್ರಹವಿಲ್ಲದೆ ಕನ್ನಡಕ್ಕೆ, ಕನ್ನಡ ನಾಡಿಗೆ, ಕನ್ನಡ ಜನಕ್ಕೆ ಒಳಿತಾಗಲಿ ಎಂಬ ಭಾವನೆ, ಬಯಕೆ ಮನಸ್ಸಿನ ಭಾಗವಾಗಿ ಹೋಗುವುದು"[೭].

ಕನ್ನಡ ಅಭಿಮಾನ ಎಂದರೆ ರಾಯರು ಹೇಳುವಂತೆ ಕನ್ನಡ ಭಾಷೆ, ನಾಡು ಮತ್ತು ಜನತೆಯಲ್ಲಿ ಪ್ರೀತಿ. ಆದರೆ ಈ ಪ್ರೀತಿ ಸ್ವಲ್ಪಮಟ್ಟಿಗೆ ಬೌದ್ಧಿಕವಾದ ವಿವೇಚನೆಯ ತಳಹದಿಯ ಮೇಲೆ ನಿಲ್ಲಬೇಕು ಎಂಬುದು ಇವರ ಆಶಯ. ಏಕೆಂದರೆ ಪ್ರತಿಯೊಬ್ಬನು ಕನ್ನಡ ನಾಡು ನನ್ನದು, ಕನ್ನಡ ನಾನು ಆಡುವ ಭಾಷೆ, ಕನ್ನಡ ಜನ ನನ್ನ ನಾಡಿನವರು ಎನ್ನುವುದೇ ಮುಖ್ಯವಾಗುತ್ತದೆ. ಪ್ರೀತಿ ಎಂದರೇನು ಎನ್ನುವ ಅನುಭವವನ್ನು ತಂದುಕೊಟ್ಟ ತಾಯಿಯನ್ನು ಪ್ರೀತಿಸುವುದಕ್ಕೆ ಬುದ್ಧಿಯು ಹೇಗೆ ಒಪ್ಪುವ ಕಾರಣಗಳು ಉಂಟೋ ಹಾಗೆಯೇ ಭಾಷೆ, ನಾಡು ಮತ್ತು ಜನತೆಯಲ್ಲಿ ರಾಯರಿಗೆ ಪ್ರೀತಿಯ ಕಾರಣಗಳುಂಟು. ಮಾತೃಭಾಷೆಯ ನಂಟಿನ ಬಗ್ಗೆ ಮಾತನಾಡುತ್ತಾ ರಾಯರು "ಜಗತ್ತಿಗೂ ನನಗೂ ಮೊದಲು ಸಂಬಂಧ ಪ್ರಾರಂಭವಾದದ್ದು ನನ್ನ ಭಾಷೆಯಿಂದ ನನ್ನ ಅಗತ್ಯಗಳು ಬೆಳೆದಂತೆ, ಅನುಭವಗಳು ಬೆಳೆದಂತೆ ಅವುಗಳನ್ನು ಹೇಳಿಕೊಳ್ಳಲು ಸಾಧ್ಯಮಾಡಿದ್ದು ಈ ಭಾಷೆ"[೮] ಎಂದು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ.

ಕನ್ನಡ ಅಭಿಮಾನ ಕನ್ನಡಿಗನಿಗೆ ಏಕೆ ಇರಬೇಕು ಎಂಬುದರ ಬಗ್ಗೆ ಪ್ರಸ್ತಾಪಿಸುವ ರಾಯರು ತಮ್ಮದೇ ಆದ ಕಾರಣಗಳನ್ನು ನೀಡುತ್ತಾರೆ. "ಜಗತ್ತಿನಲ್ಲಿ ಸುಮಾರು ೧೬೦೦ ಭಾಷೆಗಳಿದ್ದು ಇವುಗಳಲ್ಲಿ ಸುಮಾರು ಒಂದುನೂರು ಭಾಷೆಗಳಿಗೆ ಮಾತ್ರ ಲಿಪಿ ಇದೆ. ಅದರಲ್ಲಿ ಕನ್ನಡವು ಒಂದು. ಬರಹದ ಮೂಲಕ ಬರಹವು ಉಳಿಸಿಕೊಂಡು ಬಂದ ಜ್ಞಾನದ ಮೂಲಕ ನಾನು ಭೂತಕಾಲದೊಂದಿಗೆ

ಸಂಬಂಧವನ್ನು ಸಾಧಿಸುವುದನ್ನು ಸಾಧ್ಯ ಮಾಡಿದ್ದು ನನ್ನ ಭಾಷೆ. ಭಾವನೆ, ಸ್ಪಂದನೆ, ಪ್ರೀತಿ, ಸ್ನೇಹ ಸಾಧಿಸುವಂತೆ ಮಾಡಿದ್ದು ಇದೇ ಭಾಷೆ."[೯] ಈ ಮಾತುಗಳನ್ನು ಗಮನಿಸಿದಾಗ ರಾಯರು ಭಾಷೆಯ ವಿಷಯದಲ್ಲಿ ಎಷ್ಟು ಭಾವುಕರು ಎಂಬುದು ಅರ್ಥವಾಗುತ್ತದೆ. ಕನ್ನಡ ಭಾಷೆ ತನ್ನ ಅಂತರಂಗದಲ್ಲಿ ಸಂರಕ್ಷಿಸಿಕೊಂಡಿರುವ ಸಂಸ್ಕೃತಿ ಮೌಲ್ಯಗಳ ಬಗ್ಗೆ ಅಪಾರ ಮೆಚ್ಚುಗೆ ಹೆಮ್ಮೆಯನ್ನು ಹೊಂದಿರುವ ರಾಯರು "ಕನ್ನಡಿಗರು ಕನ್ನಡ ಭಾಷೆಯನ್ನು ಬೆಳೆಸಿದ್ದಾರೆ, ಕನ್ನಡವು ಕನ್ನಡಿಗರನ್ನು ಬೆಳೆಸಿದೆ"[೧೦] ಎನ್ನುತ್ತಾರೆ.

ಕನ್ನಡಿಗ ಚಿಂತಿಸಬಹುದಾದ, ಆತಂಕ ಪಡಬೇಕಾದ ವಿಚಾರಗಳೇನು? ಎಂಬುದರ ಬಗ್ಗೆ ರಾಯರು ಚರ್ಚಿಸುತ್ತಾ ಕನ್ನಡದ ಅಪ್ಪ-ಅಮ್ಮ, ಡ್ಯಾಡಿ-ಮಮ್ಮಿಯಾದಾಗ ಕನ್ನಡ ಚರಿತ್ರೆ ಪರಂಪರೆಗಳನ್ನು ಹಿಡಿದಿಟ್ಟಿರುವ ಸ್ಥಳಗಳ ಹೆಸರುಗಳನ್ನು ಬದಲಾಯಿಸಿದಾಗ ಸೂಳೆಕೆರೆಯು ಶಾಂತಿಸಾಗರವಾದಾಗ, ದೊಮ್ಮಲೂರು ಭಗತ್‌ಸಿಂಗ್ ನಗರವಾದಾಗ, ಜಂಚೇನ ಹಳ್ಳಿಯು ರಾಜೇಶ್ವರಿ ನಗರವಾದಾಗ ಕನ್ನಡ ಹೃದಯಗಳು ಮರುಗಿ ನಾಚಿಕೆ ಪಟ್ಟುಕೊಳ್ಳಬೇಕೆನ್ನುತ್ತಾರೆ. ಕನ್ನಡಿಗರು ಭಾರತದ ಎರಡನೆಯ ದರ್ಜೆ ಪ್ರಜೆಗಳಾಗುವ ಸ್ಥಿತಿ ಬಂದುಬಿಡುವುದೇನೋ ಎಂಬುದು ಇವರ ಆತಂಕ. "ಝಾನ್ಸಿರಾಣಿ ಲಕ್ಷ್ಮೀಬಾಯಿ, ಹೋಮಿ ಬಾಬಾ ಅವರ ವಿಷಯದಲ್ಲಿ ನಾವು ಅಭಿಮಾನ ಪಡುವಂತೆ ಕಿತ್ತೂರು ರಾಣಿ ಚೆನ್ನಮ್ಮ, ಎಂ ವಿಶ್ವೇಶ್ವರಯ್ಯ ಇವರ ವಿಷಯದಲ್ಲು ಇತರ ರಾಜ್ಯದವರು ಅಭಿಮಾನ ಪಡಬೇಕು. ದುರಾಭಿಮಾನವಾಗಲಿ, ಆತ್ಮಗೌರವದ ದಿವಾಳಿತನವಾಗಲಿ ಅಲ್ಲದ ಆರೋಗ್ಯಕರ ಕನ್ನಡಾಭಿಮಾನವು ಎಲ್ಲ ಕನ್ನಡಿಗರ ಹೃದಯಗಳಲ್ಲಿ ಅರಳಲಿ. ಕನ್ನಡ ನಾಡಿಗೆ ಬೆಳಕು ಭಾಗ್ಯಗಳನ್ನು ತರಲಿ"[೧೧] ಎಂಬುದು ರಾಯರ ಹಾರೈಕೆ ಆಶಯ.

ಇಂದು ಕನ್ನಡಿಗರು ಮಾಡಲೇ ಬೇಕಾದ ಕರ್ತವ್ಯಗಳ ಬಗ್ಗೆ ಚರ್ಚಿಸುತ್ತಾ ಎಲ್ಲ ಹೊರೆಯನ್ನು ಸರ್ಕಾರದ ತಲೆಗೇರಿಸಿ ನಾವು ಕೈತೊಳೆದುಕೊಳ್ಳುವುದು ಸರಿಯಲ್ಲ. ಕನ್ನಡ ಮಾತನಾಡಲು ಸಂಕೋಚಪಡಬೇಕಾಗಿಲ್ಲ. ಕೀಳರಿಮೆ ಬೇಡ ಎಂದಿದ್ದಾರೆ. ಹಾಗೆಯೇ ಲಗ್ನಪತ್ರಿಕೆ ಕನ್ನಡದಲ್ಲಿರಬೇಕು, ಕನ್ನಡ ಪುಸ್ತಕಗಳನ್ನು ಕೊಂಡು ಓದಬೇಕು, ಪ್ರತಿಯೊಬ್ಬ ಕನ್ನಡಿಗನ ಮನೆಗೆ ಒಂದಾದರೂ ಕನ್ನಡ ಪತ್ರಿಕೆಯನ್ನು ತರಿಸಬೇಕು ಎಂದು ಸಲಹೆ ನೀಡಿದ್ದಾರೆ. ಕರ್ನಾಟಕ ಸರ್ಕಾರದಿಂದ ಮತ್ತು ಉದ್ಯಮಗಳಿಂದ ಮತ್ತು ಇತರ ಕನ್ನಡಿಗರಿಂದ ಜಾಹೀರಾತುಗಳನ್ನು ಪಡೆದು ಕರ್ನಾಟಕದಲ್ಲಿ ತಮ್ಮ ಪತ್ರಿಕೆಯನ್ನು ಪ್ರಸಾರ ಮಾಡುವ ಇಂಗ್ಲಿಷ್ ಪತ್ರಿಕೆಗಳ

ನಿರ್ವಾಹಕರು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ ಎಂದಿದ್ದಾರೆ. ತರುಣರಿಗೆ ಕರೆ ಕೊಡುವ ರಾಯರು ತಮ್ಮ ಭವಿಷ್ಯವು ಕನ್ನಡ ನಾಡಿನ ಭವಿಷ್ಯದೊಂದಿಗೆ ಹೆಣೆದುಕೊಂಡಿದೆ. ಕನ್ನಡ ನಾಡು ಚೆನ್ನಾಗಿ ಬದುಕದೆ, ಕನ್ನಡ ನಾಡಿನಲ್ಲಿ ಯಾರೂ ಚೆನ್ನಾಗಿ ಬದುಕಲು ಸಾಧ್ಯವಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು ಎಂದಿದ್ದಾರೆ.

ಶಕ್ತಿಕೇಂದ್ರದಲ್ಲಿ ತಮ್ಮ ಕನ್ನಡಪರ ನಿಲುವುಗಳನ್ನು ಕಾರ್ಯಗತಗೊಳಿಸಲು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ರಾಯರು ಮಹಾಜನ್ ವರದಿಯನ್ನು ಕೇಂದ್ರ ಸರ್ಕಾರ ಕಾರ್ಯಗತ ಮಾಡಬೇಕು, ಇಂಗ್ಲಿಷ್ ಶಾಲೆಗಳನ್ನು ತೆರೆಯಲು ಒಪ್ಪಿಗೆ ನೀಡಬಾರದು, ಕನ್ನಡವು ವಾಸ್ತವವಾಗಿಯೂ ಎಲ್ಲ ಹಂತಗಳಲ್ಲಿ ಆಡಳಿತ ಭಾಷೆಯಾಗಬೇಕು ಎಂದಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಹಿಂದಿಯ ಹೇರಿಕೆ ಸಾಕು ಎಂದು ದನಿಯೆತ್ತಿದ್ದ ಎಲ್.ಎಸ್.ಎಸ್. ತಮ್ಮ ಅಧ್ಯಕ್ಷತೆಯಲ್ಲಿ ಹಿಂದಿ ಸಾಮ್ರಾಜ್ಯಶಾಹಿ ಕ್ರಿಯಾ ಸಮಿತಿ ಅಸ್ತಿತ್ವಕ್ಕೆ ತಂದರು. ಶಕ್ತಿ ಕೇಂದ್ರ ಜನವರಿ ೨೬ರ ಗಣರಾಜ್ಯದಿನವನ್ನು ಹಿಂದಿ ಹೇರಿಕೆ ದಿನವನ್ನಾಗಿ ಆಚರಿಸಲು ಆರಂಭಿಸಿತು. ೨೫.೧.೧೯೮೩ರಂದು ಹಿಂದಿ ಹೇರಿಕೆ ವಿರೋಧಿಸಿ ಸಭೆಯನ್ನು ನಡೆಸಿತು. ಶಿವರಾಮ ಕಾರಂತ, ಬಿ.ಸಿ. ರಾಮಚಂದ್ರ ಶರ್ಮರಂತಹ ಗಣ್ಯರು ಆ ಸಭೆಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಹೆಗ್ಗಳಿಕೆ ರಾಯರದು.

೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉಡುಪಿಯಲ್ಲಿ ನಡೆದಾಗ ಸಮ್ಮೇಳನದ ಅಧ್ಯಕ್ಷರಾಗಿ ರಾಯರು ಕನ್ನಡ ಭಾಷೆಯ ಬೆಳವಣಿಗೆ, ಕನ್ನಡದ ಶಾಸ್ತ್ರೀಯ ಸ್ಥಾನಮಾನ, ಕರ್ನಾಟಕದ ರಾಜಧಾನಿಯನ್ನು ಕನ್ನಡವಾಗಿ ಉಳಿಸಿ ಇಂಥಹ ಹತ್ತು ಹಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಒಂದು ಭಾಗವನ್ನು ಉದಾಹರಿಸುವುದಾದರೆ **"ಕನ್ನಡ ಸಂಸ್ಕೃತಿ ಬದುಕಿನಲ್ಲಿ ಬೆಳಗಲಿ"** ಈ ಭಾಗದಲ್ಲಿ ರಾಯರ ನಿಲುವು ಇಂತಿದೆ. "ನಮ್ಮೆಲ್ಲರಿಗೆ ಐದೂವರೆ ಕೋಟಿ ಕನ್ನಡಿಗರಿಗೆ, ಕನ್ನಡ ಸಂಸ್ಕೃತಿ ಎಂದರೆ ಪ್ರೀತಿ, ಹೆಮ್ಮೆ ಈ ಸಂಸ್ಕೃತಿ ಒಂದು ಕಾಲದಲ್ಲಿ ಜೀವಂತ ಶಕ್ತಿಯಾಗಿದ್ದು ಈ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿರುವ ವಸ್ತುವಲ್ಲ, ಅದು ನಮ್ಮ ಉಡುಗೆಯಂತೆ ಬೇಕಾದಾಗ ತೊಟ್ಟು ಬೇಡದಾಗ ತೆಗೆದಿಡುವ ವಸ್ತುವಲ್ಲ, ಇಂದು ನಮ್ಮ ಸುತ್ತಮುತ್ತಲಿನವರು ಕರ್ನಾಟದ ಸಂಸ್ಕೃತಿಯನ್ನು ಗ್ರಹಿಸುವಾಗ ವಚನಸಾಹಿತ್ಯ, ದಾಸಸಾಹಿತ್ಯ ನಾವು ಗಳಿಸಿದ ಜ್ಞಾನಪೀಠ ಪುರಸ್ಕಾರಗಳು, ಶೇಷಣ್ಣನವರ ವೀಣೆ, ಗಂಗೂಬಾಯಿ ಹಾನಗಲ್ ಅವರ ಸಂಗೀತ, ಮೈಸೂರು ದಸರಾ ಮೊದಲಾದವುಗಳನ್ನೇ ಆಧಾರ ಮಾಡಿಕೊಳ್ಳುವುದಿಲ್ಲ. ಇವುಗಳಲ್ಲಿ ಎಷ್ಟೋ ಅವರ ಗಮನಕ್ಕೆ ಬಂದೇ ಇಲ್ಲದಿರಬಹುದು. ನಮ್ಮ ಸಾರ್ವಜನಿಕ ಜೀವನದ

ರೀತಿ, ನಮ್ಮ ನಡತೆ, ನಮ್ಮ ಸಾಮಾಜಿಕ ವಾಗ್ವಾದಗಳನ್ನು ರಾಜಕೀಯ ಭಿನ್ನಾಭಿಪ್ರಾಯಗಳನ್ನು ನಾವು ನಿರ್ವಹಿಸುವ ರೀತಿ ಇವು ಅವರ ಕಣ್ಣಿಗೆ ರಾಚುತ್ತವೆ. ದೂರದರ್ಶನ ಮಾಧ್ಯಮ ಮತ್ತು ಪತ್ರಿಕೆಗಳು ಡಂಗೂರ ಹೊಡೆಯುತ್ತವೆ. ಕನ್ನಡ ಸಂಸ್ಕೃತಿ ಹೊರಗಿನವರಿಗೆ ಅರಿವಾಗುವುದು ಅವರ ಕಣ್ಣ ಮುಂದಿರುವ ಆಗುಹೋಗುಗಳಿಂದ ನಮ್ಮ ರಾಜಕೀಯ, ಸಾಮಾಜಿಕ, ಧಾರ್ಮಿಕ ಜೀವನಗಳ ಘನತೆಯಿಂದ........[೨]

ಹೀಗೆ ಕನ್ನಡ ನೆಲದ ಸಂಸ್ಕೃತಿಯ ಉಳಿವಿಗೆ ಭಾಷಣದಲ್ಲಿ ಚರ್ಚಿಸಿರುವ ರಾಯರು ಸುತ್ತಲಿನ ಬದುಕು ಬೆಳೆದಂತೆ ಕನ್ನಡ ಬೆಳೆಯಬೇಕು. ಕನ್ನಡವು ಆಧುನಿಕ ಭಾಷೆಯಾಗಬೇಕು. ಕನ್ನಡವು ಆಧುನಿಕ ಜ್ಞಾನವನ್ನು ಸಂವಹನ ಮಾಡಬಲ್ಲ ಭಾಷೆಯಾಗಬೇಕಾದರೆ ಅದನ್ನು ಉನ್ನತ ಮಟ್ಟದಲ್ಲಿ ಬಳಸಿ ಪುಸ್ತಕಗಳನ್ನು ಬರೆಯ ಬೇಕು. ಹಳಗನ್ನಡ, ವ್ಯಾಕರಣ, ಛಂದಸ್ಸು ಮೊದಲಾದವುಗಳ ಅಧ್ಯಯನವು ಮುಂದುವರೆಯಬೇಕು ಎಂಬೆಲ್ಲಾ ವಿಚಾರಗಳನ್ನು ಚರ್ಚಿಸಿದ್ದಾರೆ. ಹಾಗೆಯೇ ಬೆಂಗಳೂರನ್ನು ಕನ್ನಡವಾಗಿ ಉಳಿಸಿ! ಎಂದು ಮನವಿ ಮಾಡಿಕೊಂಡಿದ್ದಾರೆ.

ಒಟ್ಟಾರೆ. ರಾಯರ ಕಲ್ಪನೆಯ ಕನ್ನಡ ನಾಡಿನಲ್ಲಿ ವ್ಯಕ್ತಿ ತನ್ನ ಭಾಷೆ ಕನ್ನಡವನ್ನು ತಾನು ಪ್ರೀತಿಯಿಂದ ಬಳಸುತ್ತಾನೆ, ಬೆಳೆಸುತ್ತಾನೆ. ಕರ್ನಾಟಕ ಪ್ರಜಾಪ್ರಭುತ್ವ ಸಂವಿಧಾನದಲ್ಲಿ ಮಾತ್ರ ಇರುವುದಿಲ್ಲ ನಿಜಜೀವನದಲ್ಲಿ ಇರುತ್ತದೆ. ಪ್ರಜಾಪ್ರಭುತ್ವದ ಗುರುತಾದ ವ್ಯಕ್ತಿ ಘನತೆ ಭಾಷಣದ ವಸ್ತುವಾಗಿರುವುದಿಲ್ಲ, ವಾಸ್ತವವಾಗಿರುತ್ತದೆ. ಕಿರಿಯರ ವ್ಯಕ್ತಿತ್ವಕ್ಕೂ ಇಲ್ಲಿ ಗೌರವವುಂಟು, ಕೈಗಾರೀಕರಣದ ಪ್ರಯೋಜನವನ್ನು ಸಮಾಜ ಪಡೆಯುತ್ತದೆ. ಆದರೆ ವ್ಯಕ್ತಿಯ ಬಾಳು ಯಾಂತ್ರಿಕ ಆಗುವುದಿಲ್ಲ ಅವನ ಸೃಜನಶೀಲತೆ ಅರಳುತ್ತದೆ. ರಾಯರ ಕನ್ನಡ ಕೆಲಸದ ಬಗ್ಗೆ ಎಷ್ಟು ಹೇಳಿದರೂ ಸಾಲದು. ಒಂದು ಪುಸ್ತಕವನ್ನೇ ಬರೆಯುವ ಮಟ್ಟಿಗೆ ಅವರ ಕನ್ನಡಪರ ನಿಲುವು, ಹೋರಾಟ, ಸಲಹೆ, ಮಾರ್ಗದರ್ಶನ ಕುರಿತ ಬರಹಗಳಿವೆ. ೯೦ರ ವಯಸ್ಸಿನಲ್ಲಿಯು ಕನ್ನಡ ನಾಡು, ನುಡಿಯ ಬಗ್ಗೆ ಅವರು ತೋರುವ ಉತ್ಸಾಹ ನಮ್ಮನ್ನು ನಾಚಿಸುವಂತಹದು. ದೇವರು ಅವರಿಗೆ ಇನ್ನಷ್ಟು ಶಕ್ತಿ ತುಂಬಲಿ ಎನ್ನುವುದು ಈ ಕಿರಿಯನ ಪ್ರಾರ್ಥನೆ.

ಅಡಿಟಿಪ್ಪಣಿಗಳು

೧. ಪಿ.ವಿ. ನಾರಾಯಣ: 'ಇಂಗ್ಲಿಷ್ ಸಾಹಿತ್ಯ ಚರಿತ್ರೆ' ಕುರಿತ ಲೇಖನ, ಕೃತಿ: ಎಲ್.ಎಸ್. ಶೇಷಗಿರಿರಾವ್ ಬದುಕು ಬರಹ, ಪುಟ ೧೬೧, ಸಂಪಾದಕರು ಮಾವಿನಕೆರೆ ರಂಗನಾಥನ್.

೨. ಎಲ್.ಎಸ್. ಶೇಷಗಿರಿರಾವ್ ಬದುಕು ಬರಹ, ಪುಟ ೧೦೯, ಸಂಪಾದಕರು: ಮಾವಿನಕೆರೆ ರಂಗನಾಥನ್.

೩. ಎಲ್.ಎಸ್. ಶೇಷಗಿರಿರಾವ್: ಪ್ರಿಯ ಕನ್ನಡ ಬಂಧು, ಪುಟ ೪೮.

೪. ಅದೇ ಪುಟ ೨೩.

೫. ಎಂ. ಚಿದಾನಂದ ಮೂರ್ತಿ: 'ಸಾಹಿತ್ಯದ ಕೆಲಸ – ಕನ್ನಡದ ಕೆಲಸ' ಲೇಖನ, ಕೃತಿ: ಎಲ್.ಎಸ್. ಶೇಷಗಿರಿರಾವ್ ಬದುಕು ಬರಹ, ಸಂಪಾದಕರು: ಮಾವಿನಕೆರೆ ರಂಗನಾಥನ್, ಪುಟ ೨೩೨.

೬. ಎಲ್.ಎಸ್. ಶೇಷಗಿರಿರಾವ್ : ಸ್ಪಂದನ, ಪುಟ ೨೭೫.

೭. ಅದೇ ಪುಟ ೨೮೫.

೮. ಅದೇ ಪುಟ ೨೮೬.

೯. ಅದೇ ಪುಟ ೨೮೭.

೧೦. ಅದೇ ಪುಟ ೨೮೭.

೧೧. ಅದೇ ಪುಟ ೨೮೮.

೧೨. ಎಲ್.ಎಸ್. ಶೇಷಗಿರಿರಾವ್ : ನಡೆದ ಹಾದಿ, ಪುಟ ೧೪೯.

ಆಕರ ಗ್ರಂಥಗಳು

೧. ಎಲ್.ಎಸ್. ಶೇಷಗಿರಿರಾವ್ ಬದುಕು ಬರಹ – ಸಂಪಾದಕರು : ಮಾವಿನಕೆರೆ ರಂಗನಾಥನ್
ಪ್ರಕಾಶಕರು : ಸುಭಾಷ್ ಸ್ಟೋರ್ಸ್ ಅವೆನ್ಯೂ ರೋಡ್, ಬೆಂಗಳೂರು
ಮೊದಲ ಮುದ್ರಣ : ೨೦೦೭

೨. 'ನಡೆದ ಹಾದಿ' – ಲೇಖಕರು : ಎಲ್.ಎಸ್. ಶೇಷಗಿರಿರಾವ್
ಸಂಪಾದಕರು : ಮಾವಿನಕೆರೆ ರಂಗನಾಥನ್
ಪ್ರಕಾಶಕರು : ಸುಭಾಷ್ ಸ್ಟೋರ್ಸ್ ಅವೆನ್ಯೂ ರೋಡ್, ಬೆಂಗಳೂರು
ಮೊದಲ ಮುದ್ರಣ : ೨೦೦೮

೩. ಪ್ರಿಯ ಕನ್ನಡ ಬಂಧು – ಲೇಖಕರು : ಎಲ್.ಎಸ್. ಶೇಷಗಿರಿರಾವ್
ಪ್ರಕಾಶಕರು : ವಸಂತ ಪ್ರಕಾಶನ, ಜಯನಗರ, ಬೆಂಗಳೂರು
ಮೊದಲ ಮುದ್ರಣ : ೧೯೯೦

೪. ಸ್ಪಂದನ – ಲೇಖಕರು : ಎಲ್.ಎಸ್. ಶೇಷಗಿರಿರಾವ್
ಪ್ರಕಾಶಕರು : ಸಪ್ನ ಬುಕ್‌ಹೌಸ್, ಗಾಂಧಿನಗರ, ಬೆಂಗಳೂರು
ಮೊದಲ ಮುದ್ರಣ : ೨೦೧೧

❏❏❏

೧೦. ಕನ್ನಡ ಕಾವ್ಯಗಳಲ್ಲಿ ಎರಡನೇ ಬಲ್ಲಾಳ

– ಸತೀಶ್ ಕುಮಾರ್ ಬಿ.ಟಿ.

ಕರ್ನಾಟಕದ ಮಧ್ಯಕಾಲೀನ ಇತಿಹಾಸದಲ್ಲಿ ಹೊಯ್ಸಳ ವಂಶವು ಪ್ರಸಿದ್ಧವಾಗಿದ್ದಿತು. ದಕ್ಷಿಣ ಕರ್ನಾಟಕದಲ್ಲಿ ತಲೆ ಎತ್ತಿದ ಈ ವಂಶವು ಸುಮಾರು ಮೂರು ಶತಮಾನಗಳ ಕಾಲ ಉತ್ತಮ ಆಳ್ವಿಕೆ ನಡೆಸಿದರು. ಗುಡ್ಡಗಾಡು ಪ್ರದೇಶದ ಮೂಲನಿವಾಸಿಗಳಾದ ಈ ಮನೆತನದವರು ಸೊಸೆವೂರಿನಲ್ಲಿ ಆಳ್ವಿಕೆ ಪ್ರಾರಂಭಿಸಿದರು. ಸಳನು ಹುಲಿಯನ್ನು ಕೊಂದುದರಿಂದ 'ಹೊಯ್ಸಳ' ಎಂದು ಈ ವಂಶಕ್ಕೆ ಹೆಸರು ಬಂದಿತು. ಹಾಗೆಯೇ ಸಳನು ಈ ವಂಶದ ಮೂಲ ಪುರುಷನಾದನು. ನಂತರ ವಿನಯಾದಿತ್ಯ, ನೃಪಕಾಮರು ಆರಂಭಿಕ ನಾಯಕರಾಗಿದ್ದರು. ಆರಂಭದಲ್ಲಿ ಕಲ್ಯಾಣ ಚಾಲುಕ್ಯರಲ್ಲಿ ಮಂಡಲೇಶ್ವರರಾಗಿ ಸೇವೆ ಸಲ್ಲಿಸಿದರು. ನಂತರ ವಿಷ್ಣುವರ್ಧನನಂತಹ ಪ್ರಸಿದ್ಧ ದೊರೆಯಿಂದಾಗಿ ಈ ವಂಶದ ಹೆಸರು ಹೆಚ್ಚು ಪ್ರಸಿದ್ಧಿಗೆ ಬಂದಿತು. ಈತನು ಕಲ್ಯಾಣ ಚಾಲುಕ್ಯರಿಂದ ಸ್ವತಂತ್ರರಾಗಲು ಪ್ರಯತ್ನಿಸಿ ವಿಫಲನಾದನು.

ಈ ವಂಶದ ಮತ್ತೊಬ್ಬ ಪ್ರಸಿದ್ಧ ರಾಜನಾದ ಎರಡನೇ ಬಲ್ಲಾಳನು ವಿಷ್ಣುವರ್ಧನನ ಮೊಮ್ಮಗ. ಈತನು ಸಿಂಹಾಸನಕ್ಕೆ ಬಂದ ಆರಂಭದಲ್ಲಿಯೇ ಸುತ್ತಮುತ್ತಲಿನ ರಾಜರನ್ನು ಸೋಲಿಸಿದನು. ಚಾಲುಕ್ಯರಲ್ಲಿ ಸಮರ್ಥ ದೊರೆಗಳು ಇಲ್ಲದ ಕಾರಣ ಅವರ ಮಾಂಡಲಿಕತ್ವವನ್ನು ತೊರೆದನು. ಹೊಯ್ಸಳರಿಗೆ ಪ್ರಬಲ ಶತ್ರುಗಳಾದ ದೇವಗಿರಿಯ ಸೇವುಣರನ್ನು ಸೊರಟೂರಿನ ಕದನದಲ್ಲಿ ಸೋಲಿಸಿದನು. ಈತನ ಪರಾಕ್ರಮಕ್ಕೆ ಅನೇಕ ರಾಜರು ನಿಲ್ಲದೆ ಹೋದರು. ನಂತರ ಈತ ಸ್ವತಂತ್ರ ರಾಜನಾಗಿ, ಚಕ್ರವರ್ತಿಯಾಗಿ ಶ್ರೀಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮಭಟ್ಟಾರಕ, ಪ್ರತಾಪ ಚಕ್ರವರ್ತಿ, ಯಾದವ ಚಕ್ರವರ್ತಿ, ದಕ್ಷಿಣೇಶ್ವರ ಮುಂತಾದ ಚಕ್ರವರ್ತಿ ಬಿರುದುಗಳನ್ನು ಧರಿಸಿದನು. ಈತನು ದಕ್ಷಿಣದಲ್ಲಿ ತಮಿಳುನಾಡಿನಿಂದ ಹಿಡಿದು ಉತ್ತರದಲ್ಲಿ ಕೃಷ್ಣ ನದಿಯವರೆಗೆ ರಾಜ್ಯ ವಿಸ್ತರಣೆ ಮಾಡಿ, ತಾತನಾದ

ವಿಷ್ಣುವರ್ಧನನು ಕಂಡ ಕನಸನ್ನು ನನಸು ಮಾಡಿದನು. ಇವನ ಸಾಧನೆಗಳಿಂದ ಹೊಯ್ಸಳ ವಂಶದ ಕೀರ್ತಿಯು ಉನ್ನತ ಶಿಖರವನ್ನು ಮುಟ್ಟಿತ್ತು.

ಕವಿಗಳಿಗೆ ಪ್ರತಿಭೆಯ ಸಹಜ ಗುಣಗಳಿದ್ದರು ಅದನ್ನು ಮೊದಲು ಗುರುತಿಸಿ, ಪ್ರೋತ್ಸಾಹಿಸಿ, ಪ್ರಕಟಿಸುವ ಕಾರ್ಯಗಳನ್ನು ಕನ್ನಡದ ರಾಜಮನೆತನಗಳು ಮಾಡಿವೆ. ಅದಕ್ಕೆ ಸಾಕ್ಷಿಯಾಗಿ ರಾಜಮನೆತನಗಳು ಕವಿಗಳಿಗೆ ಬಿರುದುಗಳು, ಉಡುಗೊರೆಗಳು, ಬಳುವಳಿಗಳನ್ನು ನೀಡಿ ಗೌರವಿಸಿರುವುದು ಕಂಡುಬರುವುದು. ಅದರಂತೆ ಹೊಯ್ಸಳರು ವೀರಾವೇಶದಿಂದ ಹೋರಾಡಿ ರಾಜ್ಯ ವಿಸ್ತರಣೆ ಮಾಡಿ, ಆಡಳಿತ ನಡೆಸಿರುವರು. ಇದರ ಜೊತೆಗೆ ಇವರು ಕಲೆ ಮತ್ತು ಸಂಸ್ಕೃತಿಯಲ್ಲಿ ಅಮೋಘವಾದ ಕೊಡುಗೆಗಳನ್ನು ನೀಡಿದ್ದಾರೆ. ಎರಡನೇ ಬಲ್ಲಾಳನ ಕಾಲದ ಪ್ರಮುಖ ಕವಿಗಳೆಂದರೆ **ಹರಿಹರ, ನೇಮಿಚಂದ್ರ, ರುದ್ರಭಟ್ಟ, ಜನ್ನ**ರು ಕಂಡುಬರುವರು. ಇವನ ಕಾಲಘಟ್ಟದಲ್ಲಿ ಶೈವ, ವೈಷ್ಣವ ಮತ್ತು ಜೈನ ಮೂರು ಧರ್ಮದ ಕವಿಗಳು ಕಂಡುಬರುತ್ತಾರೆ. ಎರಡನೇ ಬಲ್ಲಾಳನು ಯಶಸ್ವಿ ರಾಜನು ಆಗಿರುವುದರ ಜೊತೆಗೆ ಉತ್ತಮ ಕಲಾ ಪೋಷಣೆಯನ್ನು ಮಾಡಿರುವುದು ಕಂಡುಬರುವುದು. ಈತನು ಸಾಹಿತ್ಯ ಪೋಷಣೆಯನ್ನು ಮಾಡಿರುವ ಸಾಕ್ಷಿಯಾಗಿ ಎಂಬಂತೆ ಈತನ ಆಶ್ರಯದಲ್ಲಿದ್ದ ಕವಿ ಜನ್ನನಿಗೆ 'ಕವಿಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿರುವುದು ಕಂಡುಬರುವುದು.

ಎರಡನೇ ಬಲ್ಲಾಳನ ಕಾಲದ ಕವಿ–ಕೃತಿಗಳ ಪರಿಚಯ

ಹರಿಹರ : ನಡುಗನ್ನಡ ಕಾಲದಲ್ಲಿ ಈತ ಅಗ್ರಗಣ್ಯನಾದ ಶೈವ ಧರ್ಮದ ಭಕ್ತಿಕವಿ. ಈತನ ಕಾಲ ಸುಮಾರು ಕ್ರಿ.ಶ. ೧೨೦೦. ಈತನ ತಂದೆ ಮಹಾದೇವ, ತಾಯಿ ಶರ್ವಾಣಿ, ಗುರುಗಳು ಮಾಯಿದೇವ ಮತ್ತು ಹಂಪೆ ಈತನ ಜನ್ಮ ಸ್ಥಳ. ಹಂಪೆಯ ವಿರೂಪಾಕ್ಷ ದೇವರು ಈತನ ಆರಾಧ್ಯ ದೈವ. ಈತನು ಹೊಯ್ಸಳ ವೀರಬಲ್ಲಾಳನಲ್ಲಿ ಕರಣಿಕ ವೃತ್ತಿಯಲ್ಲಿದ್ದನು. ಹಂಪೆಯ ವಿರೂಪಾಕ್ಷ ದೇವಾಲಯದ ಮೇಲ್ಕಟ್ಟಿನ ವಸ್ತ್ರಕ್ಕೆ ಬೆಂಕಿ ತಗುಲಿದಾಗ, ದೋರಸಮುದ್ರದಲ್ಲಿ ಇದ್ದ ಹರಿಹರನಿಗೆ ದಿವ್ಯದೃಷ್ಟಿಯಿಂದ ತಿಳಿದು "ಕರಮರ್ದನಂಗೆಯ್ದು" ಆರಿಸಿದನು. ಇದರ ಸತ್ಯಾಸತ್ಯತೆಯನ್ನು ವೀರಬಲ್ಲಾಳನು ಪರೀಕ್ಷಿಸಲಾಗಿ ರಾಜಾಶ್ರಯದಲ್ಲಿ ಬೇಸರ ಹೊಂದಿ ರಾಜಾಶ್ರಯವನ್ನು ತೊರೆದು ಹಂಪೆಗೆ ಮರಳಿ ವಿರೂಪಾಕ್ಷನ ಭಕ್ತನಾಗಿ ಉಳಿದನು. ರಾಜನ ಸೇವಾವೃತ್ತಿಯು ಕಷ್ಟವಾಗಿ [illegible]. ಹಂಪೆಯ [illegible]ಕ್ಷನ ಸೇವೆಯಲ್ಲಿ ತೃಪ್ತಿಯನ್ನು ಹೊಂದಿದನು [illegible].

[illegible]ಗರಳಿಂಯ ಷಟ್ಪದಿಯ ಬ್ರಹ್ಮ ರಾಘವಾಂ[illegible]

ಈತನು ರಚಿಸಿದ ಕಾವ್ಯಗಳೆಂದರೆ ಮುಕ್ತಕ ಕಾವ್ಯಗಳಾದ **'ಮುಡಿಗೆಯ ಅಷ್ಟಕ'**, **'ಪಂಪಾಶತಕ'**, **'ರಕ್ಷಾಶತಕ'** ಚಂಪೂವಿನಲ್ಲಿ **'ಗಿರಿಜಾಕಲ್ಯಾಣ ಮಹಾ ಪ್ರಬಂಧ'** ಮತ್ತು **'ಶಿವಶರಣರ ರಗಳೆಗಳು'**. ಮುಕ್ತಕ ಕಾವ್ಯಗಳಲ್ಲಿ ಹಂಪೆಯ ವಿರೂಪಾಕ್ಷ ದೇವರ ಮಹಿಮಾ ವಿಶೇಷಗಳನ್ನು, ಭಕ್ತಿ, ಜ್ಞಾನ, ವೈರಾಗ್ಯ, ಅಂತರಂಗದ ನಿರೂಪಣೆಯನ್ನು ವಿವರಿಸಿರುವನು. ಗಿರಿಜಾಕಲ್ಯಾಣ ಮಹಾ ಪ್ರಬಂಧವು ಪ್ರೌಢಶೈಲಿಯ ಚಂಪೂವಿನ ಕೃತಿಯಾಗಿದೆ. ಶಿವ ಗಿರಿಜೆಯರ ವಿವಾಹದ ಕಥಾವಸ್ತುವನ್ನು ಹೊಂದಿದ್ದು, ಇದು 'ಶಿವಪುರಾಣ' ಮತ್ತು ಕಾಳಿದಾಸನ 'ಕುಮಾರ ಸಂಭವ'ಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದ್ದಾನೆ. 'ಶಿವಶರಣರ ರಗಳೆ' ಇದು ತಮಿಳಿನ 'ಪೆರಿಯ ಪುರಾಣಂ' ಕಾವ್ಯದಲ್ಲಿನ ಕಾವ್ಯವಸ್ತುವಿನ ಜೊತೆಗೆ ಬಸವಯುಗದ ವಚನಕಾರರನ್ನು ಕುರಿತು ಕಾವ್ಯಗಳನ್ನು ಬರೆದನು. ಈ ರಗಳೆಗಳಲ್ಲಿ ಬಸವದೇವರಾಜ ರಗಳೆ ಮತ್ತು ನಂಬಿಯಣ್ಣನ ರಗಳೆಯು ಜನಪ್ರಿಯವಾದುದು.

ನೇಮಿಚಂದ್ರ : ನೇಮಿಚಂದ್ರನು ಆರಂಭದಲ್ಲಿ ರಟ್ಟ ಮನೆತನದ ಲಕ್ಷ್ಮಣನಲ್ಲಿದ್ದು, ನಂತರ ಎರಡನೇ ಬಲ್ಲಾಳನ ಮಹಾಪ್ರಧಾನ ಸಜ್ಜೆವಳ್ಳ ಪದ್ಮನಾಭದೇವನಲ್ಲಿದ್ದವನು. ಜೈನ ಕವಿಯಾದ ಈತನ ಬಗ್ಗೆ ಹೆಚ್ಚಿನ ವೈಯಕ್ತಿಕ ವಿಚಾರಗಳು ದೊರೆಯುವುದಿಲ್ಲ. ಈತನು ನೇಮಿನಾಥ ಪುರಾಣದಲ್ಲಿ

"ಸುಕರ ಕವಿಶೇಖರಂ ತಾ
ರ್ಕಿಕತಿಲಕಂ ಮಾನಮೇರು ಜಿನಶಾಸನ ದೀ
ಪಕನಕಳಂಕಂ ಭಾವಕ

ಮುಕುರಂ ಕವಿರಾಜಮಲ್ಲನಪ್ರತಿಮಲ್ಲಂ"[೧] ಮುಂತಾದ ಬಿರುದುಗಳನ್ನು ಹೊಂದಿದ್ದನ್ನು ಹೇಳಿಕೊಂಡಿದ್ದಾನೆ. ಈತನು ಕನ್ನಡ, ಸಂಸ್ಕೃತ, ಪ್ರಾಕೃತ, ಅಪಭ್ರಂಶ ಭಾಷೆಗಳನ್ನು ಬಲ್ಲವನಾಗಿದ್ದು **'ಚತುರ್ಭಾಷಾ ಕವಿ'**ಯಾಗಿದ್ದನು. ಈತನು ಪಂಪನಂತೆಯೆ **'ಲೀಲಾವತೀ ಪ್ರಬಂಧಂ'** ಎಂಬ ಲೌಕಿಕ ಕಾವ್ಯವನ್ನು, ೨೨ನೇ ತೀರ್ಥಂಕರನಾದ ನೇಮಿನಾಥನ ಕಥೆಯನ್ನು ಆಧರಿಸಿ **'ನೇಮಿನಾಥ ಪುರಾಣ'** ಎಂಬ ಧಾರ್ಮಿಕ ಕಾವ್ಯವನ್ನು ರಚಿಸಿದ್ದಾನೆ. ಲೀಲಾವತೀ ಪ್ರಬಂಧ ಕಾವ್ಯವು ರಟ್ಟಕುಲದ ಮೂರನೆಯ ಕಾರ್ತವೀರ್ಯನ ಮಗನಾದ ಲಕ್ಷ್ಮಣದೇವನ ಆಶ್ರಯದಲ್ಲಿದ್ದಾಗ ರಚಿಸಿದನು. ಇದಕ್ಕೆ ಸುಬಂಧುವಿನ 'ವಾಸವದತ್ತೆ'ಯು ಆಕರವಾಗಿರುವಂತೆ ಕಂಡುಬರುವುದು. ಇದು ೧೪ ಆಶ್ವಾಸಗಳ ಶೃಂಗಾರ ರಸವನ್ನು ಹೊಂದಿರುವ ಚಂಪೂಕಾವ್ಯ. **"ಶೃಂಗಾರಮಂ ಕಾವ್ಯಬಂಧನದೊಳ್ ತಾಂ ಸೆಱೆಗೈದ ಮೆಯ್ಮೆಯೊಳಿವಂ ಶೃಂಗಾರಕಾರಾಗೃಹಂ"**[೨] ಎಂದು ಹೇಳಿಕೊಂಡಿದ್ದಾನೆ. ಇದು ಶೃಂಗಾರ ಪ್ರಧಾನವಾದ ಕಾಲ್ಪನಿಕ ಕಥೆಯಾಗಿದೆ. ಇದರ ನಾಯಕ ಕಂದರ್ಪದೇವ ನಾಯಕಿ ಲೀಲಾವತಿ.

"ಸ್ತ್ರೀ ರೂಪಮೆ ರೂಪಂ ಶೃಂ
ಗಾರಮ ರಸಮತುಳಸುರತಗಂಧಮೆ ಗಂಧಂ
ಸಾರಸ್ಪರ್ಶ ಗುರುಕುಚ
ಭಾರಸ್ಪರ್ಶಂಗಳಪ್ರಶಬ್ದಮೆ ಶಬ್ದಂ"[೨] ಎಂದು ಹೇಳಿ ಶೃಂಗಾರಮಯವಾದ ಕಾವ್ಯವನ್ನು ರಚಿಸಿದ್ದಾನೆ.

ನೇಮಿನಾಥ ಪುರಾಣವು ೮ ಆಶ್ವಾಸಗಳಿಗೆ ನಿಂತುಹೋಗಿದೆ. ಅದಕ್ಕೆ ಇದನ್ನು ಅರ್ಧನೇಮಿ ಪುರಾಣ ಎಂದೂ ಕರೆಯುವರು. ಈತನು ಜೈನಮತದ ಅನುಯಾಯಿ ಆದುದರಿಂದ

"ಎಂದೆಂದು ಪರಸೆ ಗುರಜನ
ಮೊಂದೊಂದನೆ ಪಗಟಿ ಬುಧಜನಂ ಜಿನಕಥೆಯೊಳ್
ಸಂದಿಸಿ ವಸುದೇವಾಚ್ಯುತ
ಕಂದರ್ಪಾರ ಕಥೆಗಳನಿತುಮಮಂ ವಿರಚಿಸುವೆಂ"[೪] ಎಂದು ಹೇಳಿಕೊಂಡು ಹರಿವಂಶ–ಕುರುವಂಶ ಚರಿತ್ರೆಯನ್ನು ಬರೆದು ಮುಖ್ಯವಾಗಿ ಶ್ರೀ ಕೃಷ್ಣನ ಲೀಲಾವಿಲಾಸಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದಾನೆ.

ರುದ್ರಭಟ್ಟ : ಈತ ಸ್ಮಾರ್ತ ಬ್ರಾಹ್ಮಣ, ಭಕ್ತಿರಸ ಪ್ರಿಯ ಕವಿ. ನೇಮಿಚಂದ್ರನಂತೆ ಈತನು ಚಂಪೂ ಕೃತಿಯನ್ನು ಬರೆದನು. ಈತನಿಗೆ 'ಕೃತಿಶಾರದಾಭ ಚಂದ್ರಾತಪರುದ್ರ', 'ಕವಿಕವಿರಾಜ' ಎಂಬ ಬಿರುದುಗಳಿದ್ದವು. ಈತನು ಎರಡನೇ ಬಲ್ಲಾಳನ ಮಂತ್ರಿಯಾದ ಚಂದ್ರಮೌಳಿಯ ಆಶ್ರಯದಲ್ಲಿದ್ದನು. ಚಂದ್ರಮೌಳಿಯು ಪಂಡಿತನೂ, ಸಾಹಿತ್ಯ ಪೋಷಕನಾಗಿದ್ದನು ಎಂಬುದನ್ನು ಕ್ರಿ.ಶ. ೧೧೮೧ರ ಶ್ರವಣಬೆಳಗೊಳದ ಶಾಸನವು

"ಭರತಾಗಮ ತರ್ಕವ್ಯಾ
ಕರಣೋಪನಿಷತ್ಪುರಾಣ ನಾಟಕ ಕಾವ್ಯೋ
ತ್ಕರ ವಿದ್ವಜ್ಜನನುತನಿಪ
ಸ್ಥಿರಮುಣ್ಯಂ ಚಂದ್ಯಮೌಳಿ ಮಂತ್ರಿಲಲಾಮಂ ॥"[೫] ಈ ರೀತಿಯಾಗಿ ಈತನು ತರ್ಕ, ವ್ಯಾಕರಣ, ಉಪನಿಷತ್ತು, ಕಾವ್ಯ ನಾಟಕಗಳನ್ನು ತಿಳಿದ ಪಂಡಿತನಾಗಿದ್ದನು ಎಂದು ಉಲ್ಲೇಖಿಗೊಂಡಿರುವುದು. ಇಂತಹ ಪಂಡಿತನಾಗಿದ್ದ ಚಂದ್ರಮೌಳಿಯ ಆಶ್ರಯದಲ್ಲಿದ್ದು ರುದ್ರಭಟ್ಟನು ವಿಷ್ಣು ಪಾರಮ್ಯದ ಕಥೆಯನ್ನು ಆರಿಸಿಕೊಂಡು **'ಜಗನ್ನಾಥ ವಿಜಯ'**ವನ್ನು ರಚಿಸಿದನು. ಇದು ಸಂಸ್ಕೃತದ 'ವಿಷ್ಣುಪುರಾಣ'ವನ್ನು ಆಕರವಾಗಿಟ್ಟುಕೊಂಡು ೧೮ ಆಶ್ವಾಸಗಳಲ್ಲಿ ರಚಿಸಿದ್ದಾನೆ. ರುದ್ರಭಟ್ಟನು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಪಂಡಿತನಾಗಿದ್ದನು. ಸಂಸ್ಕೃತ ಬಳಕೆ ಹೆಚ್ಚಾಗಿ ಬಳಕೆಗೊಂಡ ಒಂದು ಪ್ರೌಢಕಾವ್ಯ

ಅಷ್ಟಾದಶ ವರ್ಣನೆಗಳನ್ನು ಒಳಗೊಂಡಿದೆ. ಈತನ ಶೈಲಿ ಪಾಂಡಿತ್ಯಪೂರ್ಣವಾದುದು. ಶ್ರೀಕೃಷ್ಣ ಜನನದಿಂದ ಸಾಲ್ವನ ವಧೆಯವರೆಗೆ ಕೃಷ್ಣನ ಚರಿತ್ರೆಯನ್ನು ರಚಿಸಿದ್ದಾನೆ. ಕೃಷ್ಣನ ಬಾಲಲೀಲೆಯು ಅನ್ಯಾದೃಶ್ಯವಾಗಿ ವರ್ಣಿಸಿದ್ದಾನೆ. ಭೂಮಿಯಲ್ಲಿ ದುಷ್ಟರು ಹೆಚ್ಚಾದಾಗ ದೇವರು ಬಂದು ಸಂಹಾರ ಮಾಡುವಂತೆ ಪೂತನಿ, ಕಂಸ, ಶಿಶುಪಾಲರ ವಧೆಯು ಶ್ರೀಕೃಷ್ಣನಿಂದ ಆಗುವುದು. ಇವನ ಇನ್ನೊಂದು ಕೃತಿ 'ರಸಕಲಿಕಾ' ಆದರೆ ಇದು ದೊರೆತಿಲ್ಲ.

ಜನ್ನ : ಹೊಯ್ಸಳರ ಕಾಲದ ಪ್ರಸಿದ್ಧ ಕವಿ ಹಾಗೂ ಕವಿಚಕ್ರವರ್ತಿಯರಲ್ಲಿ ಮೂರನೆಯವನು. ಜನ್ನನ ತಂದೆ ಶಂಕರ, ತಾಯಿ ಗಂಗಾದೇವಿ, ಪತ್ನಿ ಲಕುಮಾದೇವಿ, ಶಬ್ದಮಣಿದರ್ಪಣವನ್ನು ಬರೆದ ಕೇಶಿರಾಜ ಈತನ ಸೋದರಳಿಯ. ಈತ ಹೊಯ್ಸಳರ ಎರಡನೇ ಬಲ್ಲಾಳನ ಆಶ್ರಯದಲ್ಲಿದ್ದು 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದುದನ್ನು ಯಶೋಧರ ಚರಿತೆಯಲ್ಲಿ

"ಕನ್ನರನಾದರದಿಂ ಕುಡೆ
ಹೊನ್ನಂ ಮನಮೊಸೆದು ತೈಲಪಂ ಕುಡೆ ರನ್ನಂ
ಮನ್ನಿಸಿ ಬಲ್ಲಾಳಂ ಕುಡೆ
ಜನ್ನಂ ಕವಿಚಕ್ರವರ್ತಿವೆಸರಂ ಪಡೆದರ್॥"[೬] ಎಂದು ಹೇಳಿಕೊಂಡಿದ್ದಾನೆ. ನಂತರ ಇಮ್ಮಡಿ ನರಸಿಂಹ ಆಶ್ರಯದಲ್ಲಿ ಮಂತ್ರಿಯು ದಂಡಾಧೀಶನು ಆಗಿರುವುದನ್ನು 'ಅನಂತನಾಥ ಪುರಾಣ'ದಲ್ಲಿ

"ನರಸಿಂಹನ ಚೋಳಕುಲೋ
ದ್ಧರಣನ ಸರ್ವಜ್ಞಭೂಪನೋಲಗದೊಳ್ ನಿಂ
ದಿರೆ ದಂಡಾಧೀಶಂ ಕು
ಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನದೇವಂ॥"[೭] ಎಂದು ಹೇಳಿಕೊಂಡಿದ್ದಾನೆ. ಇದರಿಂದ ಜನ್ನನು ಹೊಯ್ಸಳ ಎರಡನೇ ಬಲ್ಲಾಳ ಮತ್ತು ಎರಡನೇ ನರಸಿಂಹನ ಆಶ್ರಯದಲ್ಲಿದ್ದ ಕವಿಯೆಂದು ತಿಳಿದು ಬರುವುದು. ಹಾಗೆಯೇ ಎರಡನೇ ಬಲ್ಲಾಳನ ಅಧಿಕಾರಿ ಅಮಿತಯ್ಯ ದಂಡನಾಯಕನ ಆಶ್ರಯದಲ್ಲಿಯೂ ಇದ್ದನು ಎಂಬುದು ತಿಳಿದುಬರುವುದು. ಈತನು ಕವಿಯೂ ಹೌದು ಶಾಸನ ಕವಿಯೂ ಹೌದು. ಈತನು ಕಾವ್ಯ ರಚನೆ ಮಾಡುವುದಕ್ಕೆ ಮುನ್ನ ಶಾಸನಗಳನ್ನು ರಚನೆ ಮಾಡಿರುವುದು ಕಂಡುಬರುವುದು. ಅವುಗಳು ಚನ್ನರಾಯಪಟ್ಟಣ ಮತ್ತು ತರೀಕೆರೆಗಳಲ್ಲಿ ದೊರೆತಿವೆ. ಈತನಿಗೆ 'ಉದ್ದಂಡ ಕವಿಭಾಳಲೋಚನ', 'ಸಾಹಿತ್ಯ ರತ್ನಾಕರ', 'ಉಭಯ ಕವಿಚಕ್ರವರ್ತಿ' 'ಅಭಿನವ ಮದನ' ಎಂಬ ಬಿರುದುಗಳಿದ್ದವು. ಈತ ಚತುರ್ವಿಧ ಪಂಡಿತನಾಗಿದ್ದನು ಎಂಬುದನ್ನು, ಯಶೋಧರ ಚರಿತೆಯಲ್ಲಿ

"ಆ ನೃಪನ ಸಭೆಯೊಳಖಿಳಕ
ಳಾ ನಿಪುಣರ ನಟ್ಟನಡುವೆ ಬೊಟ್ಟೆತ್ತಿಗೆಲಲ್
ತಾನೆ ಚತುರ್ವಿಧ ಪಂಡಿತ
ನೇನೆಂಬುದೊ ಸುಕವಿ ಭಾಳಲೋಚನನಳವಂ॥"[೮] ಎಂದು ಹೇಳಿಕೊಂಡಿದ್ದಾನೆ.

ಎರಡನೇ ಬಲ್ಲಾಳನ ಕಾಲದಲ್ಲಿ ಕಂಡು ಬರುವ ಕಾವ್ಯದ ವಸ್ತು

ಎರಡನೇ ಬಲ್ಲಾಳನ ಆಳ್ವಿಕೆಯು ಹನ್ನೆರಡನೇ ಶತಮಾನದ ಉತ್ತರ ಭಾಗ ಮತ್ತು ಹದಿಮೂರನೇ ಶತಮಾನದ ಪೂರ್ವದಲ್ಲಿ ಕಂಡುಬರುವುದು. ಬಸವಯುಗವು ಪ್ರಾರಂಭವಾಗಿ ಹಲವಾರು ಕ್ರಾಂತಿಕಾರಕ ಬದಲಾವಣೆಗಳು ಕಂಡುಬಂದಿತ್ತು. ಈ ಕಾಲಘಟ್ಟವನ್ನು ಕನ್ನಡ ಸಾಹಿತ್ಯ ಚರಿತ್ರಕಾರರು ನಿರ್ಧರಿಸಿರುವಂತೆ ನಡುಗನ್ನಡದ ಕಾಲಘಟ್ಟವಾಗಿದೆ. ಈ ಕಾಲದಲ್ಲಿ ಸಾಹಿತ್ಯವು ಮಾರ್ಗದಿಂದ ದೇಸಿಗೆ ಸಂಕ್ರಮಣ ಹೊಂದುತ್ತಿದ್ದ ಕಾಲ. ವಚನಕಾರರ ಮತ್ತು ಹರಿಹರನ ಕ್ರಾಂತಿಕಾರಕ ಕೃತ್ಯದಿಂದ ಸಾಹಿತ್ಯದ ವಸ್ತುಗಳ ಆಯ್ಕೆ, ಬಳಸಿದ ಛಂದಸ್ಸು ಮತ್ತು ಭಾಷೆ ಎಲ್ಲವೂ ಭಿನ್ನವಾಗಿರುವುದು ಕಂಡುಬರುವುದು. ಪಂಪಯುಗದಲ್ಲಿ ಪಂಪನು ಆಗಮಿಕ ಮತ್ತು ಲೌಕಿಕ ಎಂಬ ಎರಡು ಕೃತಿಗಳ ರಚನೆ ಮಾಡುವ ಪರಂಪರೆಯನ್ನು ಬೆಳೆಸಿದ್ದನು, ಅದರಂತೆ ಈ ಪರಂಪರೆಯು ನೇಮಿಚಂದ್ರನಿಂದ ಮುಂದುವರಿದಂತೆ ಕಂಡುಬರುವುದು. ಕಾವ್ಯದ ವಸ್ತುವಿನಲ್ಲಿ ಪಂಪನು ತನ್ನ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನೊಂದಿಗೆ, ರನ್ನನು ತನ್ನ 'ಗದಾಯುದ್ಧ' ಕಾವ್ಯದಲ್ಲಿ ತೈಲಪನನ್ನು ಭೀಮನೊಂದಿಗೆ ಸಮೀಕರಿಸಿ, ರಾಜನ ಬಿರುದುಗಳನ್ನು ಕಾವ್ಯನಾಯಕನಲ್ಲಿ ಹೋಲಿಸಿದ್ದಾರೆ. ಹೀಗೆ ಪಂಪಯುಗದಲ್ಲಿ ಆಶ್ರಿತ ರಾಜರನ್ನು ತಾವು ಬರೆಯುತ್ತಿದ್ದ ಲೌಕಿಕ ಕಾವ್ಯದ ನಾಯಕರಿಗೆ ಸಮೀಕರಿಸಿ ಅನೇಕ ಶ್ಲೇಷೆಗಳಿಂದ ಹೊಗಳಿರುವುದನ್ನು ನೋಡಬಹುದು. ಪಂಪ, ರನ್ನ, ಪೊನ್ನರು ರಾಜಾಶ್ರಯದಲ್ಲಿ ನಿಂತರು. ಆದರೆ ನಡುಗನ್ನಡದ ಕಾಲಘಟ್ಟದಲ್ಲಿ ಹರಿಹರನು ರಾಜಾಶ್ರಯದಿಂದ ದೂರವೆ ಉಳಿದನು. ರಾಜರನ್ನು ಮೆಚ್ಚಿಸಿ ಬರೆಯುವುದಕ್ಕೆ ಮೂಗು ಮುರಿದು, ತನ್ನ ಪಂಪಾಶತಕದಲ್ಲಿ

"ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆಯಕ್ಕಟಾ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ಮೇಣ್॥
ಅನವರತಂ ಪೊಗಳ್ದು ಕೆಡೆಬೇಡಲೆ ಮಾನವ ನೀನಹರ್ನಿಶಂ
ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ॥"[೯] ಎಂದು ರಾಜರನ್ನು ಕಾವ್ಯಗಳಲ್ಲಿ ಇಂದ್ರ ಚಂದ್ರ ಎಂದು ಹೊಗಳುವುದನ್ನು ತಿರಸ್ಕರಿಸಿದ್ದಾನೆ. ಬದಲಿಗೆ

ಮಹಾನ್ ಶಿವಭಕ್ತನಾದ ಹರಿಹರನು ಸಾಕ್ಷಾತ್ ಶಿವ ಮತ್ತು ಶಿವಭಕ್ತರನ್ನು ಕಾವ್ಯಗಳಲ್ಲಿ ನಾಯಕರನ್ನಾಗಿ ಮಾಡಿಕೊಂಡು ಕಾವ್ಯ ರಚನೆ ಮಾಡಿದನು. ಇನ್ನುಳಿದ ಕವಿಗಳಾದ ನೇಮಿಚಂದ್ರ, ರುದ್ರಭಟ್ಟ, ಜನ್ನರು ತಮ್ಮ ಆಶ್ರಿತ ರಾಜ, ಮಂತ್ರಿಗಳನ್ನು ತಮ್ಮ ಕಾವ್ಯದ ಆರಂಭದಲ್ಲಿ ಒಂದೆರಡು ಪದ್ಯಗಳಲ್ಲಿ ಹೊಗಳಿ ಯಾವ ರೀತಿಯ ಸಮೀಕರಣ, ಹೋಲಿಕೆಯನ್ನು ಮಾಡದೆ ಕಾವ್ಯಧರ್ಮಕ್ಕೆ ನಿಷ್ಠರಾಗಿ ಕಾವ್ಯಗಳನ್ನು ಬರೆದರು.

ಹರಿಹರನು ಈ ಕಾಲಘಟ್ಟದ ಕ್ರಾಂತಿಕವಿ ಎಂದು ಹೇಳಬಹುದು. ಈತನು ಕಾವ್ಯದ ಛಂದಸ್ಸಿನಲ್ಲಿ ಬದಲಾವಣೆ ತಂದು, ರಗಳೆಯಲ್ಲಿ ಶಿವಶರಣರ ಕಥೆಗಳನ್ನು ರಚಿಸಿ, ಚಂಪೂವಿನಲ್ಲಿ ಶಿವಪುರಾಣದ ಕಥೆಯನ್ನು ಬರೆದನು. ಹಿಂದಿನ ಕಾಲಘಟ್ಟದಲ್ಲಿ ಬಳಕೆಯಲ್ಲಿದ್ದ ಚಂಪೂಗಳ ಬಳಕೆಯನ್ನು ನೇಮಿಚಂದ್ರ, ರುದ್ರಭಟ್ಟರು ಹಾಗೆಯೇ ಮುಂದುವರೆಸಿದರು. ಹಿಂದಿನ ಯುಗವು ಕ್ಷಾತ್ರಯುಗವಾಗಿದ್ದು ಕಾವ್ಯಗಳಲ್ಲಿ ವೀರ ರಸವು ಪ್ರಧಾನವಾಗಿತ್ತು. ಈ ಕಾಲಘಟ್ಟದಲ್ಲಿ ಭಕ್ತಿರಸವು ಹೆಚ್ಚಾಗಿದ್ದು ಹರಿಹರ ಮತ್ತು ರುದ್ರಭಟ್ಟನಲ್ಲಿ ಇದು ಕಂಡುಬರುವುದು. ಹಾಗೆಯೇ ನೇಮಿಚಂದ್ರನು ತನ್ನ 'ಲೀಲಾವತಿ' ಕೃತಿಯಲ್ಲಿ ಶೃಂಗಾರ ರಸವನ್ನು ತಂದಿದ್ದಾನೆ. ಜನ್ನನು ಎರಡೂ ಜೈನ ಕೃತಿಯನ್ನೆ ಬರೆದನು.

ಕಾವ್ಯಗಳಲ್ಲಿ ಎರಡನೇ ಬಲ್ಲಾಳನ ವರ್ಣನೆಗಳು

ಆಳುವ ಅರಸನಲ್ಲಿದ್ದ ಉತ್ತಮ ಗುಣಗಳಾದ ಸತ್ಯ, ದಾನ, ಶೌರ್ಯ, ಪರಾಕ್ರಮಗಳನ್ನು ತಮ್ಮ ಕಾವ್ಯಗಳಲ್ಲಿ ವರ್ಣಿಸುವುದು ಕವಿಗಳ ಮುಖ್ಯ ಕರ್ತವ್ಯ ಎಂದು ಕೆಲವು ಕವಿಗಳು ತಿಳಿದಿದ್ದರು. ಎರಡನೇ ಬಲ್ಲಾಳನು ಹೊಯ್ಸಳ ವಂಶದ ಶ್ರೇಷ್ಠ ಮತ್ತು ಬಲಿಷ್ಠನಾದ ರಾಜನಾಗಿದ್ದನು. ಇವನ ಪರಾಕ್ರಮ, ಯುದ್ಧೋತ್ಸಾಹ ಎಲ್ಲವೂ ಇವನ ಶಾಸನಗಳಲ್ಲಿ ವಿವಿಧ ರೀತಿಯ ವರ್ಣನೆಗಳಿಂದ ಮೂಡಿಬಂದಿವೆ. ಹಾಗೆಯೇ ಹಲವು ಬಿರುದುಗಳಿಂದ ಹೊಗಳಲ್ಪಟ್ಟಿದೆ. ಈ ಕಾಲಘಟ್ಟದ ಸಾಹಿತ್ಯ ರಚನೆಯ ಹಿನ್ನೆಲೆಯಲ್ಲಿ ನೋಡಿದಾಗ ಎರಡನೇ ಬಲ್ಲಾಳನನ್ನು ಸಮೀಕರಿಸಿ ಯಾವುದೇ ಲೌಕಿಕ ಕಾವ್ಯಗಳು ರಚನೆಯಾಗಲಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ವಚನಯುಗದ ಪ್ರಭಾವ ಮತ್ತು ಹರಿಹರನ ಕ್ರಾಂತಿಕಾರಕ ಬದಲಾವಣೆ.

ಹರಿಹರನು ಎರಡನೇ ಬಲ್ಲಾಳನ ಆಶ್ರಯದಲ್ಲಿ ಕರಣಿಕ ವೃತ್ತಿಯನ್ನು ಮಾಡುತ್ತಿದ್ದನು. ಈತನಿಗೆ ಹಂಪೆಯ ವಿರೂಪಾಕ್ಷನೆ ಅರಸ. ಹಾಗಾಗಿ **"ಹರಂಗೆ ಶಶಿಭೂಷಂಗೀಶ್ವರಂಗೆಯ್ದು ನಾಲಗೆಯುಂ ಮಾಜಿದೆನೊಲ್ದು ಹಂಪೆಯ ವಿರೂಪಾಕ್ಷಂಗದೇನೆಂದಪಂ"**[೧೦] ಎಂದು ಪ್ರತಿಜ್ಞೆ ಮಾಡಿ ಶಿವ ಮತ್ತು ಶಿವಶರಣರನ್ನು

ಬಿಟ್ಟು ಅನ್ಯರನ್ನು ಹೊಗಳುವುದಿಲ್ಲ ಎಂದು ಕಾವ್ಯಗಳನ್ನು ಬರೆದನು. 'ಗಿರಿಜಾ ಕಲ್ಯಾಣ ಮಹಾಪ್ರಬಂಧಂ' ಚಂಪೂ ಕೃತಿಯಲ್ಲಿ **"ಬಾಪುರೇ ಕಾವ್ಯನಾಥಂ ಗಿರಿಜಾನಾಥಂ"**[೧೧] ಎಂದು ಸಾಕ್ಷಾತ್ ಶಿವನನ್ನು ತನ್ನ ಕಾವ್ಯದ ನಾಯಕನನ್ನಾಗಿ ಮಾಡಿಕೊಂಡನು. ರಗಳೆಗಳಲ್ಲಿ ಶಿವಭಕ್ತರನ್ನು ಮತ್ತು ವಚನಯುಗದ ಶಿವಶರಣರನ್ನು ಕಾವ್ಯ ನಾಯಕರನ್ನಾಗಿ ಕಾವ್ಯ ರಚನೆ ಮಾಡಿದನು. ಹರಿಹರನ 'ಮಾದರ ಚೆನ್ನಯ್ಯ'ನ ರಗಳೆಯಲ್ಲಿ ಶಿವನು ತನ್ನ ಭಕ್ತನಾದ ಚೆನ್ನಯ್ಯನ ಗುಡಿಸಲಿನಲ್ಲಿ ನುಚ್ಚಿನ ಅಂಬಲಿಯನ್ನು ಉಂಡು ಕರಿಕಾಳ ಚೋಳನ ಮೃಷ್ಟಾನ್ನವನ್ನು ತ್ಯಜಿಸುವನು. ಕರಿಕಾಳ ಚೋಳನು ಕಾರಣ ಕೇಳಲಾಗಿ ಶಿವನು

"ಕಂಡಯ್ಯ ಚೋಳ ನಿನಗಿನಿತು ಸೈರಣೆಯಿಲ್ಲ
ಉಂಡೆವಾ ಚೆನ್ನನೊಡನೆಮಗಿಂದು ಹಸಿವಿಲ್ಲ
ಓತು ಮಾದರ ಚೆನ್ನನೊಡನುಂಡೆವೆಲೆ ಚೋಳ
ಕೂತು ಮಾದರ ಚೆನ್ನನೊಡನುಂಡೆವೆಲೆ ಚೋಳ"[೧೨]

ಎಂದು ಉತ್ತರಿಸುವನು. ನಂತರ ರಾಜನಾದ ಕರಿಕಾಳ ಚೋಳನು ಮಾದರ ಚೆನ್ನಯ್ಯನ ಗುಡಿಸಲನ್ನು ಹುಡುಕಿಕೊಂಡು ಬರುವನು. ಹೀಗೆ ಶಿವಭಕ್ತನಾದವನಿಗೆ ಸಾಕ್ಷಾತ್ ಶಿವ ಮತ್ತು ರಾಜನೂ ಸಹ ಆತನು ಇರುವ ಗುಡಿಸಲಿಗೆ ಹುಡುಕಿಕೊಂಡು ಬರುವನು ಎಂಬ ಧೋರಣೆಯಲ್ಲಿ ಕಥನಾ ತಂತ್ರವನ್ನು ರೂಪಿಸಿ, ರಾಜಾಶ್ರಯಕ್ಕೆ ತನ್ನದೆ ಆದ ರೀತಿಯಲ್ಲಿ ವಿರೋಧವನ್ನು ತೋರಿದ್ದಾನೆ. ಈ ಎಲ್ಲಾ ಹಿನ್ನೆಲೆಯನ್ನು ಅವಲೋಕಿಸಿದಾಗ ಹರಿಹರನು ಎರಡನೇ ಬಲ್ಲಾಳನನ್ನು ಹೊಗಳಿ ವರ್ಣನೆ ಮಾಡಿದ್ದಾನೆ ಎಂಬುದು ಸತ್ಯಕ್ಕೆ ದೂರವಾದ ಮಾತು.

ಮುಂದಿನ ಕವಿ ನೇಮಿಚಂದ್ರ, ಈತ ಸಜ್ಜೆವಳ್ಳ ಪದ್ಮನಾಭನ ಆಶ್ರಯದಲ್ಲಿದ್ದು 'ನೇಮಿನಾಥ ಪುರಾಣ'ವನ್ನು ರಚಿಸಿದನು. ಈ ಕೃತಿಯಲ್ಲಿ ತನ್ನ ಆಶ್ರಯದಾತನಾದ ಪದ್ಮನಾಭನನ್ನು ಕುರಿತು

"ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ ಸಂ
ಪದಮೆಂದು ವರ್ಧಮಾನ ಗುಣತತಿ ವಿಮಳಂ ತನ್ನ ಪೆಂಪೊಂದನಂತಂ
ಹೃದಯಂ ಸ್ವಾಧೀನಧರ್ಮಂ ಮತಿ ಪುರುಚರಿತಂ ಶೀತಲಂ ಸುವ್ರತಂ ತಾ
ನದಟಿಂ ಪ್ರತ್ಯಕ್ಷತೀರ್ಥೇಶ್ವರನೆನೆ ನೆಗಟ್ದಂ ಪದ್ಮನಾಭಪ್ರಧಾನಂ॥

ಆ ಪದ್ಮನಾಭದೇವಂ
ಶ್ರೀಪತಿ ಪುಣ್ಯಪ್ರಭಾವದಿಂ ನೇಮಿಯ ವಿ
ಧ್ಯಪೃಥುಳಜಲಧಿ ಭವಕೃತಿ
ರೂಪದ ಕೌಸ್ತುಭಕೆ ಸುಭಗವಲ್ಲಭನಾದಂ॥"[೧೩] ಎಂದು ಹೊಗಳಿದ್ದಾನೆ. ಆದರೆ

ರಾಜನಾದ ಎರಡನೇ ಬಲ್ಲಾಳನನ್ನು ಕುರಿತು ಯಾವುದೇ ವರ್ಣನೆಗಳನ್ನು ಮಾಡಿರುವುದು ಕಂಡುಬರುವುದಿಲ್ಲ. ಬದಲಿಗೆ ನೇಮಿನಾಥ ಪುರಾಣದ ಪ್ರತಿ ಆಶ್ವಾಸದ ಕೊನೆಯಲ್ಲಿ

> **"ಇದು ಮೃದುಪದಬಂಧುರ ಸರಸ್ವತೀ ಸೌಭಾಗ್ಯವ್ಯಂಗ್ಯಭಂಗಿ ನಿಧಾನ ದೀಪವರ್ತಿ**
> **ಚತುರ್ಭಾಷಾ ಕವಿಚಕ್ರವರ್ತಿ ನೇಮಿಚಂದ್ರ ಕೃತಮುಂ ಶ್ರೀ ಮತ್ಪ್ರತಾಪ ಚಕ್ರವರ್ತಿ**
> **ವೀರಬಲ್ಲಾಳದೇವ ಪ್ರಸಾದಾಸಾದಿತ ಮಹಾಪ್ರಧಾನ ಸಜ್ಜಿವಳ್ಳ ಪದ್ಮನಾಭದೇವ**
> **ಕಾರಿತಮುಮಪ್ಪ ನೇಮಿನಾಥಪುರಾಣದೊಳ್**
> **ಪ್ರಥಮಾಶ್ವಾಸಂ**
> **ಸಮಾಪ್ತಂ"**[೪೪]

ಎಂದು ಎರಡನೇ ಬಲ್ಲಾಳನ ಹೆಸರನ್ನು ಮಾತ್ರ ಉಲ್ಲೇಖಿಸಿದ್ದಾನೆ. ಹಾಗಾಗಿ ಇವನ ಕೃತಿಗಳಲ್ಲಿ ಎರಡನೇ ಬಲ್ಲಾಳನ ಕುರಿತಾಗಿ ಯಾವುದೇ ವರ್ಣನೆಗಳು ಕಂಡುಬರುವುದಿಲ್ಲ.

ನಂತರದ ಕವಿ ರುದ್ರಭಟ್ಟ, ಈತನು ರಚಿಸಿದ 'ಜಗನ್ನಾಥವಿಜಯಂ' ಎಂಬ ಕಾವ್ಯವು ವಿಷ್ಣುಪುರಾಣದ ಕಥಾವಸ್ತುವನ್ನು ಹೊಂದಿರುವಂತಹ ಕಾವ್ಯವಾಗಿದೆ. ಇದು ಧಾರ್ಮಿಕ ಕಾವ್ಯವಾದುದರಿಂದ ರಾಜನೊಂದಿಗೆ ಯಾವ ಸಮೀಕರಣವನ್ನು ಮಾಡದೆ ಕಾವ್ಯದಲ್ಲಿ ಯಾವ ಲೋಪವು ಆಗದಂತೆ ಕೃಷ್ಣಕಥೆಯನ್ನು ರಚಿಸಿದ್ದಾನೆ. ಆದರೆ ಈ ಕೃತಿಯ ಪ್ರಥಮಾಶ್ವಾಸದಲ್ಲಿ ಶಿವನನ್ನು ಸ್ತುತಿಸುವ ಒಂದು ಪದ್ಯದಲ್ಲಿ ಎರಡನೇ ಬಲ್ಲಾಳನನ್ನು ಶ್ಲೇಷೆಯಿಂದ ಹೊಗಳಿ ವರ್ಣಿಸಿರುವುದು ಕಂಡುಬರುವುದು. ಆ ಪದ್ಯ ಇಂತಿದೆ,

> **"ಅರಿಕಾಮಧ್ವಂಸಿ ನಾಗವ್ರಜಮಯಕಟಕಂ ರಾಜರಾಜ ಪ್ರತಿಷ್ಠಾ**
> **ನಿರತಂ ಲೀಲಾಕ್ರಮೋದಂಚಿತ ನಿರವಧಿ ಗಾಂಗೇಯಕಂ ದ್ವಿಟ್ಪುರಪ್ಲೋ**
> **ಷರತಂ ಕ್ರೋಡಂ ವೃಷಾಂಕಂ ವಿಬುಧನುತನುಮಾಕಾಮನೀಜೀವಿತೇಶಂ**
> **ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗ ತ್ರಿಣೇತ್ರಂ॥"**[೪೫]

ಈ ಪದ್ಯದಲ್ಲಿ ಬರುವ 'ಅರಿಕಾಮಧ್ವಂಸಿ' ಎಂಬ ಪದವು ಶಿವನು ಕಾಮನನ್ನು ತನ್ನ ಹಣೆಗಣ್ಣಿನ ಉರಿಯಿಂದ ಸುಟ್ಟು ಬೂದಿ ಮಾಡಿದನು ಎಂಬುದು ಪುರಾಣದ ಕಥೆಯಾಗಿದೆ. ಎರಡನೇ ಬಲ್ಲಾಳನು ಕ್ರಿ.ಶ. ೧೧೭೭ರಲ್ಲಿ ಉಚ್ಚಂಗಿ ಪಾಂಡ್ಯರ ರಾಜನಾದ ಕಾಮದೇವನನ್ನು ಸೋಲಿಸಿ ಆತನನ್ನು ಧ್ವಂಸ ಮಾಡಿದನು. ಈ ವಿವರವು ಚಿಕ್ಕನಾಯಕನ ಹಳ್ಳಿ ಶಾಸನದಲ್ಲಿ **"ಪಾಂಡ್ಯನಂ ಗೆಲ್ದುಚ್ಚಂಗಿಯಂ ರಾಜಧಾನಿ ಮಾಡಿ ಸುಖಸಂಕಥಾ ವಿನೋದದಿಂ ಪೃಥ್ವೀರಾಜ್ಯಂ ಗೆಯುತ್ತಮಿರಲು"**[೪೬] ಎಂದು ಉಲ್ಲೇಖಿಸಿದೆ. ಹಾಗೆಯೇ ಕ್ರಿ.ಶ. ೧೧೭೮ರ ನಾಗಮಂಗಲದ ಪಟ್ಟಣದ ಶಾಸನವು

"ನಮಿತರಿಪುನೃಪನಿಚಯನು
ತ್ತಮಸತ್ವ[ಂ] ವಿಜಯಪಾಂಡ್ಯನುಚ್ಚಂಗಿಯದು
ಗ್ಗಮನುರವಣೆಯಿಂ ಕೊಂಡನ
ಸಮತೇಜೋಮೂರ್ತ್ತಿ ವೀರಬಲ್ಲಾಳನೃಪಂ॥"[೨೬] ಪಾಂಡ್ಯರನ್ನು ಸೋಲಿಸಿದ ವಿವರ ನೀಡಿದೆ.ಅದೇ ರೀತಿ ಕ್ರಿ.ಶ. ೧೧೮೧ರ ಶ್ರವಣಬೆಳಗೊಳದ ಶಾಸನವು

"ಚಿರಕಾಲಂ ರಿಪುಗಳ್ಗೆ ಸಾಧ್ಯಮೆನಿಸಿರ್ದುಚ್ಚಂಗಿಯಂ ಮುತ್ತಿದು
ರ್ದ್ಧರ ತೇಜೋನಿಧಿ ಧೂಳಿಗೋಟೆಯನೆ ಕೊಂಡಾ ಕಾಮದೇವಾವನೀ
ಶ್ವರನಂ ಸಂದೊಡೆಯಕ್ಷಿತೀಶ್ವರನನಾಭಂಡಾರಮಂ ಸ್ತ್ರೀಯರಂ
ತುರಗಬ್ರಾತಮುಮಂ ಸಮಂತು ಪಿಡಿದಂ ಬಲ್ಲಾಳಭೂಪಾಳಕಂ॥"[೨೭] ಎಂದು ಎರಡನೇ ಬಲ್ಲಾಳನು ಉಚ್ಚಂಗಿ ಪಾಂಡ್ಯರ ಕಾಮದೇವನನ್ನು ಸೋಲಿಸಿ, ಅವನ ಸಕಲವು ಆದ ಭಂಡಾರದ ನಿಧಿ, ಸ್ತ್ರೀಯರು, ತುರಗದಳ ಎಲ್ಲವನ್ನು ತನ್ನದಾಗಿಸಿಕೊಂಡನು ಎಂದು ಉಲ್ಲೇಖಿಸುವುದು. ಹಾಗೆಯೇ ಕ್ರಿ.ಶ. ೧೧೮೫ರ ಬೇಲೂರಿನ ಶಾಸನವು ಎರಡನೇ ಬಲ್ಲಾಳನಿಗೆ **'ಉಚ್ಚಂಗಿ ಕೊಂಡ ಗಂಡಂ'**[೨೮] ಎಂಬ ಬಿರುದು ಇದ್ದುದನ್ನು ಉಲ್ಲೇಖಿಸುತ್ತದೆ. ಅಲ್ಲದೆ ಉಚ್ಚಂಗಿ ಪಾಂಡ್ಯರನ್ನು ಎರಡನೇ ಬಲ್ಲಾಳನು ಸೋಲಿಸಿದ ಘಟನೆಯನ್ನು ಆತನ ಹಲವಾರು ಶಾಸನಗಳು ವಿವರಿಸುತ್ತವೆ. ಈ ಎಲ್ಲಾ ಹಿನ್ನೆಲೆಯಲ್ಲಿ ನೋಡಿದಾಗ **'ಅರಿಕಾಮಧ್ವಂಸಿ'** ಎಂಬುದನ್ನು ಎರಡನೇ ಬಲ್ಲಾಳನಿಗೆ ಶ್ಲೇಷೆಯಿಂದ ಬಳಸಲಾಗಿರುವುದು ತಿಳಿದುಬರುತ್ತದೆ.

'ರಾಜರಾಜ ಪ್ರತಿಷ್ಠಾ ನಿರತಂ' ಎಂದು ರುದ್ರಭಟ್ಟ ಉಲ್ಲೇಖಿಸಿದ್ದಾನೆ. ಎರಡನೇ ಬಲ್ಲಾಳನು ತನ್ನ ಶತ್ರುಗಳನ್ನು ಯುದ್ಧದಲ್ಲಿ ಸೋಲಿಸಿದಾಗ, ಸೋತ ರಾಜನು ಶರಣಾಗಿ ರಾಜನಲ್ಲಿ ಬೇಡಿಕೊಂಡಾಗ ಅವರನ್ನು ಕ್ಷಮಿಸಿ ಮತ್ತೆ ಅವರ ರಾಜ್ಯವನ್ನು ಅವರಿಗೆ ಮರಳಿ ನೀಡಿ ತನ್ನ ಸಾಮಂತರನ್ನಾಗಿ ಮಾಡಿಕೊಳ್ಳುತ್ತಿದ್ದನು. ಈ ವಿಷಯವು ಬೇಲೂರಿನ ತಾಮ್ರ ಶಾಸನದಲ್ಲಿ

"ಅಗಳಿಂ ಪಾತಾಳವೆಂಟು[ಂ]ದೆಸೆಗಳಗಲದಿಂದುದ್ದದಿಂ ವ್ಯೋಮದಿಂದಿ
ರ್ವ್ವಗಿಯಾಗಲು ಪೆರ್ಚ್ಚಿ ಮೂಱುಂ ಭವನದೊಳೆಸೆವುಚ್ಚಂಗಿಯಂ ಕೊಂಡ ಗಂಡಂ
ಮಗುಳ್ದುಂ ಪಾಂಡ್ಯಂ ಶರಣ್ಬೊಕ್ಕಡ ಕರುಣಿಸಿ ತದ್ರಾಜ್ಯಮಂ ಕೊಟ್ಟು ಮೂಱುಂ
ಜಗದೊಳ್ ವಿಖ್ಯಾತಿವೆತ್ತಂ ಹರಣಭರಣದಿಂ ವೀರಬಲ್ಲಾಳದೇವಂ॥"[೨೯] ಎಂದು ಉಲ್ಲೇಖಿಸಿದೆ. ಉಚ್ಚಂಗಿಯ ಪಾಂಡ್ಯರಾಜನನ್ನು ಯುದ್ಧದಲ್ಲಿ ಸೋಲಿಸಿ ಆತನನ್ನು ಶರಣಾಗುವಂತೆ ಮಾಡಿ ಮತ್ತೆ ಅವನಿಗೆ ರಾಜ್ಯವನ್ನು ಮರಳಿ ನೀಡಿ ಅವನನ್ನು ಉದ್ಧರಿಸಿ ಪಾಂಡ್ಯ ರಾಜ್ಯವನ್ನು ಮತ್ತೆ ಪ್ರತಿಷ್ಠಾಪಿಸಿದನು. ಇನ್ನು ತಮಿಳುನಾಡಿನಲ್ಲಿ ಮಾರವರ್ಮ ಸುಂದರಪಾಂಡ್ಯನು ಚೋಳರ ಮೇಲೆ ದಂಡೆತ್ತಿ ಹೋದನು.

ಪಾಂಡ್ಯರನ್ನು ಎದುರಿಸಲಾಗದೆ ಮೂರನೇ ಕುಲೊತ್ತುಂಗ ಚೋಳನು ಎರಡನೇ ಬಲ್ಲಾಳನ ಸಹಾಯ ಕೋರಿದನು. ಆಗ ಎರಡನೇ ಬಲ್ಲಾಳನು ತನ್ನ ಮಗನಾದ ಇಮ್ಮಡಿ ನರಸಿಂಹನನ್ನು ಕಳುಹಿಸಿ ಪಾಂಡ್ಯನನ್ನು ಸೋಲಿಸಿ ಚೋಳರಿಗೆ ಸಹಾಯ ಮಾಡಿದನು. ಮೂರನೇ ಕುಲೋತ್ತುಂಗ ಚೋಳನನ್ನು ಮತ್ತೆ ಚೋಳರಾಜ್ಯ ಸಿಂಹಾಸನದಲ್ಲಿ ಕೂರಿಸಿದನು. ಇದನ್ನು ತಿ. ನರಸೀಪುರದ ಚಿದರವಳ್ಳಿ ಶಾಸನವು **"ಸಿರಭೇದಂ ಮಾಡಿ ಪಾಂಡ್ಯನಂ ಕಯ್ಸರೆಕೊಂಡು ಕಾಂಚಿಯುನಾಥಂಗೆ ಪೊಡವಟ್ಟು"**[೨೧] ಎಂದು ಉಲ್ಲೇಖಿಸಿದೆ. ಇದರ ನಂತರ ಎರಡನೇ ಬಲ್ಲಾಳನು **'ಚೋಳರಾಜ್ಯಪ್ರತಿಷ್ಠಾಚಾರ್ಯಂ'**[೨೨] ಎಂಬ ಬಿರುದನ್ನು ಧರಿಸಿದನು. ಅದು ಮಾತ್ರವಲ್ಲದೆ **'ರಾಜರಾಜ'** ಎಂಬ ಬಿರುದು ಇದ್ದುದನ್ನು ಬೇಲೂರಿನ ಪಂಡಿತನಹಳ್ಳಿಯ ಶಾಸನದಲ್ಲಿ **"ತನಗೇಕೀ ಬಱುರಾಜರಾಜವೆಸರೆಂದೆಂದುತ್ತರಾಶೋನು . . ."**[೨೩] ಉಲ್ಲೇಖಿಸಿದೆ. ಈ ಎಲ್ಲಾ ನಿದರ್ಶನಗಳಿಂದ ಎರಡನೇ ಬಲ್ಲಾಳನಿಗೆ **ರಾಜರಾಜ ಪ್ರತಿಷ್ಠ ನಿರತಂ** ಎಂಬ ಬಿರುದು ಹೊಂದಿಕೆಯಾಗುವುದು.

ಎರಡನೇ ಬಲ್ಲಾಳನಿಗೆ **'ವಿಬುಧನುತನ್'** ಎಂದು ಹೊಗಳಿದ್ದಾನೆ. ಎರಡನೇ ಬಲ್ಲಾಳನಿಗೆ ಚನ್ನರಾಯಪಟ್ಟಣದ ಶಾಸನದಲ್ಲಿ **"ಸಾಹಿತ್ಯ ಸರ್ವಜ್ಞ"**[೨೪] ಎಂಬ ಬಿರುದುಗಳು ಇದ್ದದು ಕಂಡುಬರುವುದು. ಈ ಹಿನ್ನೆಲೆಯಲ್ಲಿ ನೋಡಿದಾಗ ಎರಡನೇ ಬಲ್ಲಾಳನು ವಿದ್ಯಾವಂತನು, ಪಂಡಿತನು ಆಗಿದ್ದನು ಎಂದು ತಿಳಿದು ಬರುವುದು.

'ಉಮಾಕಾಮಿನೀಜೀವಿತೇಶಂ' ಎಂಬುದು ಶಿವನಿಗೆ ಉಮಾ ಅಂದರೆ ಪಾರ್ವತಿಯು ಪತ್ನಿಯಾಗಿದ್ದಳು ಎಂಬುದನ್ನು ಪೌರಾಣಿಕ ಹಿನ್ನೆಲೆಯಾಗಿ ಬಂದರೆ, ಎರಡನೇ ಬಲ್ಲಾಳನ ರಾಣಿ, ಪಿರಿಯರಸಿ ಮತ್ತು ಪಟ್ಟಮಹಾದೇವಿಯಾದ ಉಮಾದೇವಿ ಎಂಬುವಳು ಇದ್ದಳು ಎಂಬುದು ಕ್ರಿ.ಶ. ೧೧೭೩ರ ಶಾಸನದಲ್ಲಿ **"ಶ್ರೀ ವೀರಬಲ್ಲಾಳ ದೇವರದ್ಧಾಂಗಲಕ್ಷ್ಮಿ ಉಮಾದೇವಿ"**[೨೫] ಎಂದು ಉಲ್ಲೇಖಿಸಿದೆ. ಹಾಗೆಯೇ

> **"ವಿನುತೆಯುಮಾದೇವಿಗೆ ಜನ**
> **ಕನೆನಲ್ ಧೈರ್ಯ್ಯಾಳುವೆನ್ದುವತ್ಯುಂನತನೆಂ**
> **ದನಿಶಂ ನೀಂ ಕೇಶವದೇ**
> **ವನನಭಿವರ್ಣ್ನಿಸುವೆ ತದ್ ಗುಣಂ ನಿಜಮೆ ವಲಂ॥"**[೨೬] ಎಂದು ಈಕೆಯು ಕೇಶವದೇವನ ಮಗಳು ಎಂದು ಅರಸೀಕೆರೆಯ ಶಾಸನದಿಂದ ತಿಳಿದುಬರುವುದು. ಈ ಕೇಶವದೇವನು ಎರಡನೇ ಬಲ್ಲಾಳನ ಕೈಕೆಳಗೆ ರಾಜ್ಯಾಧ್ಯಕ್ಷ ಹೆಗೆಡೆಯಾಗಿದ್ದನು. ಉಮಾದೇವಿಯು ಎರಡನೇ ಬಲ್ಲಾಳನ ಪಟ್ಟದರಸಿ ಮಾತ್ರವಲ್ಲದೆ ರಾಜಕೀಯದಲ್ಲಿ ಸಕ್ರಿಯವಾಗಿ

ಪಾಲ್ಗೊಂಡಿದ್ದಂತಹ ರಾಣಿ. ಎರಡನೇ ಬಲ್ಲಾಳನು ಯುದ್ಧ ಕಾರಣವಾಗಿ ರಾಜಧಾನಿಯಿಂದ ದೂರ ಉಳಿದಾಗ, ಈಕೆಯು ರಾಜಧಾನಿಯಲ್ಲಿ ಆಡಳಿತ ನಡೆಸುತ್ತಿದ್ದಳು. ಯುದ್ಧದಲ್ಲಿ ಪಾಲ್ಗೊಂಡು ಬೆಳಗುತ್ತಿ ಸಿಂಧರ ದೊರೆ ಈಶ್ವರ ದೇವನನ್ನು ಸೋಲಿಸಿದಳು. ಹೀಗೆ ಎರಡನೇ ಬಲ್ಲಾಳನು ಉಮಾಕಾಮಿನೀಜೀವಿತೇಶಂ ಆಗಿದ್ದಾನೆ.

ರುದ್ರಭಟ್ಟನು ಎರಡನೇ ಬಲ್ಲಾಳನಿಗೆ **'ಯುದ್ಧರಂಗ ತ್ರಿಣೇತ್ರಂ'** ಎಂದು ಹೊಗಳಿದ್ದಾನೆ. ವೀರಬಲ್ಲಾಳನು ಯುದ್ಧೋತ್ಸಾಹಿಯೂ ಆಗಿದ್ದನು. ಇವನ ಜೀವಿತದಲ್ಲಿ ಸಾಕಷ್ಟು ಸಮಯ ಯುದ್ಧರಂಗದಲ್ಲಿ ಕಳೆದನು. ಹಾಗೆಯೇ ಹಲವಾರು ಯುದ್ಧಗಳನ್ನು ಮಾಡಿ ವಿಜಯಗಳಿಸಿ, ಹೊಯ್ಸಳ ರಾಜ್ಯವನ್ನು ವಿಸ್ತರಿಸಿ ಚಕ್ರವರ್ತಿಯಾಗಿ ಮೆರೆದನು. ಈ ಹಿನ್ನೆಲೆಯಲ್ಲಿ ಎರಡನೇ ಬಲ್ಲಾಳನಿಗೆ **'ಸಂಗ್ರಾಮ ಭೀಮ'**[೨೭], **'ಕದನ ಪ್ರಚಂಡ'**[೨೮], **'[ಸಮ]ರಾಟೋಪಂ'**[೨೯], **'ರಣರಂಗಧೀರ'**[೩೦], **'ಸಮರಮುಖಮಂದರಂ'**[೩೧], **'ಸಮರವಿಜಯ ರಾಮಃ'**[೩೨] ಎಂಬ ಬಿರುದುಗಳನ್ನು ಶಾಸನಗಳಲ್ಲಿ ಉಲ್ಲೇಖಿಸಿದೆ. ಈ ಎಲ್ಲವನ್ನು ಅವಲೋಕಿಸಿದಾಗ ಎರಡನೇ ಬಲ್ಲಾಳನು ಯುದ್ಧರಂಗದಲ್ಲಿ ಶಿವನು ತನ್ನ ಹಣೆಗಣ್ಣನ್ನು ತೆರೆದು ಉಗ್ರರೂಪದಲ್ಲಿ ನಿಂತು ಶತ್ರುವನ್ನು ಸುಟ್ಟಿ ಭಸ್ಮ ಮಾಡುವಂತೆ, ಯುದ್ಧರಂಗದಲ್ಲಿ ಹೋರಾಡಿ ಹೊಯ್ಸಳ ಭೂಮಿಯನ್ನು ರಕ್ಷಿಸಲಿ ಎಂಬ ಈ ಹಿನ್ನೆಲೆಯಲ್ಲಿ ರುದ್ರಭಟ್ಟನು "ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ" ಎಂದು ಹೊಗಳಿದ್ದಾನೆ.

ಜನ್ನನು ಎರಡನೇ ಬಲ್ಲಾಳನ ಆಶ್ರಯದಲ್ಲಿ ಇದ್ದ ಕವಿ. ಈತನು ಎರಡು ಜೈನ ಕಾವ್ಯಗಳನ್ನು ಬರೆದನು. ಪಂಪ, ರನ್ನರಂತೆ ಲೌಕಿಕ ಕಾವ್ಯವನ್ನು ಬರೆಯಲಿಲ್ಲ. ಹಾಗಾಗಿ ಈತನು ತನ್ನ ಆಶ್ರಯದಾತನನ್ನು ಯಶೋಧರ ಚರಿತೆಯ ಆರಂಭಿಕ ಪದ್ಯಗಳಲ್ಲಿ ಎರಡನೇ ಬಲ್ಲಾಳನನ್ನು ನಾನಾ ರೀತಿಯಾಗಿ ಹೊಗಳಿ ವರ್ಣಿಸಿ ನಂತರ ಕಾವ್ಯ ಆರಂಭ ಮಾಡಿದ್ದಾನೆ. ಅವುಗಳೆಂದರೆ

"ನಾಂದಿಯಿನನಂತರಂ ಕವಿ
ವೃಂದಾರಕವಾಸವಂಗೆ ಕವಿಕಲ್ಪಲತಾ
ಮಂದಾರಂಗೇಂ ಪ್ರಸ್ತುತ
ಮೆಂಮೊಡೆ ಬಲ್ಲಾಳದೇವನನ್ವಯಕಥನಂ॥"[೩೩] ಎಂದು ಜನ್ನನು ಎರಡನೆ ಬಲ್ಲಾಳನನ್ನು ಕವಿಗಳ ಗುಂಪಿನಲ್ಲಿ ಇಂದ್ರನಂತೆ, ಕವಿಗಳ ಕಲ್ಪಲತೆಯಲ್ಲಿ ಮಂದಾರದಂತೆ ಇರುವವನು. ಹಾಗಾಗಿ ಈತನನ್ನು ಮೊದಲು ಪರಿಚಯಿಸುವುದು ನನ್ನ ಹೆಮ್ಮೆಯ ವಿಷಯ ಎಂದು ಹೇಳಿದ್ದಾನೆ.

ಜನ್ನನು ತನಗೆ 'ಕವಿ ಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದ ಎರಡನೇ ಬಲ್ಲಾಳನಿಗೆ ಇದ್ದ ಸಾಹಿತ್ಯದ ಮೇಲಿನ ಆಸಕ್ತಿಯನ್ನು ಈ ರೀತಿಯಾಗಿ ಹೇಳಿರುವನು.

"ಕೇಳಲೊಡಂ ಶಬ್ದಾರ್ಥಗು
ಣಾಳಂಕೃತಿ ರೀತಿ ಭಾವರಸ ವೃತ್ತಿಗಳಂ
ಮೇಳವಿಸ[ಲ್] ಬಲ್ಲಂ ಬ

ಲ್ಲಾಳಂ ಸಾಹಿತ್ಯ ಕಮಳಮತ್ತಮರಾಳಂ॥"[೩೪] ಅಂದರೆ ಕಾವ್ಯವನ್ನು ಕೇಳಿದ ಎರಡನೇ ಬಲ್ಲಾಳನು ಕಾವ್ಯದಲ್ಲಿ ಅಡಗಿರುವಂತಹ ಶಬ್ದಾರ್ಥ, ಗುಣ, ಅಲಂಕಾರ, ರಸಗಳನ್ನು ಅರ್ಥೈಸಿಕೊಳ್ಳುವುದನ್ನು 'ಸಾಹಿತ್ಯಕಮಳಮತ್ತರಾಳಂ' ಎಂದು ಸುಂದರ ಉಪಮೆಯೊಂದಿಗೆ ಹೋಲಿಸಿದ್ದಾನೆ. ಅಂದರೆ ಹಂಸವು ಕಮಲದ ಹೂವಿನಿಂದ ಮದವೇರಿಸಿಕೊಳ್ಳುವ ಹಾಗೆ ಎರಡನೇ ಬಲ್ಲಾಳನು ಸಾಹಿತ್ಯವನ್ನು ಆಸ್ವಾದಿಸುವನು ಎಂದು ವರ್ಣಿಸಿರುವನು. ಕ್ರಿ.ಶ. ೧೧೯೧ರ ಚನ್ನರಾಯಪಟ್ಟಣದ ಶಾಸನದಲ್ಲಿ ಈತನಿಗೆ **'ಸಾಹಿತ್ಯ ಸರ್ವಜ್ಞ',**[೩೫] ತಿ.ನರಸೀಪುರದ ತಡಿಮಾಲಿಂಗಿಯ ಶಾಸನದಲ್ಲಿ **'ಸಕಳಕಳಾಪಾರಾಯಣ'**[೩೬] ಎಂಬ ಬಿರುದು ಇದ್ದುದನ್ನು ಉಲ್ಲೇಖಿಸಿದೆ. ಇವುಗಳನ್ನು ನೋಡಿದಾಗ ಜನ್ನನ ಮೇಲಿನ ಮಾತು ನಿಜ ಎನಿಸುವುದು.

ಜನ್ನನು ಮುಂದುವರೆದು ಇತಿಹಾಸದಲ್ಲಿ ಸಾಹಿತ್ಯ ಪೋಷಣೆ ಮಾಡಿದ ಶ್ರೇಷ್ಠ ರಾಜರು ಮತ್ತು ಕವಿಗಳೊಂದಿಗೆ ಎರಡನೇ ಬಲ್ಲಾಳನನ್ನು ಹೋಲಿಸಿದ್ದಾನೆ. ಅದು ಹೀಗಿದೆ :

"ನೆಗಟ್ದ ನೃಪರೊಳಗೆ ಮುಂ ಕವಿ
ತೆಗೆ ಮುಂಜಂ ಭೋಜನುತ್ಪಲಂ ಶ್ರೀಹರ್ಷಂ
ಮಿಗಿಲವರಿಂ ಬಲ್ಲಾಳಂ

ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ॥"[೩೭] ಎಂದು ಈ ರೀತಿಯಾಗಿ ಹೇಳಿದ್ದಾನೆ. ಮುಂಜ,[೩೮] ಭೋಜ,[೩೯] ಉತ್ಪಲ,[೪೦] ಶ್ರೀಹರ್ಷ[೪೧] ಎಂಬಂತಹ ಇತಿಹಾಸದಲ್ಲಿನ ಮಹಾನ್ ವ್ಯಕ್ತಿಗಳಾದ ರಾಜರು ಮತ್ತು ಕವಿಗಳಾಗಿದ್ದಾರೆ. ಇವರುಗಳು ಮಾಡಿರುವಂತಹ ಸಾಹಿತ್ಯ ಪೋಷಣೆಯನ್ನು ತನ್ನ ನೆಚ್ಚಿನ ದೊರೆಯಾದ ಎರಡನೇ ಬಲ್ಲಾಳನೊಂದಿಗೆ ಹೋಲಿಸಿದ್ದಾನೆ. ನಂತರ ಎರಡನೇ ಬಲ್ಲಾಳನು ಇವರಿಗಿಂತ ಎರಡರಷ್ಟು, ಮೂರರಷ್ಟು, ನಾಲ್ಕರಷ್ಟು, ಐದರಷ್ಟು ಮಿಗಿಲಾದವನು ಹಾಗೂ ಶ್ರೇಷ್ಠನಾದವನು ಎಂದು ಹೆಮ್ಮೆಯಿಂದ ಹೊಗಳಿದ್ದಾನೆ.

ಜನ್ನನು ಎರಡನೇ ಬಲ್ಲಾಳನನ್ನು ಅವನ ವಂಶದ ಶ್ರೇಷ್ಠ ರಾಜರೊಂದಿಗೆ ಹೋಲಿಸಿದ್ದಾನೆ. ಅದು ಹೊಯ್ಸಳ ವಂಶದಲ್ಲಿ ವಿಷ್ಣುವರ್ಧನನು ಶ್ರೇಷ್ಠ ದೊರೆ. ಈತನೊಂದಿಗೆ ಮೊಮ್ಮಗನಾದ ಎರಡನೇ ಬಲ್ಲಾಳನೊಂದಿಗೆ ಹೋಲಿಕೆ ಮಾಡಿ ಎರಡನೇ ಬಲ್ಲಾಳನ ವಿಶೇಷತೆಯನ್ನು ತಿಳಿಸಿದ್ದಾನೆ.

"ಧೀರನಿಧಿ ಬಿಟ್ಟದೇವನೋ
ಳೋರಗೆ ಬಲ್ಲಾಳನಿಂತು ನರಸಿಂಹಸುತಂ
ಗಾರಣೆ ಗಗನಂ ಗಗನಾ

ಕಾರಮೆನಲ್ ತಮ್ಮೊಳೆಣೆ ಪಿತಾಮಹ ಪೌತ್ರರ್॥"[೨೨] ಎಂದು ವರ್ಣಿಸಿದ್ದಾನೆ. ಹೊಯ್ಸಳರ ಇತಿಹಾಸವನ್ನು ಅವಲೋಕಿಸಿದಾಗ ವಿಷ್ಣುವರ್ಧನನ ಕಾಲದಲ್ಲಿ ಹೊಯ್ಸಳ ವಂಶವು ಉಚ್ಛ್ರಾಯ ಸ್ಥಿತಿಗೆ ಹೋದದ್ದು ಕಂಡುಬರುವುದು. ವಿಷ್ಣುವರ್ಧನನ ಧೀರತೆ, ಬಲ, ಶೌರ್ಯ, ಪರಾಕ್ರಮ ಮುಂತಾದ ಉತ್ತಮ ಗುಣಗಳು ಎರಡನೇ ಬಲ್ಲಾಳನಲ್ಲಿ ಇದ್ದುದನ್ನು ಜನ್ನನು ಗುರುತಿಸಿದ್ದಾನೆ. ಹಾಗಾಗಿ ಈ ತಾತ ಮತ್ತು ಮೊಮ್ಮಗ ಇಬ್ಬರನ್ನು ಆಕಾಶಕ್ಕೆ ಹೋಲಿಸಿ ಅವರಿಗೆ ಆಕಾಶಕ್ಕೆ ಆಕಾಶವೆ ಸಾಟಿ ಎಂದು ಹೊಗಳಿದ್ದಾನೆ.

ಎರಡನೇ ಬಲ್ಲಾಳನು ಯುದ್ಧೋತ್ಸಾಹಿ ಆಗಿದ್ದನು. ಅವನು ಉತ್ತಮ ಸೈನ್ಯ ವ್ಯವಸ್ಥೆಯನ್ನು ಹೊಂದಿದ್ದು ಅನೇಕ ಯುದ್ಧಗಳಲ್ಲಿ ಜಯ ಸಾಧಿಸಿದ್ದನು. ಆತನು ಯುದ್ಧದಲ್ಲಿ ಶತ್ರುಗಳನ್ನು ನಾಶ ಮಾಡುತ್ತಿದ್ದ ಬಗೆಯನ್ನು

"ಅಟ್ಟೂಜೆಗೆ ಬಲ್ಲಾಳನ
ದಾಟಿಯ ದಾವಣಿಯ ತುರಗದಟ ಖುರುಹತಿಯಂ
ಪೇಟೆ ಪೆಸರಿಲ್ಲದಂತಿರೆ

ಪಾಟೂದುವು ವೈರಿದುರ್ಗಮೆನಿತೊಳವನಿತುಂ॥"[೨೩] ಎಂದು ವರ್ಣಿಸಿದ್ದಾನೆ. ಅಂದರೆ ಎರಡನೇ ಬಲ್ಲಾಳನು ಶತ್ರುಗಳ ಉದ್ಧಟತನ ಕಂಡಾಗ ಅವರ ಮೇಲೆ ದಂಡೆತ್ತಿ ಹೋಗಿ ದುರ್ಗಗಳನ್ನು ಆಕ್ರಮಿಸಿಕೊಳ್ಳುತ್ತಿದ್ದನು. ನಂತರ ತನ್ನ ತುರಗದಳದ ಸೈನಿಕರು ಕುದುರೆಯ ಕಾಲಿನ ಕುರಪುಟದಿಂದ ಆ ಶತ್ರುಗಳ ಕೋಟೆಯನ್ನು ಹೊಡೆದು ಉರುಳಿಸುತ್ತಿದ್ದರು ಎಂದು ವರ್ಣಿಸಿದ್ದಾನೆ.

ಇಷ್ಟೆಲ್ಲ ಪರಾಕ್ರಮಿಯಾದ ಎರಡನೇ ಬಲ್ಲಾಳನ ಕೀರ್ತಿಯು ನಾಡಿನ ತುಂಬೆಲ್ಲಾ ಹೇಗೆ ಹರಡಿತ್ತು ಎಂಬುದರ ಬಗ್ಗೆ

"ಆರೆಣೆಯೆಂಬೆನಟ್ಟಂಬದ
ಬೀರಮನೀ ಜಗಮನಾವಗಂ ಸುತ್ತಿದ ಮು
ನ್ನೀರೆಂಬುದು ಬಿರುದಿನ ಬೆ

ಳ್ಪಾರೆಸಿಸಿದುದುಬಟರಾಯ ಕೋಳಾಹಳನಾ॥"[೨೪] ಇಂತಹ ಮಹಾಶೂರನಾದ ಎರಡನೇ ಬಲ್ಲಾಳನು ಇಡೀ ಭೂಮಂಡಲವನ್ನು ಆಳುತ್ತಿದ್ದನು. ಇದರಿಂದಾಗಿ ಇವನ ಕೀರ್ತಿಯೂ ಇಡೀ ಭೂಮಂಡಲವನ್ನು ಆವರಿಸಿದ ಸಾಗರದ ಅಲೆಯ ಪ್ರವಾಹದಂತೆ ನಿರಂತರವಾಗಿ ಎಲ್ಲೆಡೆ ಹರಡಿತ್ತು ಎಂದು ಹೊಗಳಿದ್ದಾನೆ. ಉತ್ಪ್ರೇಕ್ಷೆ ಎನಿಸಿದರೂ

ಇಡೀ ಭೂಮಂಡಲವನ್ನು ಆಳುವಷ್ಟು ಸಮರ್ಥ ಹಾಗೂ ಬಲಶಾಲಿಯಾದ ದೊರೆ ಎಂದು ವರ್ಣಿಸಿದ್ದಾನೆ. ಶಾಸನಗಳಲ್ಲಿ ಕೂಡ ಎರಡನೇ ಬಲ್ಲಾಳನನ್ನು **"ವೀರಬಲ್ಲಾಳನ ತೋಳ ಬಾಳ ನೆಳಲಾದುದು ಧಾತ್ರಿಗೆ ವಜ್ರಪಂಜರಂ"**[೪೫] ಎಂದು ಉಲ್ಲೇಖಿಸಿದೆ.

ಜನ್ನನು ಇಷ್ಟಕ್ಕೆ ಬಿಡದೆ ತನ್ನ ಆಶ್ರಿತ ರಾಜನಾದ ಎರಡನೇ ಬಲ್ಲಾಳನನ್ನು ಶಕ್ತಿ, ಬಲ, ಚಲ, ಶೌರ್ಯ, ಪರಾಕ್ರಮವನ್ನು ಕುರಿತು ಹೇಳುತ್ತ ಅವನು ಎಂತಹ ಸಮರ್ಥ ರಾಜನಾಗಿದ್ದನು ಎಂಬುದನ್ನು

"ಚಲದ ಬಲದೆಸಕದಿಂ ಸಲೆ
ನಿಲೆ ನಾಲ್ಕುಂ ದೆಸೆಯ ಮೂಱುವರೆ ರಾಯರ ಮುಂ
ದಲೆಯೊಳಗುಂದಲೆಯೆನೆ ನಿಂ
ದಲೆವುದು ತೇಜಂ ಪ್ರತಾಪ ಚಕ್ರೇಶ್ವರನಾ॥"[೪೬] ಎಂದು ವರ್ಣಿಸಿದ್ದಾನೆ. ಅಂದರೆ ಮೂರು ಸಮರ್ಥ ರಾಜರು ಒಂದೆಡೆ ನಿಂತರೆ, ಎರಡನೆ ಬಲ್ಲಾಳನು ಒಂದು ಕಡೆ ನಿಂತು ಆ ಮೂವರನ್ನು ಸರಿದೂಗಿಸುವಂತಹ ಪ್ರಬಲ ರಾಜನಾಗಿದ್ದನು ಎಂದು ಜನ್ನನು ಹೊಗಳಿದ್ದಾನೆ. ಜನ್ನನ ವರ್ಣನೆಯಲ್ಲಿ ಕೆಲವು ಅಂಶಗಳು ಉತ್ಪ್ರೇಕ್ಷೆ ಎನಿಸಿದರು, ಎರಡನೇ ಬಲ್ಲಾಳನು ಮಾಡಿರುವ ಸಾಧನೆಗಳು, ಧರಿಸಿರುವ ಬಿರುದುಗಳನ್ನು ಅವಲೋಕಿಸಿದಾಗ ಜನ್ನನ ವರ್ಣನೆಯು ಸತ್ಯವು ಮತ್ತು ಅರ್ಥಪೂರ್ಣವಾದುದು ಎಂದು ಅನಿಸುವುದು.

ಪಂಪಯುಗದಂತೆ ಈ ಕಾಲಘಟ್ಟದಲ್ಲಿ ರಾಜರನ್ನು ತಮ್ಮ ಲೌಕಿಕ ಕಾವ್ಯದ ನಾಯಕರನ್ನಾಗಿ ಅನೇಕ ವಿಶೇಷ ಗುಣಗಳನ್ನು ತಮ್ಮ ರಾಜರಿಗೆ ಹೇರಿ ಹೊಗಳಿ ಬರೆಯಲಿಲ್ಲ. ಕಾವ್ಯದ ಆರಂಭದಲ್ಲಿ ಆಶ್ರಯ ದೊರೆ, ಅಧಿಕಾರಿಯ ವರ್ಣನೆಗಳನ್ನು ಮಾಡಿ, ನಂತರ ಕಾವ್ಯದಲ್ಲಿನ ರಸಾಭಾಸವಾಗದಂತೆ ಎಚ್ಚರವಹಿಸಿ ಎಲ್ಲಿಯೂ ಆಶ್ರಯದಾತರ ವರ್ಣನೆ, ಹೊಗಳಿಗೆ, ಸಮೀಕರಿಸುವುದನ್ನು ಮಾಡಲಿಲ್ಲ. ಹರಿಹರನಿಗೆ ರಾಜಾಶ್ರಯವೇ ಬೇಡವೆನಿಸಿ ದೂರ ನಿಂತನು. ನೇಮಿಚಂದ್ರನು ಲೌಕಿಕ ಕಾವ್ಯವನ್ನು ರಚಿಸುವಾಗ ಅನ್ಯ ದೊರೆಯ ಆಶ್ರಯದಲ್ಲಿದ್ದನು. ರುದ್ರಭಟ್ಟ ಮತ್ತು ಜನ್ನರು ಮಾತ್ರ ಆರಂಭದಲ್ಲಿ ಅಲ್ಪ ಸ್ವಲ್ಪವಾಗಿ ಎರಡನೇ ಬಲ್ಲಾಳನ ಬಗ್ಗೆ ವರ್ಣನೆ ಮಾಡಿದ್ದಾರೆ. ಈ ರೀತಿಯ ಬದಲಾವಣೆಗೆ ರಾಜಕೀಯ, ಸಮಕಾಲೀನ ಪರಿಸ್ಥಿತಿ ಮುಂತಾದ ಕಾರಣಗಳಿದ್ದರು ಸಹ ರುದ್ರಭಟ್ಟ ಮತ್ತು ಜನ್ನರು ಉತ್ತಮ ಉಪಮೆ ಮತ್ತು ಶ್ಲೇಷೆಗಳಿಂದ ಎರಡನೇ ಬಲ್ಲಾಳನನ್ನು ವರ್ಣಿಸಿರುವುದು ಇವರ ಕವಿತಾ ಪ್ರತಿಭೆಯ ಶಕ್ತಿ ವಿಶೇಷವಾದುದು ಎಂದು ಹೇಳಬಹುದು.

ಅಡಿಟಿಪ್ಪಣಿಗಳು :

೧. ನೇಮಿಚಂದ್ರ ಸಂಪುಟ, ಅರ್ಧನೇಮಿ ಪುರಾಣ ಪ್ರಥಮಾಶ್ವಾಸ, ಪದ್ಯ–೫೧.
೨. ನೇಮಿಚಂದ್ರ ಸಂಪುಟ, ಲೀಲಾವತೀ ಪ್ರಬಂಧಂ ಪ್ರಥಮಾಶ್ವಾಸಂ, ಪದ್ಯ–೮೧.
೩. ನೇಮಿಚಂದ್ರ ಸಂಪುಟ, ಲೀಲಾವತೀ ಪ್ರಬಂಧಂ, ದ್ವಾದಶಾಶ್ವಾಸಂ, ಪದ್ಯ–೮.
೪. ನೇಮಿಚಂದ್ರ ಸಂಪುಟ, ಅರ್ಧನೇಮಿ ಪುರಾಣ ಪ್ರಥಮಾಶ್ವಾಸ, ಪದ್ಯ–೪೦.
೫. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೨, ಶ್ರವಣಬೆಳಗೊಳ–೫೭೧.
೬. ಯಶೋಧರ ಚರಿತೆ, ೧, ಪದ್ಯ–೨೧.
೭. ಅನಂತನಾಥ ಪುರಾಣ, ೧, ಪದ್ಯ–೫೬.
೮. ಯಶೋಧರ ಚರಿತೆ, ೧, ಪದ್ಯ–೧೮.
೯. ಪಂಪಾಶತಕ, ಪದ್ಯ–೮೨.
೧೦. ಪಂಪಾಶತಕ, ಪದ್ಯ–೮೧.
೧೧. ಗಿರಿಜಾಕಲ್ಯಾಣ ಮಹಾಪ್ರಬಂಧಂ, ನಾಂದಿ ಪದ್ಯ–೫.
೧೨. ಶರಣ ಚರಿತ ಮಾನಸಂ, ಮಾದರ ಚೆನ್ನಯ್ಯಗಳು, ಪು. ೨೬೯.
೧೩. ನೇಮಿಚಂದ್ರ ಸಂಪುಟ, ಅರ್ಧನೇಮಿ ಪುರಾಣಂ, ಪ್ರಥಮಾಶ್ವಾಸಂ, ಪದ್ಯ ೪೩, ೪೪, ಪು. ೩೩೯.
೧೪. ನೇಮಿಚಂದ್ರ ಸಂಪುಟ, ಅರ್ಧನೇಮಿ ಪುರಾಣಂ, ಪ್ರಥಮಾಶ್ವಾಸಂ, ಪು. ೩೫೨.
೧೫. ಜಗನ್ನಾಥ ವಿಜಯಂ, ಪ್ರಥಮಾಶ್ವಾಸಂ. ಪದ್ಯ–೩.
೧೬. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೨೪, ಚಿಕ್ಕನಾಯಕನ ಹಳ್ಳಿ–೯೬.
೧೭. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೭, ನಾಗಮಂಗಲ–೧೧೮.
೧೮. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೨, ಶ್ರವಣಬೆಳಗೊಳ–೪೪೪.
೧೯. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೯, ಬೇಲೂರು–೭೨.
೨೦. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೯, ಬೇಲೂರು–೧೬೮.
೨೧. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೫, ತಿ.ನರಸೀಪುರ–೯೮.
೨೨. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೭, ನಾಗಮಂಗಲ–೬೨.
೨೩. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೯, ಬೇಲೂರು–೪೫೯.
೨೪. ಎಪಿಗಾಫಿಯಾ ಕರ್ನಾಟಿಕಾ, ಸಂಪುಟ ೧೦, ಚನ್ನರಾಯಪಟ್ಟಣ–೫೬.
೨೫. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೮, ಬೇಲೂರು–೧೦೬.
೨೬. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೧೦, ಅರಸೀಕೆರೆ–೪೪.
೨೭. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೭, ನಾಗಮಂಗಲ–೬೩.
೨೮. ಎಪಿಗಾಫಿಯಾ ಕರ್ನಾಟಿಕಾ, ಸಂಪುಟ ೭, ನಾಗಮಂಗಲ–೧.
೨೯. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೯, ಬೇಲೂರು–೧೦೮.
೩೦. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೧೦, ಅರಸೀಕೆರೆ–೨೬೮.
೩೧. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೧೦, ಅರಸೀಕೆರೆ–೧೩೯.

೩೨. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ VII, ಶಿಕಾರಿಪುರ ೧೦೫.

೩೩. ಯಶೋಧರ ಚರಿತೆ, ೧, ಪದ್ಯ–೨೧.

೩೪. ಯಶೋಧರ ಚರಿತೆ, ೧, ಪದ್ಯ–೮.

೩೫. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೧೦, ಚನ್ನರಾಯಪಟ್ಟಣ–೫೬.

೩೬. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೫, ತಿ.ನರಸೀಪುರ–೨೩೬.

೩೭. ಯಶೋಧರ ಚರಿತೆ, ೧, ಪದ್ಯ–೧೭.

೩೮. ಮುಂಜನಿಗೆ ವಾಕ್ಪತಿರಾಜ ಎಂದು ಇನ್ನೊಂದು ಹೆಸರಿತ್ತು. ಈತ ಪಾರಮಾರ ರಾಜಮನೆತನದವನು.

೩೯. ಬೋಜನು ಮಾಳವ ಪ್ರದೇಶವನ್ನು ಆಳುತ್ತಿದ್ದ ರಜಪೂತರ ರಾಜ. ಈತ ವಾಸ್ತುಶಿಲ್ಪ ಶಾಸ್ತ್ರದ **'ಸಮರಾಂಗಣ ಸೂತ್ರಧಾರ'** ಎಂಬ ಕೃತಿಯನ್ನು ಬರೆದವನು. ಈತನ ಆಶ್ರಯದಲ್ಲಿ ಪತಂಜಲಿಯು **'ಯೋಗಸೂತ್ರ'** ರಚಿಸಿದನು.

೪೦. ಉತ್ಪಲ ಕಾಶ್ಮೀರದ ರಾಜ.

೪೧. ಶ್ರೀಹರ್ಷ ಕನೌಜಿನ ವಿಜಯಚಂದ್ರರಾಜನ ಆಸ್ಥಾನ ಕವಿ. ಈತನು **'ನೈಷಧ ಚರಿತೆ'** ಎಂಬ ಕೃತಿಯನ್ನು ರಚಿಸಿದ್ದಾನೆ.

೪೨. ಯಶೋಧರ ಚರಿತೆ, ೧, ಪದ್ಯ–೧೩.

೪೩. ಯಶೋಧರ ಚರಿತೆ, ೧, ಪದ್ಯ–೧೪.


೪೪. ಯಶೋಧರ ಚರಿತೆ, ೧, ಪದ್ಯ–೧೫.

೪೫. ಎಪಿಗ್ರಾಫಿಯಾ ಕರ್ನಾಟಿಕಾ, ಸಂಪುಟ ೮, ಹಾಸನ ೧೧೭೪.

೪೬. ಯಶೋಧರ ಚರಿತೆ, ೧, ಪದ್ಯ–೧೬.

□□□

ಕೆ.ಸಂ. ೨೭೬೬–ಎಂಯುಪಿಪಿ–೩೦೦ ಪ್ರತಿಗಳು – ೦೪...



ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು